ವಿಶ್ವವಾಣಿ
ವಿಶ್ವಾಸವೇ ವಿಶ್ವ

ತವರಿಗೆ ಮರಳಿದ ರೋಹಿತ್ ಪಡೆಗೆ ಅಭೂತಪೂರ್ವ ಸ್ವಾಗತ | ಮುಂಬಯಿನಲ್ಲಿ ರೋಡ್ ಶೋ
ಲಕ್ಷಾಂತರ ಅಭಿಮಾನಿಗಳಿಂದ ಅಭಿನಂದನೆ | ಪ್ರಧಾನಿ ಜತೆ ಸಂತಸ ಹಂಚಿಕೊಂಡ ಟೀಮ್

ವಿಶ್ವವಿಜೇತರ ದರ್ಶನಕ್ಕೆ ಜನಸಾಗರ

ಮುಂಬಯಿ: 17 ವರ್ಷಗಳ ಬಳಿಕ ಟಿ-20 ವಿಶ್ವಕಪ್ ಗೆದ್ದು ಸ್ವದೇಶಕ್ಕೆ ಮರಳಿದ ಭಾರತ ತಂಡಕ್ಕೆ ತವರು ನೆಲದಲ್ಲಿ ಅಭೂತಪೂರ್ವ ಸ್ವಾಗತ ನೀಡಲಾಯಿತು. ಮುಂಬಯಿನ ಮರೈನ್ ಡ್ರೈವ್ ರಸ್ತೆಯಲ್ಲಿ ತೆರೆದ ಬಸ್‌ನಲ್ಲಿ ಆಗಮಿಸಿದ ಟೀಮ್ ಇಂಡಿಯಾ ಸದಸ್ಯರನ್ನು ಸುರಿವ ಮಳೆಯನ್ನೂ ಲೆಕ್ಕಿಸದೇ ಲಕ್ಷಾಂತರ ಕ್ರೀಡಾಭಿಮಾನಿಗಳು ಎದುರುಗೊಂಡರು. ಎರಡೂವರೆ ಕಿ.ಮೀ ಉದ್ದದ ಅಭೂತಪೂರ್ವ ರೋಡ್ ಶೋನಲ್ಲಿ ಸೇರಿದ ಜನಸಾಗರ ರೋಹಿತ್ ಪಡೆ ಅಭಿಮಾನದ ಹೊಳೆಯಲ್ಲಿ ಮಿಂದೇಳುವಂತೆ ಮಾಡಿತು.

ವಿಮಾನ ನಿಲ್ದಾಣದಲ್ಲೂ ಸಂಭ್ರಮ

ಟೀಂ ಇಂಡಿಯಾದ ಆಟಗಾರರು ದೆಹಲಿ ವಿಮಾನ ನಿಲ್ದಾಣಕ್ಕೆ ಕಾಲಿಡುತ್ತಿದ್ದಂತೆಯೇ ಸಂಭ್ರಮಾಚರಣೆಗೆ ಚಾಲನೆ ದೊರೆಯಿತು. ಬಿಸಿಸಿಐ ಕಾರ್ಯದರ್ಶಿ ಜೈ ಶಾ ಕೇಕ್ ಕತ್ತರಿಸುವ ಮೂಲಕ ತಂಡವನ್ನು ಸ್ವಾಗತಿಸಿದರು. ವಿಮಾನ ನಿಲ್ದಾಣದಲ್ಲಿ ನೆರೆದ ಅಭಿಮಾನಿಗಳು ಟೀಮ್ ಇಂಡಿಯಾ ಪರ ಘೋಷಣೆಗಳನ್ನು ಕೂಗಿದರು. ನಿಲ್ದಾಣದ ಹೊರಗಡೆ ತಂಡದ ಸದಸ್ಯರು ಅಭಿಮಾನಿಗಳ ಜತೆ ಹೆಜ್ಜೆ ಹಾಕಿ ಸಂಭ್ರಮಿಸಿದರು.

ಗುರುವಾರ ಬೆಳಗ್ಗೆ 10 ಗಂಟೆಗೆ ಬಾರ್ಬಡೋಸ್‌ನಿಂದ ದೆಹಲಿಗೆ ಬಂದಿಳಿದ ಭಾರತ ತಂಡಕ್ಕೆ ಅಭಿಮಾನಿಗಳಿಂದ ಭರ್ಜರಿ ಸ್ವಾಗತ ದೊರೆಯಿತು. 11 ಗಂಟೆಗೆ ವಿಜೇತ ತಂಡದ ಸದಸ್ಯರು ಪ್ರಧಾನಿ ನರೇಂದ್ರ ಮೋದಿ ಅವರ ನಿವಾಸಕ್ಕೆ ಭೇಟಿ ನೀಡಿದರು.

ವಿಶ್ವವಿಜೇತರೊಂದಿಗೆ ಉಪಾಹಾರ ಸಭೆ ನಡೆಸಿದ ಪ್ರಧಾನಿ, ಎಲ್ಲ ಆಟಗಾರರ ಬೆನ್ನುತಟ್ಟಿ ಅಭಿನಂದಿಸಿದರು. ಈ ವೇಳೆ ಭಾರತ ತಂಡವು ಮೋದಿ ಅವರಿಗೆ ಟ್ರೋಫಿಯನ್ನು ಸಮರ್ಪಿಸಿದರು.

→ 4

ವಿಶ್ವ ಚಾಂಪಿಯನ್‌ಗಳೊಂದಿಗೆ ಇದು ಅದ್ಭುತ ಭೇಟಿಯಾಗಿದೆ. ನಮ್ಮ ಆಟಗಾರರು ವಿಶ್ವಕ್ಕೆ ಭಾರತದ ಕ್ರೀಡೆಯ ಪರಿಚಯ ನೀಡಿದ್ದಾರೆ. ಅವರೊಂದಿಗೆ ನಡೆಸಿದ ಸಂದರ್ಶನವು ನೆನಪಿಸಿಕೊಳ್ಳುವಂತಹದ್ದು. ವಿಶ್ವಕಪ್‌ನಲ್ಲಿ ಆಟಗಾರರು ಅನುಭವಿಸಿದ ಅನುಭವದ ಬಗ್ಗೆ ಕೇಳಿದ್ದು ಮನಸ್ಸಿಗೆ ಮುದ ನೀಡಿತು.
ನರೇಂದ್ರ ಮೋದಿ, ಪ್ರಧಾನ ಮಂತ್ರಿ

ಮೋದಿಗೆ ಜೆರ್ಸಿ ಅರ್ಪಣೆ

ದೆಹಲಿಯ ಲೋಕ ಕಲ್ಯಾಣ ಮಾರ್ಗದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರ ನಿವಾಸಕ್ಕೆ ಭೇಟಿ ನೀಡಿದ ಆಟಗಾರರು, ವಿಶ್ವಕಪ್ ಗೆಲುವಿನ ಕುರಿತು ಪ್ರಧಾನಿ ಜತೆ ತಮ್ಮ ಅನುಭವ ಹಂಚಿಕೊಂಡರು. ಮೋದಿ ಕೂಡ ಆಟಗಾರರೊಂದಿಗೆ ಕೆಲ ಕಾಲ ಕುಶಲೋಪರಿ ನಡೆಸಿದರು. ಜೊತೆಗೆ ಗ್ರೂಪ್ ಫೋಟೊ ತೆಗೆಸಿಕೊಂಡರು. ಈ ವೇಳೆ ಬಿಸಿಸಿಐ ಕಡೆಯಿಂದ ಮೋದಿಗೆ ನಮೋ ನಂ.1 ಎಂದು ಬರೆದ ಟೀಂ ಇಂಡಿಯಾ ಜೆರ್ಸಿಯನ್ನು ಉಡುಗೊರೆಯಾಗಿ ನೀಡಲಾಯಿತು.

ಭಟ್ರೆ, ಆರಾಮಾಗಿರಿ, ಏನು ಆಗಲ್ಲ

ಸಿಎಂ ಸಿದ್ದರಾಮಯ್ಯ ಆಸ್ಪತ್ರೆಗೆ ಭೇಟಿ, ಆತ್ಮವಿಶ್ವಾಸದ ಮಾತು

20 ವರ್ಷಗಳ ಹಿಂದೆಯೇ ಸ್ಟೆಂಟ್ ಅಳವಡಿಸಿಕೊಂಡಿದ್ದ ಅನುಭವ ಹಂಚಿಕೊಂಡ ಸಿಎಂ

ಗುರುವಾರ ಅಪೊಲೊ ಆಸ್ಪತ್ರೆಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ ಆರೋಗ್ಯ ವಿಚಾರಿಸಿದರು. ಈ ವೇಳೆ ವಿಶ್ವೇಶ್ವರ ಭಟ್ ಅವರ ಪತ್ನಿ ಸುಷ್ಮಾ ಭಟ್, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಸರೋವರ ಶ್ರೀನಿವಾಸ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ವೆಂಕಟೇಶ್ ಹೆಗಡೆ ಹೊಸಬಾಳೆ ಸೇರಿದಂತೆ ಹಲವರಿದ್ದರು.

ವಿಶ್ವೇಶ್ವರ ಭಟ್ ಆರೋಗ್ಯದಲ್ಲಿ ಚೇತರಿಕೆ

ಬೆಂಗಳೂರು: 'ಭಟ್ರೆ, ಏನು ಆಗಲ್ಲ ಆರಾಮಾಗಿರಿ.. ನಾನು 20 ವರ್ಷಗಳ ಹಿಂದೆಯೇ ಸ್ಟೆಂಟ್ ಅಳವಡಿಸಿಕೊಂಡಿದ್ದೆ. ಆದರೆ ಈವರೆಗೆ ಸ್ಟೆಂಟ್ ಇರುವುದೇ ನನ್ನ ಅನುಭವಕ್ಕೆ ಬಂದಿಲ್ಲ. ಆದ್ದರಿಂದ ಆ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶ್ವೇಶ್ವರ ಭಟ್ ಅವರಿಗೆ ಆತ್ಮವಿಶ್ವಾಸದ ಮಾತುಗಳನ್ನು ಹೇಳಿದರು.

ಎದೆನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಬೆಂಗಳೂರಿನ ಅಪೋಲೊ ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಆರೋಗ್ಯ ವಿಚಾರಿಸಲು ಗುರುವಾರ ಆಸ್ಪತ್ರೆಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಶೀಘ್ರ ಚೇತರಿಸಿಕೊಳ್ಳುವಂತೆ ಹಾರೈಸಿದರು.

ಈ ವೇಳೆ ಸುಮಾರು 20 ವರ್ಷಗಳ ಹಿಂದೆ ದೆಹಲಿಯ ಎಸ್ಕಾರ್ಟ್ ಆಸ್ಪತ್ರೆಯಲ್ಲಿ ಸ್ಟೆಂಟ್ ಅಳವಡಿಸಿದ್ದನ್ನು ನೆನಪು ಮಾಡಿಕೊಂಡ ಸಿದ್ದರಾಮಯ್ಯ ಅವರು, ಸ್ಟೆಂಟ್ ಹಾಕಿದ ಮಾತ್ರಕ್ಕೆ ಅಂಜುವ ಅಗತ್ಯವಿಲ್ಲ. ನಾನು ಈಗಲೂ ಫಿಟ್ ಆ್ಯಂಡ್ ಫೈನ್ ಆಗಿದ್ದೇನೆ. ಸ್ಟೆಂಟ್ ಹಾಕಿಕೊಂಡೇ ಬೆಂಗಳೂರು-ಬಳ್ಳಾರಿ ಪಾದಯಾತ್ರೆ, ಮೇಕೆದಾಟು ಪಾದಯಾತ್ರೆ, ಭಾರತ್ ಜೋಡೋ ಯಾತ್ರೆ ಸೇರಿದಂತೆ ಹಲವು ಪಾದಯಾತ್ರೆಗಳಲ್ಲಿ ಭಾಗವಹಿಸಿದೆ. ಇದರೊಂದಿಗೆ ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ, ರಾಜ್ಯದ ಹಣಕಾಸು ಸಚಿವನಾಗಿ ಕಾರ್ಯನಿರ್ವಹಿಸಿದ್ದೇನೆ. ಸ್ಟೆಂಟ್ ಅಳವಡಿಸಿಕೊಂಡು ಆ ಒತ್ತಡವನ್ನೇ ನಾನು ನಿಭಾಯಿಸಿದ್ದೇನೆ. ಆದ್ದರಿಂದ ನಿಮಗೆ ಯಾವುದೇ ಸಮಸ್ಯೆಯಿಲ್ಲ ಎಂದು ಆತ್ಮವಿಶ್ವಾಸ ತುಂಬಿದರು. ಏನೋ ಆಯಿತು ಎಂದು ಆತಂಕಪಡುವ ಅಗತ್ಯವಿಲ್ಲ. ಕೆಲ ದಿನ ವಿಶ್ರಾಂತಿ ಪಡೆದರೆ ಸಂಪೂರ್ಣ ಗುಣಮುಖರಾಗುತ್ತೀರಿ. ವಿಶ್ರಾಂತಿ ಪಡೆಯಿರಿ ಎಂದು ಸಲಹೆ ನೀಡಿದರು.

ಸಣ್ಣ ಪ್ರಮಾಣದಲ್ಲಿ ಎದೆನೋವು ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದೆ. ಈಗ ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದು, ಆರಾಮಾಗಿದ್ದೇನೆ. ಯಾರೂ ಆತಂಕಪಡುವ ಅಗತ್ಯವಿಲ್ಲ.
- ವಿಶ್ವೇಶ್ವರ ಭಟ್, ವಿಶ್ವವಾಣಿ ಪ್ರಧಾನ ಸಂಪಾದಕ

ಮಂಗಳವಾರ ಸಂಜೆ ಎದೆನೋವು ಕಾಣಿಸಿಕೊಂಡಿದ್ದರಿಂದ ಜಯನಗರದಲ್ಲಿರುವ ಅಪೋಲೊ ಆಸ್ಪತ್ರೆಗೆ ವಿಶ್ವೇಶ್ವರ ಭಟ್ ಅವರನ್ನು ದಾಖಲಿಸಲಾಗಿತ್ತು. ಆರೋಗ್ಯದಲ್ಲಿ ಚೇತರಿಕೆ ಕಂಡಿದ್ದು ಯಾವುದೇ ಸಮಸ್ಯೆಯಿಲ್ಲ ಎಂದು ವೈದ್ಯರು ಹೇಳಿದ್ದಾರೆ. ಸದ್ಯ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಶೀಘ್ರದಲ್ಲಿಯೇ ಆಸ್ಪತ್ರೆಯಿಂದ ಮನೆಗೆ ತೆರಳಲಿದ್ದಾರೆ. ಆಸ್ಪತ್ರೆಗೆ ಮಾಜಿ ಸಂಸದ ಪ್ರತಾಪ್‌ಸಿಂಹ ಸೇರಿದಂತೆ ಹಲವು ಗಣ್ಯರು ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ರಾಜ್ಯದಲ್ಲೂ ಕಾನೂನು, ನ್ಯಾಯ ಪ್ರಕ್ರಿಯೆಯಲ್ಲಿ ಆಮೂಲಾಗ್ರ ಬದಲಾವಣೆಗೆ ಹೊಸ ನೀತಿ
ಅಪ್ರಸ್ತುತ ಕಾನೂನು ರದ್ದು | ವ್ಯಾಜ್ಯ ಮುಕ್ತ ಗ್ರಾಮ | ತಿದ್ದುಪಡಿಗೆ ಸರ್ಕಾರ ಸಜ್ಜು

ಹೊಸ ನ್ಯಾಯ ಸಂಹಿತೆ

ಬೆಂಗಳೂರು: ಕಾನೂನು ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ಮುಂದಾಗಿರುವ ರಾಜ್ಯ ಸರಕಾರ ಕಾನೂನು ಮತ್ತು ನೀತಿ 2023ರ ಪ್ರಸ್ತಾವನೆಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿದೆ. ಈ ನೀತಿಯಲ್ಲಿ ಕಾನೂನು ಇಲಾಖೆಗೆ ಸಂಬಂಧಿಸಿದಂತೆ ನೂತನವಾಗಿ 10 ವಿಧೇಯಕವನ್ನುಮಂಡಿಸಲು ತೀರ್ಮಾನಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ, ರಾಜ್ಯದಲ್ಲಿ ವ್ಯಾಜ್ಯ ಮುಕ್ತ ಗ್ರಾಮಗಳನ್ನು ರೂಪಿಸುವುದು ಸೇರಿದಂತೆ ಹಲವು ಕ್ರಮಗಳ ಮೂಲಕ ಸಾಮಾನ್ಯನಿಗೂ ಸಂವಿಧಾನದ ಆಶಯದ ಅನ್ವಯ ನ್ಯಾಯ ಕೊಡಿಸುವ ಆಶಯದಿಂದ ಹೊಸ 'ಕಾನೂನು ಮತ್ತು ನೀತಿ-2023'ಕ್ಕೆ ಅನುಮೋದನೆ ನೀಡಲಾಗಿದೆ.

ನೂತನ ನೀತಿಯಲ್ಲಿ ಪ್ರಮುಖವಾಗಿ ಆರೋಪಿ ಹಾಗೂ ಸಾಕ್ಷಿಯ ಹೆಸರನ್ನು ಬಹಿರಂಗವಾಗಿ ಕೂಗುವ ವ್ಯವಸ್ಥೆಯನ್ನು ರದ್ದುಗೊಳಿಸಲು, ವಿಚಾರಣೆ ಇಲ್ಲದ ಸಮಯದಲ್ಲಿ ಆರೋಪಿಗಳಿಗೆ ಕುಳಿತುಕೊಳ್ಳಲು ಪ್ರತ್ಯೇಕ ವ್ಯವಸ್ಥೆ, ಕಾರಾಗೃಹಗಳಲ್ಲಿಯೇ ವಿಚಾರಣೆ ನಡೆಸಲು ಅವಕಾಶ ಕಲ್ಪಿಸುವುದು ಸೇರಿದಂತೆ ಹಲವಾರು ಬದಲಾವಣೆಯನ್ನು ಪ್ರಸ್ತಾಪಿಸಲಾಗಿದೆ. ರಾಜ್ಯದಲ್ಲಿ ಕಾನೂನು ಶಿಕ್ಷಣವನ್ನು ಬಲಪಡಿಸುವ ಉದ್ದೇಶದಿಂದ ಕಾನೂನು ಶಿಕ್ಷಣಕ್ಕೆ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪನೆಯನ್ನು ಪ್ರಸ್ತಾಪಿಸಲಾಗಿದೆ. ಇದರೊಂದಿಗೆ ಉತ್ತರ ಕರ್ನಾಟಕ ಭಾಗದಲ್ಲಿ ವಕೀಲರ ಅಕಾಡೆಮಿ, ರಾಜ್ಯದ ಎಲ್ಲ ಕಂದಾಯ ವಿಭಾಗದಲ್ಲಿ ಆಧುನಿಕ ಸೌಲಭ್ಯವಿರುವ ವಿಧಿ ವಿಜ್ಞಾನ ಕೇಂದ್ರಗಳ ಸ್ಥಾಪನೆಗೆ ತೀರ್ಮಾನಿಸಲಾಗಿದೆ.

→ 4

2023ರ ಕಾನೂನು ಮತ್ತು ನೀತಿಗೆ ಸಂಪುಟ ಅನುಮೋದನೆ

ಮುಂದಿನ ಅಧಿವೇಶನದಲ್ಲಿ ನೂತನ 10 ವಿಧೇಯಕ ಮಂಡಿಸಲು ನಿರ್ಧಾರ

- ಕರ್ನಾಟಕ ಆಡಳಿತಾತ್ಮಕ ವಿಧೇಯಕ
- ಕರ್ನಾಟಕ ನ್ಯಾಯ ಆಡಳಿತ ವಿಧೇಯಕ
- ನ್ಯಾಯವಾದಿಗಳ ರಕ್ಷಣೆ ವಿಧೇಯಕ
- ಕಾನೂನು ಶಿಕ್ಷಣ ನಿರ್ದೇಶನಾಲಯ ವಿಧೇಯಕ
- ಕರ್ನಾಟಕ ವಸತಿ (ಖಾತರಿ ಮತ್ತು ನಿಯಂತ್ರಣ) ವಿಧೇಯಕ
- ಅರೆ ನ್ಯಾಯಾಂಗ ಪ್ರಾಧಿಕಾರಗಳಿಗೆ ಕನಿಷ್ಠ ಕಾರ್ಯವಿಧಾನ ನಿರ್ದಿಷ್ಟಪಡಿಸುವ ವಿಧೇಯಕ
- ಮತದಾರರ ಮಾಹಿತಿ ಕಳ್ಳತನ ತಡೆಯುವ ಕಾನೂನು
- ಆನ್‌ಲೈನ್ ಲೋನ್ ಏಜೆನ್ಸಿಗಳನ್ನು ನಿಯಂತ್ರಿಸುವ ಕಾನೂನು
- ಕುಡಿಯುವ ನೀರನ್ನು ಸುರಕ್ಷಿತಗೊಳಿಸುವ ವಿಧೇಯಕ
- ಸ್ಮಾರಕಗಳ ರಕ್ಷಣೆ ಮತ್ತು ಸಂರಕ್ಷಣೆಗಾಗಿ ಕಾನೂನು

ಹೊಸ ಪ್ರಸ್ತಾಪಗಳು

- ಸಾಕ್ಷಿ, ಆರೋಪಿಗಳ ಹೆಸರು ಕೂಗುವ ಪದ್ಧತಿಗೆ ತಿಲಾಂಜಲಿ
- ವಿಚಾರಣೆ ಇಲ್ಲದ ಸಮಯದಲ್ಲಿ ಕುಳಿತುಕೊಳ್ಳಲು ವ್ಯವಸ್ಥೆ
- ಕಾರಾಗೃಹಗಳಿಂದಲೇ ವಿಚಾರಣೆ ನಡೆಸಲು ಅವಕಾಶ
- ಕಾನೂನು ಶಿಕ್ಷಣಕ್ಕೆ ಪ್ರತ್ಯೇಕ ನಿರ್ದೇಶನಾಲಯ
- ಎಲ್ಲ ತಾಲೂಕುಗಳಲ್ಲಿ ನ್ಯಾಯಾಲಯ ಸ್ಥಾಪನೆ
- 100 ಗ್ರಾಮ ನ್ಯಾಯಾಲಯಗಳ ಸ್ಥಾಪನೆ

ಅನಗತ್ಯ ಹೇಳಿಕೆ ನೀಡದಂತೆ ಸಂಪುಟ ಸದಸ್ಯರಿಗೆ ಸಿಎಂ ತಾಕೀತು

ವಾಲ್ಮೀಕಿ ಹಗರಣ: ಸಚಿವರ ಬಾಯಿಗೆ ಬೀಗ

ಬೆಂಗಳೂರು: ರಾಷ್ಟ್ರ ಮಟ್ಟದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ಯಾರೊಬ್ಬರೂ ಬಹಿರಂಗ ಹೇಳಿಕೆ ನೀಡಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಸಚಿವ ಸಂಪುಟ ಸಹೋದ್ಯೋಗಿಗಳಿಗೆ ಈ ಬಗ್ಗೆ ಸ್ಪಷ್ಟ ಸೂಚನೆ ನೀಡಿರುವ ಅವರು, ಮಾಧ್ಯಮಗಳ ಮುಂದೆ ಅನಗತ್ಯ ಹೇಳಿಕೆ ಬೇಡ. ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಈಗಾಗಲೇ ಎಸ್‌ಐಟಿ ಹಾಗೂ ಸಿಬಿಐನಿಂದ ಪ್ರತ್ಯೇಕ ತನಿಖೆ ನಡೆಯುತ್ತಿದೆ. ಆದ್ದರಿಂದ ಈ ಹಂತದಲ್ಲಿ ಯಾವುದೇ ಹೇಳಿಕೆ ನೀಡುವುದು ಬೇಡ ಎನ್ನುವ ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

→ 4

ಸಿಎಂ ಬೆಂಬಲಕ್ಕೆ ಸಚಿವರು

ಮುಡಾ ಹಗರಣದಲ್ಲಿ ಅನವಶ್ಯಕವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರನ್ನು ಎಳೆದು ತರಲಾಗುತ್ತಿದೆ ಎಂದು ಬಿಜೆಪಿ ವಿರುದ್ಧ ಆರೋಪಿಸಿರುವ ಹಲವು ಸಚಿವರು, ಸಿಎಂ ಪರವಾಗಿ ಬ್ಯಾಟ್ ಬೀಸಿದ್ದಾರೆ. ನಿಯ ಮಾನುಸಾರ ಬರಬೇಕಾದ ನಿವೇಶವನ್ನು ಸಿಎಂ ಪತ್ನಿ ಪಡೆದಿದ್ದಾರೆ. ಬಿಜೆಪಿಯವರು ಈ ವಿಷಯದಲ್ಲಿ ರಾಜ ಕೀಯ ಬೆರೆಸುತ್ತಿದ್ದಾರೆ ಎಂದು ಸಚಿವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಜೆಪಿಯವರು ಕೇಳುತ್ತಾರೆ ಎಂದು ಎಲ್ಲವನ್ನು ಸಿಬಿಐಗೆ ಕೊಡಲು ಬರುವುದಿಲ್ಲ. ಎಲ್ಲ ಪ್ರಕರಣಗಳನ್ನು ಸಿಬಿಐಗೆ ಕೊಡುವುದಾದರೆ, ಇಲ್ಲಿರುವವರು ಏನು ಮಾಡಬೇಕು? **- ಡಾ.ಜಿ. ಪರಮೇಶ್ವರ್,** ಗೃಹ ಸಚಿವ

ಬ್ರಿಟನ್: ರಿಷಿ ಭವಿಷ್ಯ ಇಂದು ನಿರ್ಧಾರ



ಲಂಡನ್: ಕುತೂಹಲ ಕೆರಳಿಸಿರುವ ಬ್ರಿಟನ್ ಸಂಸತ್‌ಗೆ ಮತದಾನ ನಡೆದಿದ್ದು, ಪ್ರಧಾನಿ ರಿಷಿ ಸುನಕ್ ನೇತೃತ್ವದ ಕನ್ಸರ್ವೇಟಿವ್ ಪಕ್ಷದ ಭವಿಷ್ಯ ನಿರ್ಧರಿಸಲಿದೆ. 650 ಸದಸ್ಯ ಬಲದ ಬ್ರಿಟಿಷ್ ಸಂಸತ್‌ಗೆ ಗುರುವಾರ ಬೆಳಗ್ಗೆ 9ಗಂಟೆಯಿಂದ (ಲಂಡನ್ ಸಮಯ) ಮತದಾನ ನಡೆದಿದ್ದು, ಶುಕ್ರವಾರ ಫಲಿತಾಂಶ ಪ್ರಕಟವಾಗಲಿದೆ. ಹೌಸ್ ಆಫ್ ಕಾಮನ್ಸ್(ಸಂಸತ್ತಿನ ಕೆಳಮನೆ)ಯಲ್ಲಿ ಬಹುಮತ ಪಡೆದು ಸರಕಾರ ರಚಿಸಲು 326 ಸಂಸತ್ ಸದಸ್ಯರ ಗೆಲುವು ಅಗತ್ಯವಾಗಿದೆ. ಭಾರತ ಮೂಲದ ಬ್ರಿಟನ್ ಪ್ರಜೆ, ಪ್ರಧಾನಿ ರಿಷಿ ಸುನಕ್ ಮರಳಿ ಅಧಿಕಾರ ಗಳಿಸುವರೇ ಎಂಬುದು ಶುಕ್ರವಾರ ಬೆಳಗ್ಗೆ ತಿಳಿಯಲಿದೆ.

ದಾರಿದೀಪೋಕ್ತಿ

ನಾವು ಆರಂಭಿಸಿದ ಕೆಲಸ ಕೈಗೂಡಲಿಲ್ಲವೆಂದ ಮಾತ್ರಕ್ಕೆ ಅದರ ಕಥೆ ಮುಗಿದೇ ಹೋಯಿತು ಎಂದಲ್ಲ. ಆ ಕ್ಷಣದಲ್ಲಿ ನಮಗೆ ಹಿನ್ನಡೆ ಯಾಗಿದ್ದನ್ನು ಹಿನ್ನಡೆ ಎಂದು ಭಾವಿಸಬೇಕಿಲ್ಲ. ನಮ್ಮ ಪ್ರಯತ್ನವನ್ನು ನಾವು ಮುಂದು ವರಿಸಬೇಕು. ಒಂದಲ್ಲ ಒಂದು ದಿನ ಆರಂಭಿಸಿದ ಕೆಲಸ ಕೈಗೂಡುತ್ತದೆ.

ವಕ್ರತುಂಡೋಕ್ತಿ

ಆತ್ಮೀಯ ಸ್ನೇಹಿತರೆಂದು ತಮ್ಮನ್ನು ತಾವು ಜಡ್ಜ್ ಮಾಡಿಕೊಳ್ಳುವುದಿಲ್ಲ. ಅವರಿಬ್ಬರೂ ಸೇರಿ ಬೇರೆಯವರನ್ನು ಜಡ್ಜ್ ಮಾಡುತ್ತಾರೆ.

ಕೊರೆಯುವ ಚಾಳಿಯ ಬಗ್ಗೆ ಒಂದಿಷ್ಟು ಕೊರೆತಗಳು
ಸಂ.ಪುಟ | 6

ಫನ್‌ತರಂಗ

- ರಘುಪತಿ ಶೃಂಗೇರಿ -

ಸದನದ ಬಾವಿಯಲ್ಲಿ ಪ್ರತಿಭಟಿಸುತ್ತಿದ್ದ ಸಂಸದರಿಗೆ ನೀರು ನೀಡಿದ ಮೋದಿ



ಡಿ ಗ್ಯಾಂಗ್ ನ್ಯಾಯಾಂಗ ಬಂಧನ ವಿಸ್ತರಣೆ

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್, ಪವಿತ್ರಾ ಗೌಡ ಸೇರಿ ದಂತೆ 17 ಆರೋಪಿಗಳ ನ್ಯಾಯಾಂಗ ಬಂಧನ ಅವಧಿಯನ್ನು ಜುಲೈ 18ರವರೆಗೆ ವಿಸ್ತರಿಸಿ ಗುರುವಾರ ನಗರದ 24ನೇ ಎಸಿಎಂಎಂ ನ್ಯಾಯಾಲಯ ಆದೇಶಿಸಿದೆ. ಆರೋಪಿಗಳನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರುಪಡಿಸಲಾಯಿತು. ವಾದ-ಪ್ರತಿವಾದ ಆಲಿಸಿದ ಕೋರ್ಟ್ ನ್ಯಾಯಾಂಗ ಬಂಧನ ವಿಸ್ತರಿಸಿ ಆದೇಶ ಹೊರಡಿಸಿತು.

ಜಾರ್ಖಂಡ್ ಸಿಎಂ ಆಗಿ ಮತ್ತೆ ಸೊರೇನ್

ರಾಂಚಿ : ಜೆಎಂಎಂ ನಾಯಕ ಹೇಮಂತ್ ಸೊರೇನ್ ಜಾರ್ಖಂಡ್‌ನಲ್ಲಿ 3ನೇ ಬಾರಿಗೆ ಮುಖ್ಯಮಂತ್ರಿಯಾಗಿ ಗುರುವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ. ರಾಜಭವನದಲ್ಲಿ ಗುರುವಾರ ಸಂಜೆ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಸಿ.ಪಿ ರಾಧಾಕೃಷ್ಣನ್ ಅವರು ಸೊರೇನ್‌ಗೆ ಅಧಿಕಾರ ಪ್ರತಿಜ್ಞಾವಿಧಿ ಬೋಧಿಸಿದರು. ಭ್ರಷ್ಟಾಚಾರ ಹಗರಣದಲ್ಲಿ ಬಂಧಿತರಾಗಿದ್ದ ಹೇಮಂತ್‌ಗೆ ಹೈಕೋರ್ಟ್ ಜಾಮೀನು ನೀಡಿದ ಹಿನ್ನೆಲೆಯಲ್ಲಿ ಮತ್ತೆ ಅಧಿಕಾರ ಹಿಡಿಯಲು ಮಾರ್ಗ ಸುಗಮವಾಯಿತು.

ಉತ್ತರ ಕನ್ನಡ ಜಿಲ್ಲೆಗೆ ಎನ್‌ಡಿಆರ್‌ಎಫ್ ತಂಡ ರವಾನೆ

ರಾಜ್ಯದಲ್ಲಿ ನಿಲ್ಲದ ಮಳೆ ಇನ್ನೂ ಇಬ್ಬರ ಸಾವು

ಬೆಂಗಳೂರು: ರಾಜ್ಯದ ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮಲೆನಾಡಿನಲ್ಲಿ ವರುಣನ ಅಬ್ಬರ ಮುಂದುವರಿದಿದೆ. ಗುರುವಾರ ಸಂಭವಿ ಸಿದ ಮಳೆ ಸಂಬಂಧಿತ ಅವಘಡಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬಿರುಸಿನ ಮಳೆಯಿಂ ದಾಗಿ ನದಿ-ತೊರೆಗಳು ಉಕ್ಕಿ ಹರಿಯುತ್ತಿದ್ದು, ಕುಮಟಾ-ಶಿರಸಿ ಹೆದ್ದಾರಿಯಲ್ಲಿ ಪ್ರವಾಹದಿಂದಾಗಿ ವಾಹನಗಳ ಸಂಚಾರಕ್ಕೆ ಅಡಚಣೆಯಾಗಿದೆ.

→ 4

ಇಬ್ಬರು ಮಹಿಳೆಯರ ಸಾವು

ಮೂರು ದಿನಗಳಿಂದ ಮಳೆಯ ಅಬ್ಬರದಿಂದಾಗಿ, ಶಿವಮೊಗ್ಗ ಜಿಲ್ಲೆ ಹೊಸನಗರ ತಾಲೂಕಿನಲ್ಲಿ ಜಮೀನಿನ ಸಂಕ ದಾಟುತ್ತಿದ್ದ ಬೈಸೆ ಗ್ರಾಮದ ಚೀಕಳಿಯ ಶಶಿಕಲಾ ಎಂಬ 43 ವರ್ಷದ ಮಹಿಳೆಯೊಬ್ಬರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಇದೇ ವೇಳೆ, ದ.ಕ ಜಿಲ್ಲೆಯ ಕೊಲ್ಲೂರಿನ ಸೊಸೈಟಿಗುಡ್ಡೆ ಎಂಬಲ್ಲಿ ಪಾತ್ರೆ ತೊಳೆಯಲು ಮನೆಯ ಹಿಂಭಾಗಕ್ಕೆ ಹೋದ ಹಳ್ಳಿಬೇರಿನ 55 ವರ್ಷದ ಮಹಿಳೆಯೊಬ್ಬರು ಗೋಡೆ ಕುಸಿತದಿಂದ ಮಣ್ಣಿನಲ್ಲಿ ಸಿಲುಕಿ ತೀವ್ರ ಗಾಯಗೊಂಡು, ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಡೆಂಘೀ ಜ್ವರಕ್ಕೆ ಇನ್ನೂ ಮೂವರು ಬಲಿ

ಬೆಂಗಳೂರು: ರಾಜ್ಯದಲ್ಲಿ ಡೆಂಘೀ ಜ್ವರ ಪ್ರಕರಣಗಳು ಹೆಚ್ಚುತ್ತಿದ್ದು, ಗುರುವಾರ ಮೂವರು ಬಲಿಯಾಗಿದ್ದಾರೆ. ಈವರೆಗೆ 6,377 ಡೆಂಘೀ ಪ್ರಕರಣಗಳು ದಾಖಲಾಗಿದ್ದು, ಕಳೆದ ಎರಡು ವಾರದಲ್ಲಿ ಏಳು ಜನರನ್ನು ಬಲಿ ಪಡೆದಿದೆ. ಬೆಂಗಳೂರಿನಲ್ಲಿ ಡೆಂಘೀ ಪ್ರಕರಣಗಳ ಸಂಖ್ಯೆ 1300 ದಾಟಿದೆ. ಮೈಸೂರು ಜಿಲ್ಲೆ ಹುಣಸೂರಿನ ಯುವ ಆರೋಗ್ಯಾಧಿಕಾರಿ, ಹೊಳೆನರಸೀಪುರದ ಇಬ್ಬರು ಬಾಲಕಿಯರು, ಹಾಗೂ ಬೆಳಗಾವಿಯಲ್ಲಿ ಒಬ್ಬರು ಬಲಿಯಾಗಿದ್ದಾರೆ.

ಮಳೆ ಕೊರತೆಯಿಂದ ಉತ್ಪಾದನೆ ಕುಸಿತ, ಭತ್ತದ ಬೆಲೆಯಲ್ಲೂ ಹೆಚ್ಚಳ

ಅಕ್ಕಿ ಬೆಲೆಯೂ ಏರಿಕೆ, ಗ್ರಾಹಕರಿಗೆ ಬರೆ

ಹೂವಪ್ಪ ಐ ಹೆಚ್.

ಬೆಂಗಳೂರು: ತರಕಾರಿ, ಹಾಲು, ಇಂಧನ ಬೆಲೆ ಏರಿಕೆಯ ಬೆನ್ನಿಗೇ ಅಕ್ಕಿ ಬೆಲೆಯೂ ಏರಿಕೆ ಕಂಡಿದ್ದು ಗ್ರಾಹಕರು ಪರಿತಪಿಸುವಂತಾಗಿದೆ. ಕರ್ನಾಟಕ ವಲ್ಲದೆ ದೇಶದಲ್ಲೇ ಅಕ್ಕಿ ದರದಲ್ಲಿ ಭಾರಿ ಏರಿಕೆ ಕಂಡು ಬಂದಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಅಕ್ಕಿಯ ದರ ಶೇ.25ರಷ್ಟು ಏರಿಕೆಯಾಗಿದೆ. ದೇಶೀಯ ಮಾರುಕಟ್ಟೆಯಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಅಕ್ಕಿ ಬೆಲೆ ಕೆಜಿಗೆ 20ರಿಂದ 25 ರು. ಏರಿಕೆಯಾಗಿದೆ. ಮಳೆ ಅಭಾವ ಮತ್ತು ಹವಾಮಾನ ವೈಪರೀತ್ಯದಿಂದಾಗಿ ಉತ್ಪಾದನೆ ಕುಂಠಿತಗೊಂಡು, ಪೂರೈಕೆಯಲ್ಲಿ ವ್ಯತ್ಯಯವಾಗಿರುವುದು ಬೆಲೆ ಹೆಚ್ಚಳಕ್ಕೆ ಕಾರಣ ಎಂದು ಹೇಳಲಾಗಿದೆ.

ಕಳೆದ ವರ್ಷ ಕಿಲೋ ಸೋನಾಮಸೂರಿ ಉತ್ತಮ ಅಕ್ಕಿ ದರ ಸಗಟು ಮಾರುಕಟ್ಟೆಯಲ್ಲಿ 45ರಿಂದ 48 ರೂ. ಇತ್ತು. ಈಗ 65-68 ರು.ಗಳಿಗೇರಿದೆ. ಭತ್ತ ಕ್ವಿಂಟಲ್ ಗೆ ಹಳೇ ಸೋನಾಮಸೂರಿ 2800ರಿಂದ 3000 ರು.ಗಳಿಗೆ ಮಾರಾಟವಾಗುತ್ತಿದೆ.

→ 4

ಸದ್ಯದ ಸ್ಥಿತಿಯನ್ನು ಅವಲೋಕಿಸಿದರೆ ಈ ಬಾರಿ ರಾಜ್ಯದಲ್ಲಿ ಶೇ. 70ರಷ್ಟು ಭತ್ತದ ಬೆಳೆಯನ್ನು ನಿರೀಕ್ಷಿಸಬಹುದು. ಒಂದು ವೇಳೆ ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚಿನ ಮಳೆಯಾದರೆ ಹೆಚ್ಚುವರಿ ಬೆಳೆ ನಿರೀಕ್ಷಿಸ ಬಹುದು. ಭತ್ತದ ಬೆಲೆ ಏರಿಕೆಯಿಂದಾಗಿ ಅಕ್ಕಿ ಬೆಲೆ ಏರಿಕೆಯಾಗಿದೆ.
- ಶ್ರೀನಿವಾಸ್, ಅಕ್ಕಿ ಗಿರಿಣೆ ಮಾಲೀಕರು, ರಾಯಚೂರು

ಭತ್ತದ ಬೆಳೆಗೆ ಮಳೆ ಕೊರತೆ

ರಾಜ್ಯದ ಭತ್ತದ ಕಣಜಗಳಾದ ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ಮಳೆ ಕೊರತೆ ಇದೆ. ಸದ್ಯದ ಸ್ಥಿತಿಯನ್ನು ಅವಲೋಕಿಸಿದರೆ ಈ ಬಾರಿ ರಾಜ್ಯದಲ್ಲಿ ಶೇ. 70ರಷ್ಟು ಭತ್ತದ ಬೆಳೆಯನ್ನು ನಿರೀಕ್ಷಿಸಬಹುದು. ಒಂದು ವೇಳೆ ಸೆಪ್ಟೆಂಬರ್ ತಿಂಗಳಲ್ಲಿ ಹೆಚ್ಚಿನ ಮಳೆಯಾದರೆ ಹೆಚ್ಚುವರಿ ಬೆಳೆ ನಿರೀಕ್ಷಿಸಬಹುದು. ಇಲ್ಲದಿದ್ದರೆ ಮುಂದಿನ ವರ್ಷ ಅಕ್ಕಿಯ ಕೊರತೆ ಎದುರಾಗಬಹುದು ಅಕ್ಕಿ ಗಿರಣಿಕಾರರು ಕಳವಳ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಕಾರ್ಯಕಾರಿಣಿಯಲ್ಲಿ ನಾಯಕರ ಸೂಚನೆ | ಸರಕಾರ ಇನ್ನೆಷ್ಟು ದಿನವಿರುವುದೋ ಗೊತ್ತಿಲ್ಲ : ವಿಜಯೇಂದ್ರ | ಸರಕಾರ ವಿಸರ್ಜಿಸಿ ಚುನಾವಣೆಗೆ ಬನ್ನಿ : ಯಡಿಯೂರಪ್ಪ

ಸರಕಾರದ ವಿರುದ್ಧ ಹೋರಾಟಕ್ಕೆ ಸಜ್ಜಾಗಿ

ಬೆಂಗಳೂರು: ರಾಜ್ಯ ಸರಕಾರದ ವಿರುದ್ಧ ಸದನದ ಒಳ-ಹೊರಗೆ ಹೋರಾಟಕ್ಕೆ ಸಜ್ಜಾಗುವಂತೆ ವಿಶೇಷ ಕಾರ್ಯಕಾರಿಣಿ ಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಅರಮನೆ ಮೈದಾನದಲ್ಲಿ ನಡೆದ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ, ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ ನಾಯಕರು ವಾಗ್ದಾಳಿ ನಡೆಸಿದರು. ವಾಲ್ಮೀಕಿ ಹಗರಣ, ಮುಡಾ ಸೇರಿದಂತೆ ವಿವಿಧ ಅಕ್ರಮಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಲು ನಾಯಕರು ಕಾರ್ಯಕರ್ತರಿಗೆ ಕರೆ ನೀಡಿದರು. ಗುರುವಾರ ಸಂಜೆ ನಡೆದ ಮತ್ತೊಂದು ಸಭೆಯಲ್ಲಿ, ಜು.15 ರಂದು ಆರಂಭವಾಗಲಿರುವ ಮಳೆಗಾಲದ ವಿಧಾನ ಮಂಡಲದ ಅಧಿವೇಶನದಲ್ಲಿ ಸರಕಾರದ ವಿರುದ್ಧ ದೊಡ್ಡ ಪ್ರಮಾಣದಲ್ಲಿ ಹೋರಾಟ ನಡೆಸಲು ತೀರ್ಮಾನಿಸಲಾಯಿತು. ಗುರುವಾರ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ರಾಜ್ಯ ಸರಕಾರದ ಪಾಪದ ಕೊಡ ತುಂಬಿದೆ.



ತುರ್ತು ಪರಿಸ್ಥಿತಿ ಹೇರುವ ಮೂಲಕ ದೇಶದಲ್ಲಿ ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ಹತ್ಯೆ ಮಾಡಿದ ಕಾಂಗ್ರೆಸ್‌ನವರೇ ಲೋಕಸಭಾ ಚುನಾವಣೆಯಲ್ಲಿ 'ಸಂವಿಧಾನ ಆತಂಕದಲ್ಲಿದೆ' ಎಂದು ಘೋಷಣೆ ಕೂಗಿದ್ದರು. ಯುವಕರಿಗೆ 50 ವರ್ಷದ ಹಿಂದಿನ ಇತಿಹಾಸ ಗೊತ್ತಿಲ್ಲ. ಹೀಗಾಗಿ ಕಾಂಗ್ರೆಸ್ ಈ ದೇಶಕ್ಕೆ ಮಾಡಿದ ಅಪಮಾನ ಹಾಗೂ ಸಂವಿಧಾನ ವಿರೋಧಿ ನಡೆಗಳ ಬಗ್ಗೆ ಜನರಿಗೆ ಸಂದೇಶ ನೀಡಬೇಕು.
- ನಿತಿನ್ ಗಡ್ಕರಿ, ಕೇಂದ್ರ ಸಚಿವ

ಜಾಮೀನು ಕೋರಿ ಪ್ರಜ್ವಲ್ ಅರ್ಜಿ

ಬೆಂಗಳೂರು: ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜಾಮೀನು ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಪ್ರಜ್ವಲ್ ರೇವಣ್ಣ ವಿರುದ್ಧ ಹಾಸನದ ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆಯಲ್ಲಿ ಒಂದು ಮತ್ತು ಸಿಐಡಿ ಪೊಲೀಸ್ ಠಾಣೆಯಲ್ಲಿ ಎರಡು ಪ್ರತ್ಯೇಕ ಎಫ್‌ಐಆರ್ ದಾಖಲಾಗಿದೆ. ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ಸಂಬಂಧಿಸಿದಂತೆ ಪ್ರಜ್ವಲ್ ರೇವಣ್ಣ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಈ ಎಫ್‌ಐಆರ್ ಪ್ರಕರಣದಲ್ಲಿ ಅವರಿಗೆ ಜನಪ್ರತಿನಿಧಿಗಳಿಗೆ ವಿಶೇಷ ನ್ಯಾಯಾಲಯ ಜಾಮೀನು ನಿರಾಕರಿಸಿ 2024ರ ಜೂನ್ 26 ರಂದು ಆದೇಶಿಸಿತ್ತು. ಹೀಗಾಗಿ, ಅವರು ಈ ಪ್ರಕರಣದಲ್ಲಿ ನಿಯಮಿತಿ ಜಾಮೀನು ಕೋರಿ ಹೈಕೋರ್ಟ್‌ಗೆ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದಾರೆ. ಸಿಐಡಿ ಪೊಲೀಸರು ದಾಖಲಿಸಿರುವ ಎರಡು ಪ್ರತ್ಯೇಕ ಎಫ್‌ಐಆರ್‌ಗಳಿಗೆ ಸಂಬಂಧಿಸಿದಂತೆ ನಿರೀಕ್ಷಾ ಜಾಮೀನು ಕೋರಿ ಸಲ್ಲಿಸಲಾಗಿರುವ ಪ್ರತ್ಯೇಕ ಅರ್ಜಿಗಳ ವಿಚಾರಣೆ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರ ಅವರ ವಿಶೇಷ ನ್ಯಾಯಪೀಠದಲ್ಲಿ (ಜು.5) ಮಧ್ಯಾಹ್ನ ವಿಚಾರಣೆಗೆ ನಿಗದಿಯಾಗಿದೆ.

ಹೆಸರೇ ಇಲ್ಲದ ಸೊಸೈಟಿಗಳಿಗೆ ಹಣ ವರ್ಗಾವಣೆ ಆರೋಪ

ಬಿಬಿಎಂಪಿ ಹಗರಣ: ಜಂಟಿ ಆಯುಕ್ತರ ವರ್ಗಾವಣೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಬಿಎಂಪಿ ಕಲ್ಯಾಣ ಇಲಾಖೆಯಲ್ಲಿ ನಡೆದಿತ್ತು ಎನ್ನಲಾದ ಬಹುಕೋಟಿ ಹಗರಣಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಪಶ್ಚಿಮ ವಲಯ ಜಂಟಿ ಆಯುಕ್ತರನ್ನು ವರ್ಗಾವಣೆ ಮಾಡಲಾಗಿದೆ. ಬಹುಕೋಟಿ ಹಗರಣ ಹೊರಬರುತ್ತಿದಂತೆಯೇ ಜಂಟಿ ಆಯುಕ್ತರ ವರ್ಗಾವಣೆ ಮಾಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಸದ್ಯ ಅವರನ್ನು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ನಿರ್ದೇಶಕರಾಗಿ ನಿಯುಕ್ತಿಗೊಳಿಸಲಾಗಿದೆ. ಕಲ್ಯಾಣ ಇಲಾಖೆಯಿಂದ ಹೆಸರೇ ಇಲ್ಲದ ಸೊಸೈಟಿಗಳಿಗೆ ಹಣ ವರ್ಗಾಯಿಸಿದ್ದ ಆರೋಪ ಕೇಳಿಬಂದಿತ್ತು. ಸುಮಾರು 102 ಕೋಟಿ ರುಪಾಯಿ ವರ್ಗಾವಣೆ ಮಾಡಿದ ಆರೋಪ ಕೇಳಿಬಂದಿತ್ತು. ಕೋವಿಡ್ ವೇಳೆ ಹಣ ವರ್ಗಾಯಿಸಿದ್ದ ಬಗ್ಗೆ ಲೋಕಾಯುಕ್ತದಲ್ಲಿ ದೂರು ದಾಖಲಾಗಿತ್ತು. 2020 ರಿಂದ 2021ರ ಅವಧಿಯಲ್ಲಿ ಬಿಬಿಎಂಪಿಯ ಪಶ್ಚಿಮ ವಲಯದಲ್ಲಿ ಈ ಬಹುಕೋಟಿ ಹಗರಣ ನಡೆದಿದೆ ಎನ್ನಲಾಗಿದೆ.

ವರದಿ ಕೇಳಿದ ಲೋಕಾಯುಕ್ತ : ಈ ಸಂಬಂಧ ಹಣಕಾಸು ವಿಭಾಗದ ಒಂಭತ್ತು ಅಧಿಕಾರಿಗಳ ಮೇಲೆ ದೂರು ದಾಖಲಾಗಿತ್ತು. ಹಣ ದುರುಪಯೋಗ ಹಗರಣ ಸಂಬಂಧ ಲೋಕಾಯುಕ್ತರು ನಮ್ಮ ಬಳಿ ವರದಿ ಕೇಳಿದ್ದಾರೆ ಎಂದು ಕೆಲವು ದಿನಗಳ ಹಿಂದೆ ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದರು. ಹಗರಣ ಆರೋಪಕ್ಕೆ ಸಂಬಂಧಿಸಿ ಮುಖ್ಯಮಂತ್ರಿಗಳ ಕಚೇರಿ ಕೂಡ ಬಿಬಿಎಂಪಿಯಿಂದ ವರದಿ ಕೇಳಿತ್ತು.

ಸಮಗ್ರ ವರದಿಗೆ ಸೂಚನೆ: ಬಿಬಿಎಂಪಿ ಕಲ್ಯಾಣ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಹಗರಣ ಆರೋಪ ಸಂಬಂಧಿಸಿದಂತೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಹಗರಣದ ತನಿಖೆ ನಡೆಸಿ ವರದಿ ನೀಡುವಂತೆ ಪಶ್ಚಿಮ ವಲಯದ ಜಂಟಿ ಆಯುಕ್ತರಿಗೆ ಆದೇಶಿಸಿದ್ದಾರೆ.

ಅಸ್ತಿತ್ವದಲ್ಲಿಯೇ ಇಲ್ಲದ ಸೊಸೈಟಿಗಳಿಗೆ ಕೋಟ್ಯಂತರ ಹಣ ವರ್ಗಾಯಿಸಲಾಗಿದೆ ಎಂಬ ಆರೋಪ ಕೇಳಿಬಂದ ಬೆನ್ನಲ್ಲೇ ಇದಕ್ಕೆ ಸಂಬಂಧಿಸಿದಂತೆ ತುಷಾರ್ ಗಿರಿನಾಥ್ ಅವರು ಪಾಲಿಕೆಯ ಎಂಟು ವಲಯಗಳ ಕಲ್ಯಾಣ ಇಲಾಖೆಯಲ್ಲಿ ಕೊಟ್ಟಿರುವ ಅನುದಾನದ ಹಂಚಿಕೆಯ ಪೂರ್ಣ ವಿವರ ಪಡೆದುಕೊಂಡಿದ್ದಾರೆ. ಸೊಸೈಟಿ'ಳ ಅಸ್ತಿತ್ವದ ಬಗ್ಗೆ ಹಾಗೂ ಫಲಾನುಭವಿಗಳಿಗೆ ವರ್ಗಾವಣೆಯಾದ ಹಣದ ಬಗ್ಗೆ ತನಿಖೆ ನಡೆಸಿ ಮಾಹಿತಿ ನೀಡುವಂತೆ ಸೂಚನೆ ನೀಡಿದ್ದಾರೆ. ಅದೇ ರೀತಿ, ಮೂರು ದಿನಗಳಲ್ಲಿ ಸಮಗ್ರ ಮಾಹಿತಿ ಸಂಗ್ರಹಿಸಿ ನೀಡುವಂತೆ ಸೂಚನೆ ನೀಡಿದ್ದು, ಇದರ ಬೆನ್ನಲ್ಲೇ ಬಿಬಿಎಂಪಿ ಕಂದಾಯ ಅಧಿಕಾರಿಗಳು ಸೊಸೈಟಿಗಳ ಬೆನ್ನುಬಿದ್ದಿದ್ದಾರೆ.

ಪ್ರತಿವಾದಿಗಳ ವಾದ ಆಲಿಸದೆ ಅರ್ಜಿ ವಜಾಗೊಳಿಸುವಂತಿಲ್ಲ

ಬೆಂಗಳೂರು: ಕೌಟುಂಬಿಕ ದೌರ್ಜನ್ಯ ಕಾಯಿದೆಯಡಿ ಮಹಿಳೆ ಸಲ್ಲಿಸುವ ಅರ್ಜಿಯ ಸಂಬಂಧ ಪ್ರತಿವಾದಿಗಳಿಗೆ (ಪತಿ ಮತ್ತವರ ಕುಟುಂಬ) ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸದೆ ವಜಾಗೊಳಿಸುವುದಕ್ಕೆ ಅವಕಾಶವಿಲ್ಲ ಎಂದು ಹೈಕೋರ್ಟ್ ತಿಳಿಸಿತು.

ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ. ಅಲ್ಲದೆ, ಅರ್ಜಿಯಲ್ಲಿರುವ ಅಂಶಗಳಲ್ಲಿ ಯಾವುದೇ ರೀತಿಯ ಕೌಟುಂಬಿಕ ಹಿಂಸೆ ನೀಡಲಾಗಿಲ್ಲ ಎಂಬುದಾಗಿ ಪರಿಗಣಿಸಿ ವಜಾಗೊಳಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶ ರದ್ದುಪಡಿಸಿತು.

ಮಹಿಳೆ ಸಲ್ಲಿಸಿರುವ ಅರ್ಜಿಯಲ್ಲಿರುವ ಅಂಶಗಳನ್ನು ಪರಿಶೀಲಿಸಿದಲ್ಲಿ ಪ್ರತಿವಾದಿಗಳಿಂದ ಕೌಟುಂಬಿಕ ದೌರ್ಜನ್ಯ ನಡೆಸಿರುವ ಸಂಬಂಧ ಅಂಶಗಳು ಗೊತ್ತಾಗುತ್ತವೆ. ಅರ್ಜಿ ಸಲ್ಲಿಕೆಯಾದ ಬಳಿಕ ಕೌಟುಂಬಿಕ ನ್ಯಾಯಾಲಯ ಕನಿಷ್ಠ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಬೇಕಾಗಿತ್ತು. ಅರ್ಜಿದಾರರ ಕುರಿತು ಪೂರ್ವಗ್ರಹಪೀಡಿತವಾಗಿರುವ ಕೌಟುಂಬಿಕ ನ್ಯಾಯಾಲಯ ಅರ್ಜಿಯ ಕುರಿತು ಮೊಳಕೆಯಲ್ಲಿಯೇ ಚಿವುಟಿ ಹಾಕಿದಂತೆ ತೋರುತ್ತಿದೆ ಎಂದಿತು.

ಅರ್ಜಿದಾರರು ತಮ್ಮ ಪತಿಯಿಂದ ಜೀವನಾಂಶ, ಉಳಿಯಲು ನಿವಾಸ ಕುರಿತಂತೆ ನ್ಯಾಯಾಲಯವನ್ನು ಕೋರಿದ್ದಾರೆ. ಆದ್ದರಿಂದ ವಿಚಾರಣಾ ನ್ಯಾಯಾಲಯ ಅರ್ಜಿ ಸಂಬಂಧ ನೋಟಿಸ್ ಜಾರಿಮಾಡಿ ವಿಚಾರಣೆ ನಡೆಸಿದ ಬಳಿಕ ಅರ್ಜಿದಾರರ ಕುರಿತಂತೆ ಸತ್ಯಾಂಶಗಳು ಕಂಡುಬರದಿದ್ದಲ್ಲಿ ಅರ್ಜಿಯನ್ನು ವಜಾಗೊಳಿಸುವ ಬದಲಾಗಿ ಸೂಕ್ತ ಆದೇಶವನ್ನು ಹೊರಡಿಸಬಹುದಾಗಿತ್ತು ಎಂದು ಪೀಠ ತಿಳಿಸಿದೆ. ಈ ಕಾರಣಗಳಿಂದ ಅರ್ಜಿಯನ್ನು ಕೌಟುಂಬಿಕ ನ್ಯಾಯಾಲಯಕ್ಕೆ ವಾಪಸ್ ಕಳುಹಿಸುತ್ತಿದ್ದು, ಅರ್ಜಿಯ ಅಂಶಗಳನ್ನು ಪರಿಗಣಿಸಿ ವಿಚಾರಣೆ ನಡೆಸಿ ಸೂಕ್ತ ಆದೇಶ ಹೊರಡಿಸಬಹುದು ಎಂದು ಪೀಠ ಹೇಳಿತು.

ಆದಾಯಕ್ಕಿಂತ ಹೆಚ್ಚು ಗಳಿಕೆ: ಸರಕಾರಿ ನೌಕರನಿಗೆ ಜೈಲು, ಕೋಟಿ ದಂಡ

- ಬೆಸ್ಕಾಂ ಎಂಜಿನಿಯರ್ ಮನೆ ಮೇಲಿನ ದಾಳಿ ಪ್ರಕರಣ
- ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಕೆ ಆರೋಪ ದೃಢ
- ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆಯಡಿ ಪ್ರಕರಣ
- ತಪ್ಪಿತಸ್ಥ ಅಧಿಕಾರಿಗೆ 3 ವರ್ಷ ಜೈಲು, ಕೋಟಿ ರು. ದಂಡ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಸಂಪಾದಿಸಿರುವ ಪ್ರಕರಣದಲ್ಲಿ ಸರಕಾರಿ ಅಧಿಕಾರಿಯೊಬ್ಬರನ್ನು ಅಪರಾಧಿ ಎಂದು ಲೋಕಾಯುಕ್ತ ವಿಶೇಷ ನ್ಯಾಯಾಲಯ ಪರಿಗಣಿಸಿ, 3 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ಒಂದು ಕೋಟಿ ರುಪಾಯಿ ದಂಡ ವಿಧಿಸಿ ಮಹತ್ವದ ಆದೇಶ ನೀಡಿದೆ.

ಸಿ.ರಾಮಲಿಂಗಯ್ಯ ಪ್ರಕರಣದ ಅಪರಾಧಿ. ಇವರು 2011ರಲ್ಲಿ ಬೆಂಗಳೂರು ವಿದ್ಯುತ್ ಕಂಪೆನಿ (ಬೆಸ್ಕಾಂ) ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿದ್ದರು. ಆಗ ಲೋಕಾಯುಕ್ತ ಪೊಲೀಸರು ಇವರ ಮನೆ ಮೇಲೆ ದಾಳಿ ಮಾಡಿದ್ದರು. ಅಪಾರ ಪ್ರಮಾಣದ ಆಸ್ತಿ ಪತ್ತೆಯಾಗಿತ್ತು. ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ-1988ರಡಿ ಪ್ರಕರಣ ದಾಖಲಿಸಿಕೊಂಡು ಬಂಧಿಸಲಾಗಿತ್ತು. ತನಿಖೆಯಲ್ಲಿ ಆದಾಯಕ್ಕಿಂತ 1.03 ಕೋಟಿ ಅಂದರೆ ಶೇ. 44.6ರಷ್ಟು ಅಕ್ರಮ ಆಸ್ತಿ ಹೊಂದಿರುವುದು ದೃಢಪಟ್ಟಿತ್ತು. ಆಗಿನ ಡಿವೈಎಸ್‌ಪಿಗಳಾದ ಅಬ್ದುಲ್ ಅಹದ್, ಡಾ.ಅಶ್ವಿನಿ ಹಾಗೂ ಎಂ.ನಾರಾಯಣ್ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಇದೀಗ ಪ್ರಕರಣದ ವಿಚಾರಣೆ ನಡೆಸಿದ ನ್ಯಾ.ಕೆ.ಎಂ.ರಾಧಾಕೃಷ್ಣ ತೀರ್ಪು ನೀಡಿದ್ದಾರೆ. ಅಪರಾಧಿ 1 ಕೋಟಿ ದಂಡ ಪಾವತಿಸಲು ಸಾಧ್ಯವಾಗದಿದ್ದಲ್ಲಿ 4 ತಿಂಗಳ ಸಾದಾ ಜೈಲು ಶಿಕ್ಷೆ ಅನುಭವಿಸಬೇಕೆಂದು ಆದೇಶದಲ್ಲಿ ತಿಳಿಸಿದ್ದಾರೆ. ಸರಕಾರದ ಪರ ಅಭಿಯೋಜಕರಾದ ರಮೇಶ್ ಬಾಬು ಹಾಗೂ ಮಂಜುನಾಥ್ ಹೊನ್ನಯ್ಯ ನಾಯಕ್ ವಾದ ಮಂಡಿಸಿದ್ದರು.

ಪೋಕ್ಸೊ ಪ್ರಕರಣದಲ್ಲಿ ಬಿಎಸ್‌ವೈಗೆ ಮತ್ತೆ ಸಮನ್ಸ್

ಬೆಂಗಳೂರು: ಪೋಕ್ಸೊ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪಗೆ ಬೆಂಗಳೂರಿನ 1ನೇ ತ್ವರಿತಗತಿಯ ಕೋರ್ಟ್ ಸಮನ್ಸ್ ನೀಡಿದೆ.

ಆರೋಪಪಟ್ಟಿಯನ್ನು ವಿಚಾರಣೆಗೆ ಪರಿಗಣಿಸಿದ ಕೋರ್ಟ್, ಜುಲೈ 15ರಂದು ಖುದ್ದಾಗಿ ಕೋರ್ಟ್‌ಗೆ ಹಾಜರಾಗುವಂತೆ ಬಿಎಸ್‌ವೈ ಹಾಗೂ ಇತರೆ ಆರೋಪಿಗಳಿಗೆ ಸಮನ್ಸ್ ನೀಡಿದೆ. ಅಪ್ರಾಪ್ತೆಗೆ ಲೈಂಗಿಕ ದೌರ್ಜನ್ಯ ನೀಡಿದ್ದಾರೆ ಎಂಬ ಆರೋಪದ ಮೇಲೆ ಸದಾಶಿವನಗರ ಠಾಣೆಯಲ್ಲಿ ಬಿಎಸ್‌ವೈ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆಯನ್ನು ರಾಜ್ಯ ಸರಕಾರ ಸಿಐಡಿಗೆ ನೀಡಿತ್ತು. ತನಿಖೆಗೆ ಹಾಜರಾಗುವಂತೆ ಬಿಎಸ್‌ವೈಗೆ ನೋಟಿಸ್ ಕೊಟ್ಟಿದ್ದರಿಂದ ಅವರು ಕಾಲಾವಕಾಶ ಕೇಳಿದ್ದರು. ಬಳಿಕ ತನಿಖೆಗೆ ಹಾಜರಾಗಿಲ್ಲ ಎಂದು ಸಿಐಡಿ ಅಧಿಕಾರಿಗಳು, ಅವರಿಗೆ ಬಂಧನದ ವಾರೆಂಟ್ ಪಡೆದಿದ್ದರು. ನಂತರ ಮಾಜಿ ಮುಖ್ಯಮಂತ್ರಿ ಮಧ್ಯಂತರ ಜಾಮೀನು ಪಡೆದಿದ್ದರು. ಜಾಮೀನು ಪಡೆದ ಬಳಿಕ ಕೋರ್ಟ್ ನಿರ್ದೇಶನದಂತೆ ಸಿಐಡಿ ಅಧಿಕಾರಿಗಳ ಎದುರು ಯಡಿಯೂರಪ್ಪ ತನಿಖೆಗೆ ಹಾಜರಾಗಿದ್ದರು. ತನಿಖೆ ನಡೆಸಿರುವ ಸಿಐಡಿ ಅಧಿಕಾರಿಗಳು ಈ ಹಿಂದೆ ಕೋರ್ಟ್‌ಗೆ 750 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಯಡಿಯೂರಪ್ಪ, ಅರುಣ್, ರುದ್ರೇಶ್ ಮತ್ತು ಮರಿಸ್ವಾಮಿ ಎಂಬವರ ವಿರುದ್ಧ ಸಿಐಡಿ ಅಧಿಕಾರಿಗಳು 1ನೇ ತ್ವರಿತಗತಿ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಅರ್ಜಿ ಸಂಖ್ಯೆ ಯುಆರ್‌ಸಿ-2

ಭಾಗ-1ರ ಅಧ್ಯಾಯ 21ರಡಿ ನೋಂದಣಿ ಬಗ್ಗೆ ಸೂಚನೆ ನೀಡುವ ಬಗ್ಗೆ ಜಾಹೀರಾತು

[ಸೆಕ್ಷನ್ 374(ಬಿ)ರ ಕಂಪನಿ ಕಾಯಿದೆ, 2013ರ ನಿಯಮ 4(1)ರ ಕಂಪನಿಗಳಿಗೆ ಸಂಬಂಧಪಟ್ಟಂತೆ (ಅಧಿಕೃತ ನೋಂದಣಿಯಾಗಲು) ನಿಯಮಗಳು, 2014]

1. ಈ ಮೂಲಕ ಸೂಚಿಸುವುದೇನೆಂದರೆ, ಷೇರುಗಳಿಂದ ನಿಯಮಿತವಾದ ಕಂಪನಿಯನ್ನಾಗಿ ಕಂಪನಿಗಳ ಕಾಯ್ದೆ 2013ರ ಚಾಪ್ಟರ್ 21ರ ಭಾಗ 1 ರ ಅಡಿಯಲ್ಲಿ **ಸ್ಲೋಕಿ ಸಾಫ್ಟ್‌ವೇರ್ ಟೆಕ್ನಾಲಜೀಸ್ ಎಲ್‌ಎಲ್ ಪಿ (ಎಲ್‌ಎಲ್‌ಪಿಐಎನ್:ಎಎಎ-3641)** ಯನ್ನು ಇಂದಿನಿಂದ ಹದಿನೈದು ದಿನಗಳ ನಂತರ ಹಾಗೂ ಮೂವತ್ತು ದಿನಗಳ ಒಳಗಾಗಿ ನೋಂದಣಿ ಮಾಡಬಹುದು ಎಂಬುದಾಗಿ ಬೆಂಗಳೂರಿನ ರಿಜಿಸ್ಟ್ರಾರ್‌ಗೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 366 ಉಪಪ್ರಕರಣ(2)ರ ಅನುಸಾರ ಅರ್ಜಿಯೊಂದನ್ನು ಸಲ್ಲಿಸಲು ಉದ್ದೇಶಿಸಲಾಗಿದೆ.

2. ಕಂಪನಿಯ ಮುಖ್ಯ ಉದ್ದೇಶಗಳು ಈ ರೀತಿಯಾಗಿವೆ.

*ಭಾರತ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಎಂಬೆಡೆಡ್ ಇಂಜಿನಿಯರಿಂಗ್ ಮಾಹಿತಿ ತಂತ್ರಜ್ಞಾನ ಮತ್ತು ಭಾರತೀಯ ಉದ್ಯಮ ವಿಭಾಗಗಳು, ಎಸ್‌ಎಂಬಿ ಗಳು ಮತ್ತು ಇತರ ವ್ಯವಹಾರಗಳ ಮೇಲೆ ವಿವಿಧ ಸಾಫ್ಟ್‌ವೇರ್‌ಗಳು, ಹಾರ್ಡ್‌ವೇರ್‌ಗಳು, ಉತ್ಪನ್ನಗಳು, ಸೇವೆಗಳು, ಅಪ್ಲಿಕೇಶನ್‌ಗಳು, ಗ್ಯಾಜೆಟ್‌ಗಳು, ಸಿಸ್ಟಮ್‌ಗಳ ವಿನ್ಯಾಸ ಮತ್ತು ಅಭಿವೃದ್ಧಿಯ ವ್ಯವಹಾರವನ್ನು ಕೈಗೊಳ್ಳಲು.

* ಭಾರತ ಮತ್ತು ವಿದೇಶಗಳಲ್ಲಿ ಶಿಕ್ಷಣ ತರಬೇತಿ, ನಿರ್ವಹಣೆ, ಕಲಿಕೆ ಮತ್ತು ಅಭಿವೃದ್ಧಿ, ಮಾಹಿತಿ ತಂತ್ರಜ್ಞಾನ, ಆರೋಗ್ಯ ರಕ್ಷಣೆ ಮತ್ತು ರೀತಿಯ ಕ್ಷೇತ್ರಗಳಲ್ಲಿ ತರಬೇತಿ, ಶಿಕ್ಷಣ, ಸಲಹೆ, ಮಾರ್ಗದರ್ಶ, ತರಬೇತಿ, ನಿರ್ವಹಣೆ, ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ವ್ಯವಹಾರವನ್ನು ಕೈಗೊಳ್ಳಲು.

* ಮಾನವ ಸಂಪನ್ಮೂಲ ಸಲಹೆ, ನೇಮಕಾತಿ ಪರಿಹಾರಗಳು, ಮಾನವ ಸಂಪನ್ಮೂಲ ಅಭಿವೃದ್ಧಿ, ಕಾನೂನು, ಕಾನೂನು ಮತ್ತು ನಿಯಂತ್ರಕ ಅನುಸರಣೆ, ಗುಣಮಟ್ಟ, ಸೈಕೋಮೆಟ್ರಿಕ್ ಮೌಲ್ಯಮಾಪನಗಳು, ಮನೋವಿಜ್ಞಾನ, ಶಿಕ್ಷಣ, ಸಲಹೆ, ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಮಾನವ ಸಂಪನ್ಮೂಲದಂತಹ ವಿವಿಧ ಕ್ಷೇತ್ರಗಳಲ್ಲಿ ಸಂಬಂಧಿತ ಸೇವೆಗಳನ್ನು ಒದಗಿಸುವ ವ್ಯವಹಾರವನ್ನು ಮುಂದುವರಿಸಲು, ನಿರ್ವಹಣೆ, ಕಾನೂನುಗಳನ್ನು ಭಾರತೀಯ ಮತ್ತು ಭಾರತೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ನಡೆಸುವುದು

3. ಪ್ರಸ್ತಾವಿತ ಕಂಪನಿಯ ಕರಡು ಪತ್ರ ಮತ್ತು ನಿರ್ಧರಿತ ಆರ್ಟಿಕಲ್ ಅಫ್ ಅಸೋಸಿಯೇಶನ್‌ನ ನಕಲನ್ನು **#128, 2ನೇ ಮಹಡಿ, 19ನೇ ಅಡ್ಡರಸ್ತೆ, 8ನೇ ಮೈನ್, ಸಿಹೆಚ್‌ಬಿಎಸ್ ಲೇಔಟ್, ವಿಜಯನಗರ, ವಿಜಯನಗರ (ಬೆಂಗಳೂರು), ಬೆಂಗಳೂರು ಉತ್ತರ, ಕರ್ನಾಟಕ, ಭಾರತ-560040** ಇಲ್ಲಿ ಪರಿಶೀಲಿಸಬಹುದಾಗಿದೆ.

4. ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು **ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8 ಸೆಕ್ಟರ್ -5, ಐಎಂಟಿ ಮಾನೇಸರ್, ಜಿಲ್ಲೆ - ಗುರಗಾಂವ್ (ಹರ್ಯಾಣ), ಪಿನ್ ಕೋಡ್ - 122050** ಈ ವಿಳಾಸಕ್ಕೆ ಈ ಸೂಚನೆ ಪ್ರಕಟವಾದ 21 ದಿನಗಳ ಒಳಗಾಗಿ ಲಿಖಿತ ಮೂಲಕ ಹಾಗೂ ಒಂದು ಪ್ರತಿಯನ್ನು ನೋಂದಾಯಿತ ಕಚೇರಿಗೆ ಕಳುಹಿಸಬಹುದಾಗಿದೆ.

ಹರೀಶ ಕರುಣಾಕರ್ (ಪದೋನ್ನತ ಪಾಲುದಾರ)
ಈ ದಿನಾಂಕ 5ನೇ ಜುಲೈ 2024 **ಚೈತ್ರ ಭೀಮರಾವ್ ಕುಲಕರ್ಣಿ (ಪದೋನ್ನತ ಪಾಲುದಾರ)**

ನಮೂನೆ ಸಂಖ್ಯೆ ಯುಆರ್‌ಸಿ-2ಸೂಚನೆ

ಭಾಗ-1ರ ಅಧ್ಯಾಯ 21ರಡಿ ನೋಂದಣಿ ಬಗ್ಗೆ ಸೂಚನೆ ನೀಡುವ ಬಗ್ಗೆ ಜಾಹೀರಾತು

[ಸೆಕ್ಷನ್ 374(ಬಿ)ರ ಕಂಪನಿ ಕಾಯಿದೆ, 2013ರ ನಿಯಮ 4(1)ರ ಕಂಪನಿಗಳಿಗೆ ಸಂಬಂಧಪಟ್ಟಂತೆ (ಅಧಿಕೃತ ನೋಂದಣಿಯಾಗಲು) ನಿಯಮಗಳು, 2014]

1. ಈ ಮೂಲಕ ಸೂಚಿಸುವುದೇನೆಂದರೆ, ಷೇರುಗಳಿಂದ ನಿಯಮಿತವಾದ ಕಂಪನಿಯನ್ನಾಗಿ ಕಂಪನಿಗಳ ಕಾಯ್ದೆ 2013ರ ಚಾಪ್ಟರ್ 21ರ ಭಾಗ 1 ರ ಅಡಿಯಲ್ಲಿ **ಸಿಯಾನ್ ಈಡನ್ ಡೆವಲಪರ್ಸ್ (ಸಂಸ್ಥೆ/ಕಂಪನಿ)**ಯನ್ನು ಹದಿನೈದು ದಿನಗಳ ನಂತರ ಆದರೆ ಇನ್ನು ಮುಂದೆ ಮೂವತ್ತು ದಿನಗಳ ಅವಧಿ ಮುಗಿಯುವ ಮೊದಲು ನೋಂದಣಿ ಮಾಡಿ ಪಾಲುದಾರ ಸಂಸ್ಥೆಯನ್ನು ಕಂಪನಿಯನ್ನಾಗಿ ಪರಿವರ್ತಿಸಲು ರಿಜಿಸ್ಟ್ರಾರ್ ಅಫ್ ಕಂಪನೀಸ್, ಬೆಂಗಳೂರು, 'ಇ' ವಿಂಗ್, 2ನೇ ಮಹಡಿ, ಕೇಂದ್ರಿಯ ಸದನ, ಕೋರಮಂಗಲ, ಬೆಂಗಳೂರು-560034, ಇವರಿಗೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 366 ಉಪ ಪ್ರಕರಣ(2)ರ ಅನುಸಾರ ಅರ್ಜಿಯನ್ನು ಸಲ್ಲಿಸಲು ಉದ್ದೇಶಿಸಲಾಗಿದೆ.
2. ಕಂಪನಿಯ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ :
   i. ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು, ಲಾಜಿಸ್ಟಿಕ್ಸ್ ಬ್ಯುಸಿನೆಸ್ ಪಾರ್ಕ್‌ಗಳನ್ನು ನಿರ್ಮಿಸಲು ಮತ್ತು ಅಭಿವೃದ್ಧಿಪಡಿಸಲು ಮತ್ತು ಯಾವುದೇ ವಸತಿ ಕೈಗಾರಿಕಾ ಅಥವಾ ವಾಣಿಜ್ಯ ಯೋಜನೆಗಳಿಗೆ ಸಂಬಂಧಿಸಿದ ಅಭಿವೃದ್ಧಿದಾರರು, ಸಹ-ಅಭಿವೃದ್ಧಿದಾರರು, ಸಲಹೆಗಾರರು, ಯೋಜಕರು, ಸಲಹೆಗಾರರ ವ್ಯವಹಾರವನ್ನು ಕೈಗೊಳ್ಳಲು ಮತ್ತು ಯಾವುದೇ ವ್ಯವಸ್ಥೆಗೆ ಪ್ರವೇಶಿಸಲು ಮತ್ತು ಯಾವುದೇ ಸರ್ಕಾರ, ಕೇಂದ್ರ, ರಾಜ್ಯ, ಅರೆ ಸರ್ಕಾರಿ ಭೂಮಿ, ಕಟ್ಟಡ ಮತ್ತು ಇತರ ಸ್ಥಿರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವ ವ್ಯವಹಾರವನ್ನು ಅಥವಾ ಖರೀದಿಯ ಮೂಲಕ ಅಥವಾ ಇತರ ರೀತಿಯಲ್ಲಿ ಮತ್ತು ಅಪಾರ್ಟ್‌ಮೆಂಟ್‌ಗಳು, ಮನೆಗಳು, ಕಾರ್ಖಾನೆ ಕಟ್ಟಡಗಳ ವಿನ್ಯಾಸ, ಯೋಜನೆ, ನಿರ್ವಹಣೆ, ಅಭಿವೃದ್ಧಿ ಮತ್ತು/ಅಥವಾ ನಿರ್ಮಾಣದ ಎಲ್ಲಾ ಅಥವಾ ಯಾವುದೇ ಇತರ ವ್ಯವಹಾರವನ್ನು ಕೈಗೊಳ್ಳಲು, ಗೋದಾಮುಗಳು, ಹೋಟೆಲ್‌ಗಳು, ಫಾರ್ಮ್ ಹೌಸ್‌ಗಳು, ಆರೋಗ್ಯ ಕ್ಲಬ್‌ಗಳು, ಹಾಲಿಡೇ ರೆಸಾರ್ಟ್‌ಗಳು, ಕ್ಲಬ್ ಹೌಸ್, ಕೈಗಾರಿಕಾ ಶೆಡ್‌ಗಳು, ವಸತಿ ಕಾಲೋನಿಗಳು, ಸಾರ್ವಜನಿಕ ಕಟ್ಟಡಗಳು, ಬಹುಮಹಡಿ ಕಟ್ಟಡಗಳು, ಶಾಲೆಗಳು, ಕಾಲೇಜುಗಳು, ಸಮುದಾಯ ಭವನಗಳು, ಶಾಪಿಂಗ್ ಕಾಂಪ್ಲೆಕ್ಸ್, ಅಣೆಕಟ್ಟುಗಳು, ಸೇತುವೆಗಳು, ಕಾಲುವೆಗಳು, ವಿದ್ಯುತ್ ಯೋಜನೆಗಳು ಮತ್ತು ಆಟದ ಮೈದಾನಗಳು, ಟೆನ್ನಿಸ್ ಕೋರ್ಟ್, ಮತ್ತು / ಅಥವಾ ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ನೀರು ಸರಬರಾಜು ಮತ್ತು ನೈರ್ಮಲ್ಯ ಗುತ್ತಿಗೆದಾರರು, ಬಿಲ್ಡರ್‌ಗಳು, ರಿಯಲ್ ಎಸ್ಟೇಟ್ ಏಜೆಂಟ್‌ಗಳು, ರಿಯಲ್ ಎಸ್ಟೇಟ್ ಡೆವಲಪರ್‌ಗಳು, ವಸತಿ, ವಾಣಿಜ್ಯ, ಕೈಗಾರಿಕಾ ಮತ್ತು ಇತರ ಘಟಕಗಳಿಗೆ ಅಗತ್ಯವಿರುವ ವಿವಿಧ ಸೇವೆಗಳ ಪೂರೈಕೆದಾರರಾಗಿ ವ್ಯವಹಾರವನ್ನು ನಡೆಸುವುದು.
   ii. ರಿಯಲ್ ಎಸ್ಟೇಟ್ ಸಲಹೆಗಾರರು, ಪ್ರಾಜೆಕ್ಟ್ ಮ್ಯಾನೇಜರ್‌ಗಳು, ಪ್ರಾಜೆಕ್ಟ್ ಡೆವಲಪರ್‌ಗಳು, ಆಸ್ತಿ ನಿರ್ವಹಣೆ ಮತ್ತು ರಿಯಲ್ ಎಸ್ಟೇಟ್ ಅಭಿವೃದ್ಧಿ ಮತ್ತು ಪ್ರಚಾರಕ್ಕೆ ಸಂಬಂಧಿಸಿದ ಎಲ್ಲಾ ಸೇವೆಗಳ ವ್ಯವಹಾರವನ್ನು ಮುಂದುವರಿಸಲು.
   iii. ವ್ಯಾಪಾರ ನಿರ್ವಹಣಾ ಸಲಹೆಗಾರರು, ಶಕ್ತಿ ನಿರ್ವಹಣಾ ಸಲಹಾ ಸೇವೆಗಳು ಮತ್ತು ಶಕ್ತಿ ಸಂರಕ್ಷಣೆ, ಶಕ್ತಿಯ ಲೆಕ್ಕ ಪರಿಶೋಧನೆ, ಶಕ್ತಿ ವ್ಯವಸ್ಥೆಗಳ ಕಾರ್ಯಾಚರಣೆ ನಿರ್ವಹಣೆ, ಶಕ್ತಿ ವ್ಯವಸ್ಥೆಗಳ ಆಯ್ಕೆ ಮತ್ತು ಮಾರುಕಟ್ಟೆ ಮತ್ತು ಪರಿಕರಗಳು, ಪರಿಸರ ಪ್ರಭಾವದ ಮೌಲ್ಯಮಾಪನ ಮತ್ತು ಅಧ್ಯಯನಗಳು, ವಿನ್ಯಾಸ ಮತ್ತು ಕಚ್ಚಾ ಮತ್ತು ತ್ಯಾಜ್ಯ ನೀರಿನ ಸಂಸ್ಕರಣಾ ವ್ಯವಸ್ಥೆ, ತಂತ್ರಜ್ಞಾನ ವರ್ಗಾವಣೆ, ಸಲಹಾ ಸೇವೆಗಳು, ಯೋಜನಾ ಸಲಹಾ ಸೇವೆಗಳು.
3. ಪ್ರಸ್ತಾವಿತ ಕಂಪನಿಯ ಕರಡು ಪತ್ರ ಮತ್ತು ನಿರ್ಧರಿತ ಆರ್ಟಿಕಲ್ ಅಫ್ ಅಸೋಸಿಯೇಶನ್‌ನ ನಕಲನ್ನು ನಿರ್ಧರಿತ ಕಂಪನಿಯ ಕಚೇರಿ ವಿಳಾಸ 1ನೇ ಮಹಡಿ, ಎಂಬಸ್ಸಿ ಪಾಯಿಂಟ್, 150 ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು -560001 ಇಲ್ಲಿ ಪರಿಶೀಲಿಸಬಹುದಾಗಿದೆ.
4. ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಭಾರತೀಯ ಕಾರ್ಪೊರೇಟ್ ವ್ಯವಹಾರಗಳ ಸಂಸ್ಥೆ (ಐಐಸಿಎ), ಪ್ಲಾಟ್ ನಂ. 6, 7 ಮತ್ತು 8, ಸೆಕ್ಟರ್ 5, ಐಎಂಟಿ ಮಾನೇಸರ್, ಜಿಲ್ಲೆ ಗುರಗಾಂವ್ (ಹರ್ಯಾಣ), ಪಿನ್ ಕೋಡ್-122050 ಈ ವಿಳಾಸಕ್ಕೆ ಈ ಸೂಚನೆ ಪ್ರಕಟವಾದ ಇಪ್ಪತ್ತೊಂದು ದಿನಗಳ ಒಳಗಾಗಿ ಲಿಖಿತ ಮೂಲಕ ಹಾಗೂ ಒಂದು ಪ್ರತಿಯನ್ನು ನೋಂದಾಯಿತ ಕಂಪನಿ ಕಚೇರಿಗೆ ಕಳುಹಿಸಬಹುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ.

ಸಹಿ/-
ಶ್ರೀ ರಾಜೇಶ್ ಕೈಮಲ್
ಪಾಲುದಾರರ ಪರವಾದ ಅದಿಕೃತ ಆಧಿಕಾರಿ
(ಎಂಬಸ್ಸಿ ಪ್ರಾಪರ್ಟಿ ಡೆವಲಪ್‌ಮೆಂಟ್ಸ್ ಪ್ರೈವೇಟ್ ಲಿಮಿಟೆಡ್)
ಸಿಯಾನ್ ಈಡನ್ ಡೆವಲಪರ್ಸ್

ದಿನಾಂಕ: 05.07.2024
ಸ್ಥಳ : ಬೆಂಗಳೂರು

ಅರ್ಜಿ ಸಂಖ್ಯೆ ಯುಆರ್‌ಸಿ-2

ಭಾಗ-1ರ ಅಧ್ಯಾಯ 21ರಡಿ ನೋಂದಣಿ ಬಗ್ಗೆ ಸೂಚನೆ ನೀಡುವ ಬಗ್ಗೆ ಜಾಹೀರಾತು

[ಸೆಕ್ಷನ್ 374(ಬಿ)ರ ಕಂಪನಿ ಕಾಯಿದೆ, 2013ರ ನಿಯಮ 4(1)ರ ಕಂಪನಿಗಳಿಗೆ ಸಂಬಂಧಪಟ್ಟಂತೆ (ಅಧಿಕೃತ ನೋಂದಣಿಯಾಗಲು) ನಿಯಮಗಳು, 2014]

1. ಈ ಮೂಲಕ ಸೂಚಿಸುವುದೇನೆಂದರೆ, ಷೇರುಗಳಿಂದ ನಿಯಮಿತವಾದ ಕಂಪನಿಯನ್ನಾಗಿ ಕಂಪನಿಗಳ ಕಾಯ್ದೆ 2013ರ ಚಾಪ್ಟರ್ 21ರ ಭಾಗ 1 ರ ಅಡಿಯಲ್ಲಿ **ಪ್ರಾಣಪೂರ್ಣ ಕಲೆಕ್ಟಿವ್ ಎಲ್‌ಎಲ್ ಪಿ (ಎಲ್‌ಎಲ್‌ಪಿಐಎನ್:ಎಎಎ-5626)** ಯನ್ನು ಇಂದಿನಿಂದ ಹದಿನೈದು ದಿನಗಳ ನಂತರ ಹಾಗೂ ಮೂವತ್ತು ದಿನಗಳ ಒಳಗಾಗಿ ನೋಂದಣಿ ಮಾಡಬಹುದು ಎಂಬುದಾಗಿ ಬೆಂಗಳೂರಿನ ರಿಜಿಸ್ಟ್ರಾರ್‌ಗೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 366 ಉಪಪ್ರಕರಣ(2)ರ ಅನುಸಾರ ಅರ್ಜಿಯೊಂದನ್ನು ಸಲ್ಲಿಸಲು ಉದ್ದೇಶಿಸಲಾಗಿದೆ.

2. ಕಂಪನಿಯ ಮುಖ್ಯ ಉದ್ದೇಶಗಳು ಈ ರೀತಿಯಾಗಿವೆ.

I. 100% ನೈಸರ್ಗಿಕ, ಜೈವಿಕ ಆಧಾರಿತ ಪರಿಸರ ಸ್ನೇಹಿ, ವಿಷಕಾರಿಯಲ್ಲದ ಮತ್ತು ಜೈವಿಕ ವಿಘಟನೀಯ ಉತ್ಪನ್ನಗಳನ್ನು ತಯಾರಿಸಲು, ಅಭಿವೃದ್ಧಿಪಡಿಸಲು, ಪ್ರಕ್ರಿಯೆಗೊಳಿಸಲು ಮತ್ತು ರೀಟೈಲ್ ವ್ಯಾಪಾರ ಮಾಡಲು. ಇದು ಪೆಟ್ರೋಕೆಮಿಕಲ್‌ಗಳನ್ನು ಬದಲಿಸುವ ಮತ್ತು ಕ್ಷೇಮ ಸುಸ್ಥಿರತೆ ಮತ್ತು ಪರಿಸರ ಜವಾಬ್ದಾರಿಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಮಸಾಲೆಗಳು, ಗಿಡಮೂಲಿಕೆಗಳು ಮತ್ತು ಇತರ ಸಸ್ಯ ಆಧಾರಿತ ಪದಾರ್ಥಗಳಂತಹ ನೈಸರ್ಗಿಕ ಮೂಲಕ ಕಚ್ಚಾ ವಸ್ತುಗಳಿಂದ ಪಡೆದ ವಸ್ತುಗಳನ್ನು ಒಳಗೊಂಡಿರುತ್ತದೆ. ಮಗುವಿನ ಆರೈಕೆ, ತ್ವಚೆಯ ಸಂರಕ್ಷಣೆ ಮತ್ತು ಪಿಇಟಿ ಸುರಕ್ಷೆ ಉತ್ಪನ್ನಗಳು, ಕ್ಲೀನರ್‌ಗಳು, ಸೋಂಕು ನಿವಾರಕಗಳು, ಸ್ಕಿನ್ ಬಟರ್‌ಗಳು ಮತ್ತು ಎಣ್ಣೆಗಳನ್ನು ಒಳಗೊಂಡಿದೆ. ನೈಸರ್ಗಿಕ ಸುವಾಸನಾ ಸ್ಪ್ರೇಗಳು, ಏರ್‌ಫ್ರೆಶ್‌ನರ್‌ಗಳು, ಫಾಗಿಂಗ್ ಸ್ಪ್ರೇಗಳು ಮತ್ತು ಡಿಯೋಡ್ರೆಂಟ್‌ಗಳನ್ನಾಗಿ ಬಳಸಬಹುದು.

II. ದೈನಂದಿನ ಸ್ವಚ್ಛತೆಗೆ ಬಳಸುವ ಮತ್ತು ತ್ವಚೆಯ ಉತ್ನನ್ನಗಳ ರೂಪದಲ್ಲಿ ವಿವಿಧ ಉತ್ಪನ್ನಗಳ ಉತ್ಪಾದನೆಗೆ ನೈಸರ್ಗಿಕ ಮೂಲದ ಕಚ್ಚಾ ವಸ್ತುಗಳ ಮೂಲವನ್ನು ಪಡೆದುಕೊಳ್ಳಲು ಮತ್ತು ಬಳಸಿಕೊಳ್ಳಲು ಈ ವಸ್ತುಗಳು ಸಮರ್ಥನೀಯ ಮತ್ತು ನೈತಿಕ ಮೂಲವಾಗಿವೆ ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಮತ್ತು ಪರಿಸರ ಸಂರಕ್ಷಣೆಯ ಒಟ್ಟಾರೆ ಗುರಿಗೆ ಕೊಡುಗೆಯನ್ನು ನೀಡುತ್ತದೆ.

III. ನಮ್ಮ ನೈಸರ್ಗಿಕ ಜೈವಿಕ ಧಾರಿತ, ಪರಿಸರ ಸ್ನೇಹಿ ಮತ್ತು ಜೈವಿಕ ವಿಘಟನೀಯ ಉತ್ಪನ್ನಗಳ ರಚನೆ, ಪ್ಯಾಕೇಜಿಂಗ್ ವಿತರಣೆ ಮತ್ತು ಮಾರಾಟಕ್ಕಾಗಿ ಉತ್ಪಾದನಾ ಸೌಲಭ್ಯಗಳು, ಸಂಸ್ಕರಣಾ ಘಟಕಗಳು ಮತ್ತು ರೀಟೈಲ್ ಮಳಿಗೆಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು.

IV. ನಮ್ಮ ಉತ್ಪನ್ನಗಳ ಗುಣಮಟ್ಟ, ಪರಿಣಾಮಕಾರಿತ್ವ ಮತ್ತು ಮಾರುಕಟ್ಟೆಯನ್ನು ಹೆಚ್ಚಿಸಲು ನೈಸರ್ಗಿಕ ಮೂಲದ ಕಚ್ಚಾವಸ್ತುಗಳ ಪ್ರಕ್ರಿಯೆಗಳು, ಸೂತ್ರೀಕರಣಗಳು ಮತ್ತು ಅಪ್ಲಿಕೇಶನ್‌ಗಳನ್ನು ನವೀನಗೊಳಿಸುವ ಮತ್ತು ಸುಧಾರಿಸುವ ಗುರಿಯನ್ನು ಹೊಂದಿರುವ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು, ದೈನಂದಿನ ಗ್ರಾಹಕ ನೈರ್ಮಲ್ಯ ಉತ್ಪನ್ನಗಳಲ್ಲಿ ಪೆಟ್ರೋ ಕೆಮಿಕಲ್ ಉತ್ಪನ್ನಗಳಿಗೆ ಬದಲಿಗಳನ್ನು ಕಂಡುಹಿಡಿಯುಬ ಗುರಿಯನ್ನು ಹೊಂದಿದೆ.

V. ರೈತರು, ಪೂರೈಕೆದಾರರು, ಮಹಿಳಾ ಸ್ವ-ಸಹಾಯ ಗುಂಪುಗಳು ಮತ್ತು ಪೂರೈಕೆ ಸರಪಳಿಯಲ್ಲಿ ಇತರ ಪಾಲುದಾರರೊಂದಿಗೆ ಸಹಕರಿಸಲು, ನೈಸರ್ಗಿಕ ಕಚ್ಚಾವಸ್ತುಗಳ ಸ್ಥಿರವಾದ, ಉತ್ತಮ ಗುಣಮಟ್ಟದ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ನ್ಯಾಯಯುತ ವ್ಯಾಪಾರವನ್ನು ಉತ್ತೇಜಿಸಲು, ಒಳಗೊಳ್ಳಲು ಮತ್ತು ಕೃಷಿ ಮೂಲದಲ್ಲಿ ಕಂಡು ಹಿಡಿಯುವಿಕೆಯ ಸಾಮರ್ಥ್ಯ.

VI. ದೇಶೀಯ ರೀಟೈಲ್ ಮಾರಾಟ ಮಳಿಗೆಗಳು, ಆನ್‌ಲೈನ್ ವೇದಿಕೆಗಳು ಮತ್ತು ಇತರೆ ರೀಟೈಲ್ ವ್ಯಾಪಾರಿಗಳು ಮತ್ತು ವಿತರಕರ ಪಾಲುದಾರಿಕೆಯ ಮೂಲಕ ನಮ್ಮ ಉತ್ಪನ್ನಗಳನ್ನು ದೇಶೀಯವಾಗಿ ಮತ್ತು ಅಂತರರಾಷ್ಟ್ರೀಯವಾಗಿ ಮಾರುಕಟ್ಟೆ ಮಾಡಲು, ವಿತರಿಸಲು, ರಫ್ತು ಮಾಡಲು ಮತ್ತು ಮಾರಾಟ ಮಾಡಲು.

VII ವಿವಿಧ ಮಾರ್ಕೆಟಿಂಗ್, ಜಾಹೀರಾತು ಮತ್ತು ಔಟ್‌ರೀಚ್ ಕಾರ್ಯಕ್ರಮಗಳ ಮೂಲಕ ನೈಸರ್ಗಿಕ, ಜೈವಿಕ ಆಧಾರಿತ, ಪರಿಸರಸ್ನೇಹಿ ಮತ್ತು ಜೈವಿಕ ವಿಘಟನೀಯ ಉತ್ಪನ್ನಗಳನ್ನು ಬಳಸುವುದರಿಂದ ಆಗುವ ಪ್ರಯೋಜನಗಳು ಮತ್ತು ಪ್ರಾಮುಖ್ಯತೆಯ ಕುರಿತು ಗ್ರಾಹಕರನ್ನು ಉತ್ತೇಜಿಸಲು ಮತ್ತು ಸುಶಿಕ್ಷಿತಗೊಳಿಸಲು.

VIII. ಜ್ಞಾನವನ್ನು ಉತ್ತೇಜಿಸಲು ಮತ್ತು ಪ್ರಸಾರ ಮಾಡಲು, ಅರಿವು ಮೂಡಿಸಲು ಮತ್ತು ಶಿಕ್ಷಣ ತಜ್ಞರು, ವೃತ್ತಿಪರರು ಮತ್ತು ಸರ್ಕಾರಿ ಏಜೆನ್ಸಿಗಳ ನಡುವೆ ಸಂವಹನದ ಸಾಮಾನ್ಯ ವೇದಿಕೆಯನ್ನು ಒದಗಿಸಲು, ಪರಿಣಾಮಕಾರಿ ಸಮನ್ವಯವನ್ನು ಸ್ಥಾಪಿಸಲು, ತರಬೇತಿ ಕೋರ್ಸ್‌ಗಳನ್ನು ಆಯೋಜಿಸಲು ಅಂದರೆ ವೃತ್ತಿಪರ ತರಬೇತಿ, ತಾಂತ್ರಿಕ ಕೌಶಲ್ಯವನ್ನು ನೀಡುವುದು, ಮೃದು ಕೌಶಲ್ಯಗಳನ್ನು ನೀಡುವುದು ಮತ್ತು ತರಬೇತಿ, ಇ-ಕಲಿಕೆ ದೈನಂದಿನ ಬಳಕೆಗಾಗಿ ಕೈಯಿಂದ ಮಾಡಿದ ಸಾವಯವ ಉತ್ಪನ್ನಗಳ ತಯಾರಿಕೆಯ ಯಾವುದೇ ಯೋಜನೆಗಳಲ್ಲಿ ಎಲ್ಲಾ ವಿಭಾಗಗಳಲ್ಲಿ ಆನ್‌ಲೈನ್, ವಿಭಿನ್ನ, ಪತ್ರವ್ಯವಹಾರ ಕೋರ್ಸ್‌ಗಳಲ್ಲಿ ತರಬೇತಿ ಶಿಕ್ಷಣವನ್ನು ನೀಡಲು ತರಬೇತಿ ಮತ್ತು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುವುದು.

3. ಪ್ರಸ್ತಾವಿತ ಕಂಪನಿಯ ಕರಡು ಪತ್ರ ಮತ್ತು ನಿರ್ಧರಿತ ಆರ್ಟಿಕಲ್ ಅಫ್ ಅಸೋಸಿಯೇಶನ್‌ನ ನಕಲನ್ನು ಕಚೇರಿಯಲ್ಲಿ : **ನಂ. 431-ಎ, 3ನೇ ಅಡ್ಡರಸ್ತೆ, 9ನೇ ಮೈನ್, ಐಡಿಯಲ್ ಹೋಮ್ಸ್ ಟೌನ್‌ಶಿಪ್, ರಾಜರಾಜೇಶ್ವರಿ ನಗರ, ಬೆಂಗಳೂರು, ಕರ್ನಾಟಕ, ಭಾರತ-560098** ಇಲ್ಲಿ ಪರಿಶೀಲಿಸಬಹುದಾಗಿದೆ.

4. ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು **ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8 ಸೆಕ್ಟರ್ -5, ಐಎಂಟಿ ಮಾನೇಸರ್, ಜಿಲ್ಲೆ - ಗುರಗಾಂವ್ (ಹರ್ಯಾಣ), ಪಿನ್ ಕೋಡ್ - 122050** ಈ ವಿಳಾಸಕ್ಕೆ ಈ ಸೂಚನೆ ಪ್ರಕಟವಾದ 21 ದಿನಗಳ ಒಳಗಾಗಿ ಲಿಖಿತ ಮೂಲಕ ಹಾಗೂ ಒಂದು ಪ್ರತಿಯನ್ನು ನೋಂದಾಯಿತ ಕಚೇರಿಗೆ ಕಳುಹಿಸಬಹುದಾಗಿದೆ.

ಪ್ರಾಣಪೂರ್ಣ ಕಲೆಕ್ಟಿವ್ ಎಲ್‌ಎಲ್‌ಪಿ ಪರವಾಗಿ
ಸ್ಮಿತ ಕಾಮತ್
(ಪದೋನ್ನತ ಪಾಲುದಾರ)
(ಡಿಪಿಐಎನ್:08477378)

ಈ ದಿನಾಂಕ 5ನೇ ಜುಲೈ 2024

बैंक ऑफ़ बड़ौदा
Bank of Baroda

ರೇಸ್ ಕೋರ್ಸ್ ರಸ್ತೆ ಶಾಖೆ
ಭಾರತೀಯ ವಿದ್ಯಾಭವನ ಕಟ್ಟಡ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001
ಇಮೇಲ್ ಐಡಿ - vjrcro@bankofbaroda.co.in ದೂರವಾಣಿ: 080-22263132.

ವಾಹನ ಇ-ಹರಾಜು ಮಾರಾಟ ಪ್ರಕಟಣೆ

ವಾಹನ ಮಾರಾಟಕ್ಕಾಗಿ ಹರಾಜಿಗಾಗಿ ಸಾರ್ವಜನಿಕ ಸೂಚನೆ ಬ್ಯಾಂಕ್ ಆಫ್ ಬರೋಡಾಗೆ ವಾಹನಗಳನ್ನು ಹೈಪೋಥಿಕೇಟೆಡ್ ಮಾಡಲಾಗಿದೆ

ಬ್ಯಾಂಕ್ ಆಫ್ ಬರೋಡಾದ ಅಧಿಕೃತ ಅಧಿಕಾರಿಯು ಈ ಕೆಳಗಿನ ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿದ್ದು, ಸಾಲದ ಖಾತೆಯಲ್ಲಿ ಹಕ್ಕು ಬ್ಯಾಂಕಿನ ಬಾಕಿ ಮತ್ತು ಬಡ್ಡಿಯನ್ನು ಇಲ್ಲಿ ವಿವರಿಸಿದಂತೆ ಮತ್ತು ಅದೇ ಪರಿಣಾಮವಾಗಿ ಪ್ರಧಾನ ಮಾಡಲಾದ ಅಧಿಕಾರದಲ್ಲಿ ಕೆಳಗೆ ಸಹಿ ಮಾಡಲಾದ ಬಾಕಿಗಳನ್ನು ಮರುಪಾವತಿಸಲು ವಿಫಲವಾದಾಗ **"ಎಲ್ಲಿ ಹೇಗಿದೆಯೋ ಹಾಗೆ ಮತ್ತು ಎಲ್ಲಿ ಏನಿದಿಯೋ ಹಾಗೆ"** ಆಧಾರದ ಮೇಲೆ ಈ ಕೆಳಗಿನ ವಾಹನಗಳಿಗೆ **03.07.2024** ರಂದು ಇ-ಹರಾಜಿನ ಮಾರಾಟದ ಸೂಚನೆಯನ್ನು ಈ ಮೂಲಕ ಪ್ರಕಟಿಸಲಾಗಿದೆ.

ಕ್ರ ಸಂ	ಶಾಖೆ ಮತ್ತು ಖಾತೆಯ ಹೆಸರು ಪಾಲುದಾರರ/ ವಾಹನ ಮಾಲೀಕರ ಹೆಸರು ವಿವರ	ಆಸ್ತಿಯ ವಿವರ/ವಾಹನ	ಬಾಕಿ ಮೊತ್ತ	ಮೀಸಲು ಬೆಲೆ ಇಎಂಡಿ ಕನಿಷ್ಠ ಬಿಡ್ ಹೆಚ್ಚಳ ಮೊತ್ತ ಇಎಂಡಿ ಠೇವಣಿ
1	ರೇಸ್ ಕೋರ್ಸ್ ರಸ್ತೆ ಶಾಖೆ, ಎ/ಸಿ ಸಂಖ್ಯೆ : 73920600001434 ಶ್ರೀಮತಿ ಅರ್ಷಿಯಾ ಸಾಬ	MAKE & MODEL : Mahindra & Mahindra Ltd & THAR LX D AT 4WD 4S HT BS6 YEAR OF MANUFACTURING: 2023 REG NO : KA-04-NC-6786	ರೂ. 17,41,814.63/- ದಿನಾಂಕ 30.06.2024 ರಿಂದ ಬಡ್ಡಿ ಮತ್ತು ಇತರೆ ಖರ್ಚು ಮತ್ತು ವೆಚ್ಚಗಳನ್ನು ಒಳಗೊಂಡಂತೆ	ರೂ. 14,76,000/- ರೂ. 1,47,600/- ರೂ. 5,000/-

* ಇಎಂಡಿ ಮತ್ತು ಡಾಕ್ಯುಮೆಂಟ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 03.08.2024 ಸಂಜೆ 4.00 ಗಂಟೆಗೆ ಮೊದಲು ಬ್ಯಾಂಕ್ ಆಫ್ ಬರೋಡಾ, ಭಾರತೀಯ ವಿದ್ಯಾಭವನ ಕಟ್ಟಡ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001ಗೆ ಸಲ್ಲಿಸಬೇಕು.
* ಇಎಂಡಿಯನ್ನು ಬ್ಯಾಂಕ್ ಆಫ್ ಬರೋಡಾ ಪರವಾಗಿ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸಲ್ಲಿಸಬೇಕು.
* ಇ-ಹರಾಜಿನ ದಿನಾಂಕ/ಸಮಯ : 07.08.2024 ಮಧ್ಯಾಹ್ನ 2.00 ರಿಂದ ಸಂಜೆ 6.00 ರವರೆಗೆ
* ತಪಾಸಣೆ ದಿನಾಂಕ ಮತ್ತು ಸಮಯ : 29.07.2024 ರಿಂದ 01.08.2024 ರವರೆಗೆ ಬೆಳಿಗ್ಗೆ 10.00 ರಿಂದ ಸಂಜೆ 4.00 ರವರೆಗೆ

1. ಫೀನಿಕ್ಸ್ ಎಂಟರ್‌ಪ್ರೈಸಸ್, ನಂ. 54, 2ನೇ ಮೇನ್, ಮುನಿಸ್ವಾಮಪ್ಪ ಬಡಾವಣೆ, ತಿಂಡ್ಲು, ಬೆಂಗಳೂರು-560097.

* ಅಧಿಕೃತ ಅಧಿಕಾರಿ/ಸಂಪರ್ಕಿಸುವ ವ್ಯಕ್ತಿ : ಶ್ರೀ ವಿಜಯ್ ಕುಮಾರ್ ಎಸ್ 9884175222

ಇ-ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳ ಮೂಲಕ ಹೋಗಲು ಬಿಡ್‌ದಾರರಿಗೆ ಸಲಹೆ ನೀಡಲಾಗುತ್ತದೆ. ಹರಾಜು ಟೈಗರ್ ಪ್ರೈ ಲಿಮಿಟೆಡ್. https://bob.auctiontiger.net ಮತ್ತು ಬ್ಯಾಂಕ್ ವೆಬ್‌ಸೈಟ್ https://www.bankofbaroda.com ಹರಾಜು ಟ್ಯಾಬ್ ಅಡಿಯಲ್ಲಿ ಅಥವಾ ಅವರ ಬಿಡ್‌ಗಳನ್ನು ಸಲ್ಲಿಸುವ ಮೊದಲು ಮತ್ತು ಇ-ಹರಾಜಿನಲ್ಲಿ ಭಾಗವಹಿಸುವ ಮೊದಲು.

ದಿನಾಂಕ : 03.07.2024
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLDUB00301644 1. ಪ್ರಕಾಶ್ ಐನಾಸ್ ಲೀಮಾ 2. ಸಂತನ್ ಸಂತಯಾಗ್ ಡಿಯಾಜ್	ಫ್ಲಾಟ್ ನಂ. ಜಿ-708, ಏಳನೇ ಮಹಡಿ, ಜಿ- ಬ್ಲಾಕ್, ಅರ್ಬಾನಾ ಆಕ್ವಾಹಂತ 2, ಸರ್ವೆ. ಸಂ. 89/1, 92/2 ಮತ್ತು 105, ಕನ್ನಮಂಗಲ ಗ್ರಾಮ ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು - 560045, ಕರ್ನಾಟಕ	05.05.2024	24.06.2024 ರಂದಿನಂತೆ ರೂ. 78,63,631.66/- (ರೂಪಾಯಿ ಎಪ್ಪತ್ತ ಎಂಟು ಲಕ್ಷ ಅರವತ್ತ ಮೂರು ಸಾವಿರದ ಆರು ನೂರ ಮೂವತ್ತ ಒಂದು ಮತ್ತು ಪೈಸೆ ಅರವತ್ತ ಆರು ಮಾತ್ರ)
2.	ಸಾಲ ಖಾತೆ ನಂ. HHLBAG00334589 1. ಸಂದೀಪ್ ಕುಮಾರ್ ಶರ್ಮಾ 2. ಅಶಿಮಾ ಟುಲಿ ಶರ್ಮಾ 3. ಶರ್ಮ ವೇದ್ ಪ್ರಕಾಶ್	ಅಪಾರ್ಟ್‌ಮೆಂಟ್ ನಂ. 703, 7ನೇ ಮಹಡಿ, ಬ್ಲಾಕ್-ಪಿ, ಅರ್ಬಾನ ಅವೆನ್ಯೂ, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇನಹಳ್ಳಿ ತಾಲೂಕು, ಬೆಂಗಳೂರು - 562114, ಕರ್ನಾಟಕ	10.05.2024	19.06.2024 ರಂದಿನಂತೆ ರೂ. 58,81,587.46/- (ರೂಪಾಯಿ ಐವತ್ತ ಎಂಟು ಲಕ್ಷ ಎಂಬತ್ತ ಒಂದು ಸಾವಿರದ ಐದು ನೂರ ಎಂಬತ್ತ ಏಳು ಮತ್ತು ಪೈಸೆ ನಲವತ್ತ ಆರು ಮಾತ್ರ)
3.	ಸಾಲ ಖಾತೆ ನಂ. HHLLPM00339087 1. ಆಶಿಶ್ ಗಣಪತ್ ರಾಣೆ (ಪಿಓಎ ಹೋಲ್ಡರ್ ವಿಕ್ರಮಾದಿತ್ಯ ಹರಿಶ್ಚಂದ್ರ ಅಂಬ್ರೆ ಮೂಲಕ) 2. ಮಮತಾ ಆಶಿಶ್ ರಾಣೆ (ಪಿಓಎ ಹೋಲ್ಡರ್ ವಿಕ್ರಮಾದಿತ್ಯ ಹರಿಶ್ಚಂದ್ರ ಅಂಬ್ರೆ ಮೂಲಕ	ಫ್ಲಾಟ್ ಸಂಖ್ಯೆ. ಡಬ್ಲ್ಯೂ-802 ಅರ್ಬಾನಾ ಅವೆನ್ಯೂ ಎನ್.ಎಚ್ -7, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ ದೇವನಹಳ್ಳಿ ತಾಲೂಕು, ಬೆಂಗಳೂರು -562110 ಕರ್ನಾಟಕ	05.05.2024	24.06.2024 ರಂದಿನಂತೆ ರೂ. 81,11,543.66/- (ರೂಪಾಯಿ ಎಂಬತ್ತ ಒಂದು ಲಕ್ಷ ಹನ್ನೊಂದು ಸಾವಿರದ ಐದು ನೂರ ನಲವತ್ತ ಮೂರು ಮತ್ತು ಪೈಸೆ ಅರವತ್ತ ಆರು ಮಾತ್ರ)
4.	ಸಾಲ ಖಾತೆ ನಂ. HHLBGM00499584 1. ರಮ್ಯಾ ಬಿಎಂ 2. ಮಂಜುನಾಥ ಆರ್	ಆಸ್ತಿ ಸಂಖ್ಯೆ. 1.) ಅಪಾರ್ಟ್‌ಮೆಂಟ್ ನಂ. 004, ಗ್ರೌಂಡ್ ಮಹಡಿ, ಟವರ್ ಎನ್, ಅರ್ಬಾನ ಅವೆನ್ಯೂ, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು - 562157, ಕರ್ನಾಟಕ ಮತ್ತು ಆಸ್ತಿ ಸಂಖ್ಯೆ. 2) ಅಪಾರ್ಟ್‌ಮೆಂಟ್ ನಂ. 003, ನೆಲ ಮಹಡಿ, ಟವರ್ ಪಿ, ಅರ್ಬಾನ ಅವೆನ್ಯೂ, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು - 562157, ಕರ್ನಾಟಕ	05.05.2024	12.06.2024 ರಂದಿನಂತೆ ರೂ. 80,61,780.34/- (ರೂಪಾಯಿ ಎಂಬತ್ತು ಲಕ್ಷ ಅರವತ್ತ ಒಂದು ಸಾವಿರದ ಏಳು ನೂರ ಎಂಬತ್ತು ಮತ್ತು ಪೈಸೆ ಮೂವತ್ತ ನಾಲ್ಕು ಮಾತ್ರ)
5.	ಸಾಲ ಖಾತೆ ನಂ. HHLBGM00499585 1. ರಮ್ಯಾ ಬಿಎಂ 2. ಮಂಜುನಾಥ ಆರ್	ಆಸ್ತಿ ಸಂಖ್ಯೆ. 1.) ಅಪಾರ್ಟ್‌ಮೆಂಟ್ ನಂ. 004, ಗ್ರೌಂಡ್ ಮಹಡಿ, ಟವರ್ ಎನ್, ಅರ್ಬಾನ ಅವೆನ್ಯೂ, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು-562157, ಕರ್ನಾಟಕ ಮತ್ತು ಆಸ್ತಿ ಸಂಖ್ಯೆ. 2) ಅಪಾರ್ಟ್‌ಮೆಂಟ್ ನಂ. 003, ನೆಲ ಮಹಡಿ, ಟವರ್ ಪಿ, ಅರ್ಬಾನ ಅವೆನ್ಯೂ, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು - 562157, ಕರ್ನಾಟಕ	05.05.2024	12.06.2024 ರಂದಿನಂತೆ ರೂ. 88,91,476.07/- (ರೂಪಾಯಿ ಎಂಬತ್ತ ಎಂಟು ಲಕ್ಷ ತೊಂಬತ್ತ ಒಂದು ಸಾವಿರದ ನಾಲ್ಕು ನೂರ ಎಪ್ಪತ್ತ ಆರು ಮತ್ತು ಪೈಸೆ ಏಳು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದ್ದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ಗಾಗಿ
ಸ್ಥಳ : ಬೆಂಗಳೂರು **ಅಧಿಕೃತ ಅಧಿಕಾರಿ**

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLBAG00298393 1. ಇಲೋರಾ ಘೋಷ್ ಬ್ಯಾನರ್ಜಿ 2. ಸೌರವ್ ಬ್ಯಾನರ್ಜಿ	ಅಪಾರ್ಟ್‌ಮೆಂಟ್ ನಂ. ಎಫ್ -104, ಮೊದಲ ಮಹಡಿ, ಬ್ಲಾಕ್ ನಂ. ಎಫ್, ಅರ್ಬಾನ ಅವೆನ್ಯೂ, ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲೂಕು, ಬೆಂಗಳೂರು-562110, ಕರ್ನಾಟಕ	10.05.2024	12.06.2024 ರಂದಿನಂತೆ ರೂ. 55,75,142.68/- (ರೂಪಾಯಿ ಐವತ್ತ ಐದು ಲಕ್ಷ ಎಪ್ಪತ್ತ ಐದು ಸಾವಿರದ ನೂರ ನಲವತ್ತ ಎರಡು ಮತ್ತು ಪೈಸೆ ಅರವತ್ತ ಎಂಟು ಮಾತ್ರ)
2.	ಸಾಲ ಖಾತೆ ನಂ. HHLBAG00471017 1. ಕೊತವಾಲೆ ಅಭಿಜಿತ್ ಸುರೇಶ್ ಅಲಿಯಾಸ್ ಅಭಿಜಿತ್ ಎಸ್ ಕೊತವಾಲೆ 2. ಎಸ್ ದಿವ್ಯಾ ಅಲಿಯಾಸ್ ದಿವ್ಯಾ ಸೀತಾಪತಿ	ಫ್ಲಾಟ್ ಸಂಖ್ಯೆ 1003, 10 ನೇ ಮಹಡಿ, ಪಿ ಬ್ಲಾಕ್ ಅರ್ಬಾನಾ ಅವೆನ್ಯೂ, ಸರ್ವೆ ಸಂ. 75, 77/1, 77/2, 77/3, 77/4, 78, 79, 80, 81/2 , 83/2, 83/3, 83/5, 83/6 ಮತ್ತು 86/2, ಕನ್ನಮಂಗಲ ಗ್ರಾಮ , ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಬೆಂಗಳೂರು-562111 ಕರ್ನಾಟಕ	05.05.2024	24.06.2024 ರಂದಿನಂತೆ ರೂ. 81,07,036.81/- (ರೂಪಾಯಿ ಎಂಬತ್ತ ಒಂದು ಲಕ್ಷ ಏಳು ಸಾವಿರದ ಮೂವತ್ತ ಆರು ಮತ್ತು ಪೈಸೆ ಎಂಬತ್ತ ಒಂದು ಮಾತ್ರ)
3.	ಸಾಲ ಖಾತೆ ನಂ. HHLBAG00438943 1. ಕಿರಣ್‌ಕುಮಾರ್ ಶಿಡ್ಲ್ಯಾಳಿ (ಪಿಓಎ ಹೋಲ್ಡರ್ ಮನೋಹರ್ ಪರಪ್ಪ ಶಿಡ್ಲ್ಯಾಳಿ ಮೂಲಕ) 2. ಸುನಿತಾ ಪ್ರಿಯಾ ಶಿಡ್ಲ್ಯಾಳಿ (ಪಿಓಎ ಹೋಲ್ಡರ್ ಮನೋಹರ್ ಪರಪ್ಪ ಶಿಡ್ಲ್ಯಾಳಿ ಮೂಲಕ)	ಫ್ಲಾಟ್ ನಂ. ಎಚ್ -403, 4ನೇ ಮಹಡಿ, ಬ್ಲಾಕ್- ಎಚ್, ಅರ್ಬಾನಾ ಅವೆನ್ಯೂ ಬೆಂಗಳೂರು ಗ್ರಾಮಾಂತರ, ಬೆಂಗಳೂರು-562114, ಕರ್ನಾಟಕ	10.05.2024	12.06.2024 ರಂದಿನಂತೆ ರೂ. 68,66,849.50/- (ರೂಪಾಯಿ ಅರವತ್ತ ಎಂಟು ಲಕ್ಷ ಅರವತ್ತ ಆರು ಸಾವಿರದ ಎಂಟು ನೂರ ನಲವತ್ತ ಒಂಬತ್ತು ಮತ್ತು ಪೈಸೆ ಐವತ್ತು ಮಾತ್ರ)
4.	ಸಾಲ ಖಾತೆ ನಂ. HHLBAG00297007 1. ಸುಭ್ರಾಂಶು ಶೇಖರ್ ದಾಸ್ (ಪಿಓಎ ಹೋಲ್ಡರ್ ಸ್ಮಿತಾ ಪ್ರತಿಸಿತಾ ದಾಸ್ ಮೂಲಕ) 2. ಕುನ್ಮುನ್ ದಾಸ್ ಅಲಿಯಾಸ್ ಕುಂಕುಮ್ ದಾಸ್ (ಪಿಓಎ ಹೋಲ್ಡರ್ ಸ್ಮಿತಾ ಪ್ರತಿಸಿತಾ ದಾಸ್ ಮೂಲಕ)	ಫ್ಲಾಟ್ ನಂ. ಸಿ 202, ಎರಡನೇ ಮಹಡಿ, ಬ್ಲಾಕ್-ಸಿ, ಅರ್ಬಾನ ಆಲ್ಕೋವ್ ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ ದೇವನಹಳ್ಳಿ ತಾಲೂಕು ಬೆಂಗಳೂರು - 562110 ಕರ್ನಾಟಕ	05.05.2024	12.06.2024 ರಂದಿನಂತೆ ರೂ. 1,00,96,408.92/- (ರೂಪಾಯಿ ಒಂದು ಕೋಟಿ ತೊಂಬತ್ತ ಆರು ಸಾವಿರದ ನಾಲ್ಕು ನೂರ ಎಂಟು ಮತ್ತು ಪೈಸೆ ತೊಂಬತ್ತ ಎರಡು ಮಾತ್ರ)
5.	ಸಾಲ ಖಾತೆ ನಂ. HHLBAG00392879 1. ಸಿ ಮಿಥುನ್ ಅಲಿಯಾಸ್ ಮಿಥುನ್ ಚಂದ್ರಶೇಖರ್ (ಪಿಓಎ ಹೋಲ್ಡರ್ ಚಂದ್ರಶೇಖರ್ ವಿ ಎಚ್ ಮೂಲಕ) 2. ಬಸವ ಸೌರಭ ಎನ್ ಅಲಿಯಾಸ್ ಸೌರಭ ನಂಜುಂಡಪ್ಪಬಸವ (ಪಿಓಎ ಹೋಲ್ಡರ್ ಚಂದ್ರಶೇಖರ್ ವಿ ಎಚ್ ಮೂಲಕ)	ಫ್ಲಾಟ್ ನಂ. ಎಚ್ 602, 6ನೇ ಮಹಡಿ, ಬ್ಲಾಕ್ ಎಚ್, ಅರ್ಬಾನಾ ಅವೆನ್ಯೂ ಬೆಂಗಳೂರು ಗ್ರಾಮಾಂತರ, ಬೆಂಗಳೂರು - 562114, ಕರ್ನಾಟಕ	10.05.2024	12.06.2024 ರಂದಿನಂತೆ ರೂ. 74,15,772.78/- (ರೂಪಾಯಿ ಎಪ್ಪತ್ತ ನಾಲ್ಕು ಲಕ್ಷ ಹದಿನೈದು ಸಾವಿರದ ಏಳು ನೂರ ಎಪ್ಪತ್ತ ಎರಡು ಮತ್ತು ಪೈಸೆ ಎಪ್ಪತ್ತ ಎಂಟು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದ್ದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ಗಾಗಿ
ಸ್ಥಳ : ಬೆಂಗಳೂರು **ಅಧಿಕೃತ ಅಧಿಕಾರಿ**

ಸರಕಾರ ವಿಸರ್ಜಿಸಿ, ಚುನಾವಣೆಗೆ ಬನ್ನಿ: ಬಿಎಸ್‌ವೈ

ಅರಮನೆ ಮೈದಾನದಲ್ಲಿ ನಡೆದ ವಿಶೇಷ ಕಾರ್ಯಕಾರಿಣಿ ಸಭೆ | ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ ಬಿಜೆಪಿ ನಾಯಕರು

ಬೆಂಗಳೂರು: ಕಾಂಗ್ರೆಸ್ ನಾಯಕರಿಗೆ ತಾಕತ್ತಿದ್ದರೆ ವಿಧಾನಸಭೆಯನ್ನು ವಿಸರ್ಜಿಸಿ ಚುನಾವಣೆಗೆ ಬರಲಿ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್ .ಯಡಿಯೂರಪ್ಪ ಸವಾಲು ಹಾಕಿದರು.

ಅರಮನೆಯಲ್ಲಿ ನಡೆದ ಬಿಜೆಪಿ ಕಾರ್ಯಕಾರಿಣಿಯಲ್ಲಿ ಮಾತನಾಡಿದ ಅವರು, ನರೇಂದ್ರ ಮೋದಿಯವರು ಮೂರನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರಕ್ಕೆ ಬಂದಿದ್ದಾರೆ. ರಾಜ್ಯದ 19 ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಗೆದ್ದಿದೆ. ಸರಾಸರಿ 142 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಗೆ ಮುನ್ನಡೆ ಸಿಕ್ಕಿದೆ. ಈಗ ಚುನಾವಣೆ ನಡೆದರೂ ಬಿಜೆಪಿ 135-140ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆದ್ದು ಬರುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ 17 ಸಚಿವರ ಸ್ವಕ್ಷೇತ್ರಗಳಲ್ಲೇ ಕಾಂಗ್ರೆಸ್ ಹಿನ್ನಡೆ ಅನುಭವಿಸಿದೆ. ಭ್ರಷ್ಟಾಚಾರದಲ್ಲಿ ತೊಡಗಿ, ಜನ ವಿರೋಧಿಯಾಗಿರುವ ಕಾಂಗ್ರೆಸ್ ನಾಯಕರಿಗೆ ಅಧಿಕಾರದಲ್ಲಿ ಮುಂದುವರಿಯಲು ಯಾವುದೇ ನೈತಿಕತೆಯಿಲ್ಲ. ಹಣಬಲ, ತೋಳ್ಬಲ ಹತ್ತು ಆಮಿಷ ಗಳ ವಿರುದ್ಧ ರಾಜ್ಯದ ಜನರು ಮೋದಿಗೆ ಜನಮತ ನೀಡಿದ್ದಾರೆ. ಕೆಲವು ಕ್ಷೇತ್ರ ಗಳಲ್ಲಿ ನಮಗೆ ಸ್ವಲ್ಪ ಹಿನ್ನಡೆ ಆಗಿದೆ. ಆದರೆ ಕಾಂಗ್ರೆಸ್ ನ ದುರಾಡಳಿತ ಕಾಂಗ್ರೆಸ್ ಭ್ರಷ್ಟಾಚಾರ ವಿರುದ್ಧ ಜನರು ಮತ ನೀಡಿದ್ದಾರೆ ಎಂದು ಅಭಿಪ್ರಾಯಪಟ್ಟರು.

ರಾಜ್ಯ ಸರಕಾರದ ತಪ್ಪು ನಿರ್ಧಾರಗಳಿಂದ ದಿವಾಳಿಯಾಗಿದೆ. ಶಾಸಕರ ಅನುದಾನಕ್ಕೂ ಕತ್ತರಿ ಹಾಕಿದೆ. ಗ್ಯಾರಂಟಿಗಳ ಮೂಲಕ ಎಲ್ಲದಕ್ಕೂ ದರ ಹೆಚ್ಚಳ ಮಾಡಿದ್ದಾರೆ. ಖಜಾನೆ ಖಾಲಿ ಆಗಿದೆ, ಅಭಿವೃದ್ಧಿ ಕುಂಠಿತಗೊಂಡಿದೆ.

ಮುದ್ರಾಂಕ ಶುಲ್ಕ, ಸಾರಿಗೆ ದರ, ವಿದ್ಯುತ್ ದರ, ಅಬಕಾರಿ, ಪಹಣಿ ದರ ಏರಿಕೆ ಮಾಡಿದ್ದಾರೆ. ಬರಗಾಲ ಇದ್ದಾಗ ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಟೀಕಿಸಿದರು.

ಕಾರ್ಯಕರ್ತರಿಂದ ವಿಜಯ: ಬಿಜೆಪಿ ರಾಜ್ಯ ಚುನಾವಣಾ ಉಸ್ತುವಾರಿ ಡಾ.ರಾಧಾಮೋಹನ್ ದಾಸ್ ಅಗರ್ವಾಲ್ ಮಾತನಾಡಿ, ಕಾರ್ಯಕರ್ತರ ಸೈನ್ಯ, ಎಲ್ಲ ಪ್ರಮುಖರ ಶ್ರಮದಿಂದ ಬಿಜೆಪಿಗೆ ವಿಜಯ ಪ್ರಾಪ್ತವಾಗಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಆದ ಅಪಮಾನವನ್ನು 2024 ರಲ್ಲಿ ಬಿಜೆಪಿ ತೀರಿಸಿಕೊಂಡಿದೆ. ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಜನ ಮತ ನೀಡಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್‌ಗೆ ಮರ್ಯಾದೆ ಇದ್ದರೆ, ಲೋಕಸಭೆ ಚುನಾವಣೆ ಸೋಲನ್ನು ಒಪ್ಪಿ ಕೊಂಡು ರಾಜ್ಯಪಾಲರಿಗೆ ರಾಜೀನಾಮೆ ನೀಡಿ, ಸರಕಾರ ವಿಸರ್ಜಿಸಬೇಕಿತ್ತು. ಮಹಿಳೆ ಯರಿಗೆ 2 ಸಾವಿರ, ಬಸ್ ಫ್ರೀ, ಯುವಕರಿಗೆ ಭತ್ಯೆ ಎಲ್ಲ ನೀಡುವ ಘೋಷಣೆ ಮಾಡಿತ್ತು. ಆದಾಗಿಯೂ ಜನ ತಿರಸ್ಕರಿಸಿದ್ದಾರೆ.4 ವರ್ಷದ ಬಳಿಕ ಚುನಾವಣೆಯಾದರೆ ಕಾಂಗ್ರೆಸ್ ಹುಡುಕಿದರೂ ಸಿಗುವುದಿಲ್ಲ. ಆ ರೀತಿಯಲ್ಲಿ ಸೋಲುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅರಮನೆ ಮೈದಾನದಲ್ಲಿ ನಡೆದ ಬಿಜೆಪಿ ಕಾರ್ಯಕಾರಿಣಿ ಸಭೆಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ , ಬಿಜೆಪಿ ರಾಜ್ಯ ಚುನಾವಣಾ ಉಸ್ತುವಾರಿ ಡಾ.ರಾಧಾಮೋಹನ್ ದಾಸ್ ಅಗರ್ವಾಲ್ ಸೇರಿದಂತೆ ಇತರ ನಾಯಕರು ಉದ್ಘಾಟಿಸಿದರು.

ರೇಣುಕಾಸ್ವಾಮಿಗೆ ಸಂತಾಪ

ಕಾರ್ಯಕಾರಿಣಿ ಆರಂಭದ ಬಳಿಕ ದರ್ಶನ್ ಗ್ಯಾಂಗ್‌ನಿಂದ ಹತ್ಯೆಗೊಳಗಾದ ರೇಣುಕಾಸ್ವಾಮಿ ಸೇರಿದಂತೆ ಹಲವರಿಗೆ ಬಿಜೆಪಿ ಸಂತಾಪ ಸೂಚಿಸಲಾಯಿತು. ಇದರೊಂದಿಗೆ ಮಾಜಿ ಶಾಸಕ ವಸಂತ್ ಬಂಗೇರಾ, ವಿಧಾನ ಪರಿಷತ್ ಮಾಜಿ ಸದಸ್ಯ ಭಾನುಪ್ರಕಾಶ್, ಫಯಾಜ್‌ನಿಂದ ಹತ್ಯೆಯಾದ ಹುಬ್ಬಳ್ಳಿಯ ನೇಹಾ ಹಿರೇಮಠ್, ಸಾಹಿತಿ ಕಮಲಾ ಹಂಪನಾ, ಸಾಹಿತಿ ಕೆ.ಟಿ. ಗಟ್ಟಿ, ಇತ್ತೀಚೆಗೆ ನಡೆದ ಅಪಘಾತಗಳಲ್ಲಿ ಮೃತಪಟ್ಟವರಿಗೆ ಸಂತಾಪ ಸಲ್ಲಿಸಲಾಯಿತು.

ಅಧಿಕಾರ ದರ್ಪದಿಂದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 15 ರಿಂದ 20 ಸ್ಥಾನ ಗೆಲ್ಲಲು ಹೊರಟಿತ್ತು. ಇವರ ದುರಾಡಳಿತ, ದಬ್ಬಾಳಿಕೆ ನಡುವೆ 19 ಸೀಟು ಗೆದ್ದಿದ್ದೇವೆ. ರಾಜ್ಯದಲ್ಲಿ ಕಾಂಗ್ರೆಸ್‌ನ ಒಡೆದಾಡುವ ನೀತಿ, ತುಷ್ಟೀಕರ ನೀತಿಯನ್ನು ಧಿಕ್ಕರಿಸಿ ನಮಗೆ ಜನರು ಆಶೀರ್ವಾದ ಮಾಡಿದ್ದಾರೆ.

- ಬಿ.ವೈ. ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ತುರ್ತುಪರಿಸ್ಥಿತಿ ಹೇರಿದ್ದು ಕಾಂಗ್ರೆಸ್: ನಿತಿನ್ ಗಡ್ಕರಿ

ಕೇಂದ್ರ ಸಚಿವ ನಿತಿನ್ ಗಡ್ಕರಿ ಮಾತನಾಡಿ, ಬಿಜೆಪಿ ಸಂವಿಧಾನ ಬದಲಾವಣೆ ಮಾಡಲಿದೆ ಎಂದು ಚುನಾವಣೆ ವೇಳೆ ಅಪಪ್ರಚಾರ ಮಾಡಲಾಗಿತ್ತು. ಸ್ವಾರ್ಥಕ್ಕಾಗಿ ಸಂವಿಧಾನವನ್ನು ಬದಲಿಸಿದ, ಸಂವಿಧಾನದ ಹತ್ಯೆ ಮಾಡಿ ತುರ್ತು ಪರಿಸ್ಥಿತಿ ಹೇರಿದ್ದ ಕಾಂಗ್ರೆಸ್ ಪಕ್ಷವು ನಮ್ಮ ವಿರುದ್ಧ ಸುಳ್ಳು ಆರೋಪ ಮಾಡಿತ್ತು ಎಂದು ವಾಗ್ದಾಳಿ ನಡೆಸಿದರು.

1975ರಲ್ಲಿ ತುರ್ತು ಪರಿಸ್ಥಿತಿಯ ಕರಾಳ ದಿನಗಳು, ಮೀಸಾದಡಿ ನಮ್ಮ ನೇತಾರರು, ಕಾರ್ಯಕರ್ತರನ್ನು ಬಂಧಿಸಲಾಗಿತ್ತು. ಇದು ಪ್ರಜಾಸತ್ತೆ ಮತ್ತು ಸಂವಿಧಾನದ ಹತ್ಯೆ. ಬೆಂಗಳೂರಿನ ಜೈಲಿನಲ್ಲಿ ಅಟಲ್ ಬಿಹಾರಿ ವಾಜಪೇಯಿ, ಅಡ್ವಾಣಿ, ಜಾರ್ಜ್ ಫರ್ನಾಂಡಿಸ್ ಮೊದಲಾದವರು ಇದ್ದರು. ತುರ್ತು ಪರಿಸ್ಥಿತಿಯ ವಿರುದ್ಧ ಭಾರತೀಯ ಜನಸಂಘ ಹೋರಾಡಿ ಪ್ರಜಾಸತ್ತೆಯನ್ನು ಉಳಿಸುವ ಕೆಲಸ ಮಾಡಿದೆ. ಸಂವಿಧಾನವನ್ನು ಉಳಿಸುವ ಕೆಲಸವೂ ಆಗಿತ್ತು. ಪ್ರಜಾತಂತ್ರವು ನಾಲ್ಕು ಸ್ತಂಭಗಳ ಮೇಲೆ ನಿಂತಿದೆ. ಇವೆಲ್ಲವುಗಳ ಬಗ್ಗೆ ಸಂವಿಧಾನದಲ್ಲಿ ಬರೆಯಲಾಗಿದೆ. ಸಂವಿಧಾನವನ್ನು ಕಡೆಗಣಿಸಿ ಹಲವಾರು ತಿದ್ದುಪಡಿ ಮಾಡಲಾಗಿತ್ತು ಎಂದು ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಪಾದರಕ್ಷೆ ತಯಾರಿಕಾ ಘಟಕ ಸ್ಥಾಪನೆ

ಬೆಂಗಳೂರು: ಕರ್ನಾಟಕ ಇನ್ಸಿಟ್ಯೂಟ್ ಆಫ್ ಎಂಡೋಕ್ರಿನಾಲಜಿ ಅಂಡ್ ರೀಸರ್ಚ್ ಸಹಯೋಗದಲ್ಲಿ ಪಾದರಕ್ಷೆ ತಯಾರಿಕಾ ಘಟಕವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸಲಾಗಿದೆ. ಮುಂಚೂಣಿಯ ಆರೋಗ್ಯಸೇವಾ ಸ್ಟಾರ್ಟಪ್ ಫುಟ್ ಸೆಕ್ಯೂರ್ ಪಾದಗಳ ಚಿಕಿತ್ಸೆ ಮತ್ತು ಗಾಯದ ಆರೈಕೆಯಲ್ಲಿ ಪರಿಣಿತಿ ಹೊಂದಿದ್ದು 2018ರಲ್ಲಿ ಪ್ರಾರಂಭವಾಗಿದ್ದು ಸಮೂಹಕ್ಕೆ ಗುಣಮಟ್ಟದ ಪಾದದ ಸೇವೆಗಳು ಕೈಗೆಟುಕುವ ಮತ್ತು ಲಭ್ಯವಿರುವ ಗುರಿ ಹೊಂದಿದೆ. ಇತ್ತೀಚೆಗೆ ಈ ಸ್ಟಾರ್ಟಪ್ ಬೆಂಗಳೂರಿನಲ್ಲಿ ತನ್ನ ಕಸ್ಟಂ ಪ್ರಿಸ್ಕ್ರಿಪ್ಷನ್ ಫುಟ್‌ವೇರ್ ಉತ್ಪಾದನಾ ಘಟಕವನ್ನು ಪ್ರಾರಂಭಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ತಾಯಿ-ಮಕ್ಕಳ ವಿಭಾಗ ಅನಾವರಣ

ಬೆಂಗಳೂರು: ಸ್ಪರ್ಶ್ ಗ್ರೂಪ್ ಆಫ್ ಹಾಸ್ಪಿಟಲ್ಸ್ ಆರ್.ಆರ್.ನಗರ ಘಟಕದಲ್ಲಿ ಹೊಸದಾದ, ತಾಯಿ ಮತ್ತು ಮಕ್ಕಳ ಆರೈಕೆಗೆ ಮೀಸಲಾದ ವಿಭಾಗ ಅನಾವರಣಗೊಳಿಸಿದೆ. ಆರ್.ಆರ್. ನಗರದ ಸ್ಪರ್ಶ್ ಆಸ್ಪತ್ರೆ 400 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದು, ಆಸುಪಾಸಿನಲ್ಲಿ ತಾಯಿ ಮತ್ತು ಮಕ್ಕಳ ಆರೈಕೆಗಾಗಿ ಮೀಸಲಾದ ವಿಭಾಗ ಹೊಂದಿರುವ ಮೊದಲ ಆಸ್ಪತ್ರೆಯಾಗಿದೆ. ಈ ಆಸ್ಪತ್ರೆ ಕ್ಲಿಷ್ಟಕರ ಗರ್ಭಧಾರಣೆ ಮತ್ತು ಮಲ್ಟಿ ಸ್ಪೆಷಾಲಿಟಿ ಪರಿಣಿತಿಯ ಅಗತ್ಯವಿರುವ ಶಸ್ತ್ರಚಿಕಿತ್ಸೆಗಳನ್ನು ಒಂದೇ ಸೂರಿನಲ್ಲಿ ನಿರ್ವಹಿಸಲು ಹೆಸರಾಂತ ವೈದ್ಯರು ಮತ್ತು ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿದೆ. ಈ ವಿಭಾಗ ಸಂಕೀರ್ಣ ಶಸ್ತ್ರಚಿಕಿತ್ಸೆಗಳಿಗೆ ಅಗತ್ಯವಿರುವ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಒಳಗೊಂಡಿದ್ದು, ಸ್ತ್ರೀರೋಗ ಶಾಸ್ತ್ರ ಮತ್ತು ಐವಿಎಫ್‌ನಂತಹ ವಿಶೇಷ ಕ್ಷೇತ್ರಗಳಲ್ಲಿ ಶ್ರೇಷ್ಠ ಗುಣಮಟ್ಟವನ್ನು ಕಾಪಾಡಿಕೊಂಡಿದೆ. ಜತೆಗೆ, ಆಸ್ಪತ್ರೆಯು ಮೂರನೇ ಹಂತದ ಎನ್‌ಐಸಿಯು ಸೌಲಭ್ಯ ಒದಗಿಸುವುದಲ್ಲದೆ, ಅಕಾಲಿಕ ಶಿಶುಗಳಿಗೆ ಅಥವಾ ವಿಶೇಷ ವೈದ್ಯಕೀಯ ವ್ಯವಸ್ಥೆಯ ಅಗತ್ಯವಿರುವ ಶಿಶುಗಳಿಗೆ ನಿರ್ಣಾಯಕ ಆರೈಕೆ ನೀಡುತ್ತದೆ ಮತ್ತು ಪಿಐಸಿಯು ಮಕ್ಕಳ ನಿರ್ಣಾಯಕ ಆರೈಕೆಯಲ್ಲಿ ಪರಿಣತಿ ಹೊಂದಿದೆ ಎಂದು ಪ್ರಕಟಣೆ ತಿಳಿಸಿದೆ.

ಸಾಮಾನ್ಯ ಕೋಚ್ ಹೆಚ್ಚಿಸಲು ತೀರ್ಮಾನ

ಬೆಂಗಳೂರು: ರಾಜ್ಯದ ನಾನಾ ಭಾಗಗಳಿಗೆ ಸಂಚರಿಸುವ ರೈಲುಗಳ ಸಂಖ್ಯೆಯು ಹೆಚ್ಚಾದ ಬೆನ್ನಲ್ಲೇ ಸಾಮಾನ್ಯ ಕೋಚ್‌ಗಳ ಸಂಖ್ಯೆಯನ್ನು ಹೆಚ್ಚಿಸಲು ಭಾರತೀಯ ರೈಲ್ವೆ ಇಲಾಖೆಯು ಮುಂದಾಗಿದೆ. ಬೆಂಗಳೂರು, ಶಿವಮೊಗ್ಗ, ಮೈಸೂರು, ತುಮಕೂರು, ಚಾಮರಾಜನಗರ, ಚಿಕ್ಕಮಗಳೂರು ಸಹಿತ ರಾಜ್ಯದ ನಾನಾ ಭಾಗಗಳಿಗೆ ಸಂಚರಿಸುವ ರೈಲುಗಳ ಸಂಖ್ಯೆಯಲ್ಲಿ ಏರಿಕೆಯಾಗಿದ್ದು, ನೈರುತ್ಯ ರೈಲ್ವೆಯು 16 ರೈಲುಗಳನ್ನು ಎರಡು ಹೆಚ್ಚುವರಿ ಸಾಮಾನ್ಯ ದ್ವಿತೀಯ ದರ್ಜೆ ಕೋಚ್ ಗಳೊಂದಿಗೆ ಶಾಶ್ವತವಾಗಿ ಹೆಚ್ಚಿಸಲು ನಿರ್ಧರಿಸಿದೆ. ಇದು ಜುಲೈ ತಿಂಗಳಿ ನಿಂದಲೇ ಜಾರಿಗೆ ಬರಲಿದ್ದು, ಕೆಲವು ಕರ್ನಾಟಕದ ಒಳಗಿನ, ಇನ್ನು ಕೆಲವು ರೈಲುಗಳು ಹೊರ ರಾಜ್ಯಕ್ಕೂ ಸಂಚರಿಸಲಿವೆ. ಇದರಿಂದ ರೈಲು ಪ್ರಯಾಣಿಕರ ಸಂಚಾರ ದಟ್ಟಣೆ ತಗ್ಗಿಸಲು ನೆರವಾಗಲಿದೆ ಎಂದು ಹೇಳಲಾಗಿದೆ. ಕೋಚ್ ಸಂಯೋಜನೆಯ ಹೆಚ್ಚಿನ ಪರಿಷ್ಕರಣೆಗಳು ನವೆಂಬರ್ 1, 2024ರಿಂದ, ವಾಸ್ಕೋ ಡಾ ಗಾಮಾ ದಿಂದ ಮತ್ತು ನವೆಂಬರ್ 4, 2024 ರಿಂದ ಜಾರಿಗೆ ಬರಲಿದೆ. ಎಸಿ ಎರಡು ಹಂತದ ಕೋಚ್‌ಗಳು-4, ಎಸಿ ಮೂರು ಹಂತದ ಕೋಚ್‌ಗಳು-3,ಎಸಿ ಮೂರು ಟೈರ್ ಎಕಾನಮಿ ಕೋಚ್‌ಗಳು -3, ಸ್ಲೀಪರ್ ಕ್ಲಾಸ್ ಕೋಚ್‌ಗಳು-2, ಜನರಲ್ ಸೆಕೆಂಡ್ ಕ್ಲಾಸ್ ಕೋಚ್‌ಗಳು-5, ಪ್ಯಾಂಟ್ರಿ ಕಾರ್-1 ಮತ್ತು ಬ್ರೇಕ್, ಲಗೇಜ್ ಕಮ್ ಜನರೇಟರ್ ಕಾರ್-1 ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

{ **ಬಸವರಾಜ ಬೊಮ್ಮಾಯಿ** } ಸಂಸದ

150 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಮತ್ತೊಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮಾಡುವಂತಿಲ್ಲ. ಹೊಸೂರು ತಮಿಳುನಾಡಿನಲ್ಲಿದ್ದರೂ ಅದರ ಭಾಗ ಬೆಂಗಳೂರಿನ ಮೇಲಿದೆ. ಬೆಂಗಳೂರು ಬೆಳೆಯುತ್ತಿರುವುದನ್ನು ನೋಡಿದರೆ ಇನ್ನೊಂದು ವಿಮಾನ ನಿಲ್ದಾಣದ ಅವಶ್ಯಕತೆ ಇದೆ. ಹೊಸೂರು ವಿಮಾನ ನಿಲ್ದಾಣದಿಂದ ಬೆಂಗಳೂರಿನಲ್ಲಿ ಐಟಿ ಅಭಿವೃದ್ಧಿ ಆಗುವುದಿಲ್ಲ. ಬೆಂಗಳೂರು ಐಟಿ ಕ್ಷೇತ್ರ ಈಗಾಗಲೇ ಬೆಳೆದಿದೆ.

ಅಂಗನವಾಡಿ ಕಾರ್ಯಕರ್ತೆಯರಿಗೆ ತೊಂದರೆಯಾಗಲ್ಲ: ಹೆಬ್ಬಾಳ್ಕರ್

ನಿಮ್ಮ, ಮಕ್ಕಳ ಹಿತದೃಷ್ಟಿಯಿಂದ ಸರಕಾರ ಅಗತ್ಯ ಕ್ರಮ

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರನ್ನು ಎಐಟಿಯುಸಿ ಕಾರ್ಯಕರ್ತರು ಭೇಟಿ ಮಾಡಿ, ವಿವಿಧ ಬೇಡಿಕೆಗಳ ಈಡೇರಿಸುವಂತೆ ಮನವಿ ಮಾಡಿದರು. ಈ ವೇಳೆ ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಜಯಮ್ಮ, ಕಾರ್ಯದರ್ಶಿ ಬಿ. ಅಮ್ಜದ್ ಸೇರಿದಂತೆ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರು: ಅಂಗನವಾಡಿ ಕಾರ್ಯಕರ್ತೆಯರ ಹಿತರಕ್ಷಣೆಗೆ ಸರಕಾರ ಬದ್ಧವಾಗಿದ್ದು, ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಭರವಸೆ ನೀಡಿದ್ದಾರೆ.

ಎಐಟಿಯುಸಿ ಕಾರ್ಯಕರ್ತರೊಂದಿಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ಅಂಗನವಾಡಿ ಕೇಂದ್ರಗಳಲ್ಲೇ ಪೂರ್ವ ಪ್ರಾಥಮಿಕ ಶಾಲೆ ಆರಂಭಿಸುವ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಒಪ್ಪಿಗೆ ಸೂಚಿಸಿದ್ದಾರೆ. ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್) ಹಾಗೂ ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಆರಂಭಿಸಲು ಸರಕಾರ ತೀರ್ಮಾನಿಸಿದ್ದು, ಇದರಿಂದ ಅಂಗನವಾಡಿ ಶಿಕ್ಷಕರಿಗೆ ಯಾವುದೇ ತೊಂದರೆ ಆಗುವುದಿಲ್ಲ. ನಿಮ್ಮ ಹಾಗೂ ಮಕ್ಕಳ ಹಿತದೃಷ್ಟಿಯಿಂದ ಸರಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ಅಂಗನವಾಡಿ ಕಾರ್ಯಕರ್ತೆಯರ ಕಳವಳ ಅರ್ಥ ಆಗುತ್ತದೆ. ಆದರೆ, ಈಗಾಗಲೇ ಅಂಗನವಾಡಿ ಕೇಂದ್ರಗಳ ಅಸ್ತಿತ್ವದ ಬಗ್ಗೆ ಮುಖ್ಯಮಂತ್ರಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೂ ಚರ್ಚೆ ನಡೆಸಲಾಗಿದೆ. ಈ ಬಗ್ಗೆ ಕಾರ್ಯಕರ್ತೆಯರು ಯಾವುದೇ ಆತಂಕಕ್ಕೆ ಒಳಗಾಗುವುದು ಬೇಡ ಎಂದರು.

ಅಂಗನವಾಡಿ ಮಕ್ಕಳಿಗೆ ಬ್ಯಾಗ್, ಯೂನಿಫಾರ್ಮ್ ಕೊಡುವ ಬಗ್ಗೆ ತೀರ್ಮಾನಿಸಿದ್ದು, ಮಾಂಟೆಸ್ಸರಿ ತರಗತಿಗಳು ಆರಂಭಗೊಂಡ ನಂತರ ಅಂಗನವಾಡಿ ಹೆಸರನ್ನು ಬದಲಿಸಲು ಸರಕಾರ ಚಿಂತನೆ ನಡೆಸಿದೆ. ಕರ್ನಾಟಕದ ಅಂಗನವಾಡಿ ಕೇಂದ್ರಗಳು ಇಡೀ ದೇಶಕ್ಕೆ ಮಾದರಿಯಾಗಿದ್ದು, ಅಂಗನವಾಡಿ ಕಾರ್ಯಕರ್ತರ ಹಿತರಕ್ಷಣೆಗೆ ಬದ್ಧವಾಗಿದೆ.

- ಲಕ್ಷ್ಮೀ ಹೆಬ್ಬಾಳ್ಕರ್
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ

ನಾನು ಬದುಕಿರುವವರೆಗೂ ದರ್ಶನ್ ನನ್ನ ಹಿರಿ ಮಗ

ಮಾಹಿತಿಯಿಲ್ಲದೆ ಬೇಜವಾಬ್ದಾರಿ ಹೇಳಿಕೆ ನೀಡಲಾರೆ: ಸುಮಲತಾ

ಬೆಂಗಳೂರು: ಚಿತ್ರದುರ್ಗದ ಯುವಕ ರೇಣುಕಾಸ್ವಾಮಿ ಭೀಕರ ಹತ್ಯೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಕುರಿತು ನಟಿ, ರಾಜಕಾರಣಿ ಸುಮಲತಾ ಅಂಬರೀಶ್ ಸುದೀರ್ಘ ಪತ್ರ ಬರೆದು, ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪತ್ರದ ಸಾರಾಂಶ: ನಾನು 44 ವರ್ಷಗಳಿಂದ ನಟಿಯಾಗಿ, ಕಲಾವಿದೆಯಾಗಿ ಸಾರ್ವಜನಿಕ ಜೀವನದಲ್ಲಿದ್ದೇನೆ. ಕಳೆದ 5 ವರ್ಷಗಳಿಂದ ಸಂಸದೆಯಾಗಿದ್ದೆ. ಅಲ್ಲದೇ, ನಾನು ಕಲಾವಿದೆಯಾಗಿ, ಪತ್ನಿಯಾಗಿ, ತಾಯಿಯಾಗಿ, ಸಂಸದೆಯಾಗಿ ಮತ್ತು ಒಂದು ವ್ಯಕ್ತಿಯಾಗಿ ನನ್ನ ಜೀವನದಲ್ಲಿ ಪ್ರತಿಯೊಂದು ಜವಾಬ್ದಾರಿಯನ್ನೂ ಗಂಭೀರವಾಗಿ ತೆಗೆದುಕೊಂಡಿದ್ದೇನೆ. ಸಮಾಜದಲ್ಲಿ ಜವಾಬ್ದಾರಿಯುತ ವ್ಯಕ್ತಿಯಾಗಿ, ನನ್ನ ಬಳಿ ಯಾವುದೇ ಸತ್ಯ ಅಥವಾ ಮಾಹಿತಿಯಿಲ್ಲದೆ ನಾನು ಅಸಡ್ಡೆ, ಅನಗತ್ಯ, ಬೇಜವಾಬ್ದಾರಿ ಹೇಳಿಕೆಗಳನ್ನು ನೀಡಲು ಸಾಧ್ಯವಿಲ್ಲ.

ಇಂದು ನಾನು ಕೆಲವು ಸಂಗತಿಗಳನ್ನು ಸ್ಪಷ್ಟಪಡಿಸಲು, ನನ್ನ ಆಲೋಚನೆ ಮತ್ತು ನೋವನ್ನು ಹಂಚಿಕೊಳ್ಳಲು ಈ ಪೋಸ್ಟ್ ಮಾಡುತ್ತಿದ್ದೇನೆ. ಏಕೆಂದರೆ ಮಾಧ್ಯಮ ಅಥವಾ ಸಾಮಾಜಿಕ ಮಾಧ್ಯಮದಲ್ಲಿ ಯಾವುದೇ ಹೆಚ್ಚಿನ ಊಹಾಪೋಹಗಳನ್ನು ಪ್ರೋತ್ಸಾಹಿಸಲು ಅಥವಾ ನನ್ನ ನಿಲುವಿನ ಬಗ್ಗೆ ಅಭಿಮಾನಿಗಳಲ್ಲಿ ಯಾವುದೇ ಗೊಂದಲಕ್ಕೆ ಎಡೆಮಾಡಿಕೊಡಲು ನಾನು ಬಯಸುವುದಿಲ್ಲ. ಮೊದಲಿಗೆ ತಮ್ಮ ಮಗ ಮತ್ತು ಪತಿಯನ್ನು ಹೃದಯವಿದ್ರಾವಕ ರೀತಿಯಲ್ಲಿ ಕಳೆದುಕೊಂಡಿರುವ ರೇಣುಕಾಸ್ವಾಮಿ ಅವರ ಹೆತ್ತವರು ಮತ್ತು ಪತ್ನಿಗೆ ನನ್ನ ಸಂತಾಪ ಸೂಚಿಸುತ್ತೇನೆ. ಈ ದುರಂತವನ್ನು ಎದುರಿಸಲು ಮತ್ತು ಆ ನೋವನ್ನು ಭರಿಸಲು ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ನಮ್ಮ ಕಾನೂನು ವ್ಯವಸ್ಥೆಯಿಂದ ಅವರಿಗೆ ಸಿಗಬೇಕಾದ ನ್ಯಾಯ ದೊರಕಲಿ ಎಂದು ಪ್ರಾರ್ಥಿಸುತ್ತೇನೆ.

ಸತ್ಯ ಹೊರಬರಲಿ ಮತ್ತು ಎಲ್ಲರಿಗೂ ನ್ಯಾಯ ಸಿಗಲಿ

ದರ್ಶನ್ ಯಾವಾಗಲೂ ನನ್ನನ್ನು ಮದರ್ ಇಂಡಿಯಾ ಎಂದು ಕರೆಯುತ್ತಾರೆ ಮತ್ತು ನಾನು ಬದುಕಿರುವವರೆಗೂ ಅವನು ನನ್ನ ಹಿರಿಯ ಮಗನಾಗಿರುತ್ತಾನೆ. ನಮ್ಮ ಬಂಧ ಒಂದೇ ಮತ್ತು ಯಾವುದೂ ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ಅವರ ತಾಯಿಯಾಗಿ ನಾನು ಸತ್ಯ ಹೊರಬರಲಿ ಮತ್ತು ಎಲ್ಲರಿಗೂ ನ್ಯಾಯ ಸಿಗಲಿ ಎಂದು ದೇವರಲ್ಲಿ ನಿರಂತರವಾಗಿ ಪ್ರಾರ್ಥಿಸುತ್ತಿದ್ದೇನೆ. ಅವರು ತಮ್ಮನ್ನು ತಾವು ನಿರಪರಾಧಿ ಎಂದು ಸಾಬೀತುಪಡಿಸಿ ಹೊರಬರುತ್ತಾರೆ ಮತ್ತು ಚಿತ್ರೀಕರಣ, ಸಾಮಾನ್ಯ ಜೀವನವನ್ನು ಪುನರಾರಂಭಿಸುತ್ತಾರೆ ಎಂದು ನಾನು ಭರವಸೆ ಹೊಂದಿದ್ದೇನೆ ಎಂದು ಮಾಜಿ ಸಂಸದೆ ಸುಮಲತಾ ತಿಳಿಸಿದರು.

ಈ ಪರಿಸ್ಥಿತಿಯಲ್ಲಿ, ನಾನು ನೆಮ್ಮದಿಯಿಂದ, ಈ ಸಮಸ್ಯೆಯಿಂದ ದೂರವಿರುವುದು ಅಸಾಧ್ಯ. ಇದು ನನ್ನದೇ ಕೌಟುಂಬಿಕ ಸಮಸ್ಯೆ. ಇದು ಅವರ ಜೀವನ ಮತ್ತು ಕುಟುಂಬದ ನೆಮ್ಮದಿ, ಭದ್ರತೆ, ಭವಿಷ್ಯಕ್ಕೆ ಸಂಬಂಧಪಟ್ಟಂತೆ ಅತ್ಯಂತ ಗಂಭೀರ ವಿಷಯ. ನಮಗೆಲ್ಲ ನೋವಾಗುತ್ತಿದೆ. ಚಿತ್ರರಂಗ ಅಸ್ತವ್ಯಸ್ತವಾಗಿದೆ. ಸಾವಿರ ಜನರ ಜೀವನೋಪಾಯ ಅವರ ಚಲನಚಿತ್ರ ನಿರ್ಮಾಣಗಳ ಮೇಲೆ ಅವಲಂಬಿತವಾಗಿದೆ. ಇದನ್ನು ಎದುರಿಸುವುದು ಯಾರಿಗೂ ಸುಲಭವಾಗಿರಲಿಲ್ಲ.

ಭ್ರಷ್ಟಾಚಾರ: ಸದನದಲ್ಲಿ ಬಿಜೆಪಿ ಪ್ರಸ್ತಾಪ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರಕಾರದ ಬೆಲೆ ಏರಿಕೆ, ಮೈಸೂರು ಮೂಡಾದಲ್ಲಿ ನಾಲ್ಕೈದು ಸಾವಿರ ಕೋಟಿಯ ಹಗರಣ, ವಾಲ್ಮೀಕಿ ನಿಗಮದ ಹಗರಣ ಸೇರಿ ಬ್ರಹ್ಮಾಂಡ ಭ್ರಷ್ಟಾಚಾರ ಕುರಿತು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಲಿದ್ದೇವೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ತಿಳಿಸಿದ್ದಾರೆ.

ಬಿಜೆಪಿ ರಾಜ್ಯ ಕೋರ್ ಕಮಿಟಿ ಸಭೆಯ ಕುರಿತು ಮಾಹಿತಿ ನೀಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಗೆಲುವು, ಕೆಲವು ಗೆಲ್ಲಲೇಬೇಕಾದ ಕ್ಷೇತ್ರಗಳಲ್ಲಿ ಸೋತ ಸಂಬಂಧ ಅವಲೋಕನ ಸಭೆಯು ಆಯಾ ಜಿಲ್ಲೆಗಳ ಪಕ್ಷಗಳ ಪ್ರಮುಖರ ಜೊತೆ ಶುಕ್ರವಾರ ಮತ್ತು ಶನಿವಾರ ನಡೆಯಲಿದೆ ಎಂದರು.

224 ಕ್ಷೇತ್ರಗಳಲ್ಲಿ ಸಂಘಟನೆ ಬಲಪಡಿಸುವುದು, ಜಿಪಂ, ತಾಪಂ ಚುನಾವಣೆಗೆ ಕೆಳಹಂತದ ಸಿದ್ಧತೆ ನಡೆಸಲು ನಿರ್ಧರಿಸಲಾಗಿದೆ. ಸಹಕಾರಿ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿ ತಂಡ ರಚಿಸಿ ಅದರ ಮೇಲ್ವಿಚಾರಣೆ, ಮಾರ್ಗದರ್ಶನ ಸೇರಿ ಹಲವು ವಿಷಯಗಳ ಚರ್ಚೆ ನಡೆಸಿದ್ದೇವೆ ಎಂದು ವಿವರ ನೀಡಿದರು.

ಮೂಡಾ ಹಗರಣ ಸಂಬಂಧ ರಾಜೀನಾಮೆ ಅಥವಾ ಭಂಡತನದಿಂದ ಸಮರ್ಥನೆ ಮಾಡುತ್ತಿದ್ದಾರೆ. ಭೂಮಿ ಖರೀದಿ ಬಳಿಕ ಇವರ ಭಾಮೈದ ಜಿಪಿಎ ಮಾಡಿಕೊಂಡಿದ್ದು, ಅಲ್ಲಿಂದಲೇ ಅಪರಾಧ, ಅಲ್ಲಿಂದಲೇ ಮೋಸ ನಡೆದಿದೆ. ವಾಲ್ಮೀಕಿ ನಿಗಮದ ಹಗರಣದಲ್ಲೂ ಎಂ.ಜಿ ರಸ್ತೆ ಶಾಖೆಗೆ ಹಣ ವರ್ಗಾಯಿಸುವ ಮೂಲಕ ಹಗರಣ ಶುರುವಾಗಿತ್ತು. ಅದೇ ಮಾದರಿಯಲ್ಲಿ ಯಾರದೋ ಆಸ್ತಿಯನ್ನು ಇನ್ಯಾರೋ ಜಿಪಿಎ ಮಾಡಿಸಿಕೊಳ್ಳುವ ಮೂಲಕ ಹಗರಣ ನಡೆದಿದೆ.

- ಸಿ.ಟಿ.ರವಿ ವಿಧಾನಪರಿಷತ್ ಸದಸ್ಯ

ಸೈಬರ್ ತಾಣ ಬೆದರಿಕೆಯಿಂದ ರಕ್ಷಣೆ

ಬೆಂಗಳೂರು: ಸಾಮಾಜಿಕ ಜಾಲತಾಣಗಳು ಮತ್ತು ಸೈಬರ್‌ತಾಣಗಳಲ್ಲಿ ನಿರಂತರವಾಗಿ ಹೆಚ್ಚುತ್ತಿರುವ ಬೆದರಿಕೆಗಳಿಂದ ರಕ್ಷಿಸಿಕೊಳ್ಳಲು ಶಿಕ್ಷಣದ ಮೂಲಕ ವಿದ್ಯಾರ್ಥಿಗಳ ಸಬಲೀಕರಣಕ್ಕೆ ಸರಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಮೆಟಾ ಕಂಪನಿಯೊಂದಿಗೆ 10 ಲಕ್ಷ ಮಕ್ಕಳಿಗಾಗಿ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಡಿಜಿಟಲ್ ನಾಗರಿಕ್ ಮತ್ತು ಎಆರ್ -ವಿಆರ್ ಕೌಶಲ್ಯ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಶಾಲಾ ಶಿಕ್ಷಣ, ಉನ್ನತ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳೊಂದಿಗೆ ಮಕ್ಕಳಿಗೆ ತರಬೇತಿ ನೀಡುವುದು ಮಾತ್ರವಲ್ಲದೆ ಅವರಲ್ಲಿ ಜಾಗರೂಕತೆ ಮತ್ತು ಜವಾಬ್ದಾರಿಯ ಮನಸ್ಥಿತಿಯನ್ನು ಹುಟ್ಟುಹಾಕಲಾಗುವುದು ಹಾಗೂ ಇದು ಮುಂದಿನ ಜೀವನದಲ್ಲಿ ಎಚ್ಚರಿಕೆಯ ಗಂಟೆಯಾಗಿ ಉಳಿಯುತ್ತದೆ ಎಂದು ಹೇಳಿದರು.

ಡಿಜಿಟಲ್ ಸುರಕ್ಷತಾ ಜ್ಞಾನ ಮತ್ತು ವರ್ಧಿತ ವಾಸ್ತವತೆ: ಕರ್ನಾಟಕ ಸರಕಾರ ಮತ್ತು ಮೆಟಾ ಕಂಪೆನಿ ಜಂಟಿಯಾಗಿ 2025ರ ವೇಳೆಗೆ ರಾಜ್ಯದ ಒಂದು ಲಕ್ಷ ಶಿಕ್ಷಕರು ಮತ್ತು 10 ಲಕ್ಷ ವಿದ್ಯಾರ್ಥಿಗಳನ್ನು ಡಿಜಿಟಲ್ ಸುರಕ್ಷತಾ ಜ್ಞಾನ ಮತ್ತು ವರ್ಧಿತ ವಾಸ್ತವ ಕೌಶಲ್ಯಗಳೊಂದಿಗೆ ಸಬಲೀಕರಣಗೊಳಿಸುವ ಮಹತ್ವಾಕಾಂಕ್ಷೆಯ ಪಯಣ ಪ್ರಾರಂಭಿಸಿದೆ. ರಾಜ್ಯದಾದ್ಯಂತ ವಿವಿಧ ಶಾಲೆ, ಪಿಯು ಕಾಲೇಜು ಮತ್ತು ವಿಶ್ವವಿದ್ಯಾಲಯಗಳ 18ರಿಂದ 24 ವರ್ಷದೊಳಗಿನ 10 ಲಕ್ಷ ವಿದ್ಯಾರ್ಥಿಗಳು ಡಿಜಿಟಲ್ ಜಾಗೃತಿ ತರಬೇತಿ ಪಡೆಯಲಿದ್ದು, 100 ಕಾಲೇಜು ಮತ್ತು ವಿಶ್ವವಿದ್ಯಾಲಯಗಳನ್ನು

ಅರ್ಜಿ ಆಹ್ವಾನ

ಬೆಂಗಳೂರು: ವಿದ್ಯಾಪೋಷಕರ ಸಂಘದ ವತಿಯಿಂದ 2024ನೇ ಸಾಲಿನಲ್ಲಿ ಎಸ್ ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಸಾರ್ವಜನಿಕ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದ ಆರ್ಥಿಕವಾಗಿ ದುರ್ಬಲರಾದ, ಒಕ್ಕಲಿಗ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಬೆಂ.ಉತ್ತರ ಜಿಲ್ಲೆ, ಬೆಂ. ಗ್ರಾಮಾಂತರ ಜಿಲ್ಲೆ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಅರ್ಹ ವಿದ್ಯಾರ್ಥಿಗಳು, ಜಾತಿ, ವರಮಾನ, ಆಧಾರ್ ಮತ್ತು ದೃಢೀಕೃತ ಅಂಕಪಟ್ಟಿಯ ನಕಲು, ಮೊಬೈಲ್ ಸಂಖ್ಯೆಯ ವಿವರಗಳೊಂದಿಗೆ ಅಂಚೆ ಮೂಲಕ ಅಧ್ಯಕ್ಷರು, ವಿದ್ಯಾಪೋಷಕರ ಸಂಘ, ನಂ.12, ಇಂಚರ, 2ನೇ ಮುಖ್ಯ ರಸ್ತೆ, ಸುರಭಿ ಬಡಾವಣೆ, ಯಲಹಂಕ, ಬೆಂಗಳೂರು-560064' ಈ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಮಾಹಿತಿಗಾಗಿ 9008891539 ಪ್ರಕಟಣೆ ತಿಳಿಸಿದೆ.

ಭ್ರಷ್ಟಾಚಾರರಹಿತ ಸಮಾಜಕ್ಕೆ ಯುವಕರು ಒಗ್ಗೂಡಿ

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಸಲಹೆ

ಯಲಹಂಕದಲ್ಲಿ ಡಾ. ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪ್ರಥಮ ದರ್ಜೆ ಕಾಲೇಜಿನ ರಜತ ಮಹೋತ್ಸವ ಸಮಾರಂಭವನ್ನು ನಿವೃತ್ತ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಉದ್ಘಾಟಿಸಿದರು. ಈ ವೇಳೆ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾದ್ಯಾಲಯದ ಪ್ರಾಂಶುಪಾಲ ಡಾ. ಎಚ್.ಸಿ. ನಾಗರಾಜ್, ನಿಟ್ಟೆ ಶಿಕ್ಷಣ ಸಂಸ್ಥೆಯ ಅಕೆಡುಕ್ ನಿರ್ದೇಶಕ ಡಾ. ಸಂದೀಪ್ ಶಾಸ್ತ್ರಿ, ನಿಟ್ಟೆ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್‌ನ ನಿರ್ದೇಶಕ ಡಾ. ಎಂ. ವೇಣುಗೋಪಾಲ್ ಇದ್ದರು.

ಬೆಂಗಳೂರು: ದೇಶದ ಎಲ್ಲ ಸಮಸ್ಯೆಗಳಿಗೆ ಆಡಳಿತ ನಡೆಸುವ ಕೆಲವರ ಅತಿ ದುರಾಸೆ, ಅಧಿಕ ಹಣ ಗಳಿಸುವ ಹಂಬಲ ಹಾಗೂ ಭ್ರಷ್ಟ ಮನಸ್ಸುಗಳೇ ಕಾರಣವಾಗಿದ್ದು, ದೇಶ ಸುಸ್ಥಿತಿಯಲ್ಲಿ ಉಳಿಯಬೇಕಾದರೆ ನಮ್ಮ ಯುವ ಜನಾಂಗ ದೃಢ ಮನಸ್ಸಿನಿಂದ ಭ್ರಷ್ಟಾಚಾರ ರಹಿತ ಸಮಾಜವನ್ನು ಮತ್ತು ಸುವ್ಯವಸ್ಥಿತ ಆಡಳಿತ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ದೇಶದ ಹಿತಕ್ಕಾಗಿ ಒಗ್ಗೂಡಬೇಕು ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಸಲಹೆ ನೀಡಿದ್ದಾರೆ. ಯಲಹಂಕದಲ್ಲಿ ನಿಟ್ಟೆ ಶಂಕರ ಅಡ್ಯಂತಾಯ ಸ್ಮಾರಕ ಪ್ರಥಮ ದರ್ಜೆ ಕಾಲೇಜಿನ ರಜತ ಮಹೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೊದಲು ಮಾನವನಾಗು ಎಂಬ ವೇದವಾಕ್ಯ ನಮ್ಮ ಯುವಜನರಿಗೆ ನಿತ್ಯಮಂತ್ರವಾಗಬೇಕು. ಹುಟ್ಟಿನ ತರುವಾಯ ಮಾನವೀಯತೆ ಅಳವಡಿಸಿ ಕೊಂಡು ವ್ಯಕ್ತಿತ್ವ ರೂಪಿಸಿಕೊಂಡರೆ, ಅದಕ್ಕಿಂತ ಶ್ರೇಷ್ಠವಾದ ದೈವಾರಾಧನೆ ಮತ್ತೊಂದಿಲ್ಲ. ಅಲ್ಲದೆ ನಾವು ನಮ್ಮ ಬದುಕಿನ ಕಾಲಘಟ್ಟವೊಂದರಲ್ಲಿ ನಮಗೆ ಲಭ್ಯವಾಗಿರುವ ಸವಲತ್ತುಗಳ ಬಗ್ಗೆ ಸಂತೃಪ್ತಿ ಪಡುವ ಧೋರಣೆಯನ್ನು ಬೆಳೆಸಿಕೊಳ್ಳಬೇಕು. ಇನ್ನೂ ಬೇಕು ಎನ್ನುವ ಅತೃಪ್ತಿ ನಮ್ಮ ನೆಮ್ಮದಿಯ ನಿದ್ರೆಯನ್ನು ಹಾಳುಮಾಡುತ್ತದೆ, ಸದಾ ಭಯ ಹಾಗೂ ಆತಂಕಗಳ ನೆರಳಿನಲ್ಲಿ ನರಳುವ ಹಾಗೆ ಮಾಡುತ್ತದೆ ಎಂದು ವಿಶ್ಲೇಷಿಸಿದರು.

ಝೀಕಾ ಬಗ್ಗೆಯೂ ಮುನ್ನೆಚ್ಚರಿಕೆ ವಹಿಸಿ

ರಾಜ್ಯದ ಎಲ್ಲ ಜಿಲ್ಲಾಧಿಕಾರಿ, ಸಿಇಒಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ

ಬೆಂಗಳೂರು: ಡೆಂಘೀ ನಿಯಂತ್ರಣ ಕ್ರಮಗಳೊಂದಿಗೆ ಝೀಕಾ ವೈರಸ್ ಬಗ್ಗೆಯೂ ಅಲರ್ಟ್ ಆಗಿರುವಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ರಾಜ್ಯದ ಎಲ್ಲ ಡಿಸಿ, ಸಿಇಒ ಅವರಿಗೆ ಸೂಚನೆ ನೀಡಿದ್ದಾರೆ.

ಬೆಂಗಳೂರಿನಲ್ಲಿ ಡಿ.ಸಿ, ಸಿಇಒ ಹಾಗೂ ಸ್ಥಳೀಯ ಪಾಲಿಕೆಯ ಅಧಿಕಾರಿಗಳೊಂದಿಗೆ ನಡೆದ ವಿಡಿಯೊ ಕಾನ್ಫರೆನ್ಸ್‌ನಲ್ಲಿ, ಡೆಂಘೀ ಹಾಟ್ ಸ್ಪಾಟ್‌ಗಳನ್ನು ಪತ್ತೆ ಹಚ್ಚಿ ಎಲ್ಲಿ ಹೆಚ್ಚು ಡೆಂಘೀ ಪ್ರಕರಣಗಳು ಕಂಡು ಬರುತ್ತವೆಯೋ ಅಲ್ಲಿ ಫೀವರ್ ಕ್ಲಿನಿಕ್ ತೆರೆಯಬೇಕು. ಇಂತಹ ಪ್ರದೇಶಗಳಲ್ಲಿ ಯಾರಿಗೆ ಜ್ವರ ಕಂಡುಬಂದರು, ಕಡ್ಡಾಯವಾಗಿ ಡೆಂಘೀ ಟೆಸ್ಟಿಂಗ್‌ಗೆ ಒಳಪಡಿಸಬೇಕು ಎಂದು ಸೂಚನೆ ನೀಡಿದರು.

ಜನರಿಗೆ ಜಾಗೃತಿ ಮೂಡಿಸಲು ಜಿಲ್ಲಾಡಳಿತ ಮುಂದಾಗಬೇಕು. ಮನೆ ಮನೆಗೆ ಆಶಾ ಕಾರ್ಯಕರ್ತರ ಭೇಟಿ, ಮೆಡಿಕಲ್ ಆಫಿಸರ್ಸ್ ಸ್ಕೂಲ್‌ಗಳಿಗೆ ಭೇಟಿ ನೀಡಿ ವಿಜ್ಞಾನ ಶಿಕ್ಷಕರ ಮೂಲಕ ಮಕ್ಕಳಲ್ಲಿ ಡೆಂಘೀ ಕುರಿತು ತಿಳಿಹೇಳಬೇಕು. ಪ್ರಮುಖವಾಗಿ ಲಾರ್ವಾ ಉತ್ಪತ್ತಿ ಕಂಡುಬಂದಲ್ಲಿ, ಅದನ್ನ ನಾಶ ಪಡಿಸುವ ಕೆಲಸ ಆದ್ಯತೆಯ ಮೇಲೆ ಕೈಗೊಳ್ಳಿ ಎಂದು ಸಿಇಒ ಹಾಗೂ ಸ್ಥಳೀಯ ಸಂಸ್ಥೆಯ ಅಧಿಕಾರಿಗಳಿಗೆ ಆರೋಗ್ಯ ಸಚಿವರು ಸೂಚನೆ ನೀಡಿದರು.

ಜಿಲ್ಲಾವಾರು ಡೆಂಘೀ ಕೇಸ್ ಪ್ರಕಟಿಸಬೇಕು, ಶಿಕ್ಷಣ ಇಲಾಖೆ ಸೇರಿ ಎಲ್ಲಾ ಇಲಾಖೆಯವರು ವಾರಕ್ಕೆ ಒಂದು ದಿನ ಕೆಲಸ ಮಾಡಬೇಕು. ಪ್ರತಿಯೊಬ್ಬ ಅಧಿಕಾರಿ 1 ಗಂಟೆ ಕಾಲವಾದರು ಡೆಂಘೀ ನಿವಾರಣೆಗೆ ಮೀಸಲಿಡಲು ಜಿಲ್ಲಾ ಮಟ್ಟದ ಅಧಿಕಾರಿಗಳು ಮುಂದಾಗಬೇಕು. ಡೆಂಘೀ ಟೆಸ್ಟ್‌ಗೆ ನಿಗದಿ ಮಾಡಿರುವ ದರವನ್ನ ಕಡ್ಡಾಯವಾಗಿ ಪಾಲಿಸಲು ಕ್ರಮ ವಹಿಸುವಂತೆಯೂ ಅಧಿಕಾರಿಗಳಿಗೆ ಸೂಚಿಸಿದರು.

ಈಡಿಸ್ ಸೊಳ್ಳೆಯಿಂದಲೇ ಝೀಕಾ ವೈರಸ್ ಕೂಡ ಕಂಡು ಬರುತ್ತದೆ. ಪಕ್ಕದ ರಾಜ್ಯದಲ್ಲಿ ಝೀಕಾ ವೈರಸ್ ಕಂಡುಬಂದಿರುವುದರಿಂದ ರಾಜ್ಯದಲ್ಲೂ ಎಚ್ಚರಿಕೆ ವಹಿಸುವುದು ಅಗತ್ಯವಾಗಿದೆ. ಶಿವಮೊಗ್ಗದಲ್ಲಿ ಒಂದು ಶಂಕಿತ ಝೀಕಾ ಕೇಸ್ ಪತ್ತೆಯಾಗಿದೆ. ಝೀಕಾ ಅಷ್ಟೇನು ಅಪಾಯಕಾರಿ ಅಲ್ಲದಿದ್ದರೂ ಎಚ್ಚರದಿಂದ ಇರಬೇಕು.

- ದಿನೇಶ್ ಗುಂಡೂರಾವ್ ಆರೋಗ್ಯ ಸಚಿವ

ಸಮಾಚಾರ ಸಣ್ಣದಲ್ಲ

ಮಣ್ಣು ಕುಸಿತದಿಂದ ಸಾವು: 4 ಲಕ್ಷ ಪರಿಹಾರ

ಮಂಗಳೂರು: ಬುಧವಾರ ನಗರದಲ್ಲಿ ನಿರ್ಮಾಣ ಹಂತದ ಕಟ್ಟಡದಲ್ಲಿ ಮಣ್ಣು ಕುಸಿದು ಸಾವನ್ನಪ್ಪಿದ ಕಾರ್ಮಿಕ ಚಂದನ್ ಕುಮಾರ್ ಕುಟುಂಬಕ್ಕೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಎರಡು ಲಕ್ಷ ರೂಪಾಯಿ ಪರಿಹಾರ ಮಂಜೂರು ಮಾಡಿದೆ.ಜಿಲ್ಲಾಡಳಿತ ಮುತುವರ್ಜಿಯಿಂದ ಗುರುವಾರವೇ ಮಂಡಳಿಯು ಮೃತ ಕಾರ್ಮಿಕರ ಪತ್ನಿ ಕಿರಣ ದೇವಿ ಅವರಿಗೆ ಎರಡು ಲಕ್ಷ ರು. ಚೆಕ್ ಕಳುಹಿಸಿದೆ.ಇದರೊಂದಿಗೆ ಕಟ್ಟಡ ನಿರ್ಮಾಣದ ಗುತ್ತಿಗೆದಾರರೂ ಎರಡು ಲಕ್ಷ ರು. ಪರಿಹಾರವನ್ನು ನೀಡಿದ್ದಾರೆ. ಇದಲ್ಲದೇ, ಕಾರ್ಮಿಕ ಪರಿಹಾರ ಕಾಯಿದೆಯಡಿಯಲ್ಲಿಯೂ ಮೃತ ಕಾರ್ಮಿಕರ ಕುಟುಂಬಕ್ಕೆ ವಿಮಾ ಮೊತ್ತ ದೊರಕಲಿದೆ ಎಂದು ಕಾರ್ಮಿಕ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸರಿಗೆ ಮಚ್ಚೇಟು ರೌಡಿಗೆ ಗುಂಡೇಟು

ಕೋಲಾರ: ಆರೋಪಿ ಬಂಧನಕ್ಕೆ ತೆರಳಿದ್ದ ವೇಳೆ ಪೊಲೀಸ್ ಪೇದೆಯ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿದ ರೌಡಿಶೀಟರ್ ಕಾಲಿಗೆ ಕೆಜಿಎಫ್‌ನ ಆಂಡರ್ಸನ್ ಪೇಟೆ ಪೊಲೀಸರು ಗುಂಡೇಟು ಹೊಡೆದಿದ್ದಾರೆ. ಕೆಜಿಎಫ್ ರೌಡಿಶೀಟರ್ ಸ್ಟಾಲಿನ್ ಗಾಯಾಳು. ಕೊಲೆ,ಸುಲಿಗೆ ಸೇರಿದಂತೆ ಹಲವಾರು ಪ್ರಕರಣಗಳಲ್ಲಿ ಪೊಲೀಸರಿಗೆ ಬೇಕಾಗಿದ್ದ ಆರೋಪಿಯನ್ನು ಬಂಧಿಸಲು ಹೋಗಿದ್ದಾಗ ಕಾನ್‌ಸ್ಟೇಬಲ್ ಸುನೀಲ್‌ಗೆ ಮಚ್ಚಿನಿಂದ ಹಾಕಿದ್ದು ಅಂತಿಮವಾಗಿ ಪೊಲೀಸರು ಆರೋಪಿ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದಾರೆ. ಕೆಜಿಎಫ್ ಸರಕಾರಿ ಆಸ್ಪತ್ರೆ ಯಲ್ಲಿ ಆರೋಪಿಗೆ ಚಿಕಿತ್ಸೆ ನೀಡಿದ ನಂತರ ಕೋಲಾರದ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಕೆಜಿಎಫ್ ಡಿವೈಎಸ್ಪಿ ಪಾಂಡುರಂಗ ಕೋಲಾರದ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಾಜ್ಯದಲ್ಲಿ ಸಬ್ ರಿಜಿಸ್ಟ್ರಾರ್ ಕಚೇರಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಪಾರದರ್ಶಕತೆಗೆ ಕ್ರಮ

ಸಬ್‌ರಿಜಿಸ್ಟ್ರಾರ್ ವರ್ಗಾವಣೆಗೆ ಕೌನ್ಸೆಲಿಂಗ್: ಸಂಪುಟ ತೀರ್ಮಾನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಬ್ ರಿಜಿಸ್ಟ್ರಾರ್ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯ ವಿವಿಧ ಹುದ್ದೆಗಳ ವರ್ಗಾವಣೆಯಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡುವ ಮಹತ್ವದ ತೀರ್ಮಾನವನ್ನು ರಾಜ್ಯ ಸರಕಾರ ತೆಗೆದುಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ. ಉಪ ನೋಂದಣಾಧಿಕಾರಿಗಳು ಹಾಗೂ ಹಿರಿಯ ನೋಂದಣಾಧಿಕಾರಿಗಳು ಮತ್ತು ಪ್ರಥಮ ದರ್ಜೆ ಸಹಾಯಕರ ವರ್ಗಾವಣೆಗಳನ್ನು ಕೌನ್ಸೆಲಿಂಗ್ ಮೂಲಕ ಮಾಡಲು ರಾಜ್ಯ ಸರಕಾರ ತೀರ್ಮಾನಿಸಿದೆ. ಕೆಲ ಸಬ್‌ರಿಜಿಸ್ಟ್ರಾರ್‌ಗಳು ಸ್ಥಳೀಯವಾಗಿ ಪ್ರಭಾವಿಗಳಾಗಿರುವುದರಿಂದ ವರ್ಗಾವಣೆಗೆ ಭಾರಿ ಒತ್ತಡವಿತ್ತು. ರಾಜ್ಯದಲ್ಲಿ ಒಟ್ಟು 257 ಉಪ ನೋಂದಣಾಧಿಕಾರಿಗಳ ಕಚೇರಿಗಳಿವೆ, ಅವುಗಳಲ್ಲಿ 51 ಕಚೇರಿಗಳು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿವೆ. ಇದೀಗ ಈ ಎಲ್ಲರ ವರ್ಗಾವಣೆಗೆ ಕೌನ್ಸೆಲಿಂಗ್ ನಡೆಸಲು ತೀರ್ಮಾನಿಸಲಾಗಿದೆ. ಕಳೆದ 8 ವರ್ಷಗಳಲ್ಲಿ 5 ವರ್ಷ ಬೆಂಗಳೂರು ಸುತ್ತಮುತ್ತದ ಕಚೇರಿ ವ್ಯಾಪ್ತಿಗಳಲ್ಲಿ ಸೇವೆ ಸಲ್ಲಿಸಿರುವ ಮತ್ತು ಬಿಎಮ್‌ಆರ್‌ಡಿಎ ವ್ಯಾಪ್ತಿಯ ಹೊರಗೆ 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯ ತಾಲೂಕುಗಳಲ್ಲಿ ಕಳೆದ 5 ವರ್ಷಗಳಲ್ಲಿ 4 ಅಥವಾ ಹೆಚ್ಚು ವರ್ಷಗಳ ಸೇವೆ ಸಲ್ಲಿಸಿರುವ ಉಪ ನೋಂದಣಾಧಿಕಾರಿಗಳು, ಹಿರಿಯ ಉಪ ನೋಂದಣಾಧಿಕಾರಿಗಳು, ಕೇಂದ್ರ ಕಚೇರಿ ಸಹಾಯಕರು ಮತ್ತು ಪ್ರಥಮ ದರ್ಜೆ ಸಹಾಯಕರ ವರ್ಗಾವಣೆಗಳನ್ನು ಕೌನ್ಸೆಲಿಂಗ್ ಮೂಲಕವೇ ವರ್ಗಾವಣೆ ಮಾಡಲು ಸಚಿವ ಸಂಪುಟ ನಿರ್ಧರಿಸಿದೆ.

ಪಿಡಿಒ ವರ್ಗಾವಣೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವ್ಯಾಪ್ತಿಯಲ್ಲಿ ಬರುವ ಹಿರಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ ಗ್ರೇಡ್-1 ಮತ್ತು ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ನಡೆಸಲು ಸರಕಾರ ಉದ್ದೇಶಿಸಿದೆ. ಈ ಕಾರಣಕ್ಕೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ನಿಯಂತ್ರಣ) ನಿಯಮಗಳು, 2024ಕ್ಕೆ ಸಂಪುಟ ಸಭೆ ಅನುಮೋದನೆ ನೀಡಿದೆ. ಕರಡು ನಿಯಮಗಳನ್ನು ಪ್ರಕಟಿಸಿ ಬಾಧಿತರಾಗುವವರಿಂದ ಆಕ್ಷೇಪಣೆ, ಸಲಹೆಗಳನ್ನು ಆಹ್ವಾನಿಸಲಾಗುತ್ತದೆ. ಬಳಿಕ ಕಾನೂನು ಜಾರಿಗೊಳಿಸಿ ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ಒಪ್ಪಿಗೆ ನೀಡಲಾಗಿದೆ.

ಸಂಪುಟ ಸಭೆ ಬಳಿಕ ಮಾತನಾಡಿದ ಎಚ್.ಕೆ. ಪಾಟೀಲ್, ಭಕ್ತವತ್ಸಲ ಸಮಿತಿ ಶಿಫಾರಸಿನಂತೆ ಎಲ್ಲಾ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ರಾಜ್ಯ ಚುನಾವಣಾ ಆಯೋಗವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ನಿಯಂತ್ರಣಕ್ಕೆ ತರುವ ಪ್ರಸ್ತಾವಯನ್ನು ಹಿಂಪಡೆಯಲಾಗಿದ್ದು, ಡಿಪಿಎಆರ್ ಕೋರಿಕೆ ಹಿನ್ನೆಲೆಯಲ್ಲಿ ಈ ಮೊದಲಿದ್ದ ವ್ಯವಸ್ಥೆಯನ್ನು ಅಂದರೆ ನಗರಾಭಿವೃದ್ಧಿ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ನಿಯಂತ್ರಣದಲ್ಲಿ ಈಗಿರುವ ವ್ಯವಸ್ಥೆಯನ್ನೇ ಮುಂದುವರೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಬಡ್ತಿಗಾಗಿ ಅವಧಿ ಕಡಿತ

ಅರಣ್ಯ ಇಲಾಖೆಯ ವೃಂದ ಮತ್ತು ನೇಮಕ ನಿಯಮಗಳಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದಿಂದ ಉಪ ಅರಣ್ಯ ಸಂರಕ್ಷಣಾಧಿಕಾರಿ ವೃಂದಕ್ಕೆ ಮುಂಬಡ್ತಿ ನೀಡಲು ನಿಗದಿಪಡಿಸಿರುವ ಅರ್ಹತಾ ಸೇವೆಯನ್ನು ಒಂದು ಬಾರಿಗೆ ಸೀಮಿತಗೊಳಿಸಿ, 5 ವರ್ಷಗಳಿಂದ 3 ವರ್ಷಗಳಿಗೆ ಇಳಿಕೆ ಮಾಡಲು ಸಂಪುಟ ಒಪ್ಪಿಗೆ ನೀಡಿದೆ.

840 ಬಸ್ ಖರೀದಿಗೆ ಒಪ್ಪಿಗೆ

ಬಿಎಂಟಿಸಿ 840 ಬಿಎಸ್-6 ಡೀಸೆಲ್ ಬಸ್ಸುಗಳಿಗೆ ಉಂಟಾಗುವ ಹೆಚ್ಚುವರಿ ವೆಚ್ಚವನ್ನು ಭರಿಸಿ ಖರೀದಿಸಲು ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಪ್ರತಿ ಬಸ್ಸಿನ ದರ 43.35 ಲಕ್ಷಗಳಾಗಿದ್ದು, ಪ್ರಸ್ತಾಪಿತ 820 ಲೇಲ್ಯಾಂಡ್ ಬಸ್ಸುಗಳ ಖರೀದಿ 355.47 ಕೋಟಿ ಮತ್ತು 20 ಟಾಟಾ ಬಸ್ಸುಗಳ ಖರೀದಿಗೆ ಪ್ರತಿ ಬಸ್ಸಿಗೆ 41.72 ಲಕ್ಷ ರು.ನಂತೆ ಒಟ್ಟು 8.35 ಕೋಟಿ ರು.ಗೆ ಅನುಮೋದನೆ ನೀಡಲಾಗಿದೆ.

- 563 ನಮ್ಮ ಕ್ಲಿನಿಕ್‌ಗಳಿಗೆ ಪ್ರಯೋಗಾಲಯಗಳನ್ನು ಅಗತ್ಯವಿರುವ ಸಾಮಗ್ರಿಗಳನ್ನು 29.64 ಕೋಟಿ ರು. ಹಾಗೂ 24.02 ಕೋಟಿ ರು. ಮೊತ್ತದ ಔಷಧಿಗಳನ್ನು ಖರೀದಿಗೆ ಒಪ್ಪಿಗೆ.
- ಗಣಿಬಾಧಿತ ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಸಮಗ್ರ ಪರಿಸರ ಯೋಜನೆ ಅನುಷ್ಠಾನಗೊಳಿಸಲು 3431.86 ಕೋಟಿ ಅನುದಾನ.
- ಒಳನಾಡು ಕೆರೆ, ಜಲಾಶಯಗಳ ಮೀನುಸಾಕಣೆಗೆ ಹಕ್ಕಿನ ಗುತ್ತಿಗೆ ಅವಧಿಯನ್ನು 2023-24ನೇ ಸಾಲಿಗೆ ನವೀಕರಿಸಿಕೊಂಡಿರುವ ಗುತ್ತಿಗೆದಾರರಿಗೆ ಪಾವತಿ ಸಹಿತವಾಗಿ ಮತ್ತೊಂದು ವರ್ಷ ಗುತ್ತಿಗೆ ಅವಧಿ ವಿಸ್ತರಿಸಲು ಒಪ್ಪಿಗೆ.
- ಐದನೇ ಆಯೋಗದ ಸಾಧಕ-ಬಾಧಕಗಳನ್ನು ಅರಿಯಲು ಕಾಲಾವಧಿ ವಿಸ್ತರಣೆ
- ಕೆಇಎ ಪ್ರಸ್ತುತ ಇರುವ ಕಟ್ಟಡದ ಮೇಲ್ದರ್ಜೆಗೇರಿಸುವ ಕಾಮಗಾರಿ, ಹೆಚ್ಚುವರಿ ಕಟ್ಟಡದ ನಿರ್ಮಾಣ ಕಾಮಗಾರಿಗೆ 30 ಕೋಟಿ ಅನುದಾನ.
- ಲೋಕಾಯುಕ್ತ ಸಂಸ್ಥೆಯ ಉಪ ನಿಬಂಧಕರು ಹಾಗೂ ಸಹಾಯಕ ನಿಬಂಧಕರು ಹುದ್ದೆಗಳ ನೇಮಕಕ್ಕೆ ಪ್ರಸ್ತಾವಿತ ಹೆಸರುಗಳಿಗೆ ಅನುಮತಿ.
- ದೆಹಲಿಯ ಕರ್ನಾಟಕ ಭವನದಲ್ಲಿ ಐವರು ಐಎಎಸ್ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಇಬ್ಬರಿಗೆ ಮಾತ್ರ ಅವಕಾಶ
- ಬಿಬಿಎಂಪಿಯಲ್ಲಿ ನಡೆದ ಅಗ್ನಿ ಅವಘಡದಲ್ಲಿ ನಿಧನರಾದ ಅಧೀಕ್ಷಕ ಅಭಿಯಂತರರು ಹಾಗೂ ಪ್ರಭಾರ ಮುಖ್ಯ ಅಭಿಯಂತರ ಸಿ.ಎಂ. ಶಿವಕುಮಾರ್ ಕುಟುಂಬಕ್ಕೆ 50 ಲಕ್ಷ ಪರಿಹಾರ, ತೀವ್ರ ಗಾಯಗೊಂಡ ಉಳಿದವರಿಗೆ ಪರಿಹಾರ ಧನಕ್ಕೆ ಒಪ್ಪಿಗೆ.

ಇಂದಿರಾ ಕ್ಯಾಂಟೀನ್ ಸಾಮಗ್ರಿ ಖರೀದಿಗೆ ಒಪ್ಪಿಗೆ

ರಾಜ್ಯದ ಎಲ್ಲಾ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ ಹೊಸ ಮೆನುವಿನಂತೆ ಪ್ರಾದೇಶಿಕ ಪದ್ಧತಿಗೆ ಅನುಗುಣವಾಗಿ ಅಡುಗೆ ಸಲಕರಣೆ ಸಾಮಗ್ರಿಗಳ ಖರೀದಿಗೆ 84.58 ಕೋಟಿ ರು. ನೀಡಲು ಒಪ್ಪಿಗೆ ನೀಡಲಾಗಿದೆ. ಇಂದಿರಾ ಕ್ಯಾಂಟೀನ್ ಹಂತ-1 ರಡಿ 123 ಕಿಚನ್ ಕಂ ಕ್ಯಾಂಟೀನ್ ಹಾಗೂ 15 ಮಾಸ್ಟರ್ ಅಡುಗೆ ಕೋಣೆ ಒಟ್ಟು 138 ಇಂದಿರಾ ಕ್ಯಾಂಟೀನ್ ಗಳಿಗೆ ಹೊಸ ಮೆನುವಿನಂತೆ ಕಾರ್ಯನಿರ್ವಹಿಸುತ್ತಿರುವ ಕ್ಯಾಂಟೀನ್‌ಗಳಿಗೆ ಹೆಚ್ಚುವರಿ 7 ಅಡುಗೆ ಸಲಕರಣೆ ಸಾಮಗ್ರಿಗಳನ್ನು ಅಳವಡಿಸಲು 14.58 ಕೋಟಿ ರು. ಅನುದಾನ ಒದಗಿಸಲಾಗುತ್ತದೆ. ಇಂದಿರಾ ಕ್ಯಾಂಟೀನ್ ಹಂತ-2 ರಡಿ 165 ಕಿಚನ್ ಕಂ ಕ್ಯಾಂಟೀನ್ ಹಾಗೂ 21 ಕ್ಯಾಂಟೀನ್‌ಗಳಿಗೆ ಒಟ್ಟು 69.99 ಕೋಟಿ ಅನುದಾನ ನೀಡಲಾಗಿದೆ.

2 ಸಾವಿರ ಕೋಟಿ ಕಾಮಗಾರಿ

ರಾಜ್ಯದ 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಲ್ಲಿ ಎರಡು ಸಾವಿರ ಕೋಟಿ ರು. ಅಂದಾಜು ಮೊತ್ತದಲ್ಲಿ ಅನುಷ್ಠಾನಗೊಳಿಸಲು ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ಸಚಿವ ಸಂಪುಟ ಸಭೆ ಬಳಿಕ ಮಾತನಾಡಿದ ಅವರು, ಉತ್ತಮ ಗುಣಮಟ್ಟ ಹಾಗೂ ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳಿಸು ಅನುಷ್ಠಾನ ವೇಳಾಪಟ್ಟಿ ಅಂತಿಮಗೊಳಿಸುವುದು. ಸರಕಾರದ ಮಟ್ಟದಲ್ಲಿ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಮಹಾನಗರ ಪಾಲಿಕೆಗಳ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಲಾಗುವುದು. ಯೋಜನಾ ಅಂದಾಜಿನಲ್ಲಿ ರಾಜ್ಯ ಸರಕಾರದ ಪಾಲಿನ ಶೇ.7.5 ರಷ್ಟು ಮೊತ್ತ ಅಂದರೆ 150 ಕೋಟಿ, ಮಹಾನಗರ ಪಾಲಿಕೆಯ ಸ್ವಂತ ಸಂಪನ್ಮೂಲದಿಂದ ಶೇ.7.5 ರಷ್ಟು ಮೊತ್ತ ಹಾಗೂ ಯುಐಡಿಎಫ್‌ನಿಂದ ಸಾಲದ ರೂಪದಲ್ಲಿ ಶೇ.85 ರಷ್ಟು ಮೊತ್ತ (1700 ಕೋಟಿ ರೂ.) 2024-25ನೇ ಸಾಲಿನಿಂದ 2026-27ನೇ ಸಾಲಿನವರೆಗೆ ಮೂರು ವರ್ಷಗಳ ಅವಧಿಯಲ್ಲಿ ಪೌರಾಡಳಿತ ನಿರ್ದೇಶನಾಲಯದಿಂದ ರಾಜ್ಯಮಟ್ಟದಲ್ಲಿ ಟೆಂಡರ್ ಕರೆದು ಅನುಷ್ಠಾನಗೊಳಿಸಲಾಗುತ್ತದೆ.

ವಿಶ್ವವಿಜೇತರ ದರ್ಶನಕ್ಕೆ..

← ಮೊದಲಪುಟದಿಂದ

ನಾಯಕ ರೋಹಿತ್ ಶರ್ಮಾ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಜೊತೆ ವಿಶ್ವಕಪ್ ಹಿಡಿದು ಮೋದಿ ಫೋಟೋ ಗಳಿಗೆ ಪೋಸ್ ನೀಡಿದರು. ಬಳಿಕ ಮುಂಬೈಗೆ ತೆರಳಿದ ಭಾರತ ತಂಡಕ್ಕೆ ಭರ್ಜರಿ ಸ್ವಾಗತ ಕಾದಿತ್ತು.

ಸಂಜೆ ವೇಳೆಗೆ ನಾರಿಮನ್ ಪಾಯಿಂಟ್‌ನಿಂದ ಮರೈನ್ ಡ್ರೈವ್ ರಸ್ತೆಯಲ್ಲಿ ತೆರೆದ ಬಸ್‌ನಲ್ಲಿ ಸಾಗಿದ ಎರಡೂವರೆ ಕಿ.ಮೀ ಉದ್ದದ ಅಭೂತಪೂರ್ವ ರೋಡ್ ಶೋನಲ್ಲಿ ಲಕ್ಷಾಂತರ ಕ್ರೀಡಾಭಿಮಾನಿಗಳು ಪಾಲ್ಗೊಂಡು ರೋಹಿತ್ ಪಡೆಗೆ ಅಭಿನಂದನೆಗಳ ಸುರಿಮಳೆ ಸುರಿಸಿದರು. ಬಿಸಿಸಿಐ ಪದಾಧಿಕಾರಿಗಳು ಹಾಗೂ ಇತರ ಗಣ್ಯರು ಈ ಭವ್ಯ ಮೆರವಣಿಗೆಯಲ್ಲಿ ಪಾಲ್ಗೊಂಡರು. ರಸ್ತೆಯ ಇಕ್ಕೆಲಗಳಲ್ಲಿ ಜಮಾವಣೆಗೊಂಡ ಜನಸ್ತೋಮ ವಿಶ್ವಕಪ್ ವಿಜೇತರನ್ನು ಕಣ್ತುಂಬಿಕೊಂಡಿತು. ಈ ಬಳಿಕ ವಾಂಖೆಡೆಯಲ್ಲಿ ಬಿಸಿಸಿಐ ಘೋಷಿಸಿದ್ದ 125 ಕೋಟಿ ಬಹುಮಾನವನ್ನು ನೀಡಲಾಯಿತು.

ಸರಕಾರದ ವಿರುದ್ಧ ಹೋರಾಟಕ್ಕೆ ಸಜ್ಜಾಗಿ

← ಮೊದಲಪುಟದಿಂದ

ಈ ಸರಕಾರ ಎಷ್ಟು ದಿನವಿರಲಿದೆ ಎನ್ನುವುದು ಗೊತ್ತಿಲ್ಲ. ಬಿಜೆಪಿ ಮುಂದಿನ ದಿನಗಳಲ್ಲಿ ಹೋರಾಟವನ್ನು ಇನ್ನಷ್ಟು ಚುರುಕುಗೊಳಿಸಬೇಕು ಎಂದು ಹೇಳಿದರು.

ಜುಲೈ 15ರಂದು ಆರಂಭವಾಗಲಿರುವ ಅಧಿವೇಶನದಲ್ಲಿ ಸರಕಾರದ ಬಂಡವಾಳವನ್ನು ಬಯಲಿಗೆ ಎಳೆಯುತ್ತೇವೆ. ಸಿಎಂ ಹಿಂಬಾಲಕ ಆಪ್ತರ ಸಚಿವರು ನಾಲ್ಕು ಡಿಸಿಎಂ ಮಾಡಿ ಎಂದು ಓಡಾಡುತ್ತಿದ್ದರೆ, ಡಿ.ಕೆ.ಶಿವಕುಮಾರ್ ಬಣ ಮುಖ್ಯಮಂತ್ರಿ ಬದಲಾವಣೆಗೆ ಒತ್ತಾಯಿಸುತ್ತಿದೆ. ಇವರ ಬಡಿದಾಟದಲ್ಲಿ ಸರಕಾರ ಎಷ್ಟು ದಿನ ಇರುತ್ತದೆ ಎಂಬುದು ಗೊತ್ತಿಲ್ಲ ಎಂದು ಹೇಳಿದರು.

ಅಧಿಕಾರ ದರ್ಪದಿಂದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 15 ರಿಂದ 20 ಸ್ಥಾನ ಗೆಲ್ಲಲು ಹೊರಟಿತ್ತು. ಇವರ ದುರಾಡಳಿತ, ದಬ್ಬಾಳಿಕೆ ನಡುವೆ ನಾವು 19 ರಲ್ಲಿ ಗೆದ್ದಿದ್ದೇವೆ. ರಾಜ್ಯದಲ್ಲಿ ಕಾಂಗ್ರೆಸ್ ನ ಒಡೆದಾಡುವ ನೀತಿ, ತುಷ್ಟೀಕರ ನೀತಿಯನ್ನು ಧಿಕ್ಕರಿಸಿ ನಮಗೆ ಜನರು ಆಶೀರ್ವಾದ ಮಾಡಿದ್ದಾರೆ ಎಂದರು.

ಕಾರ್ಯಕಾರಿಣಿ ವೇದಿಕೆಯಲ್ಲಿ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಡಿ.ವಿ.ಸದಾನಂದ ಗೌಡ, ಮಾಜಿ ಅಧ್ಯಕ್ಷ ನಳೀನ್ ಕುಮಾರ್ ಕಟೀಲ್, ಪ್ರತಿಪಕ್ಷ ನಾಯಕ ಆರ್.ಅಶೋಕ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಮಾಜಿ ಸಚಿವ ಬಿ.ಶ್ರೀರಾಮುಲು, ಸಿ.ಟಿ.ರವಿ, ಸಂಸದ ಗೋವಿಂದ ಕಾರಜೋಳ ಅನೇಕರಿದ್ದರು.

ಕೌನ್ಸೆಲಿಂಗ್ ಮೂಲಕ ಪಿಡಿಒ ವರ್ಗಾವಣೆ: ಪ್ರಿಯಾಂಕ್ ಖರ್ಗೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಇಲಾಖೆಯ ಗ್ರಾಮ ಪಂಚಾಯತಿ ಅಧಿಕಾರಿಗಳು ಸೇರಿದಂತೆ ಹಲವು ನೌಕರರನ್ನು ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ಗುರುವಾರ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿ ತ್ವರಿತ ಸೇವಾ ಪೂರೈಕೆ, ಭ್ರಷ್ಟಾಚಾರ ನಿಯಂತ್ರಣ ಮತ್ತು ದಕ್ಷತೆಯನ್ನು ಹೆಚ್ಚಿಸಲು ಪ್ರಸಕ್ತ ವರ್ಷದಿಂದ ವರ್ಗಾ ವಣೆಗಳಿಗೆ ಅನ್ವಯಿಸುವಂತೆ ಕೌನ್ಸೆಲಿಂಗ್ ಪದ್ಧತಿಯನ್ನು ಜಾರಿಗೊಳಿಸಲಾಗುವುದು ಎಂದು 2024-25 ಆಯವ್ಯ ಯದಲ್ಲಿ ಘೋಷಿಸಲಾಗಿತ್ತು ಎಂದು ತಿಳಿಸಿರುವ ಸಚಿವರು ಅದರಂತೆ, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತ್ ಕಾರ್ಯದರ್ಶಿ ಮತ್ತು ಗ್ರಾಮೀ ಣಾಭಿವೃದ್ಧಿ ಸಹಾಯಕ (ಗ್ರೇಡ್-1 ಮತ್ತು ಗ್ರೇಡ್- 2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವರ್ಗಾವಣೆಗಳನ್ನು ಈ ವರ್ಷದಿಂದ ಕೌನ್ಸೆಲಿಂಗ್ ಮೂಲಕ ಮಾಡಲಾಗುವುದು ಎಂದು ಹೇಳಿದ್ದಾರೆ. ಈ ಸಂಬಂಧ ನಿಯಮಗಳನ್ನು ರೂಪಿಸಿದ ನಂತರ ವರ್ಗಾವಣೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು ಎಂದರು.

ರಾಜಕೀಯ ಪ್ರೇರಿತ ಆರೋಪ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಕುರಿತು ಬಿಜೆಪಿ ರಾಜಕೀಯ ಪ್ರೇರಿತ ಆರೋಪಗಳನ್ನು ಮಾಡುತ್ತಿದ್ದು, ಅಂಕಿಅಂಶಗಳ ಸಮೇತ ಆರೋಪಿಸುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ಆರ್‌ಎಸ್‌ಎಸ್ ಹೇಳಿದಂತೆ ನಡೆದುಕೊಳ್ಳುತ್ತಿದ್ದು, ಮುಡಾ 3.16 ಎಕರೆ ಜಮೀನಿನಲ್ಲಿ ನಿವೇಶನ ಗಳನ್ನು ಮಾಡಿ ಹಂಚಿದರೂ ಕೇಳಬಾರದೇ? ಹಾಗಿದ್ದಲ್ಲಿ ಜಮೀನಿನ ಮೌಲ್ಯ 60 ಕೋಟಿ ರು.ಗಳನ್ನು ನೀಡಲಿ. ಸಭೆಯಲ್ಲಿನ ಒಪ್ಪಿಗೆಯಂತೆ ನಿವೇಶನಗಳನ್ನು 50:50 ಅನುಪಾತದಲ್ಲಿ ಹಂಚಿಕೆಯಾಗಿದ್ದು, ಇಂಥ ಕಡೆಯೇ ನಿವೇಶನ ಕೊಡಿ ಎಂದು ನಾವು ಕೇಳಿಲ್ಲ ಎಂದು ತಿಳಿಸಿದ್ದಾರೆ.

ಇದು ರಾಜಕೀಯ ಪ್ರೇರಿತ ಆಪಾದನೆ. ನಿವೇಶನಗಳ ಹಂಚಿಕೆ 2021ರಲ್ಲಿ ಆಗಿದೆ. ಆಗ ಬಿಜೆಪಿ ಅಧಿಕಾರದಲ್ಲಿದ್ದು, ವಿಜಯನಗರ 3 ನೇ ಅಥವಾ 4 ನೇ ಹಂತದಲ್ಲಿ ಕೊಡಿ ಎಂದು ಕೇಳಲಿಲ್ಲ. ಆದರೂ ಪರ್ಯಾಯವಾಗಿ 50:50 ಅನುಪಾತದಲ್ಲಿ ಕೊಡಲು ಒಪ್ಪಿದಂತೆ ಕೊಡಿ ಎಂದು ಹೇಳಿದ್ದು, ಈಗ ಕಾನೂನುಬಾಹಿರ ಎಂದರೆ ಹೇಗೆ? ಇದು ರಾಜಕೀಯ ಪ್ರೇರಿತ ಆಪಾದನೆ ಎಂದರು.

ನಿವೇಶನ ತಪ್ಪು ಎಂದರೆ ಪರಿಹಾರ ನೀಡಲಿ

ಅಕ್ಟೋಬರ್ 2023 ರಲ್ಲಿ ಸಚಿವರು 50:50 ಅನುಪಾತದಲ್ಲಿ ಜಮೀನು ಕೊಡುವುದನ್ನು ರದ್ದು ಮಾಡಿ ಎಂದು ಸಚಿವರು ಬರೆಯದೇ ಹೋದರೇ, ಕಾನೂನಿನ ಪ್ರಕಾರ 62 ಕೋಟಿ ಪರಿಹಾರ ನೀಡಲಿ. ಒಂದು ಎಕರೆಗೆ 44 ಸಾವಿರ ಚದರ ಅಡಿಯಾದರೆ 38,264 ಚದರ ಅಡಿ ಹಂಚಿಕೆಯಾಗಿದ್ದು, ಇದು ಒಂದು ಎಕರೆಗಿಂತ ಕಡಿಮೆಯಾಗಿದೆ. ಅಲ್ಲದೇ ನಮಗೆ ನೀಡಿರುವ 14 ನಿವೇಶನಗಳ ಬೆಲೆ ಇದಕ್ಕಿಂ ತಲೂ ಕಡಿಮೆ ಇದ್ದು, ಪರಿಹಾರವಾಗಿ ನೀಡಿ ರುವ ಜಮೀನಿನ ಬೆಲೆ ತಿಳಿದಿಲ್ಲ ಎಂದು ತಿಳಿಸಿದ್ದಾರೆ.

ಭಾರತ್ ರೈಸ್ ಮಾರಾಟ ಸ್ಥಗಿತ

ಬೆಂಗಳೂರು: ಕೇಂದ್ರ ಸರಕಾರ ಆರಂಭಿಸಿದ್ದ ಮಹತ್ವಾಕಾಂಕ್ಷಿಯ ಭಾರತ್ ರೈಸ್ ಮಾರಾಟವನ್ನು ಜುಲೈ ತಿಂಗಳಿನಿಂದ ತಾತ್ಕಾಲಿಕವಾಗಿ ಸ್ಥಗಿತ ಮಾಡಲಾಗಿದೆ. ದೇಶದ ಎಲ್ಲಾ ಜನರಿಗೆ ಕಡಿಮೆ ಬೆಲೆಯಲ್ಲಿ ಅಕ್ಕಿ ವಿತರಿಸಲು ಕೇಂದ್ರ ಸರಕಾರ ಫೆಬ್ರವರಿಯಲ್ಲಿ ಭಾರತ್ ರೈಸ್ ಅಕ್ಕಿಯನ್ನು ಬಿಡುಗಡೆ ಮಾಡಿತ್ತು. ಈ ಯೋಜನೆಯಲ್ಲಿ 29 ರು.ಗೆ 1 ಕೆಜಿ ಅಕ್ಕಿ, 27.50 ರು.ಗೆ 1 ಕೆಜಿ ಗೋಧಿ ಹಿಟ್ಟು, 60 ರು.ಗೆ 1 ಕೆಜಿ ಕಡಲೆ ಬೇಳೆ ಮಾರಾಟ ಮಾಡಲಾಗುತ್ತಿತ್ತು. ಜನ ಸಂದಣಿ ಹೆಚ್ಚಿನ ಜಾಗಗಳಲ್ಲಿ ಮೊಬೈಲ್ ವ್ಯಾನ್ ಮೂಲಕ ಅಕ್ಕಿ, ಬೇಳೆಗಳನ್ನು ಗ್ರಾಹಕರಿಗೆ ನೀಡಲಾಗುತ್ತಿತ್ತು. ಜೂನ್ 10 ರವರೆಗೆ ಕೇಂದ್ರ ಸರಕಾರ ಆದೇಶದ ಅನ್ವಯ ದಾಸ್ತಾನುಗಳು ಮಾರಾಟವಾದ ನಂತರ ಪೂರೈಕೆಯನ್ನು ಸ್ಥಗಿತ ಮಾಡಲಾಗಿದೆ. ಬೆಲೆ ಏರಿಕೆ ಬಿಸಿಯಿಂದ ತತ್ತರಿಸಿದ್ದ ಜನಸಾಮಾನ್ಯರಿಗೆ ಅನುಕೂಲ ಕಲ್ಪಿಸಲು ಭಾರತ್ ಬ್ರ್ಯಾಂಡ್ ಅಕ್ಕಿ ಮಾರಾಟ ಆರಂಭಿಸುತ್ತಿದ್ದೇವೆ ಎಂದು ಕೇಂದ್ರ ಸರಕಾರ ತಿಳಿಸಿತ್ತು.

ಅಕ್ಕಿ ಬೆಲೆಯೂ ಏರಿಕೆ, ಗ್ರಾಹಕರಿಗೆ ಬರೆ

← ಮೊದಲಪುಟದಿಂದ

ಹೊಸ ಭತ್ತ 2500-2700 ರು.ಗಳಿಗೆ ಮಾರಾಟವಾಗುತ್ತಿದೆ. ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ ದೊರೆಯುವ ಸೋನಾ ಮಸೂರಿ ಅಕ್ಕಿಗೆ ದೇಶ-ವಿದೇಶಗಳಲ್ಲಿ ಭಾರಿ ಬೇಡಿಕೆ ಇದೆ. ಜಿಲ್ಲೆಯಲ್ಲಿ ಈ ಹಂಗಾಮಿನಲ್ಲಿ ತುಂಗಭದ್ರಾ ಹಾಗೂ ನಾರಾಯಣಪುರ ಜಲಾಶಯದಲ್ಲಿ ನೀರಿನ ಲಭ್ಯತೆ ಕಡಿಮೆ ಇತ್ತು. ಹೀಗಾಗಿ ಮುಂಗಾರು ಹಂಗಾಮಿನ ಮೊದಲ ಬೆಳೆಗೆ ರೈತರಿಗೆ ಸಮರ್ಪಕವಾಗಿ ನೀರು ದೊರೆತಿಲ್ಲ. ಕೆಲವು ರೈತರು ಕಾಲುವೆಯ ನೀರು, ಬೋರ್‌ವೆಲ್, ಕೆರೆಯ ನೀರಿನಿಂದ ಭತ್ತ ಬೆಳೆದಿದ್ದರೂ ನಿರೀಕ್ಷೆಯಂತೆ ಬೆಳೆ ಬಂದಿಲ್ಲ. ಎರಡನೇ ಬೆಳೆಯಲ್ಲಿ ಇಳುವರಿ ಕಡಿಮೆಯಾಗಿದ್ದು ಭತ್ತ ಹಾಗೂ ಅಕ್ಕಿ ಬೆಲೆ ಹೆಚ್ಚಳವಾಗಲು ಪ್ರಮುಖ ಕಾರಣವಾಗಿದೆ.

> ತರಕಾರಿ ಬೆಲೆ ಕೆಜಿಗೆ 100 ಗಡಿ ದಾಟಿದೆ. ಅಕ್ಕಿ ಬೆಲೆ ಕನಿಷ್ಠ 65 ರೂ. ಗರಿಷ್ಠ 80 ರೂ. ಆಗಿದೆ. ತೊಗರಿ ಬೇಳೆ 200ರ ಗಡಿ ದಾಟಿದೆ. ಈ ನಡುವೆ ಕೇಂದ್ರ ಸರಕಾರ ನೀಡುತ್ತಿದ್ದ ಭಾರತ್ ಅಕ್ಕಿಯ ಪೂರೈಕೆಯನ್ನು ಸ್ಥಗಿತಗೊಳಿಸಲಾಗಿದೆ. ಈ ಪರಿ ಬೆಲೆ ಏರಿದರೆ ನಮ್ಮಂಥ ಮಧ್ಯಮ ವರ್ಗದವರು ನಗರದಲ್ಲಿ ಜೀವನ ಸಾಗಿಸುವುದು ಬಾರಿ ಕಷ್ಟವಾಗುತ್ತಿದೆ.
> ಎಪಿಎಂಸಿ ಮಂಡಿ ಗುಮಸ್ತ **ಮನೋಹರ್.**

ರಾಯಚೂರು ಜಿಲ್ಲೆಯಲ್ಲಿ ಸೋನಾಮಸೂರಿ, ಆರ್‌ಎನ್‌ಆರ್ ಅಕ್ಕಿಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ಇಲ್ಲಿನ ಅಕ್ಕಿಗಿರಣಿಯಲ್ಲಿ ತಯಾರಾಗುವ ಅಕ್ಕಿಯನ್ನು ದಕ್ಷಿಣ ಭಾರತ, ಉತ್ತರ ಭಾರತ ರಾಜ್ಯಗಳಾದ ಮಹಾರಾಷ್ಟ್ರ, ತಮಿಳುನಾಡು, ಛತ್ತೀಸ್‌ಗಡ, ಗುಜರಾತ್, ಮಧ್ಯಪ್ರದೇಶ ಹಾಗೂ ವಿದೇಶಗಳಿಗೆ ರಫ್ತು ಮಾಡಲಾಗುತ್ತದೆ.

ಸದ್ಯ ಮಾರುಕಟ್ಟೆಯಲ್ಲಿ ಹಳೇ ಸೋನಾ ಮಸೂರಿ ಅಕ್ಕಿ ಕಿಲೋಗೆ 64-65 ರು., ಹೊಸ ಸೋನಾಮಸೂರಿ ಅಕ್ಕಿಗೆ 57-58, ಸ್ಟೀಮ್ ಅಕ್ಕಿಗೆ 53-56 ರು ಆರ್ ಎನ್ ಆರ್ ಅಕ್ಕಿಗೆ 64-68 ರು.ವರೆಗೂ ದರವಿದೆ. ಮುಂದಿನ ದಿನಗಳಲ್ಲಿ ಭತ್ತದ ಬೆಲೆ ಹೆಚ್ಚಾಗುತ್ತದೆ ಎಂದು ಕೆಲವು ರೈತರು ತಮ್ಮ ಬೆಳೆ ಮಾರಾಟ ಮಾಡದೆ ಸಂಗ್ರಹಿಸಿಟ್ಟುಕೊಂಡಿದ್ದಾರೆ. ಹೀಗಾಗಿ ಅಕ್ಕಿ ಬೆಲೆ ಹೆಚ್ಚಳವಾಗಿ, ಜನರ ಜೇಬಿಗೆ ಇನ್ನಷ್ಟು ಭಾರವಾಗಲಿದೆ ಎನ್ನುವ ಮಾತುಗಳು ಕೇಳಿಬಂದಿವೆ.

ವಾಲ್ಮೀಕಿ ಹಗರಣ: ಸಚಿವರ..

← ಮೊದಲಪುಟದಿಂದ

ಬಿಜೆಪಿ ಈ ಪ್ರಕರಣವನ್ನು ಸಿಬಿಐಗೆ ವಹಿಸಲು ಹಾಗೂ ತಮ್ಮ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ವಿಷಯದಲ್ಲಿ ಒಬ್ಬೊಬ್ಬರ ಹೇಳಿಕೆಯಿಂದ ಒಂದೊಂದು ಸಮಸ್ಯೆ ಅಥವಾ ವಿವಾದವಾಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ಈ ವಿಷಯದಲ್ಲಿ ಯಾರೂ ಪ್ರತಿಕ್ರಿಯೆ ನೀಡಬಾರದು. ಇದರೊಂದಿಗೆ ಮುಡಾ ಅಕ್ರಮದ ಬಗ್ಗೆಯೂ ತನಿಖೆ ನಡೆಯುತ್ತಿದೆ. ಈ ವಿಷಯದಲ್ಲಿ ತಮ್ಮ ಪಾತ್ರವಿಲ್ಲ. ಆದ್ದರಿಂದ ಪ್ರತಿಪಕ್ಷಗಳು ಈ ವಿಷಯದಲ್ಲಿ ನೀಡುವ ಹೇಳಿಕೆಗಳಿಗೂ ಪ್ರತಿಕ್ರಿಯೆ ನೀಡುವ ಅವಶ್ಯಕತೆಯಿಲ್ಲವೆಂದು ಸಿಎಂ ಸೂಚನೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಿಲ್ಲದ ಮಳೆ ಇನ್ನೂ ಇಬ್ಬರ ಸಾವು

← ಮೊದಲಪುಟದಿಂದ

ಅಲ್ಲದೆ, ದ.ಕ ಜಿಲ್ಲೆಯ ಚಾರ್ಮಾಡಿ ಘಾಟ್ ರಸ್ತೆಯಲ್ಲಿ ಅತಿವೃಷ್ಟಿಯಿಂದಾಗಿ ಕುಸಿತ ಉಂಟಾಗಿದ್ದು, ಸಂಚಾರ ಅಸ್ತವ್ಯಸ್ತಗೊಂಡಿದೆ.

ಎನ್‌ಡಿಆರ್ ಎಫ್ ತಂಡಗಳ ರವಾನೆ: ಉತ್ತರ ಕನ್ನಡದಲ್ಲಿ ಮಳೆ ತೀವ್ರವಾಗಿದ್ದು, ಸಂತ್ರಸ್ತರ ರಕ್ಷಣೆಗೆ 25 ಜನರ ಎರಡು ಎನ್‌ಡಿಆರ್‌ಎಫ್ ತಂಡಗಳನ್ನು ಕಳುಹಿಸಲಾಗಿದೆ. ಕಾರವಾರ, ಕುಮಟಾ ಮೊದಲಾದೆಡೆ ರಕ್ಷಣಾ ತಂಡಗಳು ಜನರ ಸ್ಥಳಾಂತರ ಮತ್ತು ರಕ್ಷಣೆಯಲ್ಲಿ ತೊಡಗಿವೆ. ಮಳೆ ಹಿನ್ನೆಲೆಯಲ್ಲಿ ಕುಮಟಾದ ಶಾಲೆಗಳಿಗೆ ರಜೆ ಘೋಷಿಸಲಾಗಿದೆ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕುಮಟಾ [ಉ.ಕ]
ಮಾರ್ಕೆಟ್ ಯಾರ್ಡ, ಕುಮಟಾ-581343, ಎನ್.ಎಚ್. 66,
ಉತ್ತರ ಕನ್ನಡ ಜಿಲ್ಲೆ, ರಾಜ್ಯ ಕರ್ನಾಟಕ, Phone No: 08386-222058
E-mail: apmckumata@gmail.com, apmckumata@rediffmail.com
ಸಂ.ಕೃಮಾಇ/ಕೃಉಮಾಸ/ಕುಮಟಾ/ಭ.ಸಿಬ್ಬಂದಿ/147/2024-25 ದಿನಾಂಕ: 26-06-2024

ಟೆಂಡರ್ ಪ್ರಕಟಣೆ [ಇ-ಪ್ರೊಕ್ಯೂರ್‌ಮೆಂಟ್ ಮೂಲಕ]

ಕುಮಟಾ ಸಮಿತಿಯ ಮಾರುಕಟ್ಟೆ ಪ್ರಾಂಗಣದ ಆಸ್ತಿ ಪಾಸ್ತಿಗಳ ಸಂರಕ್ಷಣೆಗಾಗಿ 2024-25ನೇ ಸಾಲಿಗೆ ಈ ಕೆಳಕಾಣಿಸಿದ 13 ಜನ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಪ್ರಸ್ತುತ ಜಾರಿಯಲ್ಲಿರುವ ಕನಿಷ್ಟ ವೇತನ ನಿಯಮಾವಳಿ ಪ್ರಕಾರ ವೇತನ ಪಾವತಿಸುವ ಷರತ್ತಿಗೊಳಪಟ್ಟು ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಮತ್ತು ಅನುಭವ ಇರುವ ಭದ್ರತಾ ಸೇವಾ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಮಾತ್ರ ಸಲ್ಲಿಸಲು ಆಹ್ವಾನಿಸಲಾಗಿದೆ.

ಅ. ನಂ	ಕೆಲಸದ ಹೆಸರು	ಪೂರೈಸಬೇಕಾದ ಸಿಬ್ಬಂದಿ ಸಂಖ್ಯೆ	ಭದ್ರತಾ ಠೇವಣಿ	ಟೆಂಡರ ಫಾರ್ಮ ಫೀ
1	ಭದ್ರತಾ ಸಿಬ್ಬಂದಿ	7	2,00,000.00	e-portal ಮೂಲಕ ಇ-ಪ್ರೊಸೆಸಿಂಗ್ ಫೀ ಯಂತೆ
2	ವಾಹನ ಚಾಲಕ	1		
3	ಡಾಟಾ ಎಂಟ್ರಿ ಅಪರೇಟರ	2		
4	ಸ್ವಚ್ಚತಾ ಸಿಬ್ಬಂದಿ	2		
5	ಕಂಪ್ಯೂಟರ ಆಪರೇಟರ	1		
	ಒಟ್ಟು	13		

(1) ಟೆಂಡರಗಳನ್ನು ವೆಬ್ ಸೈಟ್ ಮೂಲಕ ಸಲ್ಲಿಸಲು ಕೊನೆಯ ದಿ. 22-07-2024 ರಂದು ಮಧ್ಯಾಹ್ನ 4.00 ಗಂಟೆಗೆ. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24-07-2024 ರಂದು ಪೂರ್ವಾಹ್ನ 11.30 ಕ್ಕೆ ತೆರೆಯಲಾಗುವುದು (3) ಆರ್ಥಿಕ ಬಿಡ್‌ನ್ನು ದಿನಾಂಕ: 25-07-2024 ರಂದು ಮಧ್ಯಾಹ್ನ 4.30ಕ್ಕೆ ತೆರೆಯಲಾಗುವುದು. (4) ತಪ್ಪಿದಲ್ಲಿ ಮುಂದಿನ ದಿನಾಂಕ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ http://kppp.karnataka.gov.in.

ಸಹಿ/-, (ರಾಜೇಶ ಎಸ್. ಮೈದರಗಿ) ಕಾರ್ಯದರ್ಶಿ, ಕೃ.ಉ.ಮಾ.ಸ, ಕುಮಟಾ
ಸಹಿ/-(ಪ್ರವೀಣ ಎಸ್. ಕರಾಂಡೆ) ಆಡಳಿತಾಧಿಕಾರಿ, ಕೃ.ಉ.ಮಾ.ಸ, ಕುಮಟಾ
DIPR/KWR/KSMCA/114/24-25 Dt.04.07.2024

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426-281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಆವಿ/ಡಿಬಿ/ಮುನ್ಸೂಚನೆ/2024-25/1041 ದಿನಾಂಕ:04.07.2024

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಕೃಷ್ಣಾ ನದಿ ಪಾತ್ರದಲ್ಲಿ ವ್ಯಾಪಕವಾಗಿ ಮುಂಗಾರು ಮಳೆಯು ಪ್ರಾರಂಭವಾಗಿದ್ದು, ಆಲಮಟ್ಟಿ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಹೆಚ್ಚಾಗುತ್ತಿರುವುದರಿಂದ, ಪ್ರವಾಹದ ಪರಿಸ್ಥಿತಿಯ ಮೇಲೆ ಹೆಚ್ಚಿನ ನಿಗಾ ವಹಿಸಲಾಗುತ್ತಿದ್ದು, ಜಲಾಶಯಕ್ಕೆ ಹರಿದು ಬರುವ ನೀರಿನ ಪ್ರಮಾಣಕ್ಕನುಗುಣವಾಗಿ ಜಲಾಶಯದಿಂದ ಯಾವುದೇ ಸಂದರ್ಭದಲ್ಲಿ ನೀರನ್ನು ಹೊರಗೆ ಬಿಡಲಾಗುವುದು. ಆದ್ದರಿಂದ ಆಣೆಕಟ್ಟಿನ ಕೆಳಭಾಗದ ಪ್ರದೇಶಗಳಲ್ಲಿ ಮುಳುಗಡೆಯಾಗಲಿರುವ ಎಲ್ಲಾ ಹಳ್ಳಿಗಳ ಹಾಗೂ ನಗರಗಳ ಸಾರ್ವಜನಿಕರು ತಮ್ಮ ಜನ-ಜಾನುವಾರು ಹಾಗೂ ಆಸ್ತಿ-ಪಾಸ್ತಿ ವಗೈರೆಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರ ಮಾಡಿಕೊಳ್ಳಬೇಕೆಂದು ಈ ಮೂಲಕ ಮುನ್ಸೂಚನೆಯನ್ನು ನೀಡಲಾಗಿದೆ ಹಾಗೂ ಕೆಳಭಾಗದಲ್ಲಿ ಬರುವ ನದಿಯ ಪಕ್ಕದಲ್ಲಿರುವ ಹಳ್ಳಿಗಳ ಜನರೂ ಸಹ ಎಚ್ಚರಿಕೆಯಿಂದ ಇರಬೇಕೆಂದು ಈ ಮೂಲಕ ವಿನಂತಿಸಲಾಗಿದೆ.
ಮುಂದುವರೆದು, ಆಣೆಕಟ್ಟೆಯ ಮೇಲ್ಭಾಗದಲ್ಲಿಯ ಪ್ರವಾಹದಿಂದ ಬಾಧಿತಕ್ಕೆ ಒಳಪಡುವ ಎಲ್ಲಾ ಗ್ರಾಮಗಳ ಜನರು ಸುರಕ್ಷಿತ ಸ್ಥಳಕ್ಕೆ ತೆರಳಲು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವು ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುತ್ತಿದೆ.
ಆಲಮಟ್ಟಿ ಜಲಾಶಯದ ಪ್ರವಾಹದ ನಿಗಾ ವಹಿಸುವ ಸಂಬಂಧ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿ(ನಿ), ಆಣೆಕಟ್ಟು ಉಪ ವಿಭಾಗ ನಂ.2, ಆಲಮಟ್ಟಿ ಕಛೇರಿಯ ಶ್ರೀ ರವಿ ಚಂದ್ರಗಿರಿವರ ವಾಚಪ್ಪ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಇವರ ಮೊಬೈಲ್ ಸಂ:9480450297 ಹಾಗು ಶ್ರೀ ಕುಮಾರೇಶ ಹಂಚಿನಾಳ, ಸಹಾಯಕ ಇಂಜನೀಯರ್, ಮೊಬೈಲ್ ಸಂ:9986788799 ಇವರನ್ನು ನಿಯೋಜಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸದರಿಯವರನ್ನು ಸಂಪರ್ಕಿಸಿ ಮಾಹಿತಿ ತಿಳಿದುಕೊಳ್ಳಬಹುದಾಗಿದೆ.

ಸಹಿ/- (ಶರಣಪ್ಪ. ಎಸ್. ಚಲವಾದಿ) ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/78/ಕೆಎಸ್‌ಎಂಸಿಎ/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
Ref: 1) No: EE/ UTP/PB-3/2024-25/608 Dated: 03-07-2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ (KPPP ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು KPP-ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ ಉಲ್ಲೇಖಿತ ಪತ್ರ (1) ರನ್ವಯ ಒಟ್ಟು ರೂ 42.13 (ಜಿಎಸ್‌ಟಿ ಹೊರತುಪಡಿಸಿ) ಲಕ್ಷ ಮೊತ್ತದ 4701 ಲೆಕ್ಕ ಶೀರ್ಷಿಕೆಯ ಕಾಮಗಾರಿಯ ಟೆಂಡರ್ ಆಹ್ವಾನಿಸಲಾಗಿದೆ ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ: 04-07-2024 to 11-07-2024 ರ ಸಂಜೆ 5.00ರ ವರೆಗೆ ಇರುವುದು. ಟೆಂಡರ್ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 08-07-2024ಸಂಜೆ 4.30ರ ವರೆಗೆ ಇರುತ್ತದೆ. ದಿನಾಂಕ 12-07-2024ರಂದು ಸಂಜೆ 5.30 ಗಂಟೆಗೆ ತಾಂತ್ರಿಕ/ಆರ್ಥಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು KPPP-ಪೋರ್ಟಲ್ ಮುಖಾಂತರ ನೋಡಿಕೊಳ್ಳತಕ್ಕದ್ದು.
ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ/ ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು(ಪ್ರ), ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.
212

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ.: ಕಾಅ(ವಿ)/ಟಿಎಲ್&ಎಸ್‌ಎಸ್/ಸಕಾನಿಇಂ(ಕ)/ಸಅ(ತಾ)/ಚಿಂ/2024-25/855 ದಿ: 02.07.2024

ಟೆಂಡರ್ ಪ್ರಕಟಣೆ

ಕವಿಪ್ರನಿನಿಯ ಚಿಂತಾಮಣಿ ವಿಭಾಗದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರನ್ನು ಆಹ್ವಾನಿಸಲಾಗಿದೆ.
(1) 66/11ಕೆವಿ ಉಪಕೇಂದ್ರ ಮೇಲೂರುಕ್ಕೆ ನಿರ್ವಹಣಾ ಸಾಮಾಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ. (2) 220ಕೆವಿ ಸ್ವೀಕರಣ ಕೇಂದ್ರ ಮಿಟ್ಟೇಮರಿಯಲ್ಲಿರುವ 100MVA Transformer-1 'y' ಫೇಸಿನ ತೈಲಸೋರಿಕೆ arrest ಮಾಡುವ ಬಗ್ಗೆ. (3) 66/11ಕೆವಿ ಉಪಕೇಂದ್ರ ಪಾತಪಾಳ್ಯದಲ್ಲಿ 2 ಸಂಖ್ಯೆಯ 66ಕೆವಿ ಬ್ರೇಕರ್‌ಗಳ SF 6ಗ್ಯಾಸ್ ಸೋರಿಕೆ ತಡೆಗಟ್ಟುವ ಬಗ್ಗೆ. (4) 66/11ಕೆವಿ ಜಂಗಮಕೋಟೆ ಉಪಕೇಂದ್ರಕ್ಕೆ 01 No's of of Non-directional relay 3OCR+1EFR and 01No's of 2NO+2NC protential free contact ಸರಬರಾಜು ಮಾಡುವ ಕಾಮಗಾರಿ. (5) 66/11ಕೆವಿ ಉಪಕೇಂದ್ರ ಪಾತಪಾಳ್ಯಕ್ಕೆ 02No's of 66KV Analog voltmeter for line-1&2 C&R Panels ಸರಬರಾಜು ಮಾಡುವ ಬಗ್ಗೆ. (6) 66/111ಕೆವಿ ಉಪಕೇಂದ್ರ ಜಿ.ಕೋಡಿಹಳ್ಳಿಗೆ 2 ಸಂಖ್ಯೆಯ digital multifunctional meter ಸರಬರಾಜು ಹಾಗೂ Fix ಮಾಡುವ ಬಗ್ಗೆ. (7) 66/11ಕೆವಿ ಉಪಕೇಂದ್ರ ಪಾತಪಾಳ್ಯದಲ್ಲಿ 5x4 ಅಡಿಅಳತೆಯುಳ್ಳ wooden boards ಸರಬರಾಜು ಹಾಗೂ ಸಿಂಗಲ್ ಲೈನ್ diagram ಕಾಮಗಾರಿ.
ನಾಲ್ಕನೇ ಕರೆ: 66/11ಕೆವಿ ಜಂಗಮಕೋಟೆ ಉಪಕೇಂದ್ರದಲ್ಲಿರುವ Transformer-2 ರ OLTC top cover plate ನಲ್ಲಿ Oil leakage arrest ಮಾಡುವ ಬಗ್ಗೆ.
ಸಂಬಂಧಿತ ವಿಚಾರಣೆ ಬಗ್ಗೆ ವಿವರವಾದ ಪ್ರಕಟಣೆಯನ್ನು ಕೆಳಸಹಿದಾರರ ಕಛೇರಿಯಿಂದ **ದಿನಾಂಕ: 05.07.2024ರಂದು 10.00 ಘಂಟೆಯ ನಂತರ** ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಟಿಎಲ್&ಎಸ್‌ಎಸ್ ವಿಭಾಗ, ಕವಿಪ್ರನಿನಿ, ಚಿಂತಾಮಣಿ-563125.

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ,
ನಂ.2308 ಬಿ ಸೆಕ್ಟರ್, 3ನೇ ಹಂತ, ಬಿಎಂಟಿಸಿ ಬಸ್ ನಿಲ್ದಾಣದ ಹಿಂಭಾಗ,
ಹೊಯ್ಸಳ ಕ್ರೀಡಾಂಗಣದ ಎದುರು, ಬೆಂಗಳೂರು ಉತ್ತರ (ಯಲಹಂಕ), ದೂ: 080-28461452,
ಇ-ಮೇಲ್: dcpoyalahanka@gmail.com
ಸಂಖ್ಯೆ: ಜಿಮರಘ/ಬೆಂ(ಉ)/ಮಾ.ಸಂ.ಸೇ/ಹೊ.ಗು.ಸಿ/2024-25 ದಿನಾಂಕ: 04.07.2024

ಇ-ಟೆಂಡರ್ ಪ್ರಕಟಣೆ

2024-25ನೇ ಸಾಲಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ಉತ್ತರ (ಯಲಹಂಕ), ಘಟಕಕ್ಕೆ ಮಾನವ ಸಂಪನ್ಮೂಲ ಸೇವೆಯನ್ನು ಅರ್ಹ ಸೆಕ್ಯೂರಿಟಿ ಸಂಸ್ಥೆಗಳ/ಏಜೆನ್ಸಿಗಳ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಪದ್ಧತಿಯಂತೆ ಆನ್ ಲೈನ್ ಮೂಲಕ ಮಾತ್ರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯನ್ನು ಅಪ್‌ಲೋಡ್ ಮಾಡುವ ದಿನಾಂಕ : **03.07.2024.** ಇ-ಪ್ರೊಕ್ಯೂರ್‌ಮೆಂಟ್ ಅಡಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **02.08.2024** ಆಗಿದ್ದು, ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **05.08.2024** ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: **12.08.2024.** ಇ.ಎಂ.ಡಿ. **ರೂ.1,00,000/-,** ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಿ.

ಸಹಿ/-
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಬೆಂಗಳೂರು ಉತ್ತರ (ಯಲಹಂಕ).
ವಾಸಾಸಂಇ/ವಾಪ್ರ/771/ಶಿರಡಿ ಸಾಯಿ/2024-25

ಟ್ವೀಟೂ-ಖಾರಾ

ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷ

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಒಂದೇ ಒಂದು ವರ್ಷದಲ್ಲಿ ತನ್ನ ಜನಪ್ರಿಯತೆಯನ್ನು ಕಳೆದುಕೊಂಡ ರಾಜ್ಯ ಸರಕಾರ ಇಡೀ ದೇಶದಲ್ಲಿ ಯಾವುದಾದರೂ ಇದ್ದರೆ ಅದು ರಾಜ್ಯ ಕಾಂಗ್ರೆಸ್ ಸರಕಾರ. ಈಗಾಗಲೇ ತನ್ನ ಜನವಿರೋಧಿ ನೀತಿಯಿಂದ ಅದು ಆಡಳಿತ ವಿರೋಧಿ ಅಲೆಯನ್ನು ಎದುರಿಸುತ್ತಿದೆ.

ಸಿದ್ದರಾಮಯ್ಯ
ಮುಖ್ಯಮಂತ್ರಿ

ಬಿಜೆಪಿ ಮತ್ತು ಸಂಘ ಪರಿವಾರದವರು ತೋರಿಕೆಗಾಗಿ ವಿವೇಕಾನಂದರನ್ನು ಎಷ್ಟೇ ಆರಾಧಿಸಿದರೂ ಅವರ ಆಂತರ್ಯದಲ್ಲಿ ವಿವೇಕಾನಂದರ ಬಗ್ಗೆ ಎಷ್ಟು ಅಸಹನೆ ಇದೆ ಎಂಬುದಕ್ಕೆ ಇಂದಿನ ಬಿಜೆಪಿ ಕಾರ್ಯಕಾರಣಿ ಸಭೆಯಲ್ಲಿ ನಡೆದ ಘಟನೆಯೇ ಸಾಕ್ಷಿ. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನದಾಸ್ ಅಗರ್‌ವಾಲ್ ಅವರು ವೇದಿಕೆಯ ಮೇಲೆ ವಿವೇಕಾನಂದರ ಚಿತ್ರ ಏಕಿದೆ ಎಂದು ಪ್ರಶ್ನಿಸುವ ಮೂಲಕ ಬಹಿರಂಗವಾಗಿಯೇ ತಮ್ಮ ಅಸಮಾಧಾನ ಹೊರಹಾಕಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಿಲಿಂಡರ್ ಸ್ಫೋಟ: ಇಬ್ಬರು ಸಾವು

ದಾವಣಗೆರೆ: ಅಡುಗೆ ಮಾಡುವಾಗ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ, ಐವರಲ್ಲಿ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ. ಗುರುವಾರ ಬೆಳಗ್ಗೆ ಸೌಭಾಗ್ಯ (35) ಮೃತಪಟ್ಟರೆ, ಬುಧವಾರ ರಾತ್ರಿ ಪಾರ್ವತಮ್ಮ (45) ಎಂಬುವರು ಮೃತಪಟ್ಟಿದ್ದರು. ಮಂಗಳವಾರ ರಾತ್ರಿ ಹೊರ ವಲಯದ ಎಸ್‌ಒಜೆ ಕಾಲೋನಿಯ ಮಲ್ಲೇಶಪ್ಪ ಎಂಬುವರ ಮನೆಯಲ್ಲಿ ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡು ಪಾರ್ವತಮ್ಮ ಗಂಭೀರವಾಗಿ ಗಾಯಗೊಂಡಿದ್ದು, ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತ ಪಟ್ಟಿದ್ದರು. ಗುರುವಾರ ಬೆಳಗ್ಗೆ ಸೌಭಾಗ್ಯ ಸಾವನ್ನಪ್ಪಿದ್ದಾರೆ. ಮಲ್ಲೇಶಪ್ಪ ಅವರ ಪಕ್ಕದ ಮನೆಯ ಪಾರ್ವತಮ್ಮ ಗ್ಯಾಸ್ ಲೀಕ್ ಆಗಿದೆ ಎಂಬುದನ್ನು ನೋಡಲಿಕ್ಕೆ ಬಂದ ಸಂದರ್ಭದಲ್ಲಿ ಸ್ಫೋಟವಾಗಿತ್ತು. ಘಟನೆಯಲ್ಲಿ ಗಾಯಗೊಂಡ ಲಲತಮ್ಮ, ಮಲ್ಲೇಶಪ್ಪ, ಪ್ರವೀಣ್ (35) ಚಿಕಿತ್ಸೆ ಪಡೆಯುತ್ತಿದ್ದಾರೆ.

ತೆಪ್ಪ ಮಗುಚಿದ ಪ್ರಕರಣ ಇನ್ನಿಬ್ಬರ ಶವಗಳು ಪತ್ತೆ

ಕೊಲ್ಹಾರ: ಕೃಷ್ಣಾ ನದಿಯ ಹತ್ತಿರ ಜೂಜಾಟ ಆಡುತ್ತಿದ್ದ ಸಂದರ್ಭ ಪೊಲೀಸರ ದಾಳಿಯಿಂದ ತಪ್ಪಿಸಿಕೊಂಡು ತೆಪ್ಪದಲ್ಲಿ ಪರಾರಿಯಾಗಲು ಯತ್ನಿಸಿ ದುರ್ಮರಣಕ್ಕೀಡಾದ ಮೆಹಬೂಬ್ ವಾಲೀಕಾರ, ರಫೀಕ್ ಜಾಲಗಾರ ಅವರ ಶವಗಳು ಗುರುವಾರ ಮುಂಜಾನೆ ದೊರಕುವ ಮೂಲಕ ಕಾರ್ಯಾಚರಣೆ ಅಂತ್ಯಗೊಂಡಿತು.

ಸಚಿವರಿಂದ ಮೂರು ಲಕ್ಷ ಪರಿಹಾರ: ಸಚಿವ ಶಿವಾನಂದ ಪಾಟೀಲ್ ಸ್ಥಳಕ್ಕೆ ಭೇಟಿನೀಡಿ ಪರಿಶೀಲಿಸಿದ ನಂತರ ಮೃತರ ಮನೆಗಳಿಗೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಈ ವೇಳೆ, ವೈಯಕ್ತಿಕವಾಗಿ ಪ್ರತಿ ಕುಟುಂಬಕ್ಕೂ ಮೂರು ಲಕ್ಷ ಪರಿಹಾರ ನೀಡಿದ್ದಾರೆ.

ಕರಡಿ ದಾಳಿ: ವ್ಯಕ್ತಿಗೆ ಗಂಭೀರ ಗಾಯ

ಮಾಗಡಿ: ಜಮೀನಿಗೆ ತೆರಳುತ್ತಿದ್ದ ವ್ಯಕ್ತಿ ಮೇಲೆ ಕರಡಿ ದಾಳಿ ನಡೆಸಿದ ಘಟನೆ ಮಾಗಡಿ ತಾಲೂಕಿನ ಚಕ್ಕಳ್ಳಿ ಗ್ರಾಮದ ಟಿ.ಎನ್. ಕೆರೆ ಬಳಿ ನಡೆದಿದೆ. 45 ವರ್ಷದ ಮಹೇಂದ್ರ ಎಂಬುವರ ಮೇಲೆ ಕರಡಿ ದಾಳಿ ನಡೆಸಿದೆ. ಅವರು ಗಂಭೀರ ಗಾಯಗೊಂಡಿದ್ದಾರೆ. ಮಹೇಂದ್ರ ಅವರು ಬೆಳಗ್ಗೆ ಜಮೀನಿಗೆ ತೆರಳುವಾಗ ಏಕಾಏಕಿ ಕರಡಿಯು ತಲೆ ಭಾಗಕ್ಕೆ ದಾಳಿ ಮಾಡಿ ಗಂಭೀರ ಗಾಯ ಮಾಡಿದೆ. ಅವರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಸ್ಥಳಕ್ಕೆ ತಾಲೂಕು ಅರಣ್ಯಾಧಿಕಾರಿ ಚೈತ್ರ ಭೇಟಿ ನೀಡಿದ್ದಾರೆ. ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ವಿಶ್ವೇಶ್ವರ ಭಟ್ ಅವರ ಆರೋಗ್ಯ ವಿಚಾರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ. ಈ ವೇಳೆ ವಿಶ್ವೇಶ್ವರ ಭಟ್ ಅವರ ಪತ್ನಿ ಸುಷ್ಮಾ ಭಟ್ ಇದ್ದರು.

ಆಸ್ಪತ್ರೆಯಲ್ಲಿ ವಿಶ್ವೇಶ್ವರ ಭಟ್ ಅವರನ್ನು ಸಿಎಂ ಸಿದ್ದರಾಮಯ್ಯ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಈ ವೇಳೆ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಅಧ್ಯಕ್ಷ ಸರೋವರ ಶ್ರೀನಿವಾಸ್, ವೆಂಕಟೇಶ್ ಹೆಗಡೆ ಹೊಸಬಾಳೆ, ವಿಶ್ವವಾಣಿ ಸಿಇಒ ಚಿದಾನಂದ್ ಕಡಲಾಸ್ಕರ ಸೇರಿದಂತೆ ಅನೇಕರಿದ್ದರು.

ಮಾಜಿ ಸಂಸದ ಪ್ರತಾಪ್ ಸಿಂಹ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.

ವಿಶ್ವೇಶ್ವರ ಭಟ್‌ರ ಆರೋಗ್ಯದಲ್ಲಿ ಚೇತರಿಕೆ

ಬೆಂಗಳೂರು: ಎದೆನೋವು ಕಾಣಿಸಿಕೊಂಡ ಹಿನ್ನಲೆಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಗಣ್ಯರು ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ಮಂಗಳವಾರ ಸಂಜೆ ಎದೆನೋವು ಕಾಣಿಸಿಕೊಂಡಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದ ವಿಶ್ವೇಶ್ವರ ಭಟ್ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ. ಗುರುವಾರ ಆಸ್ಪತ್ರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಸರೋವರ ಶ್ರೀನಿವಾಸ್, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವು ಗಣ್ಯರು ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯುತ್ತಿರುವ ವಿಶ್ವೇಶ್ವರ ಭಟ್ ಅವರು, ಶೀಘ್ರವೇ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಲಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ನಾಳೆ ಬೆಂಗಳೂರಿನಲ್ಲಿ ನೀರಾವರಿ ಸಮಿತಿ ಸಭೆ

ಕೆಆರ್‌ಎಸ್: 8ರಿಂದ ನಾಲೆಗಳಿಗೆ ನೀರು

ಮಂಡ್ಯ: ಜುಲೈ 8ರಿಂದ ಕೆಆರ್‌ಎಸ್‌ನಿಂದ ನಾಲೆಗಳಿಗೆ ನೀರು ಬಿಡುಗಡೆ ಮಾಡಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು. ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಜಲಾಶಯದ ಮಟ್ಟ 100 ಅಡಿಗಿಂತ ಹೆಚ್ಚುವರಿಯಾಗಿರುವುದರಿಂದ ಜು.6 ರಂದು ಬೆಂಗಳೂರಿನಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ನಡೆಸಿ, ಜು.8 ರಿಂದ ನಾಲೆಗಳಿಗೆ ನೀರು ಬಿಡುಗಡೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು. ಕಳೆದ ಸಾಲಿನಲ್ಲಿ ಬರಗಾಲದ ಹಿನ್ನೆಲೆ ರೈತರ ಬೇಡಿಕೆಯಂತೆ ನೀರು ಹರಿಸಲು ಸಾಧ್ಯವಾಗಿರಲಿಲ್ಲ. ಜಲಾಶಯದಲ್ಲಿ ನೀರಿನ ಮಟ್ಟ 100 ಅಡಿ ತಲುಪಿದ ನಂತರ ನೀರು ಹರಿಸುವುದಾಗಿ ಭರವಸೆ ನೀಡಲಾಗಿತ್ತು. ವಿ.ಸಿ.ನಾಲೆ ಆಧುನೀಕರಣ ಕಾಮಗಾರಿ ನಡೆಯುತ್ತಿದ್ದು, ರೈತರಿಗೆ ನೀರು ನೀಡಲು ತೊಂದರೆಯಾಗುತ್ತದೆ ಎಂದು ಹಲವಾರು ದೂರುಗಳು ಕೇಳಿಬಂದಿತ್ತು. ಇತ್ತೀಚೆಗೆ ಕಾಮಗಾರಿ ನಡೆಯುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ನಾಲೆಗಳಿಗೆ ನೀರು ಹರಿಸಲು ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಲಾಗಿದೆ ಎಂದರು.

ಜು.6 ರಂದು ನೀರಾವರಿ ಸಲಹಾ ಸಮಿತಿ ಸಭೆ ನಡೆಸಿ ಜು.8 ರಿಂದ ನಾಲೆಗಳಿಗೆ ನೀರು ಬಿಡುಗಡೆ ಮಾಡಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ರೈತರು ತಮ್ಮ ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸಿಕೊಂಡು ಉತ್ತಮ ಬೆಳೆ ಬೆಳೆಯಿರಿ. ರೈತರೊಂದಿಗೆ ಸರಕಾರ ಸದಾ ಇದ್ದು, ಅವರ ಶ್ರೇಯೋಭಿವೃದ್ಧಿಗೆ ಸದಾ ಚಿಂತಿಸುತ್ತದೆ.
-ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

ಸತ್ಸಂಗದಲ್ಲಿ ಸಾವು-ನೋವು: ಶ್ರೀ ಶೈಲ ಸ್ವಾಮೀಜಿ ವಿಷಾದ

ರಾಯಚೂರು: ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ನಡೆದ ಸತ್ಸಂಗದಲ್ಲಿ ಕಾಲ್ತುಳಿತದಿಂದಾಗಿ ಸಾವು-ನೋವುಗಳು ಉಂಟಾಗಿರುವುದಕ್ಕೆ ವಿಷಾದ ವ್ಯಕ್ತಪಡಿಸುತ್ತೇವೆ ಎಂದು ಶ್ರೀಶೈಲ ಜಗದ್ಗುರು ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ ಹೇಳಿದ್ದಾರೆ. ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಧಾರ್ಮಿಕ ಕಾರ್ಯಕ್ರಮಗಳಿಗೆ ಜನರು ಭಕ್ತಿ ಯಿಂದ ಆಗಮಿಸುತ್ತಾರೆ. ಹತ್ರಾಸ್‌ನ ಸತ್ಸಂಗದಲ್ಲಿ ನೂರಾರು ಜನ ಮರಣ ಹೊಂದಿದ್ದಾರೆ. ರಕ್ಷಣೆಯ ಕೊರತೆಯಿಂದ ಈ ಘಟನೆ ನಡೆದಿದೆ ಎಂದು ಮಾಧ್ಯಮಗಳಲ್ಲಿ ನೋಡಿದ್ದೇವೆ. ಇಂಥ ದುರ್ಘಟನೆ ಮರುಕಳಿಸದಂತೆ ಧಾರ್ಮಿಕ ಸಂಘ ಸಂಸ್ಥೆಗಳು ಜವಾಬ್ದಾರಿವಹಿಸಬೇಕು ಎಂದರು.

ಉಕ್ಕಿಹರಿದ ಚಂಡಿಕಾ ಹೊಳೆ | ಜನಜೀವನ ಅಸ್ತವ್ಯಸ್ತ | ಉತ್ತರಕನ್ನಡದ ನದಿಪಾತ್ರದ ಶಾಲೆಗಳಿಗೆ ಇಂದು ರಜೆ

ಮಲೆನಾಡಿನಲ್ಲಿ ಆರಿದ್ರಾ ಮಳೆ ಅಬ್ಬರ

ಬೆಂಗಳೂರು: ರಾಜ್ಯಾದ್ಯಂತ ಹಲವೆಡೆ ಮಳೆಯು ಅಬ್ಬರಿಸುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಚಂಡಿಕಾ ನದಿ, ಹೊನ್ನಾವರದಲ್ಲಿ ಗುಂಡಬಾಳ ಹೊಳೆ ಉಕ್ಕಿ ಹರಿಯುತ್ತಿದೆ. ಹೊನ್ನಾವರದ ವನರಕೇರಿ ಸಮೀಪದ ಬೆಂಗಳೂರು-ಕಾರವಾರ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುಡ್ಡ ಕುಸಿದಿದೆ. ಹಲವು ಹೆದ್ದಾರಿ ಸಂಪರ್ಕಗಳು ಕಡಿತಗೊಂಡಿವೆ. ಚಿಕ್ಕನಕೋಡ್ ಸೇರಿದಂತೆ ಹಲವೆಡೆ ಮನೆಗಳಿಗೆ ನೀರು ನುಗ್ಗಿದ್ದು, ನಿವಾಸಿಗಳನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.ಉತ್ತರ ಕನ್ನಡ ಜಿಲ್ಲಾಧಿಕಾರಿ ಸೂಚನೆಯಂತೆ ತಾಲೂಕಿನ ನದಿಪಾತ್ರದ ಕೆಲ ಶಾಲೆಗಳಿಗೆ ರಜೆ ಘೋಷಿಸಲಾಗಿದೆ.

ಚಾರ್ಮಾಡಿ ಹೆದ್ದಾರಿಯಲ್ಲಿ ಬಿರುಕು: ಚಿಕ್ಕಮಗಳೂರಿನಲ್ಲಿ ಮಳೆ ಮುಂದುವರಿದಿದ್ದು, ಚಾರ್ಮಾಡಿ ಹೆದ್ದಾರಿಯಲ್ಲಿ ಬಿರುಕು ಬಿಟ್ಟಿದೆ. ಚಾರ್ಮಾಡಿ ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿ ಬಿರುಕು ಬಿಟ್ಟಿದ್ದು, ಅಪಾಯವನ್ನು ಆಹ್ವಾನಿಸುತ್ತಿದೆ. ಹೊಸ ಕಾಮಗಾರಿ ನಡೆದ ಸ್ಥಳದಲ್ಲೇ ಬಿರುಕು ಕಾಣಿಸಿಕೊಂಡಿದೆ. ಮಳೆ ಹಾಗೂ ಮಂಜಿನ ನಡುವೆ ರಸ್ತೆ ಬಿರುಕಿನಿಂದಾಗಿ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಓಡಾಡುವಂತಾಗಿದೆ.

ಕೊಡಗಿನಲ್ಲಿ ಮತ್ತೆ ಮುಂದುವರಿದ ಮಳೆ: ಕೊಡಗಿನಲ್ಲಿ ತಡರಾತ್ರಿಯಿಂದ ನಿರಂತರ ಮಳೆಯಾಗುತ್ತಿದ್ದು, ಹಳ್ಳ-ಕೊಳ್ಳಗಳು, ನದಿ ತುಂಬಿ ಹರಿಯುತ್ತಿದೆ. ಕಾವೇರಿಯ ತವರು ಬ್ರಹ್ಮಗಿರಿ ತಪ್ಪಲಿನಲ್ಲೂ ರಾತ್ರಿಯಿಂದ ಭಾರಿ ಮಳೆಯಾಗಿದ್ದು, ಅಪಾಯದ ಮಟ್ಟ ಮೀರಿ ಹರಿಯುತ್ತಿದೆ.

ನದಿಗಳಲ್ಲಿ ನೀರಿನ ಮಟ್ಟ ಏರಿಕೆ ; ನೆರೆ ಭೀತಿ: ಕುಮಟಾ ತಾಲೂಕಿನಲ್ಲಿ ವಿಪರೀತ ಮಳೆಯಾದ ಪರಿಣಾಮ ನದಿಗಳ ನೀರಿನ ಮಟ್ಟ ಹೆಚ್ಚಾಗಿದ್ದು, ನದಿ ತೀರ ಪ್ರದೇಶಗಳಲ್ಲಿ ನೆರೆಯ ಭೀತಿ ಎದುರಾಗಿದೆ. ಚಂಡಿಕಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಿದ ಪರಿಣಾಮ ಕುಮಟಾ ಶಿರಸಿ ರಸ್ತೆಯ ಅಳಕೋಡ ಬ್ರಿಡ್ಜ್ ಮುಳುಗಡೆಯಾಗಿದೆ. ಇದರಿಂದಾಗಿ ಶಿರಸಿ ಕುಮಟಾ ರಸ್ತೆ ಸಂಪರ್ಕ ಸಂಪೂರ್ಣವಾಗಿ ಬಂದ್ ಆಗಿದೆ. ಮಾಸ್ತಿಹಳ್ಳ ಸಮೀಪ ಗುಡ್ಡ ಕುಸಿತ ಉಂಟಾಗಿ ರಸ್ತೆಯಲ್ಲಿ ಮಣ್ಣು ತುಂಬಿಕೊಂಡಿದೆ. ನದಿ ತೀರ ಪ್ರದೇಶಗಳಾದ ಮಿರ್ಜಾನ್, ದೀವಗಿ, ಹೆಗಡೆ, ಕೋಡ್ಕಣಿ, ಬರ್ಗಿಯಲ್ಲಿ ಮನೆಗಳಿಗೆ ನೀರು ನುಗ್ಗುತ್ತಿದೆ. ಈಗಾಗಲೇ ಕೆಲವೆಡೆಗಳಲ್ಲಿ ಜನ, ಜಾನುವಾರುಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗುತ್ತಿದೆ.

ಉಡುಪಿಯ 3 ತಾಲೂಕುಗಳಲ್ಲಿ ಪಿಯುಸಿವರೆಗೆ ರಜೆ: ಉಡುಪಿ ಜಿಲ್ಲೆಯಲ್ಲಿ ಭಾರೀ ಮಳೆ ಸುರಿಯುತ್ತಿದೆ. ಕುಂದಾಪುರ, ಬೈಂದೂರು ಮತ್ತು ಬ್ರಹ್ಮಾವರ ಭಾಗದಲ್ಲಿ ತಗ್ಗು ಪ್ರದೇಶಗಳು ನೆರೆ ನೀರಿನಿಂದ ಜಲಾವೃತವಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಕುಂದಾಪುರ, ಬೈಂದೂರು ಮತ್ತು ಬ್ರಹ್ಮಾವರ ವಲಯದ ಅಂಗನವಾಡಿ , ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಪಿಯು ಕಾಲೇಜುಗಳಿಗೆ ಶುಕ್ರವಾರ (ಜುಲೈ 5) ರಜೆ ಘೋಷಣೆ ಮಾಡಲಾಗಿದೆ.

ಕಪ್ಪೆ ಶಂಕರ ದೇವಸ್ಥಾನ ಮುಳುಗಡೆ: ಶೃಂಗೇರಿಯಲ್ಲಿ ಎಡೆಬಿಡದೇ ಸುರಿದ ಭಾರಿ ಮಳೆಯಿಂದ ವರ್ಷದ ಮೊದಲ ನೆರೆ ಬಂದಿದೆ. ಕೊಪ್ಪ, ಎನ್‌ಆರ್ ಪುರ, ಮೂಡಿಗೆರೆ ಹಾಗೂ ಕಳಸದಲ್ಲಿ ಮಳೆ ಹೆಚ್ಚಾಗಿ ಬರುತ್ತಿರುವ ಕಾರಣ ಹಿನ್ನೆಲೆ ಕರೆ ಹಳ್ಳಗಳಲ್ಲಿ ನೀರಿನ ಪ್ರಮಾಣ ಹೆಚ್ಚಳವಾಗಿದೆ. ತುಂಗಾ ನದಿಯ ನೀರಿನ ಪ್ರಮಾಣ ಹೆಚ್ಚಳವಾಗಿ ಶೃಂಗೇರಿ ಕಪ್ಪೆ ಶಂಕರ ದೇವಸ್ಥಾನದ ಬಳಿ ನೀರು ಆವರಿಸಿದೆ.

ಶೃಂಗೇರಿ ಕಪ್ಪೆ ಶಂಕರ ದೇವಸ್ಥಾನದ ಬಳಿ ನೀರು ಆವರಿಸಿರುವುದು.

ಮೈದುಂಬಿದ ತುಂಗೆ, ಶರಾವತಿ, ಭದ್ರೆ

ಶಿವಮೊಗ್ಗದಲ್ಲಿ ವರುಣನ ಆರ್ಭಟ ಮುಂದುವರೆದಿದ್ದು, ಜಿಲ್ಲೆಯ ಪ್ರಮುಖ ನದಿಗಳು ಮೈದುಂಬಿ ಹರಿಯುತ್ತಿದ್ದು ಜಲಾಶಯಗಳ ಹರಿವು ಹೆಚ್ಚಾಗಿದೆ. ತುಂಗಾ ಜಲಾಶಯಕ್ಕೆ 39 ಸಾವಿರ ಕ್ಯೂಸೆಕ್‌ಗೂ ಅಧಿಕ ನೀರು ಬರುತ್ತಿದ್ದು ಅಷ್ಟೇ ಪ್ರಮಾಣದ ನೀರನ್ನು ನದಿಗೆ ಬಿಡಲಾಗುತ್ತಿದೆ. ತುಂಗಾ ನದಿ ಉಕ್ಕಿ ಹರಿಯುತ್ತಿದೆ. ಶಿವಮೊಗ್ಗದ ಪುರಾತನ ಪ್ರಸಿದ್ಧ ಕೋರ್ಪಲಯ್ಯ ಮಂಟಪದ ಮುಕ್ಕಾಲುಭಾಗ ಮುಳುಗಿದೆ. ಭದ್ರಾ ಜಲಾಶಯಕ್ಕೆ 4908 ಕ್ಯೂಸೆಕ್ ಒಳಹರಿವು ಇದ್ದು ,186 ಅಡಿ ಗರಿಷ್ಠ ಮಟ್ಟದ ಜಲಾಶಯದಲ್ಲಿ ಗುರುವಾರ 127 ಅಡಿ ನೀರಿದೆ.

ಕೊಡಗಿನಲ್ಲಿ ಕಾಡಾನೆ ಪ್ರತ್ಯಕ್ಷ

ಕೊಡಗು: ಆನೆಕಾಡು ಬಳಿಯ ಮೆಟ್ನಳನ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಕಾಡಾನೆಯೊಂದು ಪ್ರತ್ಯಕ್ಷವಾಗಿದೆ. ಹೆದ್ದಾರಿಯಲ್ಲಿ ಸಾಗಿದ ಕಾಡಾನೆಯು ಕೆಲಕಾಲ ಆತಂಕ ಸೃಷ್ಟಿ ಮಾಡಿದೆ. ಕಾಡಾನೆ ಓಡಾಟದ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ.

ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸ್ಪಷ್ಟನೆ | ಒಂದು ವರ್ಷದಲ್ಲಿ ಕಾಮಗಾರಿ ಪೂರ್ಣ

ಕಾಮಗಾರಿ ಅಪೂರ್ಣ: ರಾಮಮಂದಿರ ಸೋರಿಕೆ

ವಿಜಯಪುರ: ಅಯೋಧ್ಯೆ ಶ್ರೀರಾಮ ಮಂದಿರದ ಚಾವಣಿ ನಿರ್ಮಾಣ ಇನ್ನೂ ಪೂರ್ಣವಾಗಿರದ ಕಾರಣಕ್ಕೆ ಮಳೆ ಬಂದಾಗ ಸೋರಿಕೆಯಾಗಿದೆಯೇ ಹೊರತು, ರಾಮ ಮಂದಿರ ಕಾಮಗಾರಿಯಲ್ಲಿ ಯಾವುದೇ ಕುಂದುಕೊರತೆಯಾಗಿಲ್ಲ, ಇನ್ನೊಂದು ವರ್ಷದೊಳಗೆ ಮಂದಿರ ನಿರ್ಮಾಣ ಕಾರ್ಯ ಸಂಪೂರ್ಣಗೊಳ್ಳಲಿದೆ ಎಂದು ಉಡುಪಿ ಪೇಜಾವರ ಮಠದ ಪೀಠಾಧಿಪತಿ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ರಾಮಮಂದಿರ ಸೋರುತ್ತಿದೆ- ತರಾತುರಿಯಲ್ಲಿ ಉದ್ಘಾಟನೆ ಆರೋಪ ವಿಚಾರಕ್ಕೆ ಪ್ರತಿಕ್ರಿಯಿಸಿದರು.

ರಾಮಮಂದಿರ ಕ್ಷೇತ್ರ ಅಯೋಧ್ಯೆಯಲ್ಲಿ ಬಿಜೆಪಿ ಅಭ್ಯರ್ಥಿ ಸೋತಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಯಾರೋ ಕೆಲವರು ಅದನ್ನು ಹಿನ್ನಡೆ ಎನ್ನಬಹುದು, ಆದರೆ ಎಲ್ಲರೂ ಅದನ್ನು ಒಪ್ಪುತ್ತಿಲ್ಲ, ಪ್ರತಿ ಪಕ್ಷಗಳ ಮೋಸ, ಆಸೆ, ಆಮಿಷದಿಂದಾಗಿ ಅಯೋಧ್ಯೆಯಲ್ಲಿ ಬಿಜೆಪಿಗೆ ಸೋಲಾಗಿದೆಯೇ ಹೊರತು, ಇದನ್ನು ಧಾರ್ಮಿಕ ಭಾವನೆ ನಂಬಿಕೆಗಳಿಗೆ ಹೊಡೆತ ಎಂದು ಭಾವಿಸುವುದು ಸರಿಯಲ್ಲ ಎಂದರು.

ಜಾತಿವಾರು ಸ್ವಾಮೀಜಿಗಳು ತಮ್ಮ ಸಮುದಾಯಗಳಿಗೆ ಸಿಎಂ, ಡಿಸಿಎಂ ಹುದ್ದೆ ಬೇಡಿಕೆ ವಿಚಾರದ ಬಗ್ಗೆ ಮಾತನಾಡಿ, ನಿಯಮದ ವಿರುದ್ಧ ನಾವು ಹೋಗಲ್ಲ. ಡಿಸಿಎಂ ಹುದ್ದೆ ಬ್ರಾಹ್ಮಣರಿಗೆ ಕೊಡಿ ಎಂದು ನಾವು ಕೇಳಲ್ಲ. ಸಂವಿಧಾನಬದ್ಧವಾಗಿ ಪ್ರಸ್ತಾಪ ಇರಬೇಕು ಎಂದು ಜಾತಿವಾರು ಡಿಸಿಎಂ ಹುದ್ದೆ ಬೇಡಿಕೆಗೆ ಪೇಜಾವರ ಶ್ರೀಗಳು ಪರೋಕ್ಷವಾಗಿ ವಿರೋಧ ವ್ಯಕ್ತಪಡಿಸಿದರು.

ಬೇಜವಾಬ್ದಾರಿ ಹೇಳಿಕೆ ಬೇಡ

ತಮ್ಮನ್ನು ತಾವು ಹಿಂದುಗಳೆಂದು ಕರೆದುಕೊಳ್ಳುವವರು ಹಿಂಸಾಚಾರ, ದ್ವೇಷದಲ್ಲಿ ಹಗಲಿರುಳೂ ನಿರತವಾಗಿದ್ದಾರೆ ಎಂಬ ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿಕೆಗೆ ಪ್ರತಿಕ್ರಿಯಿಸಿದ ಪೇಜಾವರ ಶ್ರೀಗಳು, ಸಹಿಷ್ಣುಗಳಾದ ಹಿಂದುಗಳನ್ನು ಕೆಣಕಬೇಕು, ಒಂದಷ್ಟು ಗೊಂದಲ ಸೃಷ್ಟಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಇಂತಹ ಹೇಳಿಕೆ ನೀಡಿದ್ದಾರೆ. ರಾಜಕೀಯ ನಾಯಕರು ಈ ರೀತಿ ಬೇಜವಾಬ್ದಾರಿ ಹೇಳಿಕೆ ನೀಡಬಾರದು ಎಂದರು.

ಸಿಎಂ, ಡಿಸಿಎಂ ಆಯ್ಕೆ: ಹಸ್ತಕ್ಷೇಪ ಸಲ್ಲದು



ಹುಬ್ಬಳ್ಳಿ: ಸಿಎಂ, ಡಿಸಿಎಂ ಆಯ್ಕೆ ಮಾಡುವ ಅಧಿಕಾರ ಇರುವುದು ಶಾಸಕರಿಗೆ. ನಮ್ಮಂತಹ ಧರ್ಮ ಗುರುಗಳು ಈ ವಿಚಾರದಲ್ಲಿ ಮೂಗು ತೂರಿಸುವುದು ಸರಿಯಲ್ಲವೆಂದು ಪಂಚಮ ಸಾಲಿ ಕೂಡಲ ಸಂಗಮ ಪೀಠದ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀಗಳು, ರಾಜಕಾರಣಿಗಳು ಸಲಹೆ ಕೇಳಿದಾಗ ಧರ್ಮ ಗುರುಗಳು ಸಲಹೆ ಕೊಡಬೇಕು. ಯಾರನ್ನಾದರೂ ಸಿಎಂ ಮಾಡಿ, ಡಿಸಿಎಂ ಮಾಡಲಿ. ನಮಗೆ 2ಎ ಮೀಸಲಾತಿ ಕೊಡಲಿ ಎಂದು ಸ್ವಾಮೀಜಿ ಒತ್ತಾಯಿಸಿದರು.

ರಾಜೀನಾಮೆ ಬಾಂಬ್ ಸಿಡಿಸಿದ ಜೆಡಿಎಸ್ ಶಾಸಕ ಶರಣಗೌಡ ಕಂದಕೂರ

ಪೊಲೀಸರ ಭ್ರಷ್ಟಾಚಾರದಿಂದ ಬೇಸತ್ತಿದ್ದೇನೆ

ಯಾದಗಿರಿ: ಗುರುಮಠಕಲ್ ಕ್ಷೇತ್ರದಲ್ಲಿ ಪೊಲೀಸರ ಭ್ರಷ್ಟಾಚಾರ ಹೆಚ್ಚಾಗಿದ್ದು ಪೊಲೀಸರಿಂದ ಬಡವರಿಗೆ ನ್ಯಾಯ ಸಿಗುತ್ತಿಲ್ಲ ಎಂದು ಬಹಿರಂಗವಾಗಿಯೇ ಬೇಸರ ವ್ಯಕ್ತಪಡಿಸಿ ಡಿಸಿ, ಎಸ್ಪಿ ಸಮ್ಮುಖದಲ್ಲಿಯೇ ಶಾಸಕ ಶರಣಗೌಡ ಕಂದಕೂರ ರಾಜೀನಾಮೆ ಬಾಂಬ್ ಸಿಡಿಸಿದ್ದಾರೆ.

ಗುರುಮಠಕಲ್ ಪಟ್ಟಣದಲ್ಲಿ ಗುರುವಾರ ನಡೆದ ತಾಲೂಕು ಮಟ್ಟದ ಜನತಾದರ್ಶನದಲ್ಲಿ ಮಾತನಾಡಿದ ಅವರು, ನ್ಯಾಯ ಕೋರಿ ಠಾಣೆಗೆ ಬರುವ ಕ್ಷೇತ್ರದ ಸಾರ್ವಜನಿಕರಿಗೆ ನ್ಯಾಯ ಕೊಡದೆ ಪ್ರಭಾವಿಗಳ ಒತ್ತಡಕ್ಕೆ ಮಣಿದು ಪ್ರಕರಣ ದಾಖಲು ಮಾಡುವ ಪೊಲೀಸರ ನಡೆಯಿಂದ ಬೇಸರವಾಗಿದ್ದು, ಇದರಿಂದ ನಾನು ರಾಜೀನಾಮೆ ಕೊಡಲು ಸಿದ್ಧನಾಗಿರುವೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪೊಲೀಸರಿಂದ ಇದೇ ರೀತಿಯಾಗಿ ಅನ್ಯಾಯ, ಭ್ರಷ್ಟಾಚಾರ ಮುಂದುವರೆದರೆ ನಾನು ಸೀದಾ ಯಾನಾಗುಂದಿ ಮಾಣಿಕಮ್ಮಳ ಹತ್ತಿರ ಹೋಗಿ ರಾಜೀನಾಮೆ ಕೊಡುತ್ತೇನೆ. ಪೊಲೀಸರು ಬಡವರ ಪರ, ಅನ್ಯಾಯ, ದೌರ್ಜನ್ಯಕ್ಕೊಳಗಾದವರ ಪರ ಕೆಲಸ ಮಾಡಬೇಕು. ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಡಬಾರದು ಜನರಿಗಾಗಿ ಒಳ್ಳೆಯ ಕೆಲಸ ಮಾಡಿ.
-ಶರಣಗೌಡ ಕಂದಕೂರ, ಶಾಸಕ

ಈ ಕುರಿತು ಎಸ್ಪಿ ಮತ್ತು ಡಿವೈಎಸ್ಪಿ ಅವರಿಗೆ ಡಿಸಿ ಸಮ್ಮುಖದಲ್ಲಿಯೇ ತರಾಟೆಗೆ ತೆಗೆದುಕೊಂಡ ಅವರು, ಪೊಲೀಸರು ಬಡವರಿಗೆ ನ್ಯಾಯ ಒದಗಿಸಬೇಕು, ಬಡವರಿಗೆ ಅನ್ಯಾಯವಾದರೆ ಕ್ರಮ ಜರುಗಿಸಬಾರದಾ? ಪೊಲೀಸ್ ಇಲಾಖೆ ಇರೋದು ದುಡ್ಡಿದ್ದವರು, ಶ್ರೀಮಂತರ ಹಾಗೂ ಪ್ರಭಾವಿಗಳ ರಕ್ಷಣೆಗಾ? ಎಂದು ಖಾರವಾಗಿ ಪ್ರಶ್ನಿಸಿದರು.

ಮರ್ಯಾದೆಗೆ ಅಂಜಿ ಮಗು ಮಾರಿದ ತಾಯಿ

ಹಾವೇರಿ: ಮಗು ಅಕ್ರಮ ಹಸ್ತಾಂತರ ಹಾಗೂ ಮಾರಾಟಕ್ಕೆ ಸಂಬಂಧಪಟ್ಟಂತೆ ಜಿಲ್ಲೆಯ ಠಾಣೆಯಲ್ಲಿ ದಾಖಲಾದ ಪ್ರಕರಣದ ತನಿಖೆ ನಡೆಸಿರುವ ಪೊಲೀಸರು, ಅಕ್ರಮ ಸಂಬಂಧದಿಂದ ಜನಿಸಿದ್ದ ಮಗುವನ್ನು ಮರ್ಯಾದೆಗೆ ಅಂಜಿ ತಾಯಿಯೇ ಮಾರಿದ್ದರು ಎಂಬುದನ್ನು ಪತ್ತೆ ಮಾಡಿದ್ದಾರೆ. ದಾವಣಗೆರೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಟಿ.ಎನ್. ಕವಿತಾ ಅವರು ನೀಡಿದ್ದ ದೂರಿನಡಿ ದಾಖಲಾದ ಪ್ರಕರಣದಲ್ಲಿ ಆರೋಪಿಗಳನ್ನು ಠಾಣೆಗೆ ಕರೆಸಿದ್ದ ಪೊಲೀಸರು, ಹೇಳಿಕೆ ಪಡೆದಿದ್ದಾರೆ. ತಮ್ಮದೇ ಮಗುವನ್ನು ಬೇರೆಯವರ ಮಗುವೆಂದು ಹೇಳಿ ಅಕ್ರಮವಾಗಿ ಹಸ್ತಾಂತರಿಸಿದ್ದ ತಾಯಿಯ ಜೀವನದ ಮಾತುಗಳನ್ನು ಕೇಳಿ ಪೊಲೀಸರೇ ಮರುಗುತ್ತಿದ್ದಾರೆ. ಹೊರ ಜಿಲ್ಲೆಯ 30 ವರ್ಷ ವಯಸ್ಸಿನ ಮಹಿಳೆ, ಪತಿಯಿಂದ ದೂರವಾಗಿ ಹಾವೇರಿ ಜಿಲ್ಲೆಗೆ ಬಂದು ಮೆಣಸಿನಕಾಯಿ ಸ್ವಚ್ಛಗೊಳಿಸುವ ಕೆಲಸಕ್ಕೆ ಸೇರಿದ್ದರು. ವ್ಯಕ್ತಿಯೊಬ್ಬರ ಜೊತೆ ಸಲುಗೆ ಬೆಳೆದು, ಹೆಣ್ಣು ಮಗು ಜನಿಸಿತ್ತು. ಪತಿಯಿಂದ ದೂರವಾದ ಮಹಿಳೆಗೆ ಮಗು ಹೇಗೆ ಎಂಬುದು ಸಮಾಜ ಪ್ರಶ್ನಿಸುತ್ತದೆ ಎಂದು ಮರ್ಯಾದೆಗೆ ಅಂಜಿದ್ದ ಮಹಿಳೆ, ಮಗುವನ್ನು ಬೇರೆಯವರಿಗೆ ಅಕ್ರಮವಾಗಿ ಹಸ್ತಾಂತರಿಸಿದ್ದರು. ಮಾರಾಟದ ಸಂಶಯವಿದ್ದು, ಈ ಬಗ್ಗೆ ಸದ್ಯಕ್ಕೆ ಯಾವುದೇ ಪುರಾವೆ ಸಿಕ್ಕಿಲ್ಲ. ಅದೇ ಮಗುವನ್ನು ಜಿಲ್ಲಾ ರಕ್ಷಣಾಧಿಕಾರಿಗಳು ರಕ್ಷಣೆ ಮಾಡಿ, ಪುನರ್ವಸತಿ ಕಲ್ಪಿಸಿದ್ದಾರೆ. ಮಗು ಆರೋಗ್ಯವಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಡೆಂಘೀ ಹೆಚ್ಚಳ ಕಳವಳಕಾರಿ

ಪ್ರತಿವರ್ಷ ಮಳೆಗಾಲ ಆರಂಭವಾಗುತ್ತಿದ್ದಂತೆ ಡೆಂಘೀ, ಮಲೇರಿಯಾದಂತಹ ಪ್ರಕರಣಗಳು ಹೆಚ್ಚುವುದು ಸರ್ವೇಸಾಮಾನ್ಯ. ಆದರೆ ಈ ಬಾರಿ ಡೆಂಘೀ ಪ್ರಕರಣಗಳು ರಾಜ್ಯವ್ಯಾಪಿಯಾಗಿ ಎಲ್ಲೆಡೆ ಕಾಣಿಸಿಕೊಂಡಿರುವುದು ಕಳವಳಕಾರಿ ವಿಚಾರ. ಆರೋಗ್ಯ ಇಲಾಖೆಯ ಪ್ರಕಾರ ಬರೀ ಆರು ತಿಂಗಳ ಅವಧಿಯಲ್ಲಿ 6,377 ಡೆಂಘೀ ಪ್ರಕರಣಗಳು ದಾಖಲಾಗಿದ್ದು, ಕಳೆದ ಎರಡು ವಾರಗಳಲ್ಲಿ ಏಳು ಜನರನ್ನು ಬಲಿ ಪಡೆದಿದೆ. ರಾಜಧಾನಿ ಬೆಂಗಳೂರಿನಲ್ಲಿ ಡೆಂಘೀ ಪ್ರಕರಣಗಳ ಸಂಖ್ಯೆ 1300 ದಾಟಿದ್ದು, ಚಿಕಿತ್ಸೆ ಫಲಕಾರಿಯಾಗದೇ ಮೂವರು ಮೃತಪಟ್ಟಿದ್ದಾರೆ. ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಸಮುದಾಯ ಯುವ ಆರೋಗ್ಯಾಧಿಕಾರಿಯೊಬ್ಬರು ಡೆಂಘೀ ಜ್ವರಕ್ಕೆ ಬಲಿಯಾಗಿದ್ದಾರೆ. ಹೊಳೆನರಸೀಪುರದಲ್ಲಿ ಇಬ್ಬರು ಬಾಲಕಿಯರು, ಬೆಳಗಾವಿ ಆಸ್ಪತ್ರೆಯಲ್ಲಿ ಒಬ್ಬರು, ಡೆಂಘೀ ಜ್ವರಕ್ಕೆ ಬಲಿಯಾಗಿದ್ದಾರೆ. ಬೆಂಗಳೂರು, ಹಾಸನ, ಮೈಸೂರು, ಚಿಕ್ಕಮಗಳೂರು, ಹಾವೇರಿ, ಶಿವಮೊಗ್ಗ, ಉತ್ತರಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಡೆಂಘೀ ಪ್ರಕರಣಗಳ ಸಂಖ್ಯೆ ಹೆಚ್ಚಾಗಿ ಕಂಡು ಬಂದಿದೆ. ಶೀಘ್ರದಲ್ಲಿ ಸೋಂಕು ಪತ್ತೆಯಾಗಿ ಚಿಕಿತ್ಸೆ ಪಡೆದರೆ ಡೆಂಘೀ ಮಾರಣಾಂತಿಕವಲ್ಲ, ಆದರೆ ಸಕಾಲಕ್ಕೆ ಪತ್ತೆಯಾಗದೆ ಹೋದರೆ ರಕ್ತಕಣಗಳ ಸಂಖ್ಯೆಯಲ್ಲಿ ಏರುಪೇರಾಗಿ ಈ ಜ್ವರ ಪ್ರಾಣಕ್ಕೆ ಕುತ್ತು ತರುತ್ತದೆ. ಈ ಬಗ್ಗೆ ಎಲ್ಲೆಡೆ ಜಾಗೃತಿ ಮೂಡಿಸುವ ಜೊತೆಗೆ, ಸೊಳ್ಳೆಗಳ ಮೂಲಕ ರೋಗ ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕಾಗಿದೆ. ಈ ನಡುವೆ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದಲ್ಲಿ (ಕೆಎಸ್ಎಂಎಸ್‌ಸಿಎಲ್) ಡೆಂಘೀಯಿಂದ ಬಳಲುತ್ತಿರುವ ರೋಗಿಗಳಿಗೆ ನೀಡಲಾಗುವ ಪ್ಯಾರಸಿಟಮಾಲ್ ಮಾತ್ರೆಗಳ ದಾಸ್ತಾನು ಇಲ್ಲ ಎಂಬ ಮಾತು ಕೇಳಿ ಬಂದಿದೆ. ಸರಕಾರ ಈ ಬಗ್ಗೆ ತುರ್ತಾಗಿ ಗಮನಹರಿಸಬೇಕಿದೆ. ಸರಕಾರಿ ಆಸ್ಪತ್ರೆಗಳಲ್ಲಿ ಡೆಂಘೀ ಪರೀಕ್ಷೆಗೆ ರಕ್ತ ಮಾದರಿ ಪರೀಕ್ಷೆ ಮಾಡಿಸಿಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದೆ. ಡೆಂಘೀ ಜ್ವರ ಪತ್ತೆ ಹಚ್ಚಲು ನಡೆಸುವ ಎಲಿಸಾ ಮತ್ತು ರ‍್ಯಾಪಿಡ್ ಟೆಸ್ಟ್‌ಗಳ ದರವನ್ನು ಸರಕಾರ ಪರಿಷ್ಕರಿಸಿದ್ದು, ಎರಡು ರೀತಿಯ ಟೆಸ್ಟಿಂಗ್‌ಗಳಿಗೆ ಒಟ್ಟು 600 ರು. ದರ ನಿಗದಿ ಮಾಡಲಾಗಿದೆ. ಖಾಸಗಿ ಆಸ್ಪತ್ರೆಗಳಿಗೂ ಇದಕ್ಕಿಂತ ಹೆಚ್ಚು ದರ ವಿಧಿಸುವಂತಿಲ್ಲ ಎಂದು ತಿಳಿಸಲಾಗಿದೆ. ಸರಕಾರದ ಮುನ್ನೆಚ್ಚರಿಕೆ ಏನೇ ಇರಲಿ, ಪರಿಸರವನ್ನು ಶುಚಿಯಾಗಿ ಇಟ್ಟುಕೊಂಡರೆ ಸೊಳ್ಳೆ ಮತ್ತು ಡೆಂಘೀಯಿಂದ ದೂರವಿರಬಹುದು.

ಸೊಂಪಾದಕೀಯ

ಭಾರತ್ ರೈಸ್ ಬಂದ್

ಇತ್ತೀಚೆಗೆ ಕೇಂದ್ರ ಬಿಜೆಪಿ ಸರಕಾರ ಭಾರತ್ ರೈಸ್ ಹೆಸರಿನಲ್ಲಿ ದೊಡ್ಡ ಸದ್ದು ಮಾಡಿತ್ತು. 29 ರುಪಾಯಿಗೆ ಒಂದು ಕೆಜಿ ಅಕ್ಕಿ ಕೊಡೋದಾಗಿ ಭರವಸೆ ಕೊಟ್ಟಿದ್ದ ಸರಕಾರ ಅದನ್ನು ಇದ್ದಕ್ಕಿದ್ದಂತೆ ಜಾರಿಗೊಳಿಸಿತ್ತು. ಆದರೆ ಈ ಅವಸರದ ಯೋಜನೆ ಜಾರಿ ಮಾಡುವ ಮೂಲಕ ಜಾರಿಬಿದ್ದಿದೆಯೋ ಈ ಸರಕಾರ ಅನ್ನೋ ಪ್ರಶ್ನೆ ಈಗ ಎಲ್ಲರಲ್ಲಿ ಮೂಡಿದೆ. ಯಾಕಂದ್ರೆ, ಈಗ 29 ರೂಪಾಯಿ ಕೆಜಿಯ ಭಾರತ್ ಅಕ್ಕಿ ಎಲ್ಲೂ ಸಿಗುತ್ತಿಲ್ಲ. ಆರಂಭದಲ್ಲಿ ಎರಡು ದಿನ ದೊಡ್ಡ ಸದ್ದು ಮಾಡಿ ಎಲ್ಲರಿಗೂ ಕೈಗೆಟುಕಿದ್ದ ಅಕ್ಕಿ ಕಾಳುಗಳು ಈಗ ಮಾಯ ಆಗಿವೆ. ಈಗ ಸದ್ಯಕ್ಕೆ ಭಾರತ್ ರೈಸ್ ಬಂದ್ ಆಗಿದೆ ಅಂತ ಕೇಂದ್ರ ಸರಕಾರವೇ ಹೇಳಿಕೆ ಕೊಟ್ಟಿದೆ. ಅಲ್ಲಿಗೆ ಫೆಬ್ರವರಿಯಲ್ಲಿ ಶುರುವಾದ ಜುಲ್ಮೆ ಹೊತ್ತಿಗೆ ನಿಂತುಹೋಗಿದೆ. ಹಾಗಾಗಿ ರಾಜ್ಯ ಸರಕಾರದ ಉಚಿತ ಅಕ್ಕಿ ಸಿಗದ ಮಧ್ಯಮ ವರ್ಗದ ಕುಟುಂಬಗಳು, ಸದ್ಯ 29 ರುಪಾಯಿಗಾದ್ರೂ ಒಂದು ಕೆಜಿ ಅಕ್ಕಿ ಸಿಗುತ್ತಲ್ಲ ಅಂತ ಸಂತಸ ಪಟ್ಟಿದ್ದು ಕ್ಷಣಿಕ ಎಂಬಂತಾಗಿದೆ. ಈ ಬಗ್ಗೆ ಎಪಿಎಂಸಿ ಆಗಲಿ, ಬಿಜೆಪಿಯ ಘಟಕವಾಗಲೀ ಉತ್ತರ ಕೊಡುತ್ತಿಲ್ಲವಂತೆ. ಹೀಗಾಗುತ್ತೆ ಅಂತ ಮೊದಲೇ ಗೊತ್ತಿದ್ದಿದ್ದರೆ, ಪಾಪ, ಬಿಜೆಪಿ ಸರಕಾರ ಈ ಯೋಜನೆ ಸ್ಟಾಕ್ ಇರುವವರೆಗೆ ಮಾತ್ರ ಲಭ್ಯ ಎಂದು ಅನೌನ್ಸ್ ಮಾಡ್ತಾ ಇತ್ತೇನೋ. ಈ ಯೋಜನೆಯಲ್ಲಿ ಅಕ್ಕಿಯ ಜೊತೆ ಗೋಧಿ ಹಿಟ್ಟು ಕಡ್ಲೆ ಬೇಳೆ ಕೂಡ ಸೇರಿತ್ತು. ಆದರೆ ಹೋಲ್‌ಸೇಲ್ ದರಕ್ಕಿಂತಲೂ ತಲಾ ಕಮ್ಮಿ ದೊರಕ್ಕೆ ಇವನ್ನೆಲ್ಲ ಮಾರುತ್ತಿದ್ದ ಯೋಜನೆಗೆ ಈಗ ಹೋಲ್ ಸೇಲ್ ಆಗಿ ಬ್ರೇಕ್ ಬಿದ್ದಿದೆ. ಮೊದಲು ಜೂನ್ 10 ರವರೆಗೂ ಸಾಕಾಗುವಷ್ಟು ಸಾಮಗ್ರಿ ಇದೆ ಎಂದು ಹೇಳಿದ ಸರಕಾರ ಈಗ ಏಕಾಏಕಿ ಈ ಯೋಜನೆಗೆ ತಡೆ ತಂದಿದೆ. ಸರಕಾರ ಹೇಳುವ ಪ್ರಕಾರ ಕಳೆದ ವರ್ಷ ಮಳೆಯ ಕೊರತೆಯಿಂದಾಗಿ ಭತ್ತದ ಉತ್ಪಾದನೆ ಕಮ್ಮಿಯಾಗಿದೆ. ಹಾಗಾಗಿ 29 ಗೆ ಭಾರತಕ್ಕೆ ಕೊಡುವುದು ಸರಕಾರಕ್ಕೆ ಭಾರಿ ಹೊರೆಯಾಗುತ್ತದೆ. ಅಲ್ಲದೆ ದೇಶಾದ್ಯಂತ ಈ ಯೋಜನೆ ಜಾರಿಯಲ್ಲಿರುವುದು ಸರಕಾರಕ್ಕೆ ಸಂಕಷ್ಟ ತಂದುಬಿಟ್ಟಿದೆ. ಈ ಕಾರಣಕ್ಕಾಗಿ ತಾತ್ಕಾಲಿಕವಾಗಿ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಇದೇ ಪರ್ಮನೆಂಟ್ ಆದರು ಅಚ್ಚರಿ ಪಡಬೇಕಾಗಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ಹನೋಯ್ ನಗರದ ವೈಶಿಷ್ಟ್ಯ

ನಾನು ಕೆಲ ದಿನಗಳ ಹಿಂದೆ ವಿಯೆಟ್ನಾಂ ರಾಜಧಾನಿ ಹನೋಯ್ ನಗರದಲ್ಲಿ ಸುತ್ತಾಡುತ್ತಿದ್ದೆ. ಯಾವ ನಗರವೇ ಆಗಲಿ, ಅಲ್ಲಿಗೆ ಭೇಟಿ ನೀಡಿದವರನ್ನು ಸುಲಭಕ್ಕೆ ಒಳಗೆ ಕರೆದುಕೊಳ್ಳುವುದೋ, ಆ ನಗರ ಬಹುಬೇಗ ಆಪ್ತವಾಗುತ್ತದೆ ಮತ್ತು ನಮ್ಮ ಮನಸ್ಸಿನಲ್ಲಿ ಶಾಶ್ವತ ಸ್ಥಾನವನ್ನು ಗಿಟ್ಟಿಸಿಕೊಳ್ಳುತ್ತದೆ. ಹನೋಯ್ ನಗರಕ್ಕೆ ತನ್ನ ಅತಿಥಿಗಳನ್ನು ಸೆಳೆದುಕೊಂಡು ಆಪ್ತವಾಗುವ ವಿಶೇಷ ಗುಣವಿರುವುದು ಸುಳ್ಳಲ್ಲ. ವಿಯೆಟ್ನಾಮಿ ಭಾಷೆಯಲ್ಲಿ ಹನೋಯ್ ಅಂದರೆ ಕೆರೆ, ಸರೋವರಗಳ ನಗರ ಎಂದರ್ಥ. ಹನೋಯ್ ಹೆಸರಿಗೆ ಅನ್ವರ್ಥವಾಗಿದೆ. ಕೆಂಪುನದಿ (ರೆಡ್ ರಿವರ್) ದಡದ ಮೇಲೆ ಈ ನಗರವನ್ನು ನಿರ್ಮಾಣ ಮಾಡಿದ್ದಾರೆ. ಹನೋಯ್ ನಗರದಲ್ಲಿ ವಿಶಾಲವಾದ ಆರು ಸರೋವರಗಳಿವೆ. ಒಂದೊಂದು ಸರೋವರವೂ ಕನಿಷ್ಠ ಐನೂರು ಎಕರೆಯಷ್ಟು ವಿಶಾಲ ಭೂಪ್ರದೇಶದಲ್ಲಿ ಹರಡಿಕೊಂಡಿದೆ. ವಿಯೆಟ್ನಾಂ ಸುಮಾರು ಅರ್ಧ ಶತಮಾನಗಳಷ್ಟು ಕಾಲ ಫ್ರೆಂಚ್ ಆಳ್ವಿಕೆಗೆ ಒಳಪಟ್ಟಿತ್ತು. ಹನೋಯ್ ನಗರದಲ್ಲಿರುವ ಲಾಂಗ್ ಬಿಯೆನ್ ಮತ್ತು ಹೊಅನ್ ಕಿಯೆಮ್ ಪ್ರಾಂತಗಳನ್ನು ಜೋಡಿಸುವ ಲಾಂಗ್ ಬಿಯೆನ್ ಸೇತುವೆಗೂ, ಪ್ಯಾರಿಸ್ ನಗರದಲ್ಲಿರುವ ಐಫೆಲ್ ಟವರ್‌ಗೂ ಒಂದು ವಿಶೇಷ ಸಂಬಂಧವಿದೆ. ಅದೇನೆಂದರೆ, ಐಫೆಲ್ ಟವರ್ ಮತ್ತು ಲಾಂಗ್ ಬಿಯೆನ್ ಸೇತುವೆ ಇವೆರಡನ್ನೂ ನಿರ್ಮಿಸಿದವನು ಅಲೆಕ್ಸಾಂಡರ್ ಗುಸ್ತಾವ್ ಐಫೆಲ್. ವಿಯೆಟ್ನಾಂ ಯುದ್ಧದ ಸಂದರ್ಭದಲ್ಲಿ ಹಲವು ಸಲ ಬಾಂಬ್ ದಾಳಿಗಳಾದರೂ ಆ ಸೇತುವೆಗೆ ಸ್ವಲ್ಪವೂ ಧಕ್ಕೆಯಾಗದಿರುವುದು ಗಮನಾರ್ಹ. ಸುಮಾರು 2 ಕಿ.ಮೀ. ದೂರದ ಆ ಸೇತುವೆಯನ್ನು ಪಾದಚಾರಿಗಳು, ಟ್ರೇನ್, ದ್ವಿಚಕ್ರ ವಾಹನ ಮತ್ತು ಲಘು ಹಾಗೂ ಭಾರಿ ವಾಹನಗಳು ಸಂಚಾರಕ್ಕೆ ಬಳಸುವುದು ಸೇತುವೆಯ ಗಟ್ಟಿತನಕ್ಕೆ ನಿದರ್ಶನ. ಹನೋಯ್ ಅನ್ನು ದ್ವಿಚಕ್ರವಾಹನಗಳ ನಗರವೆಂದೂ ಕರೆಯುವುದುಂಟು. ಆ ನಗರವೊಂದರಲ್ಲೇ ಸುಮಾರು 50 ಲಕ್ಷ ಮೋಟಾರ್ ಬೈಕ್‌ಗಳಿವೆ. ನಗರದ ಶೇ.70ರಷ್ಟು ಜನ ದ್ವಿಚಕ್ರ ವಾಹನಗಳಲ್ಲೇ ಸಂಚರಿಸುತ್ತಾರೆ. ಇದು ಸಂಚಾರ ನಿಯಂತ್ರಣಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಇದನ್ನು ಗಮನಿಸಿ 2030ರ ಹೊತ್ತಿಗೆ ಮೊಪೆಡ್, ಸ್ಕೂಟರ್ ಮತ್ತು ಮೋಟಾರ್ ಬೈಕ್‌ಗಳನ್ನು ನಿಷೇಧಿಸಲು ಸರಕಾರ ನಿರ್ಧರಿಸಿದೆ. ಅದಾದ ಬಳಿಕ ಬದಲಿ ವ್ಯವಸ್ಥೆ ಮಾಡಿಕೊಳ್ಳುವಂತೆ ಜನರಿಗೆ ಅಲ್ಲಿನ ಸರಕಾರ ಈಗಾಗಲೇ ಆದೇಶ ನೀಡಿದೆ. ಆದರೆ ದ್ವಿಚಕ್ರ ವಾಹನಗಳಿಲ್ಲದ ಹನೋಯ್ ನಗರವನ್ನು ಕಲ್ಪಿಸಿಕೊಳ್ಳಲು ಅಲ್ಲಿನ ಜನರಿಗೆ ಸಾಧ್ಯವಾಗುತ್ತಿಲ್ಲ. ಆಧುನಿಕ ವಿಯೆಟ್ನಾಂನ ನಿರ್ಮಾತೃ ಮತ್ತು ರಾಷ್ಟ್ರಪಿತ ಎಂದು ಕರೆಯಿಸಿಕೊಂಡಿರುವ ಹೋ ಚಿ ಮಿನ್‌ನ ಸಮಾಧಿ ಹನೋಯ್ ನಗರದಲ್ಲೇ ಇದೆ. ಇಂದಿಗೂ ಆತನನ್ನು ತಮ್ಮ ಆರಾಧ್ಯದೈವ ಎಂದೇ ವಿಯೆಟ್ನಾಮಿಗಳು ಪರಿಗಣಿಸುತ್ತಾರೆ. ಆತ 1945ರಿಂದ ಹತ್ತು ವರ್ಷ ಗಳ ಕಾಲ ಪ್ರಧಾನಿಯಾಗಿದ್ದ. ತನ್ನ ನಿಧನದ ಬಳಿಕ, ಪಾರ್ಥಿವ ಶರೀರವನ್ನು ಸುಟ್ಟು, ಬೂದಿಯನ್ನು ವಿಯೆಟ್ನಾಂನ ಮೂರು ಪ್ರಾಂತಗಳಲ್ಲಿ ಸಿಂಪಡಿಸು ವಂತೆ ಹೋ ಚಿ ಮಿನ್ ಹೇಳಿದ್ದ. ಆದರೆ ಆತನ ದೇಹವನ್ನು ಸುಡಲೂ ಇಲ್ಲ, ಹೂಳಲೂ ಇಲ್ಲ. ಇಂದಿಗೂ ಆತನ ಮೃತದೇಹವನ್ನು (ಆತ ಮರಣ ಹೊಂದಿದ್ದು 1969ರಲ್ಲಿ) ಸಂರಕ್ಷಿಸಿ (ಎಂಬಾಮ್) ಹಾಗೆ ಇಡಲಾಗಿದೆ. ಹನೋಯ್ ನಗರದ ಇನ್ನೊಂದು ವೈಶಿಷ್ಟ ಅಂದ್ರೆ, ಅಲ್ಲಿನ ಮನೆಗಳು. ಹೆಚ್ಚಿನ ಮನೆಗಳು ಚಿಕ್ಕವು. ಇದಕ್ಕೆ ಕಾರಣ ಗೃಹ ತೆರಿಗೆ. ಮನೆಯ ಅಗಲ ಮತ್ತು ವಿಸ್ತೀರ್ಣವನ್ನು ಪರಿಗಣಿಸಿ ಗೃಹ ತೆರಿಗೆಯನ್ನು ನಿರ್ಧರಿಸುವ ಪದ್ಧತಿಯನ್ನು ಫ್ರೆಂಚರು ಜಾರಿಗೆ ತಂದಿದ್ದರಿಂದ, ತೆರಿಗೆಯನ್ನು ಉಳಿಸಲು ಸಣ್ಣ ಮನೆಗಳನ್ನು ನಿರ್ಮಿಸುವ ಜಾಯಮಾನ ಆರಂಭವಾಯಿತು. ಕಾಲಕ್ರಮೇಣ ಜನಸಂಖ್ಯೆ ಹೆಚ್ಚುತ್ತಾ ಹೋದಂತೆ, ನಿವೇಶನಗಳನ್ನು ಗಿಟ್ಟಿಸಿಕೊಳ್ಳುವುದು ದುಸ್ತರವಾ ಗುತ್ತಾ ಹೋಗಿದ್ದರಿಂದ ಸಣ್ಣ ಮನೆಗಳನ್ನು ಹೊಂದುವುದು ಅನಿವಾರ್ಯವಾಯಿತು. ಈಗ ಆಸ್ತಿ ತೆರಿಗೆ ಅಥವಾ ಗೃಹ ತೆರಿಗೆ ಲಾಗೂ ಆಗುವುದಿಲ್ಲ. ಆದರೂ ಚಿಕ್ಕ ಮನೆಯನ್ನು ಹೊಂದುವ ಸಂಪ್ರದಾಯ ಮಾತ್ರ ಮುಂದುವರಿದಿದೆ.

ಕೊರೆಯುವ ಚಾಳಿಯ ಬಗ್ಗೆ ಒಂದಿಷ್ಟು ಕೊರೆತಗಳು

ಶಿಶಿರ ಕಾಲ

ಶಿಶಿರ್ ಹೆಗಡೆ
shishirh@gmail.com

ಅವರು ಜವಳಿ ಕಾಮತರು ಎಂದೇ ಫೇಮಸ್ಸು. ಅವರ ಜವಳಿ ಅಂಗಡಿಯಲ್ಲಿ ಸಿಗುತ್ತಿದ್ದ ಸೀರೆ, ಬಟ್ಟೆಗಳೆಂದರೆ ಅತ್ಯುತ್ತಮ ಎಂದು ಇಡೀ ತಾಲೂಕಿನಲ್ಲಿ ಜನಜನಿತವಾಗಿತ್ತು. ಚಂದದ, ಹೊಸ ಸ್ಟೈಲಿನ, ದೀರ್ಘ ಬಾಳಿಕೆ ಬರುವ ಬಟ್ಟೆ ಬೇಕೆಂದರೆ ಅವರ ಅಂಗಡಿಗೇ ಹೋಗಬೇಕು. ಅದು ತಾಲೂಕಾಮಟ್ಟದ 'ಜನರಲ್ ನಂಬಿಕೆ'. ತವರಿಗೆ ಬರುವ ಹೆಣ್ಣುಮಕ್ಕಳಿಗಂತೂ ಅವರ ಅಂಗಡಿ ನೊಸ್ಟಾಲ್ಜಿಯಾ. ನಮ್ಮೂರಿನ ಕಿರಾಣಿ, ಹಾರ್ಡ್‌ವೇರ್, ಬಟ್ಟೆ ಮೊದಲಾದ ಅಂಗಡಿಕಾರರು ದೂರದ ಹುಬ್ಬಳ್ಳಿಗೆ ಹೋಗಿ ಹೋಲ್‌ಸೇಲ್ ಬೆಲೆಯಲ್ಲಿ ಸಾಮಾನುಗಳನ್ನು ತಂದು ಇಲ್ಲಿ ಮಾರಾಟ ಮಾಡುವುದು. ಅವರೆಲ್ಲರೂ ಹುಬ್ಬಳ್ಳಿಗೆ ಎರಡು ವಾರಕ್ಕೊಮ್ಮೆ, ಬುಧವಾರ ಹೋಗುತ್ತಿದ್ದರು. ಆದರೆ ನಮ್ಮ ಜವಳಿ ಕಾಮತರು ಆ ದಿನ ಹೋಗುತ್ತಿರಲಿಲ್ಲ, ಅವರು ಎಲ್ಲಿಂದ ತಮ್ಮ ಅಂಗಡಿಗೆ ಬಟ್ಟೆ ತರುತ್ತಿದ್ದರು ಎಂಬುದೇ ಊರಿನ ಟಾಪ್ ಸೀಕ್ರೆಟ್, ಬಹುಚರ್ಚಿತ ವಿಷಯವಾಗಿತ್ತು. ಅಷ್ಟೊಳ್ಳೆ ಗುಣಮಟ್ಟದ ಬಟ್ಟೆ ಸಿಗುತ್ತಿದ್ದರೂ ಕಾಮತರ ಅಂಗಡಿಗೆ ಹೋಗಲು ಜನರು ಹೆದರುತ್ತಿದ್ದರು. ಹೆದರಿಕೆಗೊಂದು ಸಕಾರಣವಿತ್ತು. ಬಟ್ಟೆ ಖರೀದಿಗೆ ಹೋದರೆ ಖುದ್ದು ಕಾಮತರೇ ಪ್ರತಿಯೊಂದು ಬಟ್ಟೆಯನ್ನು ತೋರಿಸುತ್ತಿದ್ದರು. ತೋರಿಸುವುದೆಂದರೆ ಹೇಗೆ? ಒಂದು ಸೀರೆ ಹಿಡಿದು ಅದರ ಪಲ್ಲು, ಬಾರ್ಡರ್, ಫಲಕು, ಈ ಡಿಸೈನು, ಈ ಮಟೀರಿಯಲ್ಲು ಹೀಗೆ ಸಾವಿರದೆಂಟು ವಿವರ. ಒಂದೊಂದು ಸೀರೆಗೆ ಕನಿಷ್ಠ ಹತ್ತು ನಿಮಿಷದ ವಿವರಣೆ. ಖರೀದಿಸಲು ಬಂದವರಿಗೆ ಸೀರೆ ಮೊದಲ ನೋಟದಲ್ಲಿ ಇಷ್ಟವಾಗಲಿ, ಬಿಡಲಿ, ಅದಷ್ಟು ವಿವರ ಹೇಳಿಯೇ ಕಾಮತರು ಮುಂದಿನ ಸೀರೆಯನ್ನು ತೋರಿಸುತ್ತಿದ್ದುದು. ಜತೆಯಲ್ಲಿ ಬಂದ ಗಂಡಸರ ಕಥೆ ಬಿಡಿ, ಖುದ್ದು ಖರೀದಿಗೆ ಹೋದ ಹೆಂಗಸರಿಗೇ ಸುಸ್ತಾಗಿಹೋಗುತ್ತಿತ್ತು.

ಕಾಮತರ ಅಂಗಡಿಯಲ್ಲಿ ಗಂಡಸರ ಬಟ್ಟೆ ಅಷ್ಟಾಗಿ ಇಡುತ್ತಿರಲಿಲ್ಲ. ಆದರೆ ಅವರಲ್ಲಿ ಒಳ್ಳೆಯ ಅಂಡರ್‌ವೇರ್ ಸಿಗುತ್ತಿತ್ತು. ಅಂಗಡಿಗೆ ಖರೀದಿಗೆ ಬರುವ ಗಂಡಸರು ಗಲ್ಲಾದಲ್ಲಿ ಕೂತ ಕಾಮತರನ್ನು ನಾಚಿಕೆಯಲ್ಲಿ ಮೆಲ್ಲಗೆ ಅಂಡರ್‌ವೇರ್ ಬೇಕೆಂದು ಕೇಳಿದರೆ, ಕಾಮತರು ಗಟ್ಟಿಯಾಗಿ ಒಳಗಿರುವ ಸೇಲ್ಸ್ ಗರ್ಲ್‌ಗೆ ಇವಳೇ, 'ಯಜಮಾನರಿಗೆ ಅಂಡರ್‌ವೇರ್ ತೋರ್ಸು' ಎಂದು ಗಟ್ಟಿಯಾಗಿ ಕೂಗುತ್ತಿದ್ದರು. ಇದನ್ನು ಕೇಳಿ ಹೆಂಗಸರು ಮುಸಿ ಮುಸಿ ನಗುತ್ತಿದ್ದರು. ಕೊನೆಕೊನೆಗೆ ಅವರ ಈ ವಿವರಿಸುವ ಚಾಳಿ ಎಷ್ಟಾಯಿತೆಂದರೆ ನೆರೆದ ಸಮಸ್ತ ಹೆಂಗಸರ ನಡುವೆ ಅಂಡರ್‌ವೇರ್ ಖರೀದಿಗೆ ಧೈರ್ಯ ಮಾಡಿದ ಗಂಡಸಿಗೆ ಅಂಡರ್‌ವೇರ್‌ನ ಬಗ್ಗೆಯೂ ನಿಲ್ಲಿಸಿ ಹತ್ತು ನಿಮಿಷ ವಿವರಣೆ ಕೊಡುತ್ತಿದ್ದರು. ಈ ಎಲ್ಲ ಕಾರಣಗಳಿಂದ ಗಂಡಸರು ಅವರ ಅಂಗಡಿಗೆ ಹೋಗುವುದೆಂದರೆ ಅಧೀರರಾಗುತ್ತಿದ್ದರು. ಅವರ ಅತಿಯಾದ ವಿವರಣೆಯನ್ನು ಯಾರೋ ಒಂದಿಬ್ಬರು ಸುಮ್ಮನೆ ಹೊಗಳಿರಬೇಕು. ಕೊನೆಕೊನೆಯಲ್ಲಿ ಅವರ ವಿವರಣೆಯೇ ಮುಗಿಯುತ್ತಿರಲಿಲ್ಲ, ಅವರ ಅಂಗಡಿಗೆ ಹೋದರೆ ಗ್ರಾಹಕ ಗೊಂದಲಕ್ಕೊಳಗಾಗುತ್ತಿದ್ದ. ಏನನ್ನು ಖರೀದಿಸಬೇಕು, ಯಾವ ಬಟ್ಟೆ ತನಗೆ ಇಷ್ಟ ಎಂಬುದನ್ನೇ ಮರೆತು ಅವರ ವಿವರಗಳ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿದ್ದ. ಈ ಗೊಂದಲದ ಮಧ್ಯೆ ನಿಮಗೆ ಈ ಬಟ್ಟೆಯೇ ಸರಿ ಎಂದು ಕಾಮತರೇ ತೀರ್ಮಾನ ಮಾಡಿಬಿಡುತ್ತಿದ್ದರು. ಅದು ಬಿಟ್ಟು ಬೇರೆ ಬಟ್ಟೆ ಖರೀದಿಸಬೇಕೆಂದರೆ ಅವರಿಗೊಂದು ಸಕಾರಣ ಕೊಡಬೇಕು. ಇಲ್ಲದಿದ್ದರೆ ಮತ್ತಷ್ಟು ವಿವರಣೆ.

ಇದರಿಂದಾಗಿ ಅವರಲ್ಲಿ ಅತ್ಯುತ್ತಮ ಬಟ್ಟೆಗಳಿದ್ದರೂ, ಅವು ಗುಣಮಟ್ಟಕ್ಕೆ ಹೆಸರುವಾಸಿಯಾಗಿದ್ದರೂ ಅವರಲ್ಲಿ ವ್ಯಾಪಾರ ಕಡಿಮೆಯಾಗುತ್ತ ಬಂತು. ಅನಿವಾರ್ಯದಲ್ಲಿ ಮಾತ್ರ ಅವರ ಅಂಗಡಿಗೆ ಜನರು ಹೋಗುವಂತಾಯಿತು. ತಾಲೂಕಿನ ಗಂಡು ಪ್ರಭೇದಗಳಂತೂ ಕಾಮತರ ಅಂಗಡಿಗೆ ಬರುವುದನ್ನು ಸಂಪೂರ್ಣ ನಿಲ್ಲಿಸಿಬಿಟ್ಟರು. ಅವರ ಅಂಗಡಿಯಲ್ಲಿ ಅವರ ಅತಿಯಾದ ಮಾತೇ ಒಂದು ದೊಡ್ಡ ಸಮಸ್ಯೆಯಾಗಿತ್ತು. ಇದರಿಂದಾಗಿ ಅವರು ದೊಡ್ಡ ಗ್ರಾಹಕವರ್ಗವನ್ನು ಅನವಶ್ಯಕ ಕಳೆದುಕೊಂಡಿದ್ದರು. ಅದರ ಸುಳಿವು ಕೂಡ ಅವರಿಗಿದ್ದಂತಿರಲಿಲ್ಲ.

ಕೆಲವರಿಗೆ ಇದೊಂದು ದುರಭ್ಯಾಸವಾಗಿಬಿಟ್ಟಿರುತ್ತದೆ. ಏನನ್ನೇ ಕೇಳಿ, ಅವರಲ್ಲಿ ಒಂದು ಮಾರ್ಕ್‌ನ ಉತ್ತರವೇ ಇರುವುದಿಲ್ಲ. ವಿಷಯದ ಪೂರ್ವಾಪರ ನಿಮಗೆ ಗೊತ್ತಿರಲಿ ಬಿಡಲಿ, ಅವರು ಹೇಳುವುದನ್ನು ಹೇಳುವುದೇ. ಹಿಂದೆ ಹೇಳಿದ ವಿಷಯ ಮುಂದೇನಾಯಿತು ಎಂದು ಕೇಳಿದರೆ ಮತ್ತೆ ಅ,ಆ, ಇ, ಈ, ಏಕ್ ದಾ ತೀನ್ ಇಂದಲೇ ಶುರುವಾಗುವುದು. ಹನುಮಂತ ಲಂಕೆಯನ್ನು ಹೇಗೆ ಸುಟ್ಟ ಎಂದು ಕೇಳಿದರೆ ಕೈಕೇಯಿ ಪಾಯಸ ತಿಂದಾಗಿನಿಂದ ಇವರ ಕಥೆ ಆರಂಭವಾಗುತ್ತದೆ. ಹೌದು ಅಥವಾ ಅಲ್ಲ ಎಂಬ ಒಂದೇ ಶಬ್ದದ ಪ್ರಶ್ನೆಗೆ ಅವರದು ಅರ್ಧಗಂಟೆಯ ಉತ್ತರವಿರುತ್ತದೆ. ಏನನ್ನೇ ಕೇಳಿದರೂ ಅತಿ ಎನಿಸುವ ವಿವರಣೆ. ಇವರಿಗೆ ಕ್ರಮೇಣ ಅದುವೇ ಅಭ್ಯಾಸವಾಗಿಬಿಟ್ಟಿರುತ್ತದೆ.

ಇಂಥವರ ಜತೆ ಪಬ್ಲಿಕ್ ಸೆಟ್ಟಿಂಗ್, ಸ್ನೇಹ ಬಳಗದಲ್ಲಿ, ಕಾರ್ಯಕ್ರಮಗಳಲ್ಲಿ ಸಿಕ್ಕಿಹಾಕಿಕೊಂಡರೆ ಅಲ್ಲಿಂದ 'ಎಸ್ಕೇಪ್' ಆಗುವುದು ಹೇಗೆ ಎಂದೇ ಜನರು ಯೋಚಿಸುತ್ತಿರುತ್ತಾರೆ. ಏನೋ ಒಂದು ಕಾರಣ ಸಿಕ್ಕರೆ ತಕ್ಷಣ ಅಲ್ಲಿಂದ ಜಾರಿಕೊಳ್ಳುತ್ತಾರೆ. ಇವರ ವಿಲಂಬಿತ ಮಾತಿನ ಚಾಳಿ ಅವರ ಚರ್ಮ ಗಟ್ಟಿಯಾಗಿಸಿರುತ್ತದೆ. ಅವರಿಗೆ ಎದುರಿಗಿನವರ ಚಿಕ್ಕ ಅಥವಾ ಸ್ಪಷ್ಟ ನಿರ್ಲಕ್ಷ್ಯದ ನಡೆ ಗ್ರಹಿಕೆಗೇ ಬರುವುದಿಲ್ಲ, ಎದುರಿಗಿನವರ ನಿರುತ್ಸಾಹವನ್ನೂ ಮೀರಿ ಅವರು ಮಾತನಾಡುತ್ತಲೇ ಇರುತ್ತಾರೆ.

ಅದೊಂದು ಕಾಲವಿತ್ತು. ಜನರಲ್ಲಿ ಬೇಕಾದಷ್ಟು ಸಮಯವಿತ್ತು. ಆಗ ಇದೊಂದು ಸಮಸ್ಯೆ ಎಂದೆನಿಸಿರಲಿಲ್ಲ. ಈಗ ಹಾಗಲ್ಲ, ಉದ್ಯೋಗವಿರಲಿ, ಮಾಡಲು ಕೆಲಸವಿಲ್ಲದಿರಲಿ, ಯಾರಿಗೂ ಪುರುಸೊತ್ತಿಲ್ಲ. ನೂರೆಂಟು ತಾಂತ್ರಿಕತೆ, ಮೊಬೈಲ್ ಮೊದಲಾದ ಸಮಯ ಉಳಿಸುವ, ಆದರೆ ಖುದ್ದು ತಾನೇ ಸಮಯ ನುಂಗುವ ಸಲಕರಣೆಗಳು. ಇವು ನಮ್ಮಲ್ಲಿ ಕೇಳುವ ತಾಳ್ಮೆಯನ್ನು ತಗ್ಗಿಸಿವೆ. ಸಾಮಾಜಿಕ ಹಂತದಲ್ಲಿಯೇ ತಾಳ್ಮೆಯ ಮಟ್ಟ ಕುಸಿದಿದೆ. ನಮಗೆ ಉದ್ದುದ್ದದ ವಿಡಿಯೊಗಳಿಗಿಂತ ಚಿಕ್ಕ ರೀಲ್‌ಗಳೇ ಇಂದು ಇಷ್ಟವಾಗುವುದು. ಇಂದು ಸ್ನೇಹವರ್ಗದಲ್ಲಿರಲಿ, ಆಫೀಸಿನಲ್ಲಿ, ಉದ್ಯೋಗ, ವ್ಯಾಪಾರ, ಕಾರ್ಪೊರೇಟ್ ಜಗತ್ತಿನಲ್ಲಿರಲಿ, ಮಾತಿನ ಸ್ಪಷ್ಟತೆ ಮತ್ತು ಸಂಕ್ಷಿಪ್ತತೆ ಬಹಳ ಮುಖ್ಯ.

ಕಾರ್ಪೊರೇಟ್ ಜಗತ್ತಿನಲ್ಲಿ ಇಂತಹ ಕೊರೆತಗಾರರು ಹೇರಳವಾಗಿ ಎದುರಾಗುತ್ತಾರೆ. ಇವರಲ್ಲಿ ಕೆಲವರು ಮೂಲತಃ ಅಷ್ಟು ಮಾತನಾಡುವವರಲ್ಲ. ಆದರೆ ಅವರಿಗೆ ಮಾತನಾಡಿದರೆ ಮಾತ್ರ ಬೆಲೆ, ಗುರುತು ಎಂಬ ತಪ್ಪು ಗ್ರಹಿಕೆ ಇದ್ದಂತಿದೆ. ಇಂದು ಕಂಪನಿಗಳ ಕೆಲಸದ ಜೀವಾಳ ಮೀಟಿಂಗುಗಳು. ಪ್ರತಿಯೊಬ್ಬ ಕಾರ್ಪೊರೇಟ್‌ನಲ್ಲಿ ಕೆಲಸ ಮಾಡುವವನು ದಿನಕ್ಕೆ ಎರಡು ಮೂರು ಮೀಟಿಂಗುಗಳಲ್ಲಿ ಭಾಗಿಯಾಗುವುದು ಸಾಮಾನ್ಯ. ಔದ್ಯೋಗಿಕವಾಗಿ ಮೇಲಕ್ಕೇರಿದಂತೆ ಮೀಟಿಂಗುಗಳ ಸಂಖ್ಯೆ ಏರುತ್ತದೆ. ಪ್ರತೀ ಮೀಟಿಂಗ್‌ಗಳಿಗೆ ಒಂದು ಉದ್ದೇಶವಿರುತ್ತದೆ. ಅರ್ಧ ಗಂಟೆಯ ಮೀಟಿಂಗಿನಲ್ಲಿ ಇಂತಿಂಥದ್ದು ಚರ್ಚಿಸಿ ಮುಗುಸಬೇಕು. ಆದರೆ ಟೀಮಿನಲ್ಲಿ ಕೊರೆಯುವ ವ್ಯಕ್ತಿಯೇನಾದರೂ ಇದ್ದಾರೆ ಮುಗಿಯಿತು. ಏನೋ ಒಂದು ವಿಷಯ ಕೇಳಿಬಿಟ್ಟರೆ ಸಂಬಂಧವಿರುವ, ಇಲ್ಲದಿರುವ ಏನೇನೋ ವಿಷಯವನ್ನು ಹೇಳಿ ಇಡೀ ಮೀಟಿಂಗಿನ ಮುಕ್ಕಾಲು ಭಾಗ ಆತನೇ ತೆಗೆದುಕೊಂಡುಬಿಡುತ್ತಾನೆ. ಇದರಿಂದ ಕೆಲವೊಮ್ಮೆ ಮೀಟಿಂಗ್ ಅನ್ನು ಇನ್ನಷ್ಟು ಲಂಬಿಸಬೇಕು, ಅಥವಾ ಇನ್ನೊಮ್ಮೆ ಅದೇ ಉದ್ದೇಶಕ್ಕೆ ಎಲ್ಲ ಸೇರಬೇಕು. ಏಕ್ದಂ ಕಡಿಮೆ ಸಮಯವಿರುವ ಪ್ರಾಜೆಕ್ಟುಗಳಾದರೆ ಇಂಥವರನ್ನು ಸೇರಿಸಿಕೊಳ್ಳುವಾಗ ಹತ್ತು ಬಾರಿ ಯೋಚಿಸಬೇಕಾಗುತ್ತದೆ. ಏಕೆಂದರೆ ಇವರ ಉದ್ದುದ್ದದ- ಅತಿವಿವರದ ಮಾತಿನಲ್ಲಿ ಸಮಯ ವ್ಯರ್ಥವಾಗುತ್ತದೆ. ಅಷ್ಟೇ ಅಲ್ಲ, ಇಡೀ ತಂಡದ ಮೇಲೆ ಇದು ಋಣಾತ್ಮಕತೆ ಬೀರುತ್ತದೆ. ಅದೆಷ್ಟೋ ಬಾರಿ ಇಂಥಹ ಮಾತನಾಡುವವರ ಉದ್ದೇಶ ಒಳ್ಳೆಯದೇ ಇರುತ್ತದೆ. ಆದರೆ ವಿವರಣೆ ಅದೆಷ್ಟೆಂದರೆ ಅದರಿಂದ ಇನ್ನಷ್ಟು ಗೊಂದಲಗಳು. ಮಾತನಾಡುವ ವಿಷಯವುಳ್ಳ ಬಾಕಿಯವರೂ ಮೌನಕ್ಕೆ ಜಾರಿಬಿಡುತ್ತಾರೆ. ಪ್ರಾಜೆಕ್ಟ್ ಮ್ಯಾನೇಜರ್‌ಗೆ ಇಂತಹ ಸನ್ನಿವೇಶವನ್ನು ನಿಭಾಯಿಸುವುದು ಸುಲಭವಲ್ಲ, ಕ್ರಮೇಣ ಅಂಥವರನ್ನು ಕಂಡರೆ ಟೀಮಿನಲ್ಲಿ ಗೌರವವಿರುವುದಿಲ್ಲ, ಮುಖ್ಯ ಚರ್ಚೆಗಳಿಂದ ಅವನನ್ನು ಹೊರಗಿಡಲಾಗುತ್ತದೆ. ಕ್ರಮೇಣ ಟೀಮ್ ಅಂಥವನನ್ನು ಪ್ರತ್ಯೇಕಿಸಿಟ್ಟುಬಿಡುತ್ತದೆ.

ಕಾರ್ಪೊರೇಟ್ ಅಥವಾ ಯಾವುದೇ ಉದ್ಯೋಗವಿರಲಿ, ಅಧಿಕಾರದಲ್ಲಿ ಮೇಲಕ್ಕೆ ಏರಿದಂತೆ ಜವಾಬ್ದಾರಿ ಹೆಚ್ಚುತ್ತದೆ. ಒಂದು ಹಂತದ ನಂತರದ ಉನ್ನತ ಉದ್ಯೋಗಗಳು ವಿಷಯ ಗ್ರಹಿಕೆ ಮತ್ತು ನಿರ್ಧಾರ ಎರಡಕ್ಕೇ ಸೀಮಿತವಾಗಿರುತ್ತದೆ. ಡೈರೆಕ್ಟರ್, ಸುಪರಿಂಟೆಂಡೆಂಟ್, ವೈಸ್ ಪ್ರೆಸಿಡೆಂಟ್, ಸಿಇಒ ಮೊದಲಾದ ಹುದ್ದೆಗಳೆಂದರೆ ನಿರಂತರ ನಿರ್ಧಾರಗಳು. ಈ ಹಂತದವರಿಗೆ ರಿಪೋರ್ಟ್ ಮಾಡುವವರು ಕೂಡ ಇದನ್ನು ಚೆನ್ನಾಗಿ ಅರಿತುಕೊಂಡಿರಬೇಕು. ನಮ್ಮ ಮೇಲಿನ ಅಧಿಕಾರಿಗೆ ಎಷ್ಟು ವಿವರ ಬೇಕು, ಯಾವ ವಿವರ ಸಮಂಜಸ ಇವೆಲ್ಲವೂ ಕೆಳ ಅಧಿಕಾರಿಗೆ ತಿಳಿದಿರಬೇಕು. ಏನು ಹೇಳಬೇಕು, ಯಾವುದು ಪ್ರಸ್ತುತ, ಏನು ಅನವಶ್ಯಕ ಎಂಬುದು ತಿಳಿದು ಮಾತನಾಡುವುದು ಅತ್ಯಂತ ಮುಖ್ಯವಾದ ವಿಷಯ. ಮಾತಿನಲ್ಲಿ ಸ್ಪಷ್ಟತೆ ಮತ್ತು ಸಂಕ್ಷಿಪ್ತತೆ ಇರುವ ಉದ್ಯೋಗಿಯನ್ನೇ ಉನ್ನತ ಅಧಿಕಾರಿಗಳು ಇಷ್ಟಪಡುವುದು. ತಮ್ಮ ಸುತ್ತಲೂ ಅಂಥವರಿರಬೇಕೆಂದೇ ಬಯಸುವುದು.

ಟೈಟಾನಿಕ್ ಎಂಬ ಮುಳುಗಿದ ಹಡಗಿನ ಕಥೆ ಕೇಳಿರುತ್ತೀರಿ. ಆ ಬೃಹತ್ ಹಡಗು ದೊಡ್ಡ ಮಂಜುಗಡ್ಡೆಗೆ ಅಪ್ಪಳಿಸಿದಾಗ ಅದರ ಕ್ಯಾಪ್ಟನ್ ಎಡ್ವರ್ಡ್ ಸ್ಮಿತ್‌ಗೆ ಆಕಾಶವೇ ತಲೆಯ ಮೇಲೆ ಕಳಚಿಬಿದ್ದಂತಾಗಿತ್ತು. ಏನು ಮಾಡಬೇಕು, ಹಡಗಿಗೆ ಎಷ್ಟು ಹಾನಿಯಾಗಿದೆ, ಮುಂದೇನಾಗಬಹುದು, ಹೀಗೆ ನೂರೆಂಟು ಪ್ರಶ್ನೆ, ನಿರ್ಧಾರವನ್ನು ಕ್ಯಾಪ್ಟನ್ ಆದ ಆತ ತ್ವರಿತವಾಗಿ ಮಾಡಬೇಕಿತ್ತು. ಹಡಗು ಮಂಜುಗಡ್ಡೆಗೆ ಅಪ್ಪಳಿಸಿದ್ದೇ ತಡ, ಹಡಗಿನ ಒಂದೊಂದು ಮೂಲೆಯಿಂದ ಒಬ್ಬೊಬ್ಬರು ಓಡಿ ಬಂದು ವಿವರಗಳನ್ನು ಕೊಡತೊಡಗಿದರು. ಅಲ್ಲೇನೋ ಮುರಿಯಿತಂತೆ, ಇಲ್ಲೆಲ್ಲೋ ನೀರು ಒಳನುಗ್ಗಿತಂತೆ ಎಂಬಿತ್ಯಾದಿ ಸುಮಾರು ಐವತ್ತು ವಿವರಗಳು ಅವನ ಮುಂದೆ ಬಂದವು. ಈ ಎಲ್ಲ ವಿವರಗಳ ನಡುವೆ ಆತ ಹಡಗಿನಲ್ಲಿದ್ದ ಲೈಫ್ ಬೋಟ್‌ಗಳನ್ನು ಸಮುದ್ರಕ್ಕಿಳಿಸಲು ಆಜ್ಞಾಪಿಸುವುದನ್ನೇ ಮರೆತುಬಿಟ್ಟ. ವಿವರಗಳ ಪ್ರವಾಹದ ಮಧ್ಯೆ ಅತ್ಯಾವಶ್ಯವಿದ್ದ ನಿರ್ಧಾರವನ್ನು ಆತ ತೆಗೆದುಕೊಂಡಿರಲಿಲ್ಲ, ತರುವಾಯ ಅದೆಷ್ಟೋ ಮಂದಿ ಆ ದಿನ ನೀರಿನಲ್ಲಿ ಸಮಾಧಿಯಾದರು.

ಅತಿಯಾಗಿ ವಿವರಿಸುವವರ ಅಭ್ಯಾಸಕ್ಕೆ ಹಲವಾರು ಕಾರಣಗಳಿರುತ್ತವೆ. ಇದನ್ನು ಬೆಳೆದು ಬಂದ ವಾತಾವರಣಕ್ಕೆ ಆರೋಪಿಸುವವರಿದ್ದಾರೆ. ಯಾವ ವ್ಯಕ್ತಿಯಲ್ಲಿ ಆತಂಕ ಅಥವಾ ಅಭದ್ರತೆ, ಕೀಳರಿಮೆ ಇರುತ್ತದೆಯೋ ಅಂಥವರು ಅತಿಯಾದ ವಿವರಣೆಯ ಕೆಲಸಕ್ಕೆ ಕೈ ಹಾಕುವುದು ಸಾಮಾನ್ಯ. ಕೆಲವರಲ್ಲಿ ತಾವು ಹೇಳಿದ್ದು ತಪ್ಪಾಗಿ ಗ್ರಹಿಸಬಹುದೆಂಬ ನಿರಂತರ ಅಪನಂಬಿಕೆ ಇರುತ್ತದೆ. ಅದಕ್ಕೆ ಹಿಂದೆಂದೋ ನಡೆದ ಘಟನೆ ಕಾರಣವಿರಬಹುದು. ಆತ್ಮವಿಶ್ವಾಸದ ಕೊರತೆ ಕೂಡ ಅತಿಯಾಗಿ ವಿವರಿಸುವಂತೆ ಮಾಡುತ್ತದೆ. ಹೀಗೆ ಹೇಗೋ ಆರಂಭವಾದ ಅತಿವಿವರಿಸುವ ಚಾಳಿ ಕ್ರಮೇಣ ವ್ಯಕ್ತಿತ್ವದ ಭಾಗವೇ ಆಗಿಬಿಡುತ್ತದೆ. ವೃತ್ತಿಪರ ಉದ್ಯೋಗದಲ್ಲಿ ಮೇಲಧಿಕಾರಿಗಳ ಶಭಾಷ್ ಗಿರಿ ಪಡೆಯುವ ಉದ್ದೇಶದಿಂದ ಕೂಡ ಇಂತಹ ರೂಢಿ ಬೆಳೆಸಿಕೊಂಡವರಿರುತ್ತಾರೆ. ಪ್ರತಿಯೊಬ್ಬ ವ್ಯಕ್ತಿಗೂ ಇಂತಿಷ್ಟು ತಾಳ್ಮೆ, ಸಹನೆ, ವಿಷಯವನ್ನು ಸಂಸ್ಕರಿಸುವ ಶಕ್ತಿ ಇರುತ್ತದೆ. ಕೆಲಸ, ಔದ್ಯೋಗಿಕ ಜವಾಬ್ದಾರಿ ಹೆಚ್ಚಿದಂತೆ ವಿಷಯ ಸಂಸ್ಕರಣೆಯ ವೇಗ ಹೆಚ್ಚಿಸಿಕೊಳ್ಳಬೇಕಾದದ್ದು ಅವಶ್ಯಕತೆ. ದೊಡ್ಡ ಜವಾಬ್ದಾರಿಯ ಹುದ್ದೆಗಳಲ್ಲಿ ಅತಿಯಾದ ವಿವರಣೆ ಎಂದರೆ ದೊಡ್ಡ ಹಿಂಸೆ, ಗೊಂದಲ ಇತ್ಯಾದಿ. ಅಷ್ಟೇ ಅಲ್ಲ, ಇದರಿಂದಾಗಿ ತಪ್ಪು ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಹೆಚ್ಚು, ಹಾಗಾಗಿ ಅತಿಯಾಗಿ ವಿವರಿಸುವ ಕೊರಕರನ್ನು ಮೇಲಧಿಕಾರಿಗಳು ದೂರವಿಟ್ಟುಬಿಡುತ್ತಾರೆ. ಇಂಥವರಿಗೆ ಬಡ್ತಿ ಸಹಜವಾಗಿ ಸಿಗುವುದಿಲ್ಲ. ಅದು ಸರಿಯೋ, ತಪ್ಪೋ, ಆದರೆ ಕಾರ್ಪೊರೇಟ್ ಜಗತ್ತು ಇರುವುದೇ ಹಾಗೆ. ಮಾತಿನಲ್ಲಿ ಸ್ಪಷ್ಟತೆ, ನೇರತನ, ಅದನ್ನು ಚಿಕ್ಕದಾಗಿ ಹೇಳುವ ಚಾಕಚಕ್ಯತೆ ಇಂದಿನ ಬಹುತೇಕ ಉದ್ಯೋಗಗಳ, ಅಂತೆಯೇ ವ್ಯಾಪಾರಗಳ ಯಶಸ್ಸಿಗೆ ಅತ್ಯವಶ್ಯಕ.

1986. ನಾಸಾದ ನೌಕೆ ಚಾಲೆಂಜರ್ ಏಳು ಗಗನಯಾನಿಗಳನ್ನು ಅಂತರಿಕ್ಷಕ್ಕೆ ಒಯ್ಯುವುದಿತ್ತು. ಎಲ್ಲ ತಯಾರಿಯೂ ನಡೆಯಿತು. ಪ್ರೊಜೆಕ್ಟ್‌ನ ಕೊನೆಯ ಹಂತ, ಇನ್ನೇನು ಹಾರಿಸಲು ಕೆಲವು ದಿನಗಳಿವೆ. ಆಗ ಕಿರಿಯ ವಿಜ್ಞಾನಿಯೊಬ್ಬ ಸುಮಾರು ಐವತ್ತು ಪುಟದ ವಿವರವುಳ್ಳ ಒಂದು ವರದಿಯನ್ನು ನಾಸಾ ಮುಖ್ಯಸ್ಥರ ಮುಂದಿಟ್ಟಿದ್ದ. ಅಷ್ಟು ದಪ್ಪದ ವಿವರಣೆಗಳನ್ನು ನೋಡಿ ಮುಖ್ಯಸ್ಥ ಅದನ್ನು ಅಲ್ಲಿಯೇ ಪಕ್ಕಕ್ಕಿಟ್ಟುಬಿಟ್ಟ, ನೌಕೆ ಹಾರುವ ದಿನ ಬಂತು, ನಭಕ್ಕೆ ಹಾರಿಸಿದ್ದೂ ಆಯಿತು. ಕೇವಲ 72 ಸೆಕೆಂಡಿನಲ್ಲಿ ಆಕಾಶದಲ್ಲಿ ನೋಡನೋಡುತ್ತಲೇ ಆ ನೌಕೆ, ಅದರಲ್ಲಿದ್ದ ಯಾನಿಗಳೆಲ್ಲರೂ ಭಸ್ಮವಾಗಿ ಬಿಟ್ಟರು. ನಂತರ ಅದರ ಪೂರ್ವಾಪರ ತನಿಖೆ ನಡೆಯಿತು. ಆಮೇಲೆ ತಿಳಿದದ್ದೇನೆಂದರೆ ಆ ನೌಕೆಯ ಒಂದು ದೊಡ್ಡ ಸಮಸ್ಯೆಯ ಬಗ್ಗೆ ಎಲ್ಲ ವಿವರಗಳೂ ಆ ಕಿರಿಯ ವಿಜ್ಞಾನಿ ಕೊಟ್ಟ ವರದಿಯಲ್ಲಿತ್ತು. ಆ ವರದಿ ಸಲ್ಲಿಸಿದ ವಿಜ್ಞಾನಿ ಪ್ರಾಜೆಕ್ಟ್ ಮ್ಯಾನೇಜರ್‌ಗೆ ಎಲ್ಲ ವಿವರಿಸಿದ್ದ, ಆದರೆ ಇದರಿಂದ ನೌಕೆ ಸುಟ್ಟು ಭಸ್ಮವಾಗುತ್ತದೆ ಎಂಬುದನ್ನೇ ತನ್ನ ವಿವರಗಳ ನಡುವೆ ಪ್ರತ್ಯೇಕಿಸಿ ಉಲ್ಲೇಖಿಸುವುದನ್ನು ಮರೆತಿದ್ದ. ಇದರಿಂದಾಗಿ, ಅತಿಯಾದ ವಿವರಣೆಯಿಂದಾಗಿ ಅದರ ನಾಸಾ ಮುಖ್ಯಸ್ಥ ತಪ್ಪು ನಿರ್ಧಾರ ತೆಗೆದುಕೊಂಡಿದ್ದ.

ಇಂತಹ ಅದೆಷ್ಟೋ ಉದಾಹರಣೆಗಳಿವೆ. ಕೆಲವೊಮ್ಮೆ ಅತಿಯಾದ ವಿವರ ಕೊಡುವುದು ವೈಯಕ್ತಿಕ ಹಾನಿಗೂ ಕಾರಣವಾಗುವುದಿದೆ. ನಿಮಗೆ ಬಂಗಾಳದ ನವಾಬ ಸಿರಾಜ್-ಉದ್-ದೌಲನ ಕಥೆ ಗೊತ್ತಿರುತ್ತದೆ. ಸಿರಾಜ್ ತನ್ನೆಲ್ಲ ಯುದ್ಧ ಯೋಜನೆಯ ವಿವರವನ್ನು ಅನವಶ್ಯಕ ಮೀರ್ ಜಾಫರ್‌ಗೆ ವಿವರಿಸಿದ್ದ. ಮೀರ್ ಜಾಫರ್ ಬ್ರಿಟೀಷರಿಗೆ ಇದೆಲ್ಲವನ್ನು ಹೇಳಿ ಯುದ್ಧದಲ್ಲಿ ಸೋಲಾಯಿತು. ಅಷ್ಟೇ ಅಲ್ಲ, ಪ್ಲಾಸಿ ಕದನದ ಸೋಲು ಮುಂದಿನ ಎರಡು ಶತಮಾನದ ಬ್ರಿಟಿಷ್ ಆಳ್ವಿಕೆಗೆ ನಾಂದಿಯಾಯಿತು. ಹೀಗೆ ಅನವಶ್ಯಕ ವಿವರಗಳಿಂದ ಲಾಭಕ್ಕಿಂತ ವೈಯಕ್ತಿಕ ಹಾನಿಯಾಗುವುದೇ ಜಾಸ್ತಿ.

ಎಷ್ಟು ಬೇಕೋ ಅಷ್ಟನ್ನು, ಸ್ಪಷ್ಟವಾಗಿ ಹೇಳುವುದು ಜಾಣತನ. ಐನ್‌ಸ್ಟೀನ್ ಯಾವತ್ತೋ ಹೇಳಿದ್ದಾನಲ್ಲ - If you can't explain it simply, you don't understand it well enough. ಚಿಕ್ಕದಾಗಿ ಚೊಕ್ಕದಾಗಿ ವಿವರವನ್ನು ಹೇಳುವುದು ಇಂದಿನ ಜಮಾನಾದ ಅತ್ಯಂತ ಮುಖ್ಯವಾದ ಸಾಫ್ಟ್ ಸ್ಕಿಲ್. ವಿಪರ್ಯಾಸವೆಂದರೆ ಇದನ್ನು ಯಾವುದೇ ಶಿಕ್ಷಣ ಕಲಿಸುವುದಿಲ್ಲ. ಎಷ್ಟು ಮಾತನಾಡಬೇಕು, ಎಷ್ಟು ವಿವರ ಕೊಡಬೇಕು ಎಂಬುದನ್ನು ಅರಿತವನು ಸಮಾಜದಲ್ಲಿ ಬೇಗ ಬೆಳೆಯಬಲ್ಲ. ಮಾತಿನಲ್ಲಿ ಸ್ಪಷ್ಟತೆ ರೂಢಿಸಿಕೊಂಡಷ್ಟು ಸಾಮಾಜಿಕ ಗೌರವ ಜಾಸ್ತಿ. ಜಗತ್ತು ಎಷ್ಟು ಬೇಕೋ ಅಷ್ಟನ್ನು ಮಾತಾಡುವವನನ್ನೇ ಬುದ್ಧಿವಂತನೆಂದು ಗ್ರಹಿಸುವುದು. ಅದು ಬಿಟ್ಟು ಒಂದೇ ವಾಕ್ಯವನ್ನು ಹೇಳಬೇಕಾದಲ್ಲಿ ಇಪ್ಪತ್ತೆದು ವಾಕ್ಯ ಹೇಳಿ ಯಶಸ್ವಿಯಾಗಬೇಕೆಂದರೆ ನೀವು ಕನ್ನಡ ಸುದ್ದಿ ಟಿವಿಗಳ ಆಂಕರ್ ಉದ್ಯೋಗಕ್ಕೆ ಸರಿಹೊಂದಬಹುದು. ಇನ್ನುಳಿದ ಕಡೆ ಅತಿ ವಿವರಣೆ ಮಾರಕವಾಗುವುದೇ ಜಾಸ್ತಿ. ಈ ಸೂಕ್ಷ್ಮವನ್ನು ಅರಿತಲ್ಲಿ ಔದ್ಯೋಗಿಕ, ವ್ಯಾಪಾರಿಕ ಸಾಧ್ಯತೆಗಳು ಇನ್ನಷ್ಟು ತೆರೆದುಕೊಳ್ಳುತ್ತವೆ. ಮಾತಿನ ಸರಳತೆ ರೂಢಿಸಿಕೊಂಡಲ್ಲಿ ಯಶಸ್ಸು ಸುಲಭವಾಗುತ್ತದೆ. ಲೋಕಾಭಿರಾಮವಾಗಿ ಮಾತನಾಡುವಾಗಲೂ ಕೂಡ ವಿವರಣೆಯ ಹಂತ ಮೀರಿ ಲಂಬಿಸಿದರೆ ಅದು ಸ್ನೇಹ-ಸಂಬಂಧಗಳಲ್ಲಿಯೂ ರುಚಿಸುವುದಿಲ್ಲ. ಜವಳಿ ಕಾಮತರಂತೆ - ಗುಣವಿದ್ದರೂ ಅಂಥವರನ್ನು ಸಮಾಜ ಕ್ರಮೇಣ ದೂರವಿಟ್ಟುಬಿಡುತ್ತದೆ. ಮಾತಿನೆಡೆಗಿನ ಚಿಕ್ಕ ಜಾಗೃತೆ, ಗ್ರಾಹಕರನ್ನು ಸಂಧಿಸುವಾಗ, ಮೀಟಿಂಗ್ ಮೊದಲಾದವು ಇದ್ದಾಗ ಹೇಳಬೇಕಾದ ವಿಚಾರಗಳ ಹರಿವನ್ನು ಪಟ್ಟಿಮಾಡಿಕೊಳ್ಳುವುದು, ಅದಕ್ಕೊಂದು ಮಾನಸಿಕ ತಯಾರಿ ಮಾಡಿಕೊಂಡರೆ ಇದೆಲ್ಲವನ್ನು ತಪ್ಪಿಸಬಹುದು. ಏಳ್ಗೆಗೆ ಮಾತಿನ ಹರಿವಿನ ಅವಲೋಕನ ಅತ್ಯವಶ್ಯಕ. ಉದ್ಯೋಗ ಯಾವುದೇ ಇರಲಿ, ಮಾತು ಜಾಗೃತ ಆಯ್ಕೆಯಾದರೆ ಮಾತ್ರ ಯಶಸ್ಸು ಒಲಿಯುತ್ತದೆ.

ಧ್ವನಿಯನ್ನೇ ಉಸಿರಾಗಿಸಿಕೊಂಡಿದ್ದ ಮೈಕ್ ಚಂದ್ರು!

ವ್ಯಕ್ತಿ ಚಿತ್ರ

ಜಯಪ್ರಕಾಶ ಪುತ್ತೂರು
vveditoped@gmail.com

ನಮ್ಮ ಸಮಾಜದಲ್ಲಿ ಎಂತೆಂಥ ವ್ಯಕ್ತಿ-ವಿಶೇಷದವರು ಇದ್ದಾರೆ ಎಂಬುದನ್ನು ಗಮನಿಸುವಾಗ ನಿಜಕ್ಕೂ ಅಚ್ಚರಿಯ ಜತೆ ಸಂತೋಷವೂ ಆಗುತ್ತದೆ. ಅದಕ್ಕೆ ಕಾರಣ ಓರ್ವ ಸಾಮಾನ್ಯ ವ್ಯಕ್ತಿಯಾದ ಮೈಕ್ ಚಂದ್ರು. ಹೌದು, ಇವರು ತಮ್ಮ ಧ್ವನಿಯನ್ನೇ ಉಸಿರಾಗಿಸಿಕೊಂಡು ಬದುಕಿದಂಥ ಛಲಗಾರ. ಜನಮಾನಸದಲ್ಲಿ ತಮ್ಮ ಕಂಠಸಿರಿಯಿಂದಲೇ ಆಕರ್ಷಿಸಿರುವ ಇವರನ್ನು ಗುರುತಿಸಿದ ಭಾರತೀಯ ಅಂಚೆ ಇಲಾಖೆ ಅವರ ಹೆಸರಿನಲ್ಲಿ ಅಂಚೆ ಲಕೋಟೆಯನ್ನು ಹೊರತಂದು ಗೌರವಿಸಿದೆ. ಇದೊಂದು ಅಪರೂಪದ ಘಟನೆಯಲ್ಲದೆ ಮತ್ತಿನ್ನೇನು! ಇಂಥ ಭಾಗ್ಯ ಅಥವಾ ಅದೃಷ್ಟ ಎಲ್ಲರಿಗೂ ಒಲಿದು ಬರಲು ಸಾಧ್ಯವೂ ಇಲ್ಲ. ಮೈಕ್ ಚಂದ್ರು ಅವರು ಚುನಾವಣೆ ಸಂದರ್ಭದಲ್ಲಿ, ವಸ್ತುಪ್ರದರ್ಶನದ ಆವರಣದಲ್ಲಿ, ಪಲ್ಸ್ ಪೋಲಿಯೋ, ಸಂಗೀತ ಕಾರ್ಯಕ್ರಮಗಳ ನಿರೂಪಣೆಯಲ್ಲಿ ಹಾಗೂ ರಂಗಭೂಮಿ ವೇದಿಕೆಗಳಲ್ಲಿ ಧ್ವನಿ ಕೇಳಿದರೆ ಸಾಕು-ಅದು 'ಮೈಕ್ ಚಂದ್ರುವವರೇ' ಎಂದು ಗುರುತಿಸುವ ಮಟ್ಟಕ್ಕೆ ಬೆಳೆದು ನಿಂತಿದ್ದರು.

ಈ ಹಿಂದೆ 50 ವರ್ಷಗಳಿಂದಲೂ ತಮ್ಮ ಅಪೂರ್ವ ಕಂಠದಿಂದಲೇ ಗುರುತಿಸಿಕೊಂಡಿದ್ದವರು ಮೈಕ್ ಚಂದ್ರು. ಇವರ ಪ್ರತಿಭೆಯನ್ನು ಗುರುತಿಸಿ ಅಂಚೆ ಇಲಾಖೆ ಅವರ ಹೆಸರಿನಲ್ಲಿ ಕನ್ನಡ, ಹಿಂದಿ, ಇಂಗ್ಲೀಷ್ ಭಾಷೆಗಳಲ್ಲಿ ಲಕೋಟೆಯನ್ನು ಹೊರ ತರುವ ಮೂಲಕ ಕಾರ್ಯಕ್ರಮಗಳ ಪ್ರಚಾರಕನಿಗೆ ಸ್ಟಾರ್ ಪ್ರಚಾರ ಒಲಿದಿತ್ತು. ತಿ. ನರಸೀಪುರ ಪಟ್ಟಣದ ಎನ್.ನಾರಾಯಣ ಮತ್ತು ವಿಶಾಲಾಕ್ಷಮ್ಮ ದಂಪತಿಗಳ ಮಗನಾಗಿ ಜನಿಸಿದ ಚಂದ್ರಶೇಖರ್ ಅವರಿಗೆ ಬಾಲ್ಯದ ದಿನಗಳಲ್ಲಿಯೇ ನಾಟಕ, ಕಲೆ, ಸಂಗೀತವೆಂದರೆ ಎಲ್ಲಿಲ್ಲದ ಅಪಾರ ಪ್ರೀತಿ. ಶಾಲೆಯಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿ ಶಿಕ್ಷಕರಿಂದ 'ಸೈ' ಎನ್ನಿಸಿಕೊಂಡಿದ್ದರು. ಬನುಮಯ್ಯ ಕಾಲೇಜಿನಲ್ಲಿ ಪದವಿ ಅಧ್ಯಯನ ಮಾಡುತ್ತಿದ್ದಾಗ ಶಿಕ್ಷಣವನ್ನು ಮೊಟಕು ಗೊಳಿಸಿ ಸಂಪೂರ್ಣವಾಗಿ ಪ್ರಚಾರದಲ್ಲಿಯೇ ತಮ್ಮನ್ನು ತಾವು ತೊಡಗಿಸಿಕೊಂಡವಲ್ಲಿ ಯಶಸ್ವಿಯಾದವರು ಮೈಕ್ ಚಂದ್ರು.

ಆ ದಿನಗಳಲ್ಲಿ ಊರೂರುಗಳನ್ನು ಸುತ್ತಿ ಮೊದಲಿಗೆ ಚುನಾವಣೆಯಲ್ಲಿ 'ಕಡ್ಡಾಯವಾಗಿ ನಿಮ್ಮ ಮತ ಚಲಾಯಿಸಿ' ಎಂದು ಪ್ರಚಾರ ಮಾಡುತ್ತಿದ್ದರು. ಆಗ 'ಬಿಬಿಸಿ' ಚಾನಲ್ ಇವರನ್ನು ಸಂದರ್ಶನ ಮಾಡಿ ಸುದ್ದಿ ಪ್ರಸಾರ ಮಾಡಿತ್ತು. ಈ ವಿಚಾರ ಜಿಲ್ಲಾಡಳಿತದ ಗಮನಕ್ಕೆ ಬಂದು, ಮೈಕ್ ಚಂದ್ರು ಅವರನ್ನು ಸ್ಥಳೀಯ ಚುನಾವಣೆ ಪ್ರಚಾರಕ್ಕೆ ಬಳಸಿಕೊಂಡಿತ್ತು. ಅಲ್ಲಿಂದ ಜಿಲ್ಲಾಡಳಿತ ಹಲವಾರು ಕಾರ್ಯಕ್ರಮಗಳಲ್ಲಿ ನಿರೂಪಣೆ ಮಾಡುವಂತಹ ಅವಕಾಶ ಕೊಟ್ಟಿತು. ಮೈಕ್ ಚಂದ್ರು ಧ್ವನಿಯನ್ನು ಕೇಳುತ್ತಿದ್ದ ವಿವಿಧ ಸಂಘ-ಸಂಸ್ಥೆಗಳು ಕೂಡ ನಿರೂಪಣೆ ಮಾಡಲು ಇವರನ್ನು ಕರೆದೊಯ್ಯುತ್ತಿದ್ದುದುಂಟು. ಮಾಸ್ಟರ್ ಹಿರಣ್ಣಯ್ಯ ಅವರೊಂದಿಗೆ 'ಲಂಚಾವತಾರ' ನಾಟಕದಲ್ಲಿಯೂ ಪಾತ್ರ ಮಾಡಿ ಜೈಕಾರ ಗಿಟ್ಟಿಸಿಕೊಂಡವರು. ನಾಡಿನ ಕಲಾಸಂಘ, ಕಲಾಪ್ರಿಯ, ಸಮುದಾಯದ ವಿವಿಧ ನಾಟಕ-ಸಂಸ್ಥೆಗಳು ಇವರನ್ನು ಕಾಲಾನುಕಾಲಕ್ಕೆ ಗುರುತಿಸಿ ನಾಟಕಗಳಲ್ಲಿ ಅವಕಾಶಗಳನ್ನು ಮಾಡಿಕೊಟ್ಟಿತ್ತು. ಅಷ್ಟೇ ಅಲ್ಲದೆ ಮುಂಬೈ, ದಿಲ್ಲಿ, ಮದ್ರಾಸ್, ಬೆಂಗಳೂರು-ಮುಂತಾದೆಡೆಗಳಲ್ಲಿಯೂ ತಮ್ಮ ಧ್ವನಿಯ ಶಕ್ತಿಯಿಂದ ಜನಮನ ಗೆದ್ದವರು. ಕರ್ನಾಟಕ ರಾಜ್ಯ ಲಾಟರಿ ಪ್ರಚಾರ ಕಾರ್ಯದ ರಾಯಭಾರಿಯಾಗಿ ಕೆಲಸ ಮಾಡಿದ್ದೊಂದು ವಿಶೇಷ. ಧೂಮಪಾನದ ವಿರುದ್ಧ ಜಾಗೃತಿಯನ್ನೂ ಮೂಡಿಸಿದವರು. ಜಿಲ್ಲಾ 'ರಾಜ್ಯೋತ್ಸವ ಪ್ರಶಸ್ತಿ' ಸೇರಿದಂತೆ ವಿವಿಧ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಸರಕಾರಿ ಕೆಲಸ ಸಿಕ್ಕಿದರೂ ಅದನ್ನು ಇಷ್ಟಪಡದೆ ತಮ್ಮ ಧ್ವನಿಯ ಮೂಲಕವೇ ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಛಲತೊಟ್ಟವರು ಮೈಕ್ ಚಂದ್ರು. ಹಲವು ವರ್ಷಗಳ ತನಕ ಬೆಳಗಿನ ವೇಳೆಯಲ್ಲಿ ಪತ್ರಿಕೆಗಳನ್ನು ಹಂಚುವ ಕಾಯಕವನ್ನೂ ಮಾಡಿದ್ದಾರೆ. ವಸ್ತು ಪ್ರದರ್ಶನದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಲ್ಲಿ ನಿರೂಪಣೆ ಮಾಡುತ್ತಿದ್ದಾಗ 'ಆಂದೋಲನ' ಪತ್ರಿಕೆ ಬಗ್ಗೆ ಜಾಹೀರಾತು ಕೂಡ ಮಾಡಿದವರು ಚಂದ್ರಶೇಖರ್. ಜೀವನದಲ್ಲಿ ಉನ್ನತ ಸಾಧನೆ ಮಾಡಿದ್ದರೂ ಮೈಕ್ ಚಂದ್ರು ಎಂದಿಗೂ ಬೀಗಿದವರಲ್ಲ. ಅವರ ಅವಿರತ ಶ್ರಮಕ್ಕೆ ಅಂಚೆ ಇಲಾಖೆ ರಾಷ್ಟ್ರೀಯ ಗೌರವ ತೋರಿದ್ದು ಕೂಡಾ ಈ ದೃಷ್ಟಿಯಿಂದಲೇ ಎಂದು ಹೇಳಿದರೆ ಹೆಚ್ಚು ಸಮಂಜಸವಾದೀತು. ಅದೇ ಮೊದಲ ಬಾರಿಗೆ ನಿರೂಪಣೆ ಮಾಡುವ ಓರ್ವ ವ್ಯಕ್ತಿಗೆ ಗೌರವ ಸಂದಿರುವುದು ಸಾಂಸ್ಕೃತಿಕ ನಗರಿಗೆ ಹಿರಿಮೆ ಎಂದರೆ ತಪ್ಪಾಗಲಾರದು. ಪ್ರತಿ ವರ್ಷದ ದಸರಾ ವಸ್ತು ಪ್ರದರ್ಶನದಲ್ಲಿ ಮೈಕ್ ಚಂದ್ರು ಅವರ ಧ್ವನಿ ಮೊಳಗುತ್ತಿತ್ತು.

ವರನಟ ಡಾ. ರಾಜ್‌ಕುಮಾರ್, ನಾಡಿನ ಖ್ಯಾತ ನಟ ಎಂಜಿಆರ್ ಸೇರಿದಂತೆ ಪ್ರಮುಖರ ಸಿನಿಮಾಗಳ ಸಂಗೀತ ರಸಸಂಜೆ ಕಾರ್ಯಕ್ರಮಗಳಿಗೆ ಮೈಕ್ ಚಂದ್ರು ಅವರೇ ನಿರೂಪಕರು. ಕನ್ನಡ, ತಮಿಳು, ಉರ್ದು ಭಾಷೆಗಳಲ್ಲಿ ಸುಲಲಿತವಾಗಿ ನಿರೂಪಣೆ ಮಾಡುವ ಇವರು ಜೊತೆಗೆ ಮುಖ್ಯಮಂತ್ರಿ ದೇವರಾಜ ಅರಸು ಅವರಿಂದ ಹಿಡಿದು, ಎಲ್ಲಾ ಹಿರಿಯ ರಾಜಕಾರಣಿಗಳ ಕಾರ್ಯಕ್ರಮಗಳ ಮೈಕ್ ವ್ಯವಸ್ಥೆಯನ್ನು ಮಾಡುತ್ತಿದ್ದರು. ಚಂದ್ರು ಅವರಿಗೆ ಬಾಲ್ಯದಿಂದಲೂ ನಾಟಕದ ಗೀಳು. ಶಾಲಾ-ಕಾಲೇಜು ದಿನಗಳಲ್ಲಿ ಹಲವು ನಾಟಕಗಳಿಗೆ ಬಣ್ಣ ಹಚ್ಚಿದ ಹೆಗ್ಗಳಿಕೆಯೂ ಇವರದು. ಮೈಕ್ ಚಂದ್ರು ಅವರು ತಮ್ಮ ಜೀವಿತಾವಧಿಯಲ್ಲಿ 200ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಪರ್ವತವಾಣಿ ಅವರ 'ಹಗ್ಗದ ಕೊನೆ' ನಾಟಕದಲ್ಲಿ ಪ್ರಮುಖ ಪಾತ್ರ ಮಾಡಿ ಹೆಸರು ಹಾಗೂ ಪ್ರಶಸ್ತಿ ಎರಡನ್ನೂ ತನ್ನದಾಗಿಸಿಕೊಂಡವರು. ಸಮತೆಂತೋ ರಂಗತಂಡ, ಅಮರಕಲಾ ಸಂಘ, ಬೆನಕ ತಂಡದಲ್ಲೂ ಸಕ್ರಿಯರಾಗಿ ದುಡಿದವರು.

ಮತದಾನ ಪ್ರಜಾಪ್ರಭುತ್ವದ ಪ್ರಮುಖ ಘಟ್ಟ, ಯಾವುದೇ ಪಕ್ಷವಿರಲಿ, ಉತ್ತಮರನ್ನು ಆಯ್ಕೆ ಮಾಡಿ ಎಂದು ಎನ್. ಚಂದ್ರಶೇಖರ್ ಅವರು ಸೈಕಲ್‌ನ ಮೂಲಕ ಮೈಸೂರು ಸುತ್ತಮುತ್ತ ಪ್ರಚಾರ ಮಾಡಿದ್ದನ್ನು ಇಂದಿಗೂ ನೆನಪಿಟ್ಟುಕೊಂಡವರು ಬಹಳಷ್ಟು ಜನರಿದ್ದಾರೆ. ಇದನ್ನು ಗಮನಿಸಿದ ಚುನಾವಣಾ ಆಯೋಗ ಇದನ್ನೇ 'ಮತ ಜಾಗೃತಿ' ಅಭಿಯಾನಕ್ಕೆ ಅಸ್ತ್ರವಾಗಿ ಬಳಸಿಕೊಂಡಿತ್ತು. ಡಾ. ರಾಜ್‌ಕುಮಾರ್ ಅವರ 23ಕ್ಕೂ ಹೆಚ್ಚು ಸಂಗೀತ ರಸಸಂಜೆಗೆ ಮೈಕ್ ಚಂದ್ರು ಅವರು ನಿರೂಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರು ದೆಹಲಿ ಕರ್ನಾಟಕ ಸಂಘ, ಮದ್ರಾಸ್ ವಸ್ತು ಪ್ರದರ್ಶನ, ಮುಂಬಯಿ ಕನ್ನಡ ಸಂಘದಲ್ಲೂ ಕಾರ್ಯಕ್ರಮ ನಿರೂಪಣೆ ಮಾಡಿದ್ದಾರೆ. ಮೊದಲಿಗೆ ನಾಟಕಗಳಲ್ಲಿ ಅಭಿನಯಿಸಿ, ಹಿಂದಿ ಭಾಷಾ ಲೋಕದ ಗಾರುಡಿಗ 'ಬಿನಾಕಾ' ಖ್ಯಾತಿಯ ಅಮಿನ್ ಸಯಾನಿ ಮುಂತಾದ ಪ್ರವಾಚಕರಿಂದ ಪ್ರೇರಿತರಾದವರು. ಅವರನ್ನೆಲ್ಲಾ ಸ್ವತಃ ಕಂಡು ಏಕಲವ್ಯನಂತೆ ಸತತವಾದ ಸ್ವಪ್ರಯತ್ನದಿಂದ, ತಮ್ಮ ಕಂಠಸಿರಿಯನ್ನು ಎಲ್ಲ ವಿಧದಲ್ಲಿ ಶ್ರೀಮಂತಗೊಳಿಸಿಕೊಂಡರು. ಅನಂತರ ಯಾವ ವೇದಿಕೆಯನ್ನು ಅಲಂಕರಿಸಲೂ ಹಿಂದೆ ಮುಂದೆ ನೋಡಿದವರಲ್ಲ. ಅಂತಹ ಈ ಕ್ಷೇತ್ರದ ಧ್ರುವತಾರೆಯನ್ನು ಅರಸುತ್ತಾ ಬಂದ ಪ್ರಶಸ್ತಿಗಳು ನೂರಾರು. ತಾನು ಹಿಡಿದ ಈ ಅಪರೂಪದ ಹವ್ಯಾಸಕ್ಕೆ ಚಿನ್ನದ ಮೆರಗು ನೀಡಿ, ಆತ್ಮ ಮತ್ತು ಮನಸ್ಸನ್ನು ಸಮ್ಮಿಳಿಸಿ ಮಹಾಸಾಧನೆ ಮಾಡಿದ ಸರಳ, ಸಜ್ಜನರಾಗಿ ಎಲ್ಲರ ಆಪ್ತಮಿತ್ರರೂ ಆಗಿದ್ದರು. 'ಒಬ್ಬ ಮನುಷ್ಯ ಕಂಠವನ್ನೇ ನಂಬಿ ಬದುಕಲು ಸಾಧ್ಯವೇ?' ಎನ್ನುವ ಪ್ರಶ್ನೆ ಉದ್ಭವಿಸಿದರೆ ಧೈರ್ಯವಾಗಿ 'ಹೌದು' ಎನ್ನಬಹುದು. ಇದಕ್ಕೆ ನಿದರ್ಶನವಾಗಿ ಮೈಕ್ ಚಂದ್ರು ಬಾಳಿ ಜಗತ್ತಿಗೆ ತೋರಿಸಿದರು.

ಇನ್ನೊಂದು ಅಚ್ಚರಿಯೆಂದರೆ, ಮೈಕ್ ಚಂದ್ರು ಅವರು ಯಾವುದೇ ಅನೌನ್ಸ್‌ಮೆಂಟ್ ಮಾಡುವ ಮೊದಲೇ ಆ ಕುರಿತು ಮಾಹಿತಿಯನ್ನು ಕಲೆಹಾಕಿ ಜನತೆಗೆ ಹೇಗೆ ಅದನ್ನು ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ಮುಟ್ಟಿಸಬೇಕು ಎನ್ನುವ ಹೋಂವರ್ಕ್ ಕೂಡ ಮಾಡುತ್ತಿದ್ದರು. 'ನಾನು ಯಾವುದೇ ಅನೌನ್ಸ್‌ಮೆಂಟ್‌ಗೆ ಮೈಕ್ ಹಿಡಿಯುವ ಮುನ್ನ ಸಾಕಷ್ಟು ಸಿದ್ಧತೆ ಮಾಡಿಕೊಳ್ಳುತ್ತೇನೆ. ಇದಕ್ಕಾಗಿ ದಿನಪತ್ರಿಕೆಗಳು, ವಾರಪತ್ರಿಕೆಗಳನ್ನು ಓದುತ್ತೇನೆ. ರಾಜಕೀಯ ಪಕ್ಷಗಳಾದರೆ ಅವುಗಳ ಪ್ರಣಾಳಿಕೆಯನ್ನೂ ಓದುತ್ತೇನೆ. ಹೀಗಾಗಿ ಎಲ್ಲವೂ ಸರಾಗವಾಗಿ ನಡೆಯುತ್ತದೆ' ಎನ್ನುತ್ತಿದ್ದರು ಮೈಕ್ ಚಂದ್ರು.

'ಕಾವೇರಿ ಚಳವಳಿ' ಸಂದರ್ಭದಲ್ಲಿ 'ಅಂದು ಕನ್ನಡಕ್ಕಾಗಿ ಗೋಕಾಕ್ ಚಳವಳಿ, ಇಂದು ನೀರಿಗಾಗಿ ಕಾವೇರಿ ಚಳವಳಿ' ಎಂದು ಹೋರಾಟಕ್ಕೂ ಇಳಿದಿದ್ದವರು. 'ನಾನು ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ತೆಲುಗು ಭಾಷೆಗಳಲ್ಲಿ ಅನೌನ್ಸ್ ಮಾಡುತ್ತೇನೆ. ಕೆಲವೊಂದು ಬಾರಿ ಸಮಯ ಸ್ಫೂರ್ತಿಯಿಂದಲೂ ಅನೌನ್ಸ್ ಮಾಡಬೇಕಾಗುತ್ತದೆ' ಎನ್ನುವ ಮೈಕ್ ಚಂದ್ರು ಅವರಿಗೆ ಬೀಚಿ ಹಾಗೂ ಮಾಸ್ಟರ್ ಹಿರಣ್ಣಯ್ಯ ಅಂದರೆ ಬಹಳ ಪ್ರೀತಿ. ಅಂತಹ ಎನ್. ಚಂದ್ರಶೇಖರ್ (ಮೈಕ್ ಚಂದ್ರು) ಅವರು ತಮ್ಮ 71 ನೇ ವಯಸ್ಸಿನಲ್ಲಿ 2021 ರ ಸೆಪ್ಟೆಂಬರ್ 12 ರ ಭಾನುವಾರ ಜೆ.ಪಿ ನಗರದ ನಿವಾಸದಲ್ಲಿ ಹೃದಯಾಘಾತದಿಂದ ಸ್ವರ್ಗಸ್ಥರಾದರು.

(ಲೇಖಕರು: ಡಿಆರ್‌ಡಿಒ, ಎಡಿಎ ನಿವೃತ್ತ ಸಾರ್ವಜನಿಕ ಸಂಪರ್ಕಾಧಿಕಾರಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ರಂಗಕ್ಕೆ ಗಾಳಿ ಬೆಳಕಿರಲಿ!

ಮೈಸೂರಿನ ಕಲಾಮಂದಿರದ ಹಿಂಭಾಗದಲ್ಲಿರುವ ಶ್ರೀರಂಗವು ಅನೇಕ ಸಾಂಸ್ಕೃತಿಕ ಚಟುವಟಿಕೆಗಳ ಮತ್ತು ರಂಗಭೂಮಿ ಭೂಮಿಗೆ ಸಂಬಂಧಿಸಿದ ಕಾರ್ಯಕ್ರಮಗಳ ಕೇಂದ್ರವಾಗಿದೆ. ಇಲ್ಲಿ ಸುಮಾರು 100 ಜನರು ಕುಳಿತುಕೊಳ್ಳುವ ಆಸನ ವ್ಯವಸ್ಥೆ ಇದೆ. ಆದರೆ, ಈ ಸಭಾಂಗಣಕ್ಕೆ ಒಂದು ಚೂರೂ ಸಹ ಗಾಳಿ - ಬೆಳಕಿನ ವ್ಯವಸ್ಥೆಯೇ ಇಲ್ಲ, ಇದನ್ನು ಒಂದು ಅವೈಜ್ಞಾನಿಕವಾಗಿ ರೂಪಿಸಲಾಗಿದೆ. ಯಾವುದೋ ಹಳೇ ಕಾಲದ ಗುಹೆಗೆ ಹೊಡಂತಹ ಅನುಭವವಾಗುತ್ತದೆ, ಇಲ್ಲಿ ಯಾವುದಾದರೂ ಕಾರ್ಯಕ್ರಮ ಎರಡುಮೂರು ಗಂಟೆಗಳ ಕಾಲ ನಡೆದು, ಆ ಕಾರ್ಯಕ್ರಮಕ್ಕೆ ಬಂದ ಪ್ರೇಕ್ಷಕ ಪೂರ್ಣ ಕಾರ್ಯಕ್ರಮದಲ್ಲಿ ಇದ್ದರೆ, ಆತ ಉಸಿರು ಕಟ್ಟಿಸುವ ಪರಿಸ್ಥಿತಿ ಇದೆ, ಇಲ್ಲಿಗೆ ಬರುವ ಪ್ರೇಕ್ಷಕರೇನು, ಪ್ರಾಣಿಗಳೇ? ಕಲಾಮಂದಿರದ ಹಿಂಭಾಗದಲ್ಲಿರುವ ನೆಲಮಾಳಿಗೆಯನ್ನೇ ಶ್ರೀರಂಗ ಎಂದು ಹೆಸರಿಟ್ಟಿದ್ದಾರೆ. ಇದು ಸಾಂಸ್ಕೃತಿಕ ನಗರ ಮೈಸೂರಿನ ರಂಗ ಚಟುವಟಿಕೆಗಳ ಕೇಂದ್ರ ಎನ್ನುತ್ತಾರೆ. ಇದಕ್ಕೊಂದು ಉದಾಹರಣೆ ಎಂದರೆ, ಇತ್ತೀಚೆಗೆ ಇಲ್ಲಿ ನಡೆದ, ಕೆ. ರಾಮದಾಸ್ ಒಂದು ನೆನಪು ಕಾರ್ಯಕ್ರಮದಲ್ಲಿ ಪ್ರಜಾವಾಣಿ ದಿನ ಪತ್ರಿಕೆಯ ಸಂಪಾದಕರಾದ ರವೀಂದ್ರ ಭಟ್ಟರವರು ಮಾತನಾಡಲು ಪ್ರಾರಂಭಿಸಿದಾಗ ವಿದ್ಯುತ್ ಸಂಪರ್ಕ ಕಡಿತಕೊಂಡಿತು. ಮೊಬೈಲ್ ಫೋನ್ ನ ಟಾರ್ಚ್ ಬೆಳಕಿನಲ್ಲೇ ಮಾತನಾಡಿದರು. ಶ್ರೀರಂಗ ಅವ್ಯವಸ್ಥೆಯ ಆಗರ, ಇದನ್ನು ಸಂಪೂರ್ಣವಾಗಿ ಮುಚ್ಚಿ, ಹೊಸದಾಗಿ ಪಕ್ಕದ ಜಾಗದಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ ನಿರ್ಮಿಸಿ, ರಂಗ ಚಟುವಟಿಕೆಗಳಿಗೆ ಮತ್ತು ಸಣ್ಣ ಪುಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲು ಅನುಕೂಲ ಮಾಡಿಕೊಡಲಿ.

- **ಬೂಕನಕೆರೆ ವಿಜೇಂದ್ರ** ಮೈಸೂರು

ಮೀನಮೇಷ ಏಕೆ?

ಯುಜಿ ನೀಟ್ 2024ರ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಈ ಬಗ್ಗೆ ಸರಕಾರದ ಮೇಲೆ ಮುಗಿ ಬೀಳುತ್ತಿವೆ. ಪರೀಕ್ಷೆಯನ್ನು ರದ್ದುಪಡಿಸಿ ಪುನಃ ಪರೀಕ್ಷೆ ನಡೆಸಬೇಕೆಂದು ವಿದ್ಯಾರ್ಥಿ ಸಂಘಟನೆಗಳು ದೇಶಾದ್ಯಂತ ಹೋರಾಟ ಮಾಡುತ್ತಿವೆ. ಪರೀಕ್ಷಾ ಹಗರಣ ಕುರಿತಂತೆ ಸರಕಾರ ಸಿಬಿಐ ತನಿಖೆಗೆ ವಹಿಸಿದೆ. ಪ್ರಶ್ನೆ ಪತ್ರಿಕೆ ಸೋರಿಕೆಯ ರುವಾರಿಗಳು ಒಬ್ಬೊಬ್ಬರಾಗಿ ಸಿಬಿಐ ಗಾಳಕ್ಕೆ ಬೀಳುತ್ತಿದ್ದಾರೆ. ದೇಶಾದ್ಯಂತ ಈ ಮಾಫಿಯಾದ ಜಾಲ ಹರಡಿರುವುದು ಸ್ಪಷ್ಟವಾಗಿದೆ. ಹೀಗಿದ್ದು ಸರಕಾರ ಪರೀಕ್ಷೆಯನ್ನು ರದ್ದುಪಡಿಸದೆ ಮೀನಾ ಮೇಷ ಎಣಿಸುತ್ತಿದೆ. ಪರೀಕ್ಷೆಯ ಅಳಿವು ಉಳಿವಿನ ಪ್ರಶ್ನೆ ಸುಪ್ರೀಂ ಕೋರ್ಟ್ ಅಂಗಳದಲ್ಲಿದ್ದು, ಜುಲೈ 8ರಂದು ಅಂತಿಮ ತೀರ್ಪು ಹೊರಬೀಳಲಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯ ಈಗ ಸುಪ್ರೀಂನ ಅಂಗಳದಲ್ಲಿದೆ.

-**ದೇವರಹಳ್ಳಿ ಲೋಕೇಶ್** ಪಾಂಡವಪುರ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ವಿನಾಯಕ ಶೆಟ್ಟಿ, ಹೊನ್ನಾವರ**
ಭಟ್ರೇ, ಬೆಂಗಳೂರಿನಲ್ಲಿ ಕನ್ನಡಿಗರನ್ನು ಪತ್ತೆ ಹಚ್ಚುವುದು ಹೇಗೆ?
- ಯಾರಾದ್ರೂ ಇಬ್ಬರು ಇಂಗ್ಲಿಷಿನಲ್ಲಿ ಮಾತಾಡುತ್ತಿದ್ದರೆ ಅವರೇ ಕನ್ನಡಿಗರು!

- **ರೂಪ ಶೀಲವಂತ, ಬಾಗಲಕೋಟ**
ಭಟ್ರೇ, ಗಂಡನ ಪ್ರೀತಿಯನ್ನು ಅಳೆಯುವುದು ಹೇಗೆ?
- ಅಳೆದು ಮಾಡುವುದಾದರೂ ಏನು ಎಂಬುದನ್ನು ಮೊದಲು ಹೇಳು!

- **ಸುರೇಶ ಪಾಳ್ಯ, ಬಾಣಸವಾಡಿ**
ಸರ್, ಇಲ್ಲೊಬ್ಬ ಹೆಂಡತಿಯ ಹೆಸರನ್ನೇ ನಾಯಿಗೂ ಇಟ್ಟಿದ್ದಾನಲ್ಲ?
- ಹೆಂಡತಿಯನ್ನು ನಂಬಿಕಸ್ತ ಪ್ರಾಣಿ ಎಂದು ಭಾವಿಸಿರಬೇಕು!

- **ಮೋಹನ್ ಸುಳ್ಯ, ಮಂಗಳೂರು**
ಭಟ್ರೇ, ಕರೆಂಟ್ ಇಲ್ಲದೇ ಬದುಕಬಹುದಾ?
- ಹೂಂ.. ಆದರೆ ಮೊಬೈಲ್ ಇಲ್ಲದೇ ಬದುಕಲು ಸಾಧ್ಯವಿಲ್ಲ!

- **ಕಿರಣ್ ಕೆ., (ಇಮೇಲ್ ಮೂಲಕ)**
ಭಟ್ರೇ, ಮದುವೆಯಾಗುವಾಗ ಪರಿಗಣಿಸುವ ಸಂಗತಿಗಳಲ್ಲಿ ಕೊನೆಯದು ಯಾವುದು?
- ತವರುಮನೆ ಆದಷ್ಟು ದೂರ ಇರುವಂತೆ ನೋಡಿಕೊಳ್ಳಬೇಕು!

- **ನಾಗೇಶ ಬಿದಿರೆ, ತುಮಕೂರು**
ಭಟ್ರೇ, ಏನೂ ಮಾಡದೇ ಜೀವನ ಸಾಗಿಸಬಹುದಾ?
- ಇಲ್ಲೊಬ್ಬ ಸಂಗೀತಗಾರನಿದ್ದಾನೆ, ಆತ ನಿಗೆ ಬಾಯಿ ಮುಚ್ಚಿಕೊಂಡಿರುವುದ ಕ್ಕಾಗಿ ಬೀದಿ ಜನ ಹಣ ಕೊಡ್ತಾರೆ ಗೊತ್ತಾ?!

- **ರಾಜು ಹೆಗಡೆ, ಬೆಂಗಳೂರು**
ಭಟ್ರೇ, ಎಲ್ಲರೂ ಫೇಲ್ ಆಗುವುದು ಯಾವಾಗ ಮತ್ತು ತಾವು ಫೇಲ್ ಆಗಿಲ್ಲ ಎಂದು ಅಂದುಕೊಳ್ಳುವುದು ಯಾವಾಗ?
- ಹೆಂಡತಿಯನ್ನು ಆಯ್ಕೆ ಮಾಡುವಾಗ ಮತ್ತು ನಂತರ!

- **ಶೀಲಾ ನಾಗನೂರು, ಹುಬ್ಬಳ್ಳಿ**
ಭಟ್ರೇ, ಅಳಿಯನಾಗಲು ಯಾವ ಅರ್ಹತೆ ಬೇಕು?
- ಮಗಳು ಹೇಳಿದ್ದನ್ನು ಕೇಳಿದರೆ ಸಾಕು!

- **ಗುರುನಾರಾಯಣ ಪಟಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಹೇಳೋನು ಮಾಡಲ್ಲ, ಮಾಡೋನು ಹೇಳಲ್ಲ, ತಿಂದವನು?
- ತೇಗಲ್ಲ!

- **ಎಸ್.ರಘು, (ಇಮೇಲ್ ಮೂಲಕ)**
ಭಟ್ರೇ, ಹಿಂದಿನವರು 'ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು' ಎನ್ನುತ್ತಿದ್ದರು. ಈಗಿನವರು?
- 'ತಾಳಿ ಕಟ್ಟಿ ನೋಡು, ಮಕ್ಕಳ ಮಾಡಿ ನೋಡು'

- **ರಾಮಲಿಂಗಪ್ಪ, ಮಂಡ್ಯ**
ಭಟ್ರೇ, ನನ್ನ ಹೆಂಡತಿ ಗೋಡ್ಸೆ ದೂರದ ಸಂಬಂಧಿ ಅನಿಸುತ್ತಿದೆಯಲ್ಲ?
- ಯಾಕೆ ನಿಮ್ಮ ಪರ್ಸಿನಲ್ಲಿರುವ ಗಾಂಧಿ ನೋಟುಗಳನ್ನೆಲ್ಲಾ ಮುಗಿಸುತ್ತಿದ್ದಾಳಾ?!

ಚಾರಣದಿಂದ ಪರಿಸರಕ್ಕೆ ಹಾನಿಯಾದೀತೆ?

ಶಶಾಂಕಣ

ಶಶಿಧರ ಹಾಲಾಡಿ

shashidhara.halady@gmail.com

ನಮ್ಮ ನಾಡಿನ ಬೆಟ್ಟಗುಡ್ಡಗಳಲ್ಲಿ ಈಗ ಭಾರೀ ಮಳೆಯಾಗುತ್ತಿದೆ; ಪರ್ವತ ಕಮರಿಗಳ ಮೂಲೆಯಲ್ಲಿರುವ ಜಲಪಾತಗಳು ಭೋರ್ಗರೆಯುತ್ತಿವೆ. ತುಂಬಿದ ಜಲಪಾತದ ನೋಟವನ್ನು, ನೊರೆನೊರೆಯಾಗಿ ಧುಮುಕುವ ನೀರನ ನರ್ತನವನ್ನು ನೋಡಿ, ಮನಸೋಲದ ಮನುಷ್ಯನೇ ಇಲ್ಲ ಎನ್ನಬಹುದು. ನಮ್ಮ ಬದುಕಿನ ಅತಿ ಸುಂದರ ಅನುಭವಗಳಲ್ಲಿ ಜಲಪಾತದ ವೀಕ್ಷಣೆಯೂ ಒಂದು. ಅದೇ ರೀತಿ, ಪರ್ವತವೊಂದನ್ನು ಏರಿ, ಅದರ ತುದಿಯಲ್ಲಿ ನಿಂತು, ಸುತ್ತಲಿನ ಭೂದೃಶ್ಯವನ್ನು ಕಾಣುವಾಗ ದೊರಕುವ ಮಹದಾನಂದವನ್ನು ಅನುಭವಿಸಿಯೇ ತಿಳಿಯಬೇಕು, ಹೊರತು ಅಕ್ಷರಗಳಲ್ಲಿ ವರ್ಣಿಸಲು ಅಸಾಧ್ಯ.

ಆದರೆ, ಮಳೆಗಾಲದಲ್ಲಿ ಜಲಪಾತ ನೋಡಲು ಹೋಗುವ ಕೆಲವರು, ತಮ್ಮ ಸುರಕ್ಷತೆಯನ್ನು ಮರೆತು ನೀರಿನಲ್ಲಿಳಿದು ಜೀವಕ್ಕೆ ಅಪಾಯ ತಂದುಕೊಳ್ಳುತ್ತಿರುವುದು ಅಲ್ಲಲ್ಲಿ ವರದಿಯಾಗುತ್ತಿದೆ. ಇದಕ್ಕೆ ಹೋಲಿಸುವಂತಹ ಇನ್ನೊಂದು ಸನ್ನಿವೇಶವೆಂದರೆ, ಎತ್ತಿನ ಭುಜ ಮತ್ತು ಕುಮಾರ ಪರ್ವತಗಳಂತಹ ಪರಿಸರ ಸೂಕ್ಷ್ಮ ತಾಣಗಳನ್ನು ನೋಡಲು ಒಂದೇ ದಿನ ಸಾವಿರಾರು ಜನರು ಬರುವುದು! ಪರಿಸರವನ್ನು ನೋಡಿ, ಅಲ್ಲೇ ಬೆರೆತು, ಮನಸ್ಸಂತೋಷ ಹೊಂದಬೇಕಾದ ತಾಣದಲ್ಲಿ, ಪರಿಸರಹಾನಿಯಂತಹ ಚಟುವಟಿಕೆಗಳು ನಡೆಯಬಾರದು ತಾನೆ? ಹಾಗಾಗದಂತೆ ನೋಡಿಕೊಳ್ಳಬೇಕಾದುದು ಸಂಬಂಧ ಪಟ್ಟ ಇಲಾಖೆಗಳ ಜವಾಬ್ದಾರಿ. ಆದರೆ, ಜನರು ಅಧಿಕ ಸಂಖ್ಯೆಯಲ್ಲಿ ಬಂದು ಪರಿಸರ ವೀಕ್ಷಣೆ ಮಾಡಿದರೆ, ಅಂತಹ ಜಾಗಗಳಿಗೆ ಹಾನಿಯಾದೀತು, ಅದನ್ನು ತಡೆಯಬೇಕು ಎಂಬ ಕಾಳಜಿಯಲ್ಲಿ, ಅತಿರೇಕ ಎನ್ನಬಹುದಾದ ಒಂದು ಕ್ರಮವನ್ನು ಇಂದು ಕಾಣುತ್ತಿದ್ದೇವೆ - ಅದೇನೆಂದರೆ, ಕೆಲವು ಜಾಗಗಳಿಗೆ ಒಟ್ಟಾರೆ ಚಾರಣವನ್ನೇ ನಿಷೇಧಿಸುವುದು! ಎತ್ತಿನಭುಜ ಶಿಖರದಂತಹ ಸುಂದರ, ಅಗಲಕಿರಿದಾದ ಪ್ರದೇಶಗಳಲ್ಲಿ, ಒಂದೇ ದಿನ ಸಾವಿರಾರು ಜನ ಇಕ್ಕಟ್ಟಾಗಿ ಸೇರುವುದು ನಿಜಕ್ಕೂ ಸೂಕ್ಷ್ಮ ವಿಚಾರವೇ ಸರಿ, ಅದರಲ್ಲಿ ಅನುಮಾನವೇ ಇಲ್ಲ; ಅಲ್ಲಿನ ಪ್ರಕೃತಿ ಸೌಂದರ್ಯವನ್ನು ನೋಡಲು ಬಂದವರು, ಆ ಪ್ರದೇಶದ ಮೂಲ ಸೌಂದರ್ಯವನ್ನು ಹಾಳುಮಾಡಬಾರದು ಮತ್ತು ಅಲ್ಲಿ ಪ್ಲಾಸ್ಟಿಕ್ ಎಸೆದು ಗಲೀಜು ಮಾಡಬಾರದು ಎಂಬುದು ಸಹ ಉತ್ತಮ ಕಾಳಜಿ. ಆದರೆ, ಅಲ್ಲಿಗೆ ಜನರೇ ಬರಬಾರದು ಎಂದು ನಿಷೇಧ ಹೇರುವುದು ತುಸು ಅತಿರೇಕವೇ ಎನಿಸುತ್ತದೆ, ಅಲ್ಲವೆ? ಎತ್ತಿನ ಭುಜಕ್ಕೆ ಭೇಟಿ ನೀಡುವುದನ್ನು ನಿಷೇಧಿಸಿರುವ ಕಳೆದ ವಾರದ ಕ್ರಮವನ್ನು ನೋಡಿದಾಗ ಈ ರೀತಿ ಎನಿಸಿತು.

ಹಾಗಿದ್ದರೆ, ಎತ್ತಿನ ಭುಜ, ಕುಮಾರಪರ್ವತದಂತಹ ಪರಿಸರವನ್ನು ರಕ್ಷಿಸಲು ಏನು ಮಾಡಬೇಕು ಎಂದು ನೀವು ಪ್ರಶ್ನಿಸಬಹುದು. ಉತ್ತರ ಸರಳ - ಪರಿಸರಕ್ಕೆ ಲವಲೇಶವೂ ಹಾನಿಯಾಗದಂತೆ ಅಲ್ಲಿಗೆ ಚಾರಣಿಗರು ಬರುವಂತಹ ನಿಯಮಾವಳಿಗಳನ್ನು ರೂಪಿಸಿ, ಅಲ್ಲಿಗೆ ಪ್ರಾಮಾಣಿಕ ಪರಿಸರಪ್ರೇಮಿಗಳು ಬರುವಂತೆ ಮಾಡುವುದು. ಇಂತಹ ಜಾಗಗಳಿಗೆ ಮಕ್ಕಳು ಮತ್ತು ದೊಡ್ಡವರು ಬಂದು, ಅಲ್ಲಿನ ಹಸಿರಿನ ಸಿರಿಯನ್ನು, ಮೋಡಗಳ ಆಟವನ್ನು ನೋಡುವುದರಿಂದ, ಅವರಲ್ಲೂ ಪರಿಸರಾಸಕ್ತಿ ಬೆಳೆಯುತ್ತದೆ, ಮುಂದಿನ ದಿನಗಳಲ್ಲಿ ಅವರಲ್ಲಿ ಕೆಲವರಾದರೂ ಪರಿಸರ ರಕ್ಷಿಸುವ ಚಟುವಟಿಕೆಯಲ್ಲಿ ತೊಡಗಿಕೊಳ್ಳುತ್ತಾರೆ.

ಒಂದು ದಿನಕ್ಕೆ ಗರಿಷ್ಠ ಇಂತಿಷ್ಟು ಮಂದಿ ಭೇಟಿಕೊಡುವಂತೆ ಮಾಡುವುದು ಒಂದು ಪರಿಹಾರ: ಇದಕ್ಕೆ ಆನ್‌ಲೈನ್ ನೋಂದಣಿ ಸಹಕಾರಿ. ಪ್ಲಾಸ್ಟಿಕ್ ಬಾಟಲಿಗಳನ್ನು, ಕಸವನ್ನು ಎಸೆಯದಂತೆ ನಿಯಮ ರೂಪಿಸುವುದು ಅಗತ್ಯ - ಇದನ್ನು ಈಗಾಗಲೇ ಗೋಪಾಲಸ್ವಾಮಿ ಬೆಟ್ಟದಂತಹ ಪ್ರದೇಶಗಳಲ್ಲಿ ಅರಣ್ಯ ಇಲಾಖೆ ಜಾರಿ ತಂದಿದೆ. ಸ್ಥಳೀಯ ಗೈಡ್‌ಗಳನ್ನು ಜತೆಯಲ್ಲಿ ಖಡ್ಡಾಯವಾಗಿ ಕರೆದೊಯ್ಯುವಂತೆ ಮಾಡಿ, ತಮ್ಮ ಸುತ್ತಲಿನ ಪ್ರಕೃತಿಗೆ ಸ್ಥಳೀಯರು ಅದೆಷ್ಟು ಗೌರವ ಕೊಡುತ್ತಾರೆಂದು ತಿಳಿಯಪಡಿಸುವಂತೆ ಮಾಡುವುದು ಸಹ ಮುಖ್ಯವಾಗಬಲ್ಲದು. ಕೇರಳದ ಸೈಲೆಂಟ್ ವ್ಯಾಲಿಗೆ ಭೇಟಿ ನೀಡುವವರು, ಸ್ಥಳೀಯ ಗೈಡ್ ಜತೆಯಲ್ಲೇ ಓಡಾಡುವ ನಿಯಮ ಇರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಒಂದು ಸುಂದರ ತಾಣಕ್ಕೆ ಪ್ರವೇಶವನ್ನೇ ಒಟ್ಟೂ ನಿಷೇಧಿಸುವ ಬದಲಿಗೆ, ಸೂಕ್ತ ನಿಯಮಾವಳಿಗಳನ್ನು ರೂಪಿಸಿ, ಪಾಲಿಸುವಂತೆ ಮಾಡಿ ನಿಸರ್ಗ ವೀಕ್ಷಣೆಗೆ ಅವಕಾಶ ದೊರಕಿಸಿ ಕೊಟ್ಟಾಗ, ಒಂದು ವಿನ್-ವಿನ್ ಸನ್ನಿವೇಶವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ಇದರಿಂದಾಗಿ, ಮಕ್ಕಳಲ್ಲಿ, ಜನರಲ್ಲಿ ಪರಿಸರ ಪ್ರೇಮ ಬೆಳೆಸಿ, ಮುಂದೆ ಅವರೇ ಪರಿಸರ ರಕ್ಷಕರಾಗುವಂತೆ ಮಾಡುವುದು ಸಹ ಸಾಧ್ಯ. ಇಂದು ನಮ್ಮ ರಾಜ್ಯದ, ದೇಶದ ಪರಿಸರ ಆತಂಕದಲ್ಲಿದೆ. ನೈಸರ್ಗಿಕ ಸಂಪನ್ಮೂಲಗಳನ್ನು ಹೊರತೆಗೆದು ಅಭಿವೃದ್ಧಿಗೆ ಬಳಸಿಕೊಳ್ಳಬೇಕೆಂಬ

ಹಪಹಪಿಯಲ್ಲಿ, ಸುಂದರ ಪ್ರಕೃತಿಯನ್ನು ನಾಶಮಾಡುವಂತಹ ಯೋಜನೆಗಳಿಗೆ ಅನುಮತಿ ದೊರೆಯುತ್ತಿರುವ ಉದಾಹರಣೆಗಳು ನಮ್ಮಲ್ಲಿವೆ. ಸಹ್ಯಾದ್ರಿಯ ಪರಿಸರಕ್ಕೆ ಶಾಶ್ವತ ಹಾನಿ ಮಾಡುತ್ತಿರುವ 'ಎತ್ತಿನ ಹೊಳೆ ನದಿ ತಿರುವು ಯೋಜನೆ' ಇದಕ್ಕೆ ಒಂದು ಉದಾಹರಣೆ; ಮೊನ್ನೆ ತಾನೆ ಇನ್ನೊಂದು ಪರಿಸರವಿರೋಧಿ ಯೋಜನೆಗೆ ಸಹಿ ಬಿದ್ದಿದೆ - ಸಂಡೂರಿನಲ್ಲಿ ಉಳಿದುಕೊಂಡಿರುವ ಅಪರೂಪದ ಕಾಡು ಪ್ರದೇಶದಲ್ಲಿ ಗಣಿಗಾರಿಕೆ ಮಾಡುವುದಕ್ಕೆ ಪ್ರಭುತ್ವ ಅವಕಾಶ ನೀಡಿದೆ. ಪರಿಸರ ನಾಶವಾದರೆ ಮುಂದಿನ ಪೀಳಿಗೆಗೆ ಇನ್ನಷ್ಟು ಕಷ್ಟ ಎಂಬ ಮಹತ್ವದ ವಿಚಾರವನ್ನು ನಮ್ಮ ನಾಯಕರು ಕಾಲಿನ ಕಸದಂತೆ ನೋಡುತ್ತಿದ್ದಾರೆ ಎಂಬುದಕ್ಕೆ ಇದೊಂದು ಇತ್ತೀಚಿನ ಉದಾಹರಣೆ. ಇದು ಹೀಗೆಯೇ ಮುಂದುವರಿಯುತ್ತಿರುವುದು ಇಂದಿನ ದುರಂತ. ಈಗಿನ ಮಕ್ಕಳಲ್ಲಿ ಪರಿಸರದ ಕುರಿತು ಕಾಳಜಿ ಬೆಳೆಸಿದರೆ, ಅವರು ಮುಂದೆ ಪ್ರಾಜ್ಞರಂತೆ ವರ್ತಿಸಿಯಾರು ಎಂಬ ಆಶಯದಿಂದ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕಾದ ತುರ್ತು ಅವಶ್ಯತೆ ಇದೆ.

ಬೆಟ್ಟಗುಡ್ಡಗಳಲ್ಲಿ ಚಾರಣ ಮಾಡುತ್ತಾ, ಅಲ್ಲಿನ ಪ್ರಕೃತಿಯೊಂದಿಗೆ ಬೆರೆತು, ಆ ಪರಿಸರಕ್ಕೆ ಹಾನಿಯಾಗದಂತೆ ಎಚ್ಚರವಹಿಸಿ ವಾಪಸಾಗುವ ವಿಚಾರ ಬಂದಾಗ, ನಾನು ಬಹು ಹಿಂದೆ ಕೈಗೊಂಡ ಕೆಲವು ಚಾರಣಗಳ ನೆನಪಾಗುತ್ತದೆ. ನಮ್ಮ ಅಂದಿನ ಚಾರಣ ಹೇಗಿತ್ತೆಂದರೆ, ನಡಿಗೆಯ ಸುಖ ಮತ್ತು ಪರ್ವತ ಶಿಖರಗಳನ್ನು ಮುಟ್ಟುವುದು ಪ್ರಮುಖ ಗುರಿ; ಜತೆಗೆ ನಮ್ಮ ನಡಿಗೆ ಮುಗಿದಾಗ, ಆ ದಾರಿಯಲ್ಲಿ ಯಾವುದೇ ಕಸ, ಪ್ಲಾಸ್ಟಿಕ್‌ನ್ನು ನಾವು ಎಸೆಯದಂತೆ ಎಚ್ಚರವಹಿಸಿ, ಚಾರಣ ಮುಗಿಸುವುದು ಸಹ ಮತ್ತೊಂದು ಗುರಿಯಾಗಿತ್ತು. 1980ರ ದಶಕದಲ್ಲಿ ನಾವು ಮೂವರು ಗೆಳೆಯರು ಕುಮಾರ ಪರ್ವತವನ್ನು ಏರಿ, ಇಳಿದ ಅನುಭವವನ್ನು ಗಮನಿಸಿದರೆ, ಅಂದಿನ ನಮ್ಮ ಚಾರಣದ ಕಿರು ಪರಿಚಯವಾದೀತು.

ಆಗಿನ್ನೂ ಪ್ಲಾಸ್ಟಿಕ್ ಹಾವಳಿ ಆರಂಭವಾಗಿರಲಿಲ್ಲ. ಆದ್ದರಿಂದಲೇ ಇರಬೇಕು, ರೆಡಿ ಕುಕ್ ಮಿಕ್ಸ್, ಪ್ಲಾಸ್ಟಿಕ್ ಕವರಿನಲ್ಲಿನ ವಿವಿಧ ತಿನಿಸುಗಳ ಕಾಟವಿರಲಿಲ್ಲ - ಒಂದು ಕಿಲೋ ಅಕ್ಕಿ, 100 ಗ್ರಾಂ ಕೊಳಂಬೊ ಪುಡಿ (ಸಾಂಬಾರು ಪುಡಿ), ಅರ್ಧ ಕಿಲೊ ಟೊಮ್ಯಾಟೊ, 100 ಗ್ರಾಂ ಟೀಪುಡಿ, ಒಂದಿಷ್ಟು ಬ್ರೆಡ್, ಹಣ್ಣು ಮೊದಲಾದವುಗಳನ್ನು ನಮ್ಮ ಭುಜದ ಚೀಲಕ್ಕೆ ತುಂಬಿಕೊಳ್ಳುವುದರ ಮೂಲಕ ಚಾರಣದ ತಯಾರಿ ಆರಂಭ. ಬೆಳಗ್ಗೆ ಆರು ಗಂಟೆಗೆ ಸುಬ್ರಹ್ಮಣ್ಯದ ಪುಟ್ಟ ಹೊಟೆಲ್‌ನಲ್ಲಿ ಇಡ್ಲಿ ತಿಂದು, ಕಾಡಿನ ದಾರಿ ಹಿಡಿದೆವು. ದಟ್ಟಕಾಡಿನ ನಡುವಿನ ಏರು ದಾರಿಯಲ್ಲಿ ನಡೆಯುವಾಗ, ಬೆವರು, ಸೆಕೆ, ಸುಸ್ತು; ಜತೆಗೇ ಕಾಡಿನ ವೀಕ್ಷಣೆ, ಅಲ್ಲಿನ ನಿಗೂಢ ಮೌನದ ಭಾಗವಾಗುವ ಅದೃಷ್ಟ. ಕಲ್ಲುಗುಡ್ಡೆ ಎಂಬ ಕಲ್ಲು ತುಂಬಿದ ಕಡಿದಾದ ಏರನ್ನು ಹತ್ತಿದ ಬಳಿಕ, ನಿಧಾನವಾಗಿ ಸಹ್ಯಾದ್ರಿಯ ಸಿರಿ ಕಾಣಿಸತೊಡಗಿತು. ಹಸಿರಿನ ಪರ್ವತಗಳ ನೋಟವನ್ನು ಕಣ್ತುಂಬಿಕೊಳ್ಳುತ್ತಾ, 'ಗಿರಿಗದ್ದೆ' ತಲುಪಿದಾಗ, ಬೆಳಗಿನ ಸುಮಾರು 10 ಗಂಟೆ. ಅಲ್ಲಿ ವಾಸವಿದ್ದ ಮಹಾಲಿಂಗ ಭಟ್ಟರು ಮತ್ತು ಅವರ ಕುಟುಂಬ ನಮಗೆ ಉಚಿತವಾಗಿ ಮಜ್ಜಿಗೆ ನೀಡಿದರು. 'ಇಲ್ಲೇ ಊಟ ಮಾಡಬಹುದು' ಎಂಬ ಆಹ್ವಾನವನ್ನೂ ನೀಡಿದರು! (ಮುಂದಿನ ವರ್ಷ ಅವರ ಆತಿಥ್ಯ ಸ್ವೀಕರಿಸಿ, ಅಲ್ಲೇ ರಾತ್ರಿ ತಂಗಿದ್ದೆವು). ವಾರಕ್ಕೆ ಅಬ್ಬಬ್ಬಾ ಎಂದರೆ ಹತ್ತಿಪ್ಪತ್ತು ಚಾರಣಿಗರು ಬರುತ್ತಿದ್ದ ಆ ದಿನಗಳಲ್ಲಿ, ಗಿರಿಗದ್ದೆಯ ಭಟ್ಟರು ಎಲ್ಲರಿಗೂ ಉಚಿತ ಊಟೋಪಚಾರದ ಸತ್ಕಾರ ಮಾಡುತ್ತಾ, ಮಲೆನಾಡಿನ ಅತಿಥಿ ಸತ್ಕಾರದ ಪರಂಪರೆಯನ್ನೂ ಪರಿಚಯಿಸುತ್ತಿದ್ದರು.

ಬಿರು ಬಿಸಿಲಿನಲ್ಲಿ ನಡೆಯುತ್ತಾ ಬೆಟ್ಟವೇರಿದ ನಮಗೆ, ಮುಂದಿನ ಒಂದೆರಡು ಗಂಟೆಗಳಲ್ಲಿ ಎದುರಾಗಿದ್ದೇ ಕಲ್ಲುಮಂಟಪ. ನೂರಾರು ವರ್ಷಗಳ ಹಿಂದೆ ನಿರ್ಮಾಣಗೊಂಡ ಆ ಪುಟ್ಟ ಮಂಟಪದ ಸನಿಹದ ಶೋಲಾ ಕಾಡಿನಲ್ಲಿ ಒಂದು ತಿಳಿನೀರ ತೊರೆಯಿದೆ. ಅದರ ಬಳಿ ವಿಶ್ರಾಂತಿ. ಮೂರು ಕಲ್ಲುಗಳೇ ಒಲೆ; ಸುತ್ತ ಮುತ್ತ ದೊರಕಿದ ತರಗಲೆ, ಒಣ ಕಡ್ಡಿಗಳೇ ಉರುವಲು; ಹೊತ್ತು ತಂದಿದ್ದ ಪುಟ್ಟ ಅಲ್ಯುಮಿನಿಯಂ ಪಾತ್ರೆಯಲ್ಲಿ ನೀರು ತುಂಬಿ, ಅಕ್ಕಿ ಬೇಯಿಸಿ, ಗಂಜಿ ಮಾಡಿದೆವು. ಉಪ್ಪು, ಉಪ್ಪಿನ ಕಾಯಿಯ ಜತೆ ಅದನ್ನು ಸೇವಿಸಿದಾಗ ಊಟದ ಕೆಲಸ ಮುಗಿದಂತೆ.

ಅಲ್ಲಿ ಎದುರಾಗುವ ಕಡಿದಾದ ಬತ್ತದ ರಾಶಿ ಎಂಬ ಹೆಸರಿನ ಬೆಟ್ಟವನ್ನು ಏರಿ, ಒಂದೆರಡು ಗಂಟೆ ನಡೆದಾಗ, ಶೇಷ ಪರ್ವತ, ಸಿದ್ಧ ಪರ್ವತ, ಕುಮಾರ ಪರ್ವತಗಳ ದರ್ಶನವಾಯಿತು. ಅಲ್ಲಿಂದ ಕಾಣಿಸುವ ಒಂದು ಬೃಹತ್ ಶಿಲಾಭಿತ್ತಿಯು, ನಮ್ಮ ನಾಡಿನ ಅತಿ ಎತ್ತರದ ಶಿಲಾಭಿತ್ತಿಗಳಲ್ಲೊಂದು. ಆ ಸುತ್ತಲೂ ಪರ್ವತಗಳು ಹೇಗೆ ಹರಡಿವೆ ಎಂದರೆ, ಆ ಶಿಲಾಭಿತ್ತಿಯಿಂದ ಏಳು ಬಾರಿ ಪ್ರತಿಧ್ವನಿ ಕೇಳಿಸುತ್ತದೆ. ಕಡಿದಾಗಿ ಇಳಿದು ಹೋಗಿರುವ ಆ ಸುಂದರ ಬೃಹತ್ ಶಿಲೆಯನ್ನು ಯಾರೂ ಇದುವರೆಗೆ ಆರೋಹಣ ಮಾಡಿದಂತಿಲ್ಲ. ಆ ಎತ್ತರದಿಂದ ಕಾಣಿಸುವ ಕಾಡು, ಬೆಟ್ಟ, ಶಿಲೆ, ದೂರದ ಪರ್ವತ ಶ್ರೇಣಿ ಎಲ್ಲವೂ ಬಹು ಸುಂದರ, ನೋಡುತ್ತಲೇ ನಿಲ್ಲಬೇಕೆನಿಸುವ ದೃಶ್ಯ ಅದು. ಪ್ರಪಾತದಂಚಿನಲ್ಲೇ ಸಾಗುವ ದಾರಿಯನ್ನು ಅನುಸರಿಸಿ, ನಂತರ ಹದವಾದ ಕಾಡಿನಲ್ಲಿ ನಡೆದು, ತೊರೆಯೊಂದರ ಬಳಿ ಬಂದೆವು. ಆ ರಾತ್ರಿ ಅಲ್ಲೇ ತಂಗುವುದು ಎಂದು ನಿರ್ಧರಿಸಿದೆವು. ಅಲ್ಲೇ ಮುಂದಿರುವ ಒಂದು ಬಂಡೆಯನ್ನು ಏರಿದಾಗ, ಶಿಖರದ ದರ್ಶನ. ಆ ಎತ್ತರದಿಂದ ಮಡಿಕೇರಿ ಜಿಲ್ಲೆಯ ನೋಟ ಕಾಣಿಸುತ್ತದೆ. ಕುಮಾರ ಪರ್ವತದ ತುದಿಯಲ್ಲಿ ಒಂದು ಪುಟ್ಟ ದೇಗುಲವಿದೆ; ಸ್ಥಳೀಯವಾಗಿ ದೊರಕುವ ಕಲ್ಲುಗಳಿಂದ ಮಾಡಿದ ಪುಟ್ಟ ಪಾಗಾರ, ಗೋಡೆಯಂತಹ ರಚನೆ. ಇಲ್ಲಿನ ಪರಿಸರದಲ್ಲಿ ಒಂದು ಅಪರೂಪದ ಶಿಲಾ ವಿಸ್ಮಯವಿದೆ. ಪ್ರತಿ ತಿಂಗಳೂ ಸಾವಿರಾರು ಚಾರಣಿಗರ ಭೇಟಿಗೆ ಅವಕಾಶ ದೊರಕಬಲ್ಲ ಇಂದಿನ ಪರಿಸ್ಥಿತಿಯನ್ನು ಗಮನಿಸಿದರೆ, ಅಂತಹ ವಿಸ್ಮಯಗಳಿಗೆ ಹೆಚ್ಚು ಪ್ರಚಾರ ನೀಡಬಾರದೆಂದೇ ನನ್ನ ಅಭಿಮತ.

ಅಷ್ಟರಲ್ಲಿ ಸಂಜೆಯಾಯಿತು. ಸಮುದ್ರಮಟ್ಟದಿಂದ 5,626 ಅಡಿ ಎತ್ತರವಿರುವ ಆ ಜಾಗದಿಂದ ಸೂರ್ಯಾಸ್ತವನ್ನು ನೋಡುವ ಅನುಭವವು ವಿಭಿನ್ನ, ಅನನ್ಯ. ಕತ್ತಲಾವರಿಸುತ್ತಿದ್ದಂತೆ, ವಾಪಸು ಹೊರಟು, ಶಿಖರದ ಕೆಳಗಿರುವ ತೊರೆಯ ಬಳಿ ಠಿಕಾಣಿ ಹೂಡಿದೆವು. ಮತ್ತೆ ಮೂರು ಕಲ್ಲು ಹೂಡಿ, ಅನ್ನ ಬೇಯಿಸಿದೆವು; ಊರಿನಿಂದ ತಂದಿದ್ದ ಟೊಮ್ಯಾಟೋ, ಸಂಬಾರು ಪುಡಿ ಬಳಸಿ ತಿಳಿಸಾರು ತಯಾರಿ. ಚಳಿಯ ರಕ್ಷಣೆಗೆ ಒಂದು ಬೆಡ್ ಶೀಟ್. ಈ ರೀತಿ ಕಾಡಿನಲ್ಲಿ ತಂಗಲು, ಆಗಿನ ದಿನಗಳಲ್ಲಿ ನಿರ್ಬಂಧವಿರಲಿಲ್ಲ. ಆದರೆ, ಈಗ ಕುಮಾರ ಪರ್ವತದ ಕಾಡಿನಲ್ಲಿ ತಂಗುವುದನ್ನು ಅರಣ್ಯ ಇಲಾಖೆ ನಿಷೇಧಿಸಿದೆ.

ಮರುದಿನ ಬೇಗನೆದ್ದು, ಚಹಾ ತಯಾರಿಸಿ, ಬ್ರೆಡ್ ಜತೆ ಸೇವಿಸಿ, ಅಲ್ಲೇ ಒಂದಿಷ್ಟು ಪರಿಶೋಧನೆ ನಡೆಸಿದೆವು. ತೊರೆಯಿಂದ ಇನ್ನೊಂದು ದಿಕ್ಕಿಗೆ ಒಂದು ಕಿ.ಮೀ. ನಡೆದರೆ, ಸಿದ್ಧಪರ್ವತದ ತುದಿ ತಲುಪಬಹುದು. ಅಲ್ಲಿನ ಪ್ರಪಾತದ ಅಂಚಿನಲ್ಲಿ ನಿಂತರೆ, ಶಿಲಾ ಭಿತ್ತಿಗಳ ಮತ್ತು ಪರ್ವತ ಕಮರಿಗಳ ವಿಭಿನ್ನ ನೋಟ ಲಭ್ಯ. ಆ ತುದಿಯಲ್ಲಿ, ಒಂದು ಕಲ್ಲಿನ ಮೇಲೆ ಎರಡು ಪಾದಗಳ ಗುರುತನ್ನು ಬಹು ಹಿಂದೆ ಯಾರೋ ಕೆತ್ತಿದ್ದರು. ಅದು ಅಂದಿನ ಸಾಧಕರ ಸಾಹಸವಿರಬಹುದು. ಅಂತಹ ಪಾದದ ಕೆತ್ತನೆಗಳು ನಮ್ಮ ನಾಡಿನ ಹಲವು ಎತ್ತರದ ಪ್ರದೇಶಗಳಲ್ಲಿ ಇವೆ. ಅರ್ಧಗಂಟೆ ಅಲ್ಲಿ ಅಡ್ಡಾಡಿ, ಪುನಃ ರಾತ್ರಿ ತಂಗಿದ್ದ ಜಾಗಕ್ಕೆ ಬಂದು, ಅಲ್ಲಿದ್ದ ಕಸ, ಪೇಪರು ಎಲ್ಲವನ್ನೂ ಆರಿಸಿ, ಒಲೆಗೆ ಹಾಕಿ ನಾಶ ಮಾಡಿದೆವು; ಇದು ನಮ್ಮ ಪದ್ಧತಿ. ಇದನ್ನು ಏಕೆ ಒತ್ತಿ ಹೇಳಿದೆನೆಂದರೆ, ಆಗಿನ ದಿನಗಳಲ್ಲಿ ನಾವು ಕೈಗೊಳ್ಳುತ್ತಿದ್ದ ಇಂತಹ ಚಾರಣಗಳಿಂದ ಪರಿಸರ ನಾಶವಾಗುತ್ತಿರಲಿಲ್ಲ; ಪ್ರಕೃತಿಯ ಶಿಶುಗಳಂತೆ ವರ್ತಿಸುತ್ತಾ, ಅಲ್ಲಿನ ನೋಟವನ್ನು ಕಣ್ತುಂಬಿಕೊಂಡು, ಮರಗಳ ಆಶ್ರಯದಲ್ಲಿ ರಾತ್ರಿ ಕಳೆಯುವ ಅನುಭವವನ್ನು ಪಡೆದು ವಾಪಸಾಗುತ್ತಿದ್ದ ನಮ್ಮಲ್ಲಿ, ಆ ನಂತರ ಪ್ರಕೃತಿಯ ಕುರಿತು ಗೌರವ ಹೆಚ್ಚಾಗುತ್ತಿತ್ತು. ಇಂತಹ ಪರಿಸರವನ್ನು, ಪ್ರಕೃತಿಯನ್ನು ಮುಂದಿನ ಪೀಳಿಗೆಗೂ ಉಳಿಸಿಕೊಡಬೇಕೆಂಬ ಹಂಬಲವೂ ಮೂಡುತ್ತಿತ್ತು.

ಆರೋಗ್ಯಕರ ಚಾರಣವನ್ನು ಕೈಗೊಂಡ ಎಲ್ಲರಲ್ಲೂ, ಪ್ರಕೃತಿಯ ಮೇಲಿನ ಪ್ರೀತಿ, ಗೌರವ ಹೆಚ್ಚಳಗೊಳ್ಳುತ್ತದೆ ಎಂಬುದನ್ನು ಸೂಚಿಸಲು ಇಷ್ಟು ಹೇಳಬೇಕಾಯಿತು.

ಅಭಿಮತ

ರಂಗನಾಥ ಎನ್ ವಾಲ್ಮೀಕಿ

ಗೆದ್ದೆನೆಂದು ಬೀಗಬೇಡ ಸೋಲಲು ಸಿದ್ಧನಾಗು

ಸೋತೆನೆಂದು ಕುಗ್ಗಬೇಡ ಗೆಲ್ಲಲು ಸಿದ್ಧನಾಗು' ಎಂದು ಹೇಳುವ 'ಗೆದ್ದೆನೆಂದು ಬೀಗಬೇಡ ಸೋಲಲು ಸಿದ್ಧನಾಗು' ಎಂದು ಹೇಳಲು ಕಾರಣ ಏನೆಂದರೆ ಸೋಲು ಗೆಲುವು ಇವೆರಡೂ ಹಣದಂತೆ ಚಂಚಲೆ ಸದಾ ಒಬ್ಬರ ಬಳಿ ಇರದು. ಇವು ಆಗಾಗ ಸ್ಥಾನಪಲ್ಲಟ ಮಾಡುತ್ತಿರುತ್ತವೆ. ಇಂದು ಗೆದ್ದವರು ಮುಂದೆ ಸೋಲಬಹುದು. ಮುಂದೆ ಸೋತವರೂ ಮತ್ತೊಂದು ದಿನ ಗೆಲ್ಲಬಹುದು. ಸೋಲಾಗಲಿ ಗೆಲುವಾಗಲಿ ಎರಡೂ ಸ್ಥಿರವಲ್ಲ. ಈ ಸತ್ಯ ನಾವು ಅರ್ಥ ಮಾಡಿಕೊಳ್ಳಬೇಕು. ಸೋತಾಗ ಕುಗ್ಗದಿರುವುದು ಎಷ್ಟು ಮುಖ್ಯವೋ ಗೆದ್ದಾಗ ಅಹಂಕಾರ ಪಡದೇ ಗೆದ್ದೆನೆಂದು ಬೀಗದಿರುವುದು ಅಷ್ಟೇ ಮುಖ್ಯ. ಸೋಲು ಗೆಲುವನ್ನು ಸಮನಾಗಿ ಸ್ವೀಕರಿಸಿ ಎರಡನ್ನು ಮುಕ್ತ ಮನದಿಂದ ಒಪ್ಪಿಕೊಳ್ಳಬೇಕು. ಗೆಲುವು ಸಿಕ್ಕಾಗ ಸೋತವರನ್ನು ಸಂತೈಸುವ, ಸಮಾಧಾನ ಪಡಿಸುವ ಮನೋಗುಣ ಬಹಳ ಅಗತ್ಯ. ಗೆಲುವಿನ ಅಹಂನಲ್ಲಿ ತೇಲಬಾರದು.

ನಮ್ಮ ಸಮಾಜದಲ್ಲಿ ಅದೆಷ್ಟೋ ಜನರನ್ನು ಕಾಣುತ್ತೇವೆ. ತಮ್ಮದೇ ಆದ ಒಂದು ತಂಡವನ್ನು ಕಟ್ಟಿಕೊಂಡು ಗೆದ್ದೆ ಎಂಬ ಭ್ರಮೆಯಲ್ಲಿ ತೇಲುತ್ತಿರುತ್ತಾರೆ ವಾಸ್ತವವಾಗಿ ಅವರು ಸೋತಿರುತ್ತಾರೆ. ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿ ಇಲ್ಲದೇ ವಿನಾಕಾರಣ ಎದುರಾಳಿಗಳನ್ನು ಕೆಣಕಲು ಹೋಗಿ ಮತ್ತೆ ಮತ್ತೆ ಸೋಲುತ್ತಾರೆ. ಅಪರೂಪಕ್ಕೆ ಗೆದ್ದು ಬೀಗುತ್ತಾರೆ. ಹತ್ತಿದ ಏಣಿ ಒಂದು ದಿನ ಇಳಿಯಲೇಬೇಕು ಎಂಬ ಸತ್ಯ ಸದಾ ತಿಳಿಯಬೇಕು. ಕ್ರೀಡೆ, ರಾಜಕೀಯ, ವ್ಯಾಪಾರ, ಶಿಕ್ಷಣ, ಉದ್ಯೋಗ ಎಲ್ಲಾ ಕಡೆ ಸ್ಪರ್ಧೆ ಇರುವುದು ಇದು ಸಹಜ ಕೂಡಾ. ಎಲ್ಲರ ಜೊತೆ ಆರೋಗ್ಯಕರ ಸ್ಪರ್ಧೆಯಲ್ಲಿ ನಾವು ಭಾಗಿಯಾಗಬೇಕು ವಿನಹ ನಾನೇ ಶ್ರೇಷ್ಠ ನನಗೆಲ್ಲ ಗೊತ್ತು ಉಳಿದವರು ಕನಿಷ್ಠ ಎಂಬ ಭಾವನೆ ಬೆಳೆಸಿಕೊಳ್ಳುವುದು ಅಪಾಯಕಾರಿ ನಡೆ. ಈ ನಡೆಯೇ ಗೆಲ್ಲುವ ಮುನ್ನ ಸೋಲನ್ನು ಒಪ್ಪಿಕೊಂಡಂತೆ ಆಗುವುದು. ನಮ್ಮ ಪ್ರಾಮಾಣಿಕ ಗೆಲುವು ಹೇಗಿರಬೇಕೆಂದರೆ ನಮ್ಮ ಗೆಲುವು ಕಂಡು ಎದುರಾಳಿಗಳು ಸಂತೋಷದಿಂದ ಸಂಭ್ರಮ ಪಡುವಂತಿರಬೇಕು. ಆಗ ಗೆಲುವಿಗೆ ಸಾರ್ಥಕತೆ. ಆಗ ಗೆದ್ದವ ಬೀಗುವುದಿಲ್ಲ. ಪ್ರಪಂಚ ಬಲು ವಿಶಾಲವಾಗಿದೆ. ಇದನ್ನು ಅರಿಯಬೇಕು. ಅದನ್ನು ಅರಿಯದೇ ಕೆಲವರು ತಮ್ಮದೇ ಸೀಮಿತ ಪ್ರಪಂಚ ರಚಿಸಿಕೊಂಡು ಅದಕ್ಕೆ ತಾವೇ ರಾಜ, ನಾಯಕ, ಮುಖ್ಯಸ್ಥ ಅಂತ ಬೀಗುತ್ತಾರೆ. ತನ್ನ ಪ್ರದೇಶ ಬಿಟ್ಟು ಬೇರೆಡೆ ಹೋದಾಗಲೇ ಅಂತವರಿಗೆ ಇತರ ಸಾಧಕರನ್ನು ನೋಡಿ ತಾನು ಬಲು ಚಿಕ್ಕವ ತನ್ನ ಸಾಧನೆ ತೃಣಕ್ಕೆ ಸಮಾನ ಎಂದು ತಿಳಿಯುವುದು. ಒಂದೇ ಮಾತಲ್ಲ ಹೇಳುವದಾದರೆ ನಾವು ಬಾವಿಯಲ್ಲಿ ಇರುವ ಕಪ್ಪೆಯಂತೆ ವರ್ತಿಸಬಾರದು. ವಿಶಾಲ ಗುಣ ವಿಶಾಲ ಮನೋಭಾವ ತುಂಬಾ ಅಗತ್ಯ.

ಸಾಧನೆಗೆ ವಯಸ್ಸು ಯಾವತ್ತೂ ಅಡ್ಡಿಯಲ್ಲ ಅದೆಷ್ಟೋ ಸಂದರ್ಭಗಳಲ್ಲಿ ನಮಗಿಂತ ಚಿಕ್ಕ ವಯಸ್ಸಿನವರು ಬಹು ದೊಡ್ಡ ಸಾಧನೆ ಮಾಡಿರುತ್ತಾರೆ ಹಿರಿಯರಾದ ನಾವು ಅಂತವರ ಬಗ್ಗೆ ಅಭಿಮಾನ ಪಡಬೇಕು ಹೊರತು ನಾನು ಮಾಡದೇ ಇರುವುದನ್ನು ಅವರು ಮಾಡಿದರಲ್ಲ ಎಂದು ಅಸೂಯೆ ಪಡಬಾರದು. ಅರಿಷಡ್ವರ್ಗಗಳನ್ನು ದೂರ ಮಾಡಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಸೋಲು ಗೆಲುವು ಸಹಜ. ಗೆದ್ದ ಸಂಭ್ರಮ ಇರಲಿ ಅದು ಅಹಂಕಾರದ ಸ್ವರೂಪ ಪಡೆಯಬಾರದು. ಈ ಬದುಕು ಶಾಶ್ವತವಲ್ಲ ಆರಂಭ ಇರುವಂತೆ ಈ ನಮ್ಮ ಬದುಕಿಗೆ ಅಂತ್ಯನೂ ಇದೆ. ಹೀಗಿರುವಾಗ ನಾವು ಗಳಿಸುವ ಹಣ, ಆಸ್ತಿ , ಅಂತಸ್ತು , ಕೀರ್ತಿ ಅದು ಹೇಗೆ ಶಾಶ್ವತವಾಗಿರಲು ಸಾಧ್ಯ. ಹೀಗಾಗಿ ಯಾವಾಗಲೋ ಗೆದ್ದೆನೆಂದು ಬೀಗಬೇಡ. ಇಂದು ಗೆಲುವು ಸಿಕ್ಕಿರಬಹುದು ಸದಾ ಅದು ನಮ್ಮ ಬಳಿ ಇರದು. ಅದು ಗೆಲುವು ಆಗಿರಬಹುದು ,ಅಧಿಕಾರ , ಕೀರ್ತಿ , ಅಂತಸ್ತು, ಹುದ್ದೆ ಆಗಿರಬಹುದು. ಗೆದ್ದೆನೆಂದು ಬೀಗಬಾರದು ಮುಂದೆ ಗೆಲುವು ನಮ್ಮಿಂದ ಕೈಜಾರಿ ಇನ್ನೊಬ್ಬರ ಪಾಲಾಗಬಹುದು ಆಗ ಸೋಲು ಸ್ವೀಕರಿಸುವ ಮನೋಗುಣ ನಮ್ಮದಾಗಬೇಕು. ನಿನ್ನೆ ಮೊನ್ನೆ ಬಂದವರು ನಮಗಿಂತ ಉನ್ನತ ಕೀರ್ತಿ, ಯಶಸ್ಸು ಗಳಿಸುವರೆಂದು ಅಸೂಯೆ ಪಡುವುದೇಕೆ. ಪ್ರಾಮಾಣಿಕ ಪ್ರಯತ್ನ ಪಡುವವರು, ಪ್ರತಿಭಾವಂತರು ಗೆಲುವನ್ನು ಪಡೆಯಬಹುದು. ಅದು ಅವರ ಪ್ರತಿಭೆ, ಪರಿಶ್ರಮಕ್ಕೆ ಸಲ್ಲುವ ಗೌರವ ಹೀಗಾಗಿ ನಾವು ಸೋಲು ಗೆಲುವು ಸಮನಾಗಿ ಸ್ವೀಕರಿಸುತ್ತಾ ಸಾಗೋಣ ಗೆದ್ದಾಗ ಹಿಗ್ಗದೇ ಸೋತಾಗ ಕುಗ್ಗದೇ ಮುನ್ನಡೆಯೋಣ.

(ಲೇಖಕರು: ಶಿಕ್ಷಕರು ಹಾಗೂ ಹವ್ಯಾಸಿ ಬರಹಗಾರರು)

ಹಸಿರುಮನೆ ಪರಿಣಾಮಕ್ಕೆ ಕಾನೂನನ್ನು ತರುತ್ತಾರಾ?

ಅಭಿಮತ

ಪ್ರಕಾಶ ಹೆಗಡೆ

vveditoped@gmail.com

ಭೂಮಿಯ ವಾತಾವರಣದಲ್ಲಿ ಶಾಖವನ್ನು ಸೆರೆಹಿಡಿಯುವ ಹಸಿರುಮನೆ ಪರಿಣಾಮಕ್ಕೆ ಇಂಗಾಲದ ಡೈಆಕ್ಸೈಡ್ ಹಾಗೂ ಮೀಥೇನ್ ಪ್ರಾಥಮಿಕ ಕೊಡುಗೆದಾರ ಎಂದು ನಮ್ಮೆಲ್ಲರಿಗೂ ತಿಳಿದ ವಿಷಯ. ಅಂತೆಯೇ ಅತಿಯಾದ ಇಂಗಾಲವನ್ನು ಮತ್ತು ಮೀಥೇನ್ ಅನ್ನು ವಾತಾವರಣದಲ್ಲಿ ಹೊರಸೂಸುವುದರಿಂದ ಜಾಗತಿಕ ತಾಪಮಾನ ಏರಿಕೆಯಾಗಿ ಹವಾಮಾನದಲ್ಲಿ ಸೂರ್ಯನ ಶಾಖ ಹಾಗೂ ವಿಚಿತ್ರ ಮಳೆಯ ವೈಪರೀತ್ಯಗಳು ಉಂಟಾಗಿ ಅವುಗಳ ಸಂಬಂಧಿತ ದುಷ್ಪರಿಣಾಮಗಳನ್ನು ಜಗತ್ತು ಅನುಭವಿಸುತ್ತಿದೆ.

ಹಾಗಾಗಿ ಇಂಗಾಲದ ತೆರಿಗೆಯನ್ನು ವಿಧಿಸಿ ಸರಕಾರಗಳು ಈ ಪ್ರಕ್ರಿಯೆಗಳಿಗೆ ಅಂಕುಶ ಹಾಕಲು ಪ್ರಯತ್ನಿಸುತ್ತಿವೆ. ಕಲ್ಲಿದ್ದಲು, ತೈಲ, ಗ್ಯಾಸೋಲಿನ್ ಮತ್ತು ನೈಸರ್ಗಿಕ ಅನಿಲ ಸೇರಿದಂತೆ ಇಂಗಾಲ ಆಧಾರಿತ ಇಂಧನಗಳನ್ನು ಸುಡುವ ಕಂಪನಿಗಳ ಮೇಲೆ ವಿಧಿಸಲಾಗುವ ಶುಲ್ಕವೇ ಈ ತೆರಿಗೆಯಾಗಿದೆ. ಈ ಇಂಧನಗಳ ಸುಡುವಿಕೆಯು ಇಂಗಾಲದ ಡೈಆಕ್ಸೈಡ್ ಮತ್ತು ಮೀಥೇನ್‌ಗಳಂತಹ ಹಸಿರುಮನೆ ಅನಿಲಗಳನ್ನು ಉತ್ಪಾದಿಸುತ್ತದೆ. ಈ ಅನಿಲಗಳು ವಾತಾವರಣವನ್ನು ಬಿಸಿಯಾಗಿಸಿ ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗುತ್ತದೆ. ಇಂಗಾಲದ ತೆರಿಗೆ ಮಾಲಿನ್ಯದ ಮೇಲಿನ ತೆರಿಗೆಯ ಒಂದು ರೂಪವಾಗಿದೆ. ಇದನ್ನು ಸರಕಾರಗಳು ಪರೋಕ್ಷ ತೆರಿಗೆಯಾಗಿ ಸಂಗ್ರಹಿಸುತ್ತವೆ. ಪರೋಕ್ಷ ತೆರಿಗೆಯು ಸರಕುಗಳ ಖರೀದಿಯ ಮೇಲೆ ವಿಧಿಸಲಾಗುವ ಜಿಎಸ್‌ಟಿ ಅಥವಾ ಕಸ್ಟಮ್ಸ್ ಸುಂಕದಂತೆಯೇ ಇರುತ್ತದೆ. ಇದರಲ್ಲಿ ಇಂಗಾಲದ ಹೊರಸೂಸುವಿಕೆಯ ಪ್ರಮಾಣ/ಸಂಖ್ಯೆಯ ಆಧಾರದ ಮೇಲೆ ಪಳೆಯುಳಿಕೆ ಇಂಧನಗಳ ಉತ್ಪಾದನೆ, ವಿತರಣೆ ಮತ್ತು ಬಳಕೆಯ ಮೇಲೆ ಸುಂಕವನ್ನು ವಿಧಿಸಲಾಗುತ್ತದೆ. ಈ ತೆರಿಗೆಯು ಸಂಬಂಧಿಸಿದ ಸರಕುಗಳ ಮಾರಾಟದ ಬೆಲೆ ಹೆಚ್ಚಿಸಿ, ಅತಿಯಾದ ಇಂಗಾಲದ ಹೊರಸೂಸುವಿಕೆ ಇಂಧನಗಳ ಬೇಡಿಕೆಯನ್ನು ಕಡಿಮೆ ಮಾಡುತ್ತದೆ. ಅರ್ಥಾತ್, ಹೆಚ್ಚಿನ ಇಂಗಾಲದ ಹೊರಸೂಸುವಿಕೆಗೆ ಕಾರಣವಾದ ಕಲ್ಲಿದ್ದಲು, ಪೆಟ್ರೋಲ್ ಹಾಗೂ ನ್ಯಾಚುರಲ್ ಗ್ಯಾಸ್ ಬಳಕೆಯನ್ನು ಕಡಿಮೆ ಮಾಡಲು ಪ್ರಚೋದಿಸುತ್ತವೆ. ಮತ್ತು ನೈಸರ್ಗಿಕ ಅನಿಲದಂತಹ ಕಡಿಮೆ ಇಂಗಾಲದ ಹೊರಸೂಸುವಿಕೆ ಇಂಧನಗಳ ಬೇಡಿಕೆಯನ್ನು ಹೆಚ್ಚಿಸುತ್ತದೆ. ಅವುಗಳೆಂದರೆ - ಪವನ ಶಕ್ತಿ, ಸೌರ ಶಕ್ತಿ, ತರಂಗ ಶಕ್ತಿಯಂತಹ ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಯನ್ನು ಉತ್ತೇಜಿಸುತ್ತದೆ.

1990ರಲ್ಲಿ ಫಿನ್‌ಲ್ಯಾಂಡ್ ಇಂಗಾಲದ ತೆರಿಗೆಯನ್ನು ಪರಿಚಯಿಸಿದ ಮೊದಲ ದೇಶವಾಯಿತು. ಫೊಸ್ಸಿಲ್ ಇಂಧನಗಳ ಬಳಸುವಿಕೆಯ ಮೇಲೆ ಈ ತೆರಿಗೆ ವಿಧಿಸಲಾಗುತ್ತದೆ. ಇದಾದ ಕೆಲವೇ ದಿನಗಳಲ್ಲಿ ಇಂಗ್ಲೆಂಡ್ ಮತ್ತು ಸ್ವೀಡನ್ ಇಂಗಾಲದ ತೆರಿಗೆಯನ್ನು ಪರಿಚಯಿಸಿದವು. ಈಗ ಜಗತ್ತಿನ ಮೂವತ್ತೈದು ದೇಶಗಳು ಇಂಗಾಲದ ತೆರಿಗೆಯನ್ನು ತಮ್ಮ ದೇಶಗಳಲ್ಲಿ ಸಂಗ್ರಹಣೆ ಮಾಡುತ್ತಿವೆ. ಭಾರತವು ಕಲ್ಲಿದ್ದಲಿನ ಆಮದಿನ ಮೇಲೆ ಪ್ರತಿ ಮೆಟ್ರಿಕ್ ಟನ್‌ಗೆ 400 ರು. ಇಂಗಾಲದ ತೆರಿಗೆಯನ್ನು ವಿಧಿಸುತ್ತದೆ.

ಜಾಗತಿಕ ತಾಪಮಾನ ಏರಿಕೆಯನ್ನು ಎದುರಿಸಲು ಅಂತಾರಾಷ್ಟ್ರೀಯ ಕ್ರಮಕ್ಕೆ ಅಡಿಪಾಯ ಹಾಕುವ 2015ರ

ಪ್ಯಾರಿಸ್ ಒಪ್ಪಂದದಂತೆ ದೇಶಗಳು ಹಲವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಪ್ರತಿಜ್ಞೆ ಮಾಡಿವೆ. ಇಲ್ಲಿಯವರೆಗೆ ವಿಶ್ವಸಂಸ್ಥೆಯ ಚೌಕಟ್ಟಿನ ಸಮಾವೇಶದ (ಯುಎನ್‌ಎಫ್‌ಸಿಸಿಸಿ) ಪ್ರತಿಜ್ಞೆಗೆ ಜಗತ್ತಿನ 195 ದೇಶಗಳು ಈ ಒಪ್ಪಂದಕ್ಕೆ ಸಹಿ ಹಾಕಿವೆ. ಪ್ಯಾರಿಸ್ ಒಪ್ಪಂದ ದೀರ್ಘಾವಧಿಯ ತಾಪಮಾನದ ಏರಿಕೆ ಮೇಲೆ ಕ್ರಮ ಕೈಗೊಳ್ಳುವ ಗುರಿಯನ್ನು ಹೊಂದಿದೆ. ಇದು ಜಾಗತಿಕ ಮೇಲ್ಮೈ ತಾಪಮಾನದ ಏರಿಕೆಯನ್ನು ಕೈಗಾರಿಕಾ-ಪೂರ್ವ ಮಟ್ಟಕ್ಕಿಂತ 2 ಡಿಗ್ರಿ ಸೆಲ್ಸಿಯಸ್ (3.6 ಡಿಗ್ರಿ ಫ್ಯಾರನ್‌ಹೀಟ್) ಗಿಂತ ಕಡಿಮೆ ಪ್ರಮಾಣವನ್ನು ತಲುಪುವ ಉದ್ದೇಶ ಹೊಂದಿದೆ. 21ನೇ ಶತಮಾನದ ಮಧ್ಯದ ವೇಳೆಗೆ ನಿವ್ವಳ ಶೂನ್ಯವನ್ನು ತಲುಪಬೇಕು ಎಂದು ಪ್ರತಿಜ್ಞೆ ಮಾಡಿವೆ.

ಈ ನಿಟ್ಟಿನಲ್ಲಿ ದೇಶಗಳು ಇಂಗಾಲ ಹಾಗೂ ಮೀಥೇನ್ ಹೊರಸೂಸುವಿಕೆ ಮೂಲಗಳನ್ನು ಕಂಡುಕೊಂಡು ಅವುಗಳ ಉತ್ಪಾದನೆ ಕಡಿತಗೊಳಿಸಲು ವಿವಿಧ ರೀತಿಯ ನಿರ್ಬಂಧಗಳು ಮತ್ತು ನಿಯಂತ್ರಣಗಳನ್ನು ತಮ್ಮ ದೇಶಗಳ ಕಾನೂನಿನ ಚೌಕಟ್ಟಿನಲ್ಲಿ ಜಾರಿಗೊಳಿಸುತ್ತಿವೆ.

ವಿಚಿತ್ರವೆನಿಸಿದರೂ ಸತ್ಯ. ನಮಗೆ ತಿಳಿದಿರುವಂತೆ ಡೆನ್ಮಾರ್ಕ್ ಜಾನುವಾರು ಉತ್ಪಾದನೆಗೆ ಹೆಸರುವಾಸಿಯಾಗಿದೆ. ಖ್ಯಾತಿಯೊಂದಿಗೆ ಜಾನುವಾರುಗಳಿಂದ ಪರಿಸರಕ್ಕೆ ಧಕ್ಕೆ ತರುವ ನಕಾರಾತ್ಮಕ ಮುಖವೂ ತೋರಿ ಬರುತ್ತದೆ. ಜಾನುವಾರುಗಳಿಂದ ಹೊರಬರುವ ಮೀಥೇನ್ ಅನಿಲವೇ ಈ ಇನ್ನೊಂದು ಮುಖ. ಡೆನ್ಮಾರ್ಕ್ ದೇಶದ ರೈತರು ಹಸಿರುಮನೆ ಅನಿಲವನ್ನು ಹೊರಸೂಸುವ ತಮ್ಮ ಜಾನುವಾರುಗಳು, ಕುರಿಗಳು ಮತ್ತು ಹಂದಿಗಳ ಮೇಲೆ 2030 ರಿಂದ ಸರಕಾರಕ್ಕೆ ತೆರಿಗೆ ಪಾವತಿಸಬೇಕಾಗುತ್ತದೆ. ಮೀಥೇನ್ ಅನಿಲಗಳ ಹೊರಸೂಸುವಿಕೆಗೆ ಕಾರಣವಾಗುವ ಜಾನುವಾರುಗಳ ವ್ಯವಹಾರವನ್ನು ಮಾಡುವ ರೈತರನ್ನು ಗುರಿಯಾಗಿಸಿಕೊಂಡಿರುವುದರಿಂದ ತೆರಿಗೆ ವಿಧಿಸಿದ ವಿಶ್ವದ ಮೊದಲ ದೇಶವಾಗಿದೆ. ಹೋದ ವರ್ಷ, 2025ರಲ್ಲಿ ಜಾರಿಗೆ ಬರುವಂತೆ ನ್ಯೂಜಿಲೆಂಡ್ ಇದೇ ರೀತಿಯ ಕಾನೂನನ್ನು ಜಾರಿಗೆ ತಂದಿತ್ತು. ಆದರೆ ರೈತರ ಟೀಕೆ ಮತ್ತು ಇತ್ತೀಚಿನ ಸರಕಾರ ಬದಲಾವಣೆಯಿಂದಾಗಿ ಈ ಕಾಯಿದೆಯನ್ನು ಹಿಂಪಡೆಯಲಾಗಿದೆ. ಇಂಗಾಲದ ಡೈಆಕ್ಸೈಡ್ ಸಾಮಾನ್ಯವಾಗಿ ಹವಾಮಾನ ಬದಲಾವಣೆಯಲ್ಲಿ ಹೆಚ್ಚಿನ ಗಮನವನ್ನು ಪಡೆಯುತ್ತದೆಯಾದರೂ, ಮೀಥೇನ್ ಒಂದು ಕಾಲಾವಧಿಯಲ್ಲಿ ಇಂಗಾಲಕ್ಕಿಂತ ಹೆಚ್ಚು ಶಾಖವನ್ನು ಸೆರೆಹಿಡಿಯುತ್ತದೆ. ಯುಎಸ್ ನ್ಯಾಷನಲ್ ಓಷಿಯಾನಿಕ್ ಅಟ್ಮಾಸ್ಫಿಯರಿಕ್ ಅಡ್ಮಿನಿಸ್ಟ್ರೇಷನ್‌ನ ಪ್ರಕಾರ, ಮೀಥೇನ್ ಹೊರಸೂಸುವಿಕೆಯನ್ನು ನಿಯಂತ್ರಿಸಲು ನಾವು ಇಂಗಾಲಕ್ಕಿಂತ ಹೆಚ್ಚಿನ ಗಮನ ಹರಿಸಬೇಕಾಗಿದೆ. ಮನುಷ್ಯರ ಚಟುವಟಿಕೆಗಳಿಂದ ಉಂಟಾಗುವ ಹೊರಸೂಸುವಿಕೆಯ ಸುಮಾರು ಶೇ.32 ಪ್ರತಿಶತದಷ್ಟು ಭಾಗವು ಜಾನುವಾರಗಳಿಂದ ಉಂಟಾಗುತ್ತದೆ ಎಂಬುದು ಆತಂಕದ ವಿಷಯ. ಅನೇಕ ದೇಶಗಳು ಸದ್ಯದಲ್ಲೇ ಇದೇ ದಿಶೆಯಲ್ಲಿ ಕಾಯಿದೆಗಳನ್ನು ಜಾರಿಗೊಳಿಸಬಹುದು.

ಇಂಗಾಲ ಮತ್ತು ಮೀಥೇನ್ ತಯಾರಿಕೆಯಲ್ಲಿ ಅನಿಯಂತ್ರಿತ ಕೃಷಿ ಚಟುವಟಿಕೆಗಳೂ ಕಾರಣವೆಂದರೆ ಆಶ್ಚರ್ಯವಾಗಬಹುದು ಪ್ರಸ್ತುತ ಸಂಭವಿಸುತ್ತಿರುವ ಹೆಚ್ಚಿನ ಪರಿಸರ ನಾಶಕ್ಕೆ ಪ್ರಾಣಿ ಕೃಷಿ ಉದ್ಯಮವು ಪ್ರಮುಖ ಕಾರಣವಾಗಿದೆ. ಅನೇಕ ದೇಶಗಳಲ್ಲಿ, ಭಾರತವೂ ಸೇರಿದಂತೆ, ತೆರಿಗೆ ಪ್ರೋತ್ಸಾಹಕ ನಿಯಮಗಳು ಕೃಷಿಗೆ ಸಂಬಂಧಿತ ಚಟುವಟುಕೆಗಳಲ್ಲಿ ಹೆಚ್ಚು ಹೂಡಿಕೆ ಮಾಡಲು ಕಾರಣವಾಗಿದೆ. ಈ ಹಾನಿಕಾರಕ ಪರಿಣಾಮಗಳು ಅತಿಯಾದ ಮೇಯಿಸುವಿಕೆ, ಆವಾಸಸ್ಥಾನದ ನಷ್ಟ, ಅತಿಯಾದ ಮೀನುಗಾರಿಕೆಯಂತಹ ಹೆಚ್ಚಿದ ಚಟುವಟಿಕೆಗಳಿಂದ ಸಂಭವಿಸುತ್ತವೆ. ಒಂದು ವಿಶ್ವಾಸಾರ್ಹ ವರದಿಯ ಪ್ರಕಾರ, ಮಾನವ ಬಳಕೆಗಾಗಿ ಜಾನುವಾರುಗಳನ್ನು ಬೆಳೆಸುವುದು ಒಟ್ಟು ಜಾಗತಿಕ ಹಸಿರುಮನೆ ಅನಿಲ ಹೊರಸೂಸುವಿಕೆಯ ಸುಮಾರು ಶೇ.15 ಪ್ರತಿಶತವನ್ನು ಉತ್ಪಾದಿಸುತ್ತದೆ. ಇದು ಒಟ್ಟು ಎಲ್ಲ ಸಾರಿಗೆ ವಾಹನಗಳ ಹೊರಸೂಸುವಿಕೆಗಳಿಗಿಂತ ಹೆಚ್ಚಾಗಿದೆ ಹಾಗೂ ಸುಮಾರು ಶೇ.70 ಪ್ರತಿಶತದಷ್ಟು ಕೃಷಿ ಭೂಮಿಯನ್ನು ಬಳಸುತ್ತದೆ. ಇದು ಅರಣ್ಯನಾಶ, ಜೀವವೈವಿಧ್ಯತೆಯ ನಷ್ಟ ಮತ್ತು ಜಲ ಮಾಲಿನ್ಯಕ್ಕೆ ಕಾರಣವಾಗಿದೆ. ಒಂದು ಪೌಂಡ್ ಗೋಮಾಂಸವನ್ನು ಸಂಸ್ಕರಿಸಲು 2,500 ಗ್ಯಾಲನ್ ನೀರು ಬೇಕಾಗುತ್ತದೆ. ಮೊಟ್ಟೆಗೆ 477 ಗ್ಯಾಲನ್ ನೀರು ಮತ್ತು ಚೀಸ್ ತಯಾರಿಸಲು ಸುಮಾರು 900 ಗ್ಯಾಲನ್ ನೀರು ಬೇಕಾಗುತ್ತದೆ. ನಮ್ಮ ಮಾಂಸ ಮತ್ತು ಹೈನು ಉತ್ಪಾದನೆಯನ್ನು ನಿಲ್ಲಿಸುವುದರಿಂದ ಹಸಿರುಮನೆ ಅನಿಲ ಹೊರಸೂಸುವಿಕೆಯ ಹೆಚ್ಚಳವನ್ನು 30 ವರ್ಷಗಳವರೆಗೆ ತಡೆಹಿಡಿಯಬಹುದು ಎಂದು ಹೊಸ ಅಧ್ಯಯನವು ಸೂಚಿಸುತ್ತದೆ. ಮೌಲ್ಯವರ್ಧನೆಗಿಂತ ಹೆಚ್ಚಿನ ಹಾನಿಯನ್ನು ಹೊಂದಿರುವ ಪ್ರಾಣಿ ಉತ್ಪಾದನೆ ಮತ್ತು ಕೃಷಿಗೀಗ ಕಡಿವಾಣ ಹಾಕಬೇಕಾಗಿದೆ. ನಾವು ಮಾಡಬೇಕಾಗಿರುವುದು ಇಷ್ಟೇ. ಮಾಂಸ ಮತ್ತು ಹೈನುಗಾರಿಕೆಗೆ ಪರ್ಯಾಯವಾದ ಆಹಾರ ಪದ್ಧತಿಯನ್ನು ಅನುಸರಿಸುವುದು. ಅಂದರೆ ಸಸ್ಯ ಆಧಾರಿತ ಆಹಾರ ವ್ಯವಸ್ಥೆಗೆ ಹೊಂದಿಕೊಳ್ಳುವುದು.

ಭಾರತದಲ್ಲಿ ಈ ದಿಕ್ಕಿನಲ್ಲಿ ಹೇಗೆ ಕಾನೂನುಗಳನ್ನು ಜಾರಿಗೊಳಿಸುತ್ತಾರೆನ್ನುವುದು ಕುತೂಹಲಕರ ವಿಷಯ.

(ಲೇಖಕರು: ಹವ್ಯಾಸಿ ಬರಹಗಾರರು ಮತ್ತು ಚಾರ್ಟರ್ಡ್ ಅಕೌಂಟಂಟ್)



ನಾರದ ಸಂಚಾರ

ಕಲಹಪ್ರಿಯ

naadigru@gmail.com

ಪರಬ್ಯಾಟ್ ಬೀಸೋದು!

ಯಾವುದೇ ಸುದ್ದಿ ಪ್ರಕಟ ಮಾಡುವ ಮುಂದೆ ಅದಕ್ಕೊಂದು ಚಂದನೆಯ ಶೀರ್ಷಿಕೆ ಕೊಡುವುದು ರೂಢಿ. headlines should sell the story, should tell the story ಅಂತ ಒಂದು ಮಾತಿದೆ. ಎಷ್ಟೋ ಸುದ್ದಿಗಳು ಅದರ ಶೀರ್ಷಿಕೆಯಿಂದಲೇ ಮತ್ತಷ್ಟು ಸುದ್ದಿಯಾಗುವುದೂ ಇದೆ. ಹಾಗೆ ತುಂಬಾ ಹಳೆಯ ಕಾಲದಿಂದ ಒಂದು ಶೀರ್ಷಿಕೆ ಆಗಾಗ ಬಳಕೆಯಾಗುವುದು. ಅದೇನೆಂದರೆ, 'ಬ್ಯಾಟ್ ಬೀಸುವುದು' ಮುಖ್ಯಮಂತ್ರಿ ಪರ ಬ್ಯಾಟ್ ಬೀಸಿದ ಸಚಿವರು. ಬಿಜೆಪಿ ನಾಯಕನ ಪರ ಬ್ಯಾಟ್ ಬೀಸಿದ ಜೆಡಿಎಸ್ ನಾಯಕರು ಹೀಗೆ ಬ್ಯಾಟ್ ಬೀಸಿದ ಅನ್ನುವ ಪದದಿಂದಲೇ ಸಾವಿರಾರು ಶೀರ್ಷಿಕೆಗಳು ಹುಟ್ಟಿವೆ. ಇಲ್ಲಿ ವ್ಯಾಕರಣ ಮತ್ತು ಪದ ಬಳಕೆಯ ಸೌಂದರ್ಯ ಬಿಟ್ಟು, ಲಾಜಿಕ್ ಆಗಿ ಯೋಚಿಸದರೆ, ಏನಾಗಬಹುದು? ಬ್ಯಾಟ್ ಬೀಸಿದರು ಎಂದರೆ ಬಾಲ್ ಯಾರು? ಅಥವಾ ತಲೆಗೇ ಬ್ಯಾಟ್ ಬೀಸುವುದೇ? ಅಥವಾ ಕಾಲಿಗೆ ಬ್ಯಾಟ್ ನಿಂದ ಹೊಡೆಯುವುದೇ? ಇವರ ಪರವಾಗಿ ಬೇರೆಯವರಿಗೆ ಬ್ಯಾಟ್‌ನಿಂದ ಹೊಡೆಯುವುದೇ? ಹೀಗೆ ನೂರಾರು ತಾರ್ಕಿಕ ಪ್ರಶ್ನೆಗಳು ಹುಟ್ಟುತ್ತವೆ. ಅದಕ್ಕೆ ಬ್ಯಾಟ್ ನಮ್ಮ ತಲೆಯನ್ನು ಬೀಸುವುದಕ್ಕಿಂತ ಮೊದಲು. ಬ್ಯಾಟ್‌ನ್ನು ಸೈಡ್‌ಗೆ ಇಡುವುದು ಒಳ್ಳೆಯದು!

125 ಕೋಟಿ!

ಇತ್ತೀಚೆಗೆ ಸಂಪನ್ನವಾದ ವಿಶ್ವಕಪ್ ಫೈನಲ್‌ನಲ್ಲಿ ಭಾರತ ತಂಡ ಗೆದ್ದಿರುವ ವಿಷಯ ಎಲ್ಲರಿಗೂ ತಿಳಿದೇ ಇದೆ. ಆಗಿನಿಂದ ಕ್ರಿಕೆಟ್ ವಿಷಯದಲ್ಲಿ ಭಾರತೀಯರಿಗೆ ಸಣ್ಣ ಕೋಡು ಬಂದಿದ್ದು ಸಹಜಬಿಡಿ. ಕ್ರಿಕೆಟ್‌ನ ವಿಶ್ವ ವಿಜೇತ ರಾಷ್ಟ್ರದ ಜನರಾಗಿ ಸಣ್ಣ ಗರ್ವವನ್ನೂ ಪಡೆದುಕೊಳ್ಳದಿದ್ದರೆ ಹೇಗೆ? ಹಾಗೇ ಸರಣಿ ಗೆದ್ದ ಭಾರತೀಯ ತಂಡದ ವಿಜಯಯಾತ್ರೆಯನ್ನು ಟಿವಿಯಲ್ಲಿ ನೋಡುತ್ತ ಕುಳಿತಿದ್ದ ಯುವಕರ ತಂಡವು, ತಮ್ಮದೇ ಆ್ಯಂಗಲ್‌ನಲ್ಲಿ ಮಾತನಾಡ ತೊಡಗಿದರಂತೆ. ಒಬ್ಬ ಸೂರ್ಯಕುಮಾರ್ ಯಾದವ್ ಹಿಡಿದ ಕ್ಯಾಚ್ ಬಗ್ಗೆ ಮಾರನಾಡಿದರೆ, ಮತ್ತೊಬ್ಬ ಐಪಿಎಲ್‌ನಲ್ಲಿ ದೂರ ಸರಿದಿದ್ದ ಆಟಗಾರರು ಮತ್ತೆ ಸೇರಿದ್ದನ್ನು ಹೇಳಿದ. ಹಾಗೇ ಮೂರನೇಯವ ಟೀಂಗೆ ಬಿಸಿಸಿಐನವರು 125 ಕೋಟಿ ಹಣವನ್ನು ಕೊಟ್ಟಿದ್ದಾರೆ. ಅದನ್ನೇನಾದರೂ ನನಗೆ ಕೊಟ್ಟಿದ್ದರೆ, ಐಪಿಎಲ್‌ಗೆ ಮತ್ತೊಂದು ಟೀಮ್ ರೆಡಿ ಮಾಡ್ತಿದ್ದೆ ಅಂತ ಹೇಳಿದ. ಅದಕ್ಕೆ ಇನ್ನೊಬ್ಬ ಆ ಟೀಮ್‌ಗೆ ನನ್ನೇ ಕ್ಯಾಪ್ಟನ್ ಆಗಿ ಮಾಡು ಎಂತ ಕೇಳಿದರೆ, ಅದಕ್ಕೆ ಅವನು, 'ನನಗೆ 125 ಕೋಟಿ ಬರದೇ ಇದ್ರೆ ಚನ್ನಾಗಿರುತ್ತೆ' ಅಂತ ಹೇಳಿದ.



ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 188

ಸಮಾಚಾರ ಸಣ್ಣದಲ್ಲ

ಬೆಂಗಳೂರು ಮೂಲದ 'ಕೂ' ಆ್ಯಪ್ ಸ್ಥಗಿತ

ದೆಹಲಿ: ಬೆಂಗಳೂರು ಮೂಲದ ಸಾಮಾಜಿಕ ಸಂವಹನ 'ಕೂ' ಆಪ್ ಸೇವೆ ಸ್ಥಗಿತಗೊಂಡಿದೆ. ಅಪ್ರಮೇಯ ರಾಧಾಕೃಷ್ಣ ಆರಂಭಿಸಿದ್ದ 'ಕೂ' ಈ ಹಿಂದೆ

ಬಳಕೆಯಲ್ಲಿದ್ದ 'ಟ್ವಿಟರ್' ಸ್ಪರ್ಧೆ ನೀಡುವಂತೆ 2020ರಲ್ಲಿ ಆರಂಭಗೊಂಡಿತ್ತು. ಸಂಸ್ಥಾಪಕ ಅಪ್ರಮೇಯ ಅವರೇ ಆಪ್ ಸ್ಥಗಿತಗೊಂಡಿರುವುದನ್ನು ಸಾಮಾಜಿಕ ಜಾಲತಾಣದಲ್ಲಿ ಘೋಷಿಸಿದ್ದಾರೆ. ಪಾಲುದಾರರು, ಹೂಡಿಕೆದಾರರ ಜತೆಗಿನ ವ್ಯವಹಾರ ಮಾತುಕತೆ ವಿಫಲವಾದ ಕಾರಣ ಸಂಸ್ಥೆ ಸೇವೆಯನ್ನು ಸ್ಥಗಿತಗೊಳಿಸುತ್ತಿದೆ ಎಂದು ಪ್ರಕಟಿಸಿದ್ದಾರೆ. ಡೈಲಿಹಂಟ್ ಕಂಪನಿ ಜತೆಗಿನ 'ಕೂ' ಮಾರಾಟದ ಮಾತುಕತೆಯೂ ಅರ್ಧಕ್ಕೆ ನಿಂತುಹೋಗಿದೆ. ಅದೂ ಕೂಡಾ ಕಂಪೆನಿ ಸ್ಥಗಿತಕ್ಕೆ ಕಾರಣ ಎನ್ನಲಾಗಿದೆ. ಆಂಡ್ರಾಯ್ಡ್ ಮೊಬೈಲ್ ಫೋನ್‌ಗಳ ವೇದಿಕೆಯಲ್ಲಿ 'ಕೂ'ಗೆ 1 ಕೋಟಿಗೂ ಅಧಿಕ ಬಳಕೆದಾರರು ಇದ್ದರು. ಹೂಡಿಕೆದಾರರಿಂದ 6 ಕೋಟಿ ಡಾಲರ್ ಬಂಡವಾಳವೂ ಸಂಗ್ರಹವಾಗಿತ್ತು. ಹಾಗಿದ್ದೂ ಕಂಪೆನಿ ನಿಲುಗಡೆಗೊಂಡಿದೆ.

ಭಾರತ-ಚೀನಾ ಮಧ್ಯೆ ಕಜಕ್‌ಸ್ತಾನ್‌ನಲ್ಲಿ ಸಭೆ

ಅಸ್ತಾನ್: ಶಾಂಘೈ ಸಹಕಾರ ಸಂಸ್ಥೆಗಳ(ಎಸ್‌ಸಿಒ) ವಾರ್ಷಿಕ ಸಭೆ ಕಜಕಸ್ತಾನದಲ್ಲಿ ನಡೆದಿದ್ದು, ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಭಾಗಿಯಾಗಿದ್ದಾರೆ. ಅದೇ ವೇಳೆ ಗುರುವಾರ ಚೀನಾ ವಿದೇಶಾಂಗ ಸಚಿವ ವಾಂಗ್ ಯೀ ಅವರನ್ನು ಭೇಟಿಯಾಗಿ ಮಹತ್ವದ ಮಾತುಕತೆ ನಡೆಸಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಾಹಿತಿ ಹಂಚಿಕೊಂಡಿದೆ. 2020ರಲ್ಲಿ ಭಾರತ-ಚೀನಾ ಗಡಿಯಂಚಿನ ಲಡಾಕ್ ಪ್ರದೇಶದಲ್ಲಿ ಎರಡೂ ದೇಶಗಳ ಸೈನಿಕರ ಸಂಘರ್ಷ ನಡೆದಾಗಿನಿಂದ ಗಡಿ ವಿವಾದ ತೀವ್ರಗೊಂಡಿದೆ. ಸೇನಾಧಿಕಾರಿಗಳ ಹಲವು ಸುತ್ತುಗಳ ಮಾತುಕತೆ ನಂತರವೂ ಎರಡೂ ದೇಶಗಳ ನಡುವಿನ ಬಿಕ್ಕಟ್ಟು ಕೊನೆಗೊಂಡಿಲ್ಲ. ಈ ಹಿನ್ನೆಲೆಯಲ್ಲಿ ಭಾರತ-ಚೀನಾ ವಿದೇಶಾಂಗ ಸಚಿವರ ಕಜಕಸ್ತಾನ್‌ನಲ್ಲಿನ ಸಭೆ ಮಹತ್ವ ಪಡೆದುಕೊಂಡಿದೆ.

ರಷ್ಯಾ, ಆಸ್ಟ್ರಿಯಕ್ಕೆ ಮೋದಿ ಪ್ರವಾಸ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಜು.8ರಿಮದ 10ರವರೆಗೆ ರಷ್ಯಾ ಮತ್ತು ಆಸ್ಟ್ರಿಯಕ್ಕೆ ಅಧಿಕೃತ ಭೇಟಿ ನೀಡಲಿದ್ದಾರೆ. 22ನೇ ಭಾರತ-ರಷ್ಯಾ ವಾರ್ಷಿಕ ಶೃಂಗಸಭೆ ಜುಲೈ 8-9ರಂದು ನಡೆಯಲಿರುವುದರಿಂದ ಪ್ರಧಾನಿ ಮೋದಿ ಕ್ರೆಮ್ಲಿನ್ ಭೇಟಿ ನಿಗದಿಯಾಗಿದೆ. 5 ವರ್ಷಗಳ ಬಳಿಕ ಮೋದಿ ರಷ್ಯಾಕ್ಕೆ ಭೇಟಿ ನೀಡುತ್ತಿದ್ದಾರೆ. 2019ರಲ್ಲಿ ವ್ಲಾಡಿವೋಸ್ಟಾಕ್‌ನಲ್ಲಿ ಆಯೋಜಿತವಾಗಿದ್ದ ಆರ್ಥಿಕ ಸಮಾವೇಶದಲ್ಲಿ ಭಾಗವಹಿಸಲು ಮೋದಿ ರಷ್ಯಾಕ್ಕೆ ಭೇಟಿ ನೀಡಿದ್ದರು. ರಷ್ಯಾದಿಂದ ಹೊರಟು ಪ್ರಧಾನಿ ಮೋದಿ ಆಸ್ಟ್ರಿಯ ದೇಶಕ್ಕೆ ಭೇಟಿ ನೀಡಲಿದ್ದಾರೆ. ಇದರಿಂದ ಭಾರತದ ಪ್ರಧಾನಿಯೊಬ್ಬರು 41 ವರ್ಷಗಳ ಬಳಿಕ ಆಸ್ಟ್ರಿಯ ದೇಶಕ್ಕೆ ಭೇಟಿ ನೀಡಿದಂತೆ ಆಗಲಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಮಾಹಿತಿ ನೀಡಿದೆ.

ಕಾಲ್ತುಳಿತ: 122 ಶವಗಳ ಗುರುತು ಪತ್ತೆ

ಹತ್ರಾಸ್: ಉತ್ತರ ಪ್ರದೇಶ ಹತ್ರಾಸ್ ಜಿಲ್ಲೆಯಲ್ಲಿ 2 ದಿನದ ಹಿಂದೆ ಸತ್ಸಂಗ ವೇಳೆ ಕಾಲ್ತುಳಿತಕ್ಕೆ ಬಲಿಯಾದ 122 ಜನರ ಗುರುತು ಪತ್ತೆಯಾಗಿದ್ದು, ಮರಣೋತ್ತರ ಪರೀಕ್ಷೆ ಬಳಿಕ ಅವರ ಕುಟುಂಬಗಳಿಗೆ ಮೃತದೇಹ ಹಸ್ತಾಂತರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಆಶಿಷ್ ಕುಮಾರ್ ಸುದ್ದಿಗಾರರಿಗೆ ಗುರುವಾರ ತಿಳಿಸಿದ್ದಾರೆ. 112 ಮಹಿಳೆಯರು, 7 ಮಕ್ಕಳು, ಒಬ್ಬ ಪುರುಷ ಮೃತಪಟ್ಟಿದ್ದಾರೆ.

ಆಡ್ವಾಣಿ ಚೇತರಿಕೆ; ಮರಳಿ ಮನೆಗೆ

ದೆಹಲಿ: ಬಿಜೆಪಿ ಧುರೀಣ, ಮಾಜಿ ಉಪ ಪ್ರಧಾನಿ ಲಾಲ್ ಕೃಷ್ಣ ಆಡ್ವಾಣಿ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದು, ದೆಹಲಿಯ ಅಪೋಲೊ ಆಸ್ಪ



ತ್ರೆಯಿಂದ ಗುರುವಾರ ಸಂಜೆ ಮನೆಗೆ ಮರಳಿದರು. 96 ವರ್ಷಗಳ ಹಿರಿಯ ರಾಜಕಾರಣಿ ಆರೋಗ್ಯದಲ್ಲಿ ಬುಧವಾರ ಸಂಜೆ ತುಸು ಏರುಪೇರಾಗಿದ್ದರಿಂದ ಪುತ್ರಿ ಪ್ರತಿಭಾ ಆಡ್ವಾಣಿ ಅವರೇ ಕರೆದೊಯ್ದು ಅಪೊಲೊ ಆಸ್ಪತ್ರೆಗೆ ದಾಖಲಿಸಿದ್ದರು. ನರವಿಜ್ಞಾನ ವಿಭಾಗದ ಹಿರಿಯ ತಜ್ಞರಾದ ಡಾ. ವಿನೀತ್ ಸೂರಿ ನೇತೃತ್ವದ ವೈದ್ಯರ ತಂಡ ಚಿಕಿತ್ಸೆ ನೀಡಿತು. ಕಳೆದ ವಾರ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ(ಏಮ್ಸ್) ಆಸ್ಪತ್ರೆಗೆ ದಾಖಲಾಗಿದ್ದರು.

ಪ್ರತಿಭಟನೆ ಪ್ರಕರಣ: ಇಮ್ರಾನ್ ಖುಲಾಸೆ

ಇಸ್ಲಾಮಾಬಾದ್: ಉಡುಗೊರೆ ಪ್ರಕರಣದಲ್ಲಿ ಬಂಧಿತರಾಗಿದ್ದ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಅನರ್ಹಗೊಳಿಸಿದ್ದ ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆ ನಡೆಸಿದ ಪ್ರಕರಣದ ತೀರ್ಪು ಗುರುವಾರ ಹೊರಬಿದ್ದಿದೆ. ಮಾಜಿ ಪ್ರಧಾನಿ ಇಮ್ರಾನ್ ಖಾನ್ ಹಾಗೂ ಅವರ ನೇತೃತ್ವದ ಪಿಟಿಐ ಪಕ್ಷದ ಹಲವು ಹಿರಿಯ ನಾಯಕರನ್ನು ಜಿಲ್ಲಾ ಸೆಷನ್ಸ್ ಕೋರ್ಟ್ ಖುಲಾಸೆಗೊಳಿಸಿದೆ. ರಾಜ್ ಖುರಾಂ ನವಾಜ್ ಹಾಗೂ ಅಲಿ ನವಾಜ್ ಅವಾನ್ ಪ್ರಕರಣದಲ್ಲಿ ದೋಷಮುಕ್ತಗೊಂಡ ನಾಯಕರಾಗಿದ್ದಾರೆ.

ಬ್ರಿಟನ್ ಸಂಸತ್ ಚುನಾವಣೆ; ಇಂದು ಫಲಿತಾಂಶ ಪ್ರಕಟ। ಕನ್ಸರ್ವೇಟಿವ್ ಹಿನ್ನಡೆ- ಲೇಬರ್ ಪಕ್ಷ ಜಯಭೇರಿ: ಸಮೀಕ್ಷೆ। 4.60 ಕೋಟಿ ಮತದಾರರು; 40 ಸಾವಿರ ಮತಗಟ್ಟೆ

ರಿಷಿಗೆ 2ನೇ ಅವಕಾಶವೋ, ಕೈರ್ ಕೈಗೆ ಅಧಿಕಾರವೋ?

ಲಂಡನ್: 650 ಸದಸ್ಯ ಬಲದ ಬ್ರಿಟನ್ ಸಂಸತ್‌ಗೆ ಗುರುವಾರ ಬೆಳಗ್ಗೆ 9ಗಂಟೆಯಿಂದ(ಲಂಡನ್ ಸಮಯ) ಮತದಾನ ಆರಂಭಗೊಂಡಿದ್ದು, ಶುಕ್ರವಾರ ಫಲಿತಾಂಶ ಪ್ರಕಟವಾಗಲಿದೆ.

ಹೌಸ್ ಆಫ್ ಕಾಮನ್ಸ್(ಸಂಸತ್ತಿನ ಕೆಳಮನೆ) ಒಟ್ಟು 650 ಸದಸ್ಯ ಬಲ ಹೊಂದಿದೆ. ಬಹುಮತ ಪಡೆದು ಸರಕಾರ ರಚಿಸಲು 326 ಸಂಸತ್ ಸದಸ್ಯರ ಗೆಲುವು ಅವಶ್ಯವಾಗಿದೆ. ಭಾರತ ಮೂಲದ ಬ್ರಿಟನ್ ಪ್ರಜೆ, ಪ್ರಧಾನಿ ರಿಷಿ ಸುನಕ್ ಅವರು ಮರಳಿ ಅಧಿಕಾರ ಗಳಿಸಿಕೊಳ್ಳುವರೇ ಎಂಬುದು ಶುಕ್ರವಾರ ಬೆಳಗ್ಗೆ ತಿಳಿಯಲಿದೆ. ಕಳೆದ ಚುನಾವಣೆಯಲ್ಲಿ ರಿಷಿ ಸುನಕ್ ನೇತೃತ್ವದ ಕನ್ಸರ್ವೇಟಿವ್ ಪಕ್ಷ 344 ಕ್ಷೇತ್ರಗಳಲ್ಲಿ ಗೆದ್ದು ಸರಕಾರ ರಚಿಸಿತ್ತು. ಆದರೆ, ಈ ಬಾರಿ ಆಡಳಿತ ವಿರೋಧಿ ಅಲೆ ಪ್ರಬಲವಾಗಿದೆ ಎಂಬ ಮಾತುಗಳು ಕೇಳಿಬಂದಿವೆ. 14 ವರ್ಷಗಳಿಂದ ಪ್ರತಿಪಕ್ಷದ ಸ್ಥಾನದಲ್ಲೇ ಇರುವ ಲೇಬರ್ ಪಕ್ಷ, ಈ ಬಾರಿ ಅಧಿಕಾರದ ಗದ್ದುಗೆ ಏರಲಿದೆ ಎಂಬ ಸುಳಿವನ್ನು ಚುನಾವಣಾ ಪೂರ್ವ ಸಮೀಕ್ಷೆಗಳು ನೀಡಿವೆ.

ರಿಷಿ ಸುನಕ್

ಕೈರ್ ಸ್ಟಾರ್ಮರ್

14 ವರ್ಷಗಳ ವನವಾಸ!

ಲೇಬರ್ ಪಕ್ಷ ಕಳೆದ 14 ವರ್ಷಗಳಿಂದಲೂ ಅಧಿಕಾರದಿಂದ ದೂರವಾಗಿದೆ. ಕೈರ್ ಸ್ಟಾರ್ಮರ್ ನಾಯಕತ್ವದಲ್ಲಿ ಈ ಬಾರಿ ಲೇಬರ್ ಪಕ್ಷ ಅಧಿಕಾರಕ್ಕೇರುವುದು ನಿಶ್ಚಿತ ಎಂದು ಬ್ಲೂಮ್ ಬರ್ಗ್ ಪತ್ರಿಕೆ ನಡೆಸಿದ 'ಪೋಲ್ ಆಫ್ ಪೋಲ್ಸ್' ಸಮೀಕ್ಷೆ ತಿಳಿಸಿದೆ. ಕನಿಷ್ಠ 162ರಿಂದ ಗರಿಷ್ಠ 382 ಸಂಸತ್ ಸ್ಥಾನಗಳವರೆಗೂ ಲೇಬರ್ ಪಕ್ಷ ಗೆಲ್ಲುವ ಸಾಧ್ಯತೆ ಇದೆ ಎಂದು ಸಮೀಕ್ಷೆ ಹೇಳುತ್ತಿದೆ. 1997ರ ಚುನಾವಣೆಯಲ್ಲಿ ಟೋನಿಬ್ಲೇರ್ ನಾಯಕತ್ವದಲ್ಲಿ ಲೇಬರ್ ಪಕ್ಷ ಭಾರೀ ಜಯಭೇರಿ ಭಾರಿಸಿದ್ದನ್ನೂ ಸಮೀಕ್ಷೆ ನೆನಪಿಸಿದೆ.

ಭಾರತ ಮೂಲದ 107 ಸ್ಪರ್ಧಿಗಳು!

ಈ ಬಾರಿಯ ಬ್ರಿಟನ್ ಸಾರ್ವತ್ರಿಕ ಚುನಾವಣೆಯಲ್ಲಿ ಭಾರತ ಮೂಲದ 107 ಮಂದಿ ಸ್ಪರ್ಧಿಸಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯರು ಕೆಳಮನೆ ಪ್ರವೇಶಿಸುವ ಸಾಧ್ಯತೆ ಇದೆ. ಕಳೆದ ಚುನಾವಣೆಯಲ್ಲಿ ಭಾರತೀಯ ಮೂಲದ 15 ಜನರು ಬ್ರಿಟನ್ ಸಂಸತ್ ಗೆ ಆಯ್ಕೆಯಾಗಿದ್ದರು. ಮುಂದಿನ ವರ್ಷದ ಜನವರಿಯಲ್ಲಿ ನಿಗದಿಯಂತೆ ಸಂಸತ್ ಚುನಾವಣೆ ನಡೆಯಬೇಕಿತ್ತು. ಆದರೆ 6 ತಿಂಗಳು ಮೊದಲೇ ಸಂಸತ್ ವಿಸರ್ಜಿಸಿ ಚುನಾವಣೆಗೆ ಹೋಗುವ ನಿರ್ಧಾರವನ್ನು ಪ್ರಧಾನಿ ರಿಷಿ ಸುನಕ್ ಕೈಗೊಂಡಿದ್ದರಿಂದ ಜುಲೈ 4ರಂದೇ ಚುನಾವಣೆ ನಡೆಯುವಂತಾಗಿದೆ.

ಕಣದಲ್ಲಿರುವ ಭಾರತ ಮೂಲದ ಸ್ಪರ್ಧಿಗಳು

ಬ್ರಿಟನ್ ಸಂಸತ್ ಬಹುಮತ ಲೆಕ್ಕಾಚಾರ

ಬ್ರಿಟನ್ ಸಂಸತ್ ಚುನಾವಣೆ 650 ಜಿಲ್ಲೆಗಳ ಪ್ರತ್ಯೇಕ ಮತದಾನದಿಂದ ನಿರ್ಧಾರವಾಗುತ್ತದೆ. ಹೌಸ್ ಆಫ್ ಕಾಮನ್ಸ್(ಸಂಸತ್)ನಲ್ಲಿ ಬಹುಮತ ಪಡೆಯಲು 326 ಸ್ಥಾನಗಳನ್ನು ಯಾವುದೇ ರಾಜಕೀಯ ಪಕ್ಷ ಗೆಲ್ಲಬೇಕಿದೆ. ಆದರೆ, ತಾಂತ್ರಿಕವಾಗಿ ಹೇಳುವುದಾದರೆ 320 ಸ್ಥಾನಗಳನ್ನು ಗೆದ್ದ ಪಕ್ಷವೂ ಸರಕಾರ ರಚನೆ ಮಾಡಬಹುದಾಗಿದೆ. ಏಕೆಂದರೆ ಸ್ಪೀಕರ್ ಮತ್ತು 3 ಉಪ ಸ್ಪೀಕರ್ ಹುದ್ದೆಗಳಲ್ಲಿ ಇರುವವರು ಬಹುಮತ ಸಾಬೀತು ಮತದಾನದಲ್ಲಿ ಭಾಗಿಯಾಗುವಂತಿಲ್ಲ. ಅಲ್ಲದೇ, ನಾರ್ದರ್ನ್ ಐರ್ಲೆಂಡ್ ಸಿನ್‌ಫೇನ್ ಕ್ಷೇತ್ರದಲ್ಲಿ ಗೆದ್ದವರಿಗೆ ವೆಸ್ಟ್‌ಮಿನಿಸ್ಟರ್‌ನಲ್ಲಿ ಆಸೀನರಾಗುವ ಅವಕಾಶ ಇರುವುದಿಲ್ಲ.

ಜಮ್ಮು-ಕಾಶ್ಮೀರದಲ್ಲೂ ಶೀಘ್ರದಲ್ಲೇ ಚುನಾವಣೆ

3 ರಾಜ್ಯಗಳು, 1 ಕೇಂದ್ರಾಡಳಿತ ಪ್ರದೇಶ ವರ್ಷಾಂತ್ಯ ಚುನಾವಣೆ

ದೆಹಲಿ: ವರ್ಷಾಂತ್ಯ ವೇಳೆ ಮತ್ತು 2025ರ ಫೆಬ್ರುವರಿಗೆ ಉತ್ತರ ಮತ್ತು ಪೂರ್ವ ಭಾರತದ 3 ರಾಜ್ಯಗಳು ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆ ಅವಧಿ ಪೂರ್ಣಗೊಳ್ಳಲಿದ್ದು ವರ್ಷಾಂತ್ಯದಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಮಹಾರಾಷ್ಟ್ರ, ಜಾರ್ಖಂಡ್, ಹರಿಯಾಣ ಹಾಗೂ ದೆಹಲಿ ಚುನಾವಣೆ ಎದುರಿಸಲಿವೆ. ಅದಾಗಲೇ ರಾಜಕೀಯ ಪಕ್ಷಗಳೂ ಚುನಾವಣಾ ಲೆಕ್ಕಾಚಾರ ಆರಂಭಿಸಿವೆ.

ಮಹಾರಾಷ್ಟ್ರ ಮತ್ತು ಹರಿಯಾಣದಲ್ಲಿ ಎನ್‌ಡಿಎ ಸರಕಾರವಿದ್ದರೆ, ದೆಹಲಿಯಲ್ಲಿ ಆಮ್ ಆದ್ಮಿ ಪಾರ್ಟಿ ಹಾಗೂ ಜಾರ್ಖಂಡ್‌ನಲ್ಲಿ ಮಹಾಘಟಬಂಧನ್ ಅಧಿಕಾರದಲ್ಲಿವೆ. ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಹಾಗೂ ಇಂಡಿ ಕೂಟ ಹರಿಯಾಣದಲ್ಲಿ ತಲಾ 5 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿವೆ. ಇಲ್ಲಿ ಕಾಂಗ್ರೆಸ್ ಬಲ ಹೆಚ್ಚಿಸಿಕೊಂಡಿದೆ. ಜಾರ್ಖಂಡ್‌ನಲ್ಲಿ ಎನ್‌ಡಿಎಗೆ ನಿರೀಕ್ಷೆಯಷ್ಟು ಸ್ಥಾನ ಗೆಲ್ಲಲು ಸಾಧ್ಯವಾಗಿಲ್ಲ. 14 ಕ್ಷೇತ್ರಗಳಲ್ಲಿ 8ರಲ್ಲಿ ಗೆಲುವು ಸಾಧಿಸಿದೆ. ದೆಹಲಿಯಲ್ಲಿ ಕ್ಲೀನ್ ಸ್ವೀಪ್ ಮಾಡಿದೆ. ಮಹಾರಾಷ್ಟ್ರದಲ್ಲಿ ಮಹಾಯುತಿ ಕೂಟಕ್ಕೆ ಕಳೆದ ಚುನಾವಣಾ ಫಲಿತಾಂಶಕ್ಕೆ ಹೋಲಿಸಿದರೆ ಈ ಬಾರಿ ಮುಖಭಂಗವಾಗಿದೆ. ಹೀಗಾಗಿ ಎನ್‌ಡಿಎ ಕೂಟಕ್ಕೆ ಈ ಮೂರು ರಾಜ್ಯ ಹಾಗೂ ದೆಹಲಿ ಚುನಾವಣೆ ನಿರ್ಣಾಯಕವಾಗಿವೆ.

ಲೋಕಸಭೆ ಚುನಾವಣೆಯಲ್ಲಿನ ಸಾಧನೆ ಕಾಂಗ್ರೆಸ್‌ಗೆ ಹೊಸ ಹುರುಪು ನೀಡಿದೆ. ಹೀಗಾಗಿ ವಿಧಾನಸಭಾ ಚುನಾವಣೆ ಆ ಪಕ್ಷಕ್ಕೆ ಪ್ರತಿಷ್ಠೆಯ ಕಣವಾಗಿದೆ. ಹಾಗಾಗಿಯೇ ಕಾಂಗ್ರೆಸ್ ಮಹಾರಾಷ್ಟ್ರ ಮತ್ತು ಜಾರ್ಖಂಡ್‌ನಲ್ಲಿ ಮೈತ್ರಿ ಸ್ಪರ್ಧೆಗೆ ಸಿದ್ಧ ಎಂದಿದ್ದರೆ, ದೆಹಲಿ ಮತ್ತು ಹರಿಯಾಣದಲ್ಲಿ ಆಮ್ ಆದ್ಮಿ ಪಕ್ಷದ ಜತೆ ಮೈತ್ರಿ ಸಾಧ್ಯವಿಲ್ಲ ಎಂದಿದೆ.

ನಾಲ್ಕು ಮತ್ತೊಂದು!

ಅಕ್ಟೋಬರ್‌ನಲ್ಲಿ ಮಹಾರಾಷ್ಟ್ರ ಮತ್ತು ಹರಿಯಾಣ ಹಾಗೂ ಡಿಸೆಂಬರ್‌ನಲ್ಲಿ ಜಾರ್ಖಂಡ್ ವಿಧಾನಸಭೆ ಅವಧಿ ಮುಕ್ತಾಯಗೊಳ್ಳಲಿದೆ. ಫೆಬ್ರುವರಿಯಲ್ಲಿ ದೆಹಲಿ ವಿಧಾನಸಭೆ ಅವಧಿ ಕೊನೆಗೊಳ್ಳಲಿದೆ. ಈ ಬಾರಿ ದೆಹಲಿಗೆ ಅವಧಿಗೂ ಮುನ್ನವೇ ಚುನಾವಣೆ ನಡೆಯುವ ಸಾಧ್ಯತೆ ಇದೆ. ಈ ನಾಲ್ಕರ ಜತೆಗೇ ಜಮ್ಮು-ಕಾಶ್ಮೀರ ಕೂಡ ವಿಧಾನಸಭೆ ಚುನಾವಣೆಗೆ ಕಾಯುತ್ತಿದ್ದು ಇದೇ ವರ್ಷ ನಡೆಯುವ ಸಾಧ್ಯತೆ ಇದೆ.

ರಾಹುಲ್ ದೆಹಲಿ ನಿವಾಸಕ್ಕೆ ಭದ್ರತೆ ಹೆಚ್ಚಳ

ದೆಹಲಿ: ಬಲಪಂಥೀಯ ಗುಂಪಿನಿಂದ ಬೆದರಿಕೆ ಹಿನ್ನೆಲೆ ದೆಹಲಿ ಪೊಲೀಸರು ರಾಹುಲ್ ಗಾಂಧಿ ನಿವಾಸಕ್ಕೆ ಭದ್ರತೆ ಹೆಚ್ಚಿಸಿದ್ದಾರೆ. ಬಲಪಂಥೀಯ ಗುಂಪಿನ ಕೆಲವರು ರಾಹುಲ್ ನಿವಾಸದೆದುರು ಗಲಭೆ ಸೃಷ್ಟಿಸುವ ಸಾಧ್ಯತೆ ಇದೆ ಎಂಬ ಮಾಹಿತಿ ಗುಪ್ತಚರ ಇಲಾಖೆಗೆ ಬಂದಿದೆ ಎಂದು ವರದಿಯಾಗಿದೆ. ಈ ಹಿನ್ನೆಲೆ ಸ್ಥಳೀಯ ಪೊಲೀಸ್ ಸಿಬ್ಬಂದಿ ಸೇರಿದಂತೆ ಅರೆ ಸೇನಾಪಡೆಯ ಒಂದು ತುಕಡಿಯನ್ನು ರಾಹುಲ್ ನಿವಾಸದ ಬಳಿ ನಿಯೋಜಿಸಲಾಗಿದೆ. ಪ್ರತಿಪಕ್ಷ ನಾಯಕನಿಗೆ ಸಿಆರ್‌ಪಿಎಫ್ ನಿಯಮಗಳಡಿ ಸುಧಾರಿತ ಭದ್ರತಾ ಸಂಪರ್ಕದ ಝೆಡ್ ಪ್ಲಸ್ ಭದ್ರತೆಯನ್ನೂ ನೀಡಲಾಗಿದೆ. ಸಂಸತ್‌ನಲ್ಲಿ ಹಿಂದೂಗಳ ಬಗ್ಗೆ ನೀಡಿದ ರಾಹುಲ್ ಹೇಳಿಕೆ ವಿವಾದ ಎಬ್ಬಿಸಿದ್ದು ಗುಜರಾತ್ ರಾಜ್ಯದಲ್ಲಿನ ಕಾಂಗ್ರೆಸ್ ಕಚೇರಿ ಮೇಲೆ ದಾಳಿ ನಡೆದಿತ್ತು. ಸಂಸತ್‌ನಲ್ಲಿನ ತಮ್ಮ ಹೇಳಿಕೆಗೆ ರಾಹುಲ್ ಗಾಂಧಿ ಕ್ಷಮೆ ಕೇಳಬೇಕು ಎಂಬ ಆಗ್ರಹ ಕೇಳಿಬಂದಿತ್ತು.

14ರ ಬಾಲಕ ಸಾವು। ಕೇರಳದಲ್ಲಿನ 3ನೇ ಪ್ರಕರಣ

ಮೆದುಳು ತಿನ್ನುವ ಅಮೀಬಾ ಸೋಂಕಿಗೆ ಬಲಿ

ಕೋಯಿಕ್ಕೋಡ್: ಕೇರಳದ ಖಾಸಗಿ ಆಸ್ಪತ್ರೆಯಲ್ಲಿ 14 ವರ್ಷದ ಬಾಲಕ ಅಮೀಬಿಕ್ ಮೆನಿಂಗೊ ಎನ್ಸೆಫಾಲಿಟಿಸ್(ಮೆದುಳು ತಿನ್ನುವ ಅಮೀಬಾ) ಎಂಬ ಅಪರೂಪದ ಮಿದುಳು ಸೋಂಕಿಗೆ

ಬಲಿಯಾಗಿದ್ದಾನೆ ಎಂದು ಆರೋಗ್ಯ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಚಿಕ್ಕ ಕೊಳವೊಂದರಲ್ಲಿ ಈಜಾಡಿದ ನಂತರ ಬಾಲಕನಿಗೆ ಈ ಸೋಂಕು ತಗುಲಿದೆ ಎಂದು ಆರೋಗ್ಯ ಇಲಾಖೆ ಮೂಲಗಳು ಮಾಹಿತಿ ನೀಡಿವೆ. ಕೇರಳದಲ್ಲಿ ಮೆದುಳು ತಿನ್ನುವ ಅಮೀಬಾದಿಂದ ಸಾವನ್ನಪ್ಪಿದ 3ನೇ ಘಟನೆ ಇದಾಗಿದೆ. ಮೇ 21ರಂದು ಮಲಪ್ಪುರಂನ 5 ವರ್ಷದ ಬಾಲಕಿ, ಜೂ.25ರಂದು ಕಣ್ಣೂರ್‌ನ 13 ವರ್ಷದ ಬಾಲಕಿ ಇದೇ ಸೋಂಕಿಗೆ ಬಲಿಯಾಗಿದ್ದಾರೆ. ಅಮೀಬಿಕ್ ಮೆನಿಂಗೊಎನ್ಸೆಫಾಲಿಟಿಸ್ ನೆಗ್ಲೇರಿಯಾ ಫೌಲೆರಿಯಿಂದ ಈ ಅಮೀಬಾ ಜನ್ಮತಳೆಯುತ್ತದೆ. ನೆಗ್ಲೇರಿಯ ಜೀನ್ಸ್ ಒಳಗೊಂಡಿರುವ



ಇದನ್ನು ಹೆಟೆರೊಲೊಬೊಸಿಯ ವರ್ಗಕ್ಕೆ ಸೇರಿಸಲಾಗಿದೆ. ಈ ಅಮೀಬಾ ಸರೋವರ, ನದಿ ಮೊದಲಾದ ಬೆಚ್ಚಗಿನ ಸಿಹಿನೀರಿನ ಮೂಲಗಳಲ್ಲಿ ಕಂಡು ಬರುವ ಸೂಕ್ಷ್ಮ ಜೀವಿ. ಇಂಥ ನೀರಿಗೆ ಇಳಿದವರ ಮೂಗಿನ ಮೂಲಕ ದೇಹ ಪ್ರವೇಶಿಸಿ ಬಳಿಕ ಮೆದುಳಿಗೆ ಸೇರಿಕೊಳ್ಳುತ್ತದೆ. ನಿಧಾನವಾಗಿ ಮೆದುಳನ್ನು ತಿನ್ನಲು ಆರಂಭಿಸಿ, ಸಾವು ತರುತ್ತದೆ ಎಂದು ವರದಿ ವಿವರಿಸಿದೆ.

---

17 ದಿನಕ್ಕೆ 12 ಸೇತುವೆಗಳ ಪತನ। ಪರಿಶೀಲನೆಗೆ ಸಿಎಂ ಆದೇಶ

ಬಿಹಾರದಲ್ಲಿ ನಿಲ್ಲುತ್ತಿಲ್ಲ ಸೇತುವೆ ಕುಸಿತ

ಪಟನಾ: ಬಿಹಾರ ರಾಜ್ಯದಲ್ಲಿ ಸೇತುವೆಗಳ ಕುಸಿತ ಸರಣಿ ಮುಂದುವರಿದಿದೆ. 17 ದಿನದಲ್ಲಿ ಚಿಕ್ಕ-ದೊಡ್ಡವು ಸೇರಿದಂತೆ ಒಟ್ಟು 12 ಸೇತುವೆಗಳು ಕುಸಿದಿವೆ. ಪರಿಣಾಮ, ನೂರಾರು ಗ್ರಾಮಗಳು ಸಂಪರ್ಕ ಕಳೆದುಕೊಂಡಿವೆ.

ಸರನ್ ಜಿಲ್ಲೆಯಲ್ಲಿ ಗಂಡಕಿ ನದಿಗೆ ಅಡ್ಡಲಾಗಿ ನಿರ್ಮಿಸಿದ್ದ ಸೇತುವೆ ಗುರುವಾರ ಕುಸಿದಿದೆ. ಸೇತುವೆ 15 ವರ್ಷ ಹಿಂದೆ ಸ್ಥಳೀಯ ಆಡಳಿತದಿಂದ ನಿರ್ಮಾಣಗೊಂಡಿತ್ತು ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ. 24 ಗಂಟೆಗಳ ಅಂತರದಲ್ಲಿ ಈ ಜಿಲ್ಲೆಯಲ್ಲಿ 3 ಸೇತುವೆ ಕುಸಿದಿವೆ. ಬುಧವಾರ ಸರನ್ ಜಿಲ್ಲೆಯಲ್ಲೇ ಜನತಾ ಬಜಾರ್ ಪ್ರದೇಶ ಹಾಗೂ ಲಹ್ಲಾಡ್‌ಪುರ

ಬಿಹಾರದ ಸರಣ್ ಜಿಲ್ಲೆಯ ಸೇತುವೆ ಕುಸಿದಿರುವುದು.

ಪ್ರದೇಶದಲ್ಲಿ ಎರಡು ಸೇತುವೆ ಕುಸಿದಿವೆ. 17 ದಿನಗಳಲ್ಲಿ ಸಿವಾನ್, ಸರನ್, ಮಧುಬನಿ, ಅರಾರಿಯ, ಪೂರ್ವ ಚಂಪಾರಣ್ ಹಾಗೂ ಕೃಷ್ಣಗಂಜ್ ಭಾಗದ ಸೇತುವೆಗಳು ಕುಸಿದಿವೆ. ಇದರಿಂದಾಗಿಯೇ ಬಿಹಾರ ರಾಜ್ಯ ಅಪಖ್ಯಾತಿಗೆ ಒಳಗಾಗುತ್ತಿದೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ಈ ಬಗ್ಗೆ ಬುಧವಾರ ಸಭೆ ನಡೆಸಿ, ಎಲ್ಲಾ ಸೇತುವೆಗಳನ್ನು ಪರಿಶೀಲಿಸಿ ದುರಸ್ತಿಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ. ರಾಜ್ಯ ಸರಕಾರ ಸೇತುವೆ ನಿರ್ವಹಣಾ ನೀತಿ ರಚಿಸಿದ್ದು ಗ್ರಾಮೀಣಾಭಿವೃದ್ಧಿ ಇಲಾಖೆ ತಕ್ಷಣ ಜಾರಿಗೆ ತರುವಂತೆ ಸೂಚನೆ ನೀಡಲಾಗಿದೆ.

ಸುಪ್ರೀಂಗೆ ಅರ್ಜಿ: ಬಿಹಾರದ ಎಲ್ಲಾ ಸೇತುವೆಗಳ ರಚನಾತ್ಮಕ ಆಡಿಟ್ ನಡೆಸಲು ಆದೇಶಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ವಕೀಲ ಬ್ರಜೇಶ್ ಸಿಂಗ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.

ನೀಟ್ ರದ್ದು ಬೇಡ: 56 ವಿದ್ಯಾರ್ಥಿಗಳ ಅರ್ಜಿ

ದೆಹಲಿ: ನೀಟ್ ಪರೀಕ್ಷೆಯಲ್ಲಿ ಅಗ್ರ ರ್‍ಯಾಂಕ್ ಪಡೆದವರೂ ಸೇರಿದಂತೆ ಗುಜರಾತ್ ಮೂಲದ 56 ವಿದ್ಯಾರ್ಥಿಗಳು ನೀಟ್ ಸ್ನಾತಕಪೂರ್ವ(ಯುಜಿ) 2024ರ ಪರೀಕ್ಷೆ ರದ್ದು ಮಾಡದಂತೆ

ಕೇಂದ್ರ ಸರಕಾರ ಹಾಗೂ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರಕ್ಕೆ(ಎನ್‌ಟಿಎಗೆ) ನಿರ್ದೇಶನ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಗುರುವಾರ ಅರ್ಜಿ ಸಲ್ಲಿಸಿದ್ದಾರೆ.

ಈ ವರ್ಷದ ಮೇ 5ರಂದು ನಡೆಸಲಾದ ನೀಟ್ ಯುಜಿ 2024 ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಹಾಗೂ ಅಕ್ರಮ ನಡೆದಿದ್ದು ತನಿಖೆ ಪ್ರಗತಿಯಲ್ಲಿದೆ. ಅಕ್ರಮದಲ್ಲಿ ಭಾಗಿಯಾದ ಪರೀಕ್ಷಾರ್ಥಿಗಳು ಮತ್ತು ಇತರರ ವಿರುದ್ಧ ತನಿಖೆ ಮತ್ತು ಕಠಿಣ ಕ್ರಮ ಕೈಗೊಳ್ಳಲಿ. ಆದರೆ, ಇಡೀ ಪರೀಕ್ಷಾ ಪ್ರಕ್ರಿಯೆಯನ್ನೇ ರದ್ದುಗೊಳಿಸದಿರಲಿ ಎಂದು ಅರ್ಜಿದಾರರು ಕೋರಿದ್ದಾರೆ. 56 ವಿದ್ಯಾರ್ಥಿಗಳು ಸಲ್ಲಿಸಿರುವ 26 ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ವಿಚಾರಣೆಗೆ ಸ್ವೀಕರಿಸಿದ್ದು, ಜುಲೈ 8ರಂದು ವಿಚಾರಣೆಗೆ ಪಟ್ಟಿ ಮಾಡಲಾಗಿದೆ.

ಸರಕಾರಿ ಮತ್ತು ಖಾಸಗಿ ವೈದ್ಯ ಕಾಲೇಜುಗಳಲ್ಲಿ ಎಂಬಿಬಿಎಸ್, ಬಿಡಿಎಸ್, ಆಯುಷ್ ಮತ್ತಿತರೆ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಮೇ 5ರಂದು ದೇಶಾದ್ಯಂತ 4,750 ಕೇಂದ್ರಗಳಲ್ಲಿ ನೀಟ್ ಯುಜಿ 2024 ಪರೀಕ್ಷೆ ನಡೆಸಲಾಗಿತ್ತು. 24 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ನೀಟ್ ಯುಜಿ-2024 ಕೌನ್ಸೆಲಿಂಗ್ ಯಾವಾಗ?

ದೆಹಲಿ: 2024ನೇ ಸಾಲಿನ 'ನೀಟ್ ಸ್ನಾತಕಪೂರ್ವ(ಯುಜಿ)' ಪರೀಕ್ಷೆ ಮತ್ತು ಕೃಪಾಂಗ ವಿವಾದಕ್ಕೆ ಸಿಲುಕಿದ್ದ 1563 ವಿದ್ಯಾರ್ಥಿಗಳ ಮರುಪರೀಕ್ಷೆಯ ಫಲಿತಾಂಶಗಳೆರಡೂ ಪ್ರಕಟವಾಗಿವೆ. ರ್‍ಯಾಂಕಿಂಗ್ ಪಟ್ಟಿಯೂ ಹೊಸದಾಗಿ ಪ್ರಕಟವಾಗಿದೆ. ಆದರೆ,

ವೈದ್ಯಕೀಯ ಶಿಕ್ಷಣ ಪ್ರವೇಶದ ಕೌನ್ಸೆಲಿಂಗ್ ಯಾವಾಗ? ಎಂಬ ಪ್ರಶ್ನೆ ಎದುರಾಗಿದೆ.

ನೀಟ್ ಯುಜಿ-2024ರ ಪರೀಕ್ಷಾ ಪ್ರಕ್ರಿಯೆಯಲ್ಲಿ ಉತ್ತಮ ರ್‍ಯಾಂಕಿಂಗ್ ಪಡೆದವರು ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ಕಾಲೇಜು ಆಯ್ಕೆಯ ಕೌನ್ಸೆಲಿಂಗ್ ಪ್ರಕ್ರಿಯೆ ಯಾವಾಗ ಆರಂಭ ಎಂಬ ವೇಳಾಪಟ್ಟಿ ಜು.6 ರಂದು ಹೊರಬೀಳುವ ಸಾಧ್ಯತೆ ಇದೆ ಎಂದು ವರದಿಯಾಗಿದೆ. ಜುಲೈನಲ್ಲಿಯೇ ಕೌನ್ಸೆಲಿಂಗ್ ನಡೆಯುವುದು ನಿಚ್ಚಳ. ಕೌನ್ಸೆಲಿಂಗ್ ದಿನಾಂಕದ ವೇಳಾಪಟ್ಟಿಯನ್ನು ಮೆಡಿಕಲ್ ಕೌನ್ಸೆಲಿಂಗ್ ಕಮಿಟಿ ಜು.6ರಂದು ಪ್ರಕಟಿಸಲಿದೆ ಎಂದು ಹೇಳಲಾಗುತ್ತಿದೆ. ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ(ಎನ್‌ಟಿಎ) 2024ರ ನೀಟ್ ಯುಜಿ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಜುಲೈ 6ರಂದು ಆರಂಭಿಸಲಾಗುವುದು ಎಂದು ಸುಪ್ರೀಂ ಕೋರ್ಟ್‌ಗೆ ಈ ಮೊದಲು ಪ್ರಮಾಣಪತ್ರ ಸಲ್ಲಿಸಿತ್ತು. ಅದರನ್ವಯ ಶನಿವಾರದಿಂದಲೇ ನೀಟ್ ಯುಜಿ 2024ರ ಕೌನ್ಸೆಲಿಂಗ್ ಪ್ರಾರಂಭವಾಗುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ. ಆದರೆ, ಕೌನ್ಸೆಲಿಂಗ್ ಆರಂಭ ಕುರಿತು ಯಾವುದೇ ಅಧಿಕೃತ ಪ್ರಕಟಣೆಯಾಗಲೀ, ವೇಳಾಪಟ್ಟಿಯಾಗಲೀ ಈವರೆಗೂ ಹೊರಬಿದ್ದಿಲ್ಲ. ಇದು ವಿದ್ಯಾರ್ಥಿಗಳಲ್ಲಿ ಒತ್ತಡವನ್ನು ಹೆಚ್ಚಿಸಿದೆ ಎನ್ನಲಾಗಿದೆ.

ವಾಗ್ದಾನದಂತೆ ಸಚಿವ ಕಿರೋಡಿ ರಾಜೀನಾಮೆ

ಜೈಪುರ: 'ಪ್ರಾಣ್ ಜಾಯೇ ಪರ ವಚನ ನ ಜಾಯೇ' (ಪ್ರಾಣ ಹೋದರೂ ಕೊಟ್ಟ ಮಾತು ತಪ್ಪಬಾರದು) ಎಂಬ ರಾಮಚರಿತ ಮಾನಸಾದ ಸಾಲನ್ನು ಉಲ್ಲೇಖಿಸಿರುವ ರಾಜಸ್ಥಾನ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ

ಸಚಿವ ಕಿರೋಡಿ ಲಾಲ್ ಮೀನಾ ಗುರುವಾರ ರಾಜೀನಾಮೆ ನೀಡಿದ್ದಾರೆ.

ತಮಗೆ ಜವಾಬ್ದಾರಿ ನೀಡಿದ್ದ 7 ಲೋಕಸಭಾ ಕ್ಷೇತ್ರಗಳಲ್ಲಿ ಒಂದರಲ್ಲಿ ಬಿಜೆಪಿ ಅಭ್ಯರ್ಥಿ ಸೋತರೂ ಸಚಿವ ಸ್ಥಾನ ತ್ಯಜಿಸುವೆ ಎಂದು ಕಿರೋಡಿ ಲಾಲ್ ಮೀನಾ 18ನೇ ಲೋಕಸಭಾ ಚುನಾವಣೆ ವೇಳೆ ಹೇಳಿದ್ದರು. ಕಿರೋಡಿ ಅವರ ಉಸ್ತುವಾರಿಯ ಕೆಲವು ಕ್ಷೇತ್ರಗಳು ಇಂಡಿ ಒಕ್ಕೂಟದ ಪಾಲಾದವು. ಕೊಟ್ಟ ಮಾತು ಉಳಿಸಿಕೊಳ್ಳಬೇಕು ಎಂದು ಕಿರೋಡಿ ಲಾಲ್ ಸಚಿವ ಹುದ್ದೆ ಸೇರಿದಂತೆ ಸರಕಾರ ಮತ್ತು ಪಕ್ಷದಲ್ಲಿನ ಎಲ್ಲಾ ಸ್ಥಾನಗಳಿಗೂ ರಾಜೀನಾಮೆ ಸಲ್ಲಿಸಿದ್ದಾರೆ. ಆದರೆ, ರಾಜಸ್ಥಾನ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ, ಕಿರೋಡಿ ಅವರ ರಾಜಿನಾಮೆ ಅಂಗೀಕರಿಸಿಲ್ಲ ಎನ್ನಲಾಗಿದೆ. ಕಾಂಗ್ರೆಸ್ ನಾಯಕ ಟಿಕಾರಾಮ್ ಜುಲ್ಲಿ ಕಿರೋಡಿ ರಾಜೀನಾಮೆ ನಿರ್ಧಾರ ಸ್ವಾಗತಿಸಿದ್ದಾರೆ. ಸರಕಾರದ ವೈಫಲ್ಯಕ್ಕೆ ಹಿಡಿದ ಕನ್ನಡಿ ಇದು ಎಂದು ಟೀಕಿಸಿದ್ದಾರೆ.

10 ದುರುಳರ ಅತ್ಯಾಚಾರ; ಹತ್ತರ ಬಾಲೆ ಈಗ ಗರ್ಭಿಣಿ

ಹೈದರಾಬಾದ್: ತೆಲಂಗಾಣದ ಹೈದರಾಬಾದ್‌ನಲ್ಲಿ 10 ದುರುಳರು ಹತ್ತು ವರ್ಷದ ಬಾಲಕಿಯನ್ನು ಅಪಹರಿಸಿ ಅಮಲು ಪಾನೀಯ ಕುಡಿಸಿ ಸಾಮೂಹಿಕ ಅತ್ಯಾಚಾರವೆಸಗಿದ್ದಾರೆ. ಪರಿಣಾಮ ಬಾಲಕಿ ಈಗ ಗರ್ಭಿಣಿಯಾಗಿದ್ದಾಳೆ. ಆ ಬಳಿಕವಷ್ಟೇ ಘಟನೆ ಬೆಳಕಿಗೆ ಬಂದಿದ್ದು, ಹತ್ತು ದುರಳರನ್ನೂ ಬಂಧಿಸಲಾಗಿದೆ. ಜೂ.25ರಂದು ಅತ್ಯಾಚಾರ ನಡೆದಿದ್ದು, ತಡವಾಗಿ ಪ್ರಕರಣ ದಾಖಲಾಗಿದೆ.

ಕಾರು ಚಾಲಕ ಚಕ್ಕೋಲು ನರೇಶ್(26), ಎಸಿಪಿಸಿ ಕಾರ್ಯಕರ್ತ ಸಿರಿಪಂಗ ವಿಜಯ್ ಕುಮಾರ್(23), ಕಾರ್ಮಿಕ ವಾಗ್ಮಾರೆ ಬಾಲಾಜಿ(23), ಪುರಸಭೆ ನೌಕರ ಗುಡ್ಡಂತಿ ಕೃಷ್ಣ(22), ಟಿಫಿನ್ ಸೆಂಟರ್ ನೌಕರ ತೋಂಟೆ ಕಿರಣ್ ಕುಮಾರ್(26), ಡೆಲಿವರಿ ಬಾಯ್ ಬೊಳ್ಳೆಪೋಗು ಅಜಯ್(23), ವಾಟರ್ ಕ್ಯಾನ್ ಸರಬರಾಜುದಾರ ಜೇಮ್ಸ್ ಕ್ಸೇವಿಯರ್(24), ಕಾರ್ಮಿಕ ವಾಗ್ಮಾರೆ ದೀಪಕ್(25), ಮನೆ ಕ್ಲೀನರ್ ಸಬವತ್ ಹತ್ಯಾ ನಾಯ್ಕ್(25), ಟೀ ಮಾಸ್ಟರ್ ಇಂಜಮುರಿ ಮಧು (30) ಆರೋಪಿಗಳಾಗಿದ್ದಾರೆ.

ನಗರದ ಕಾಚಿಗುಡ್ಡ ಪ್ರದೇಶದ ನರೇಶ್ ಮತ್ತು ವಿಜಯ್ ಕುಮಾರ್ ಜೂ.25ರಂದು ಬಾಲಕಿಯನ್ನು ಅಪಹರಿಸಿ ಅಮಲು ಪಾನೀಯವನ್ನು ಬಲವಂತವಾಗಿ ಕುಡಿಸಿ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ. ಬಳಿಕ ಉಳಿದವರೂ ದೌರ್ಜನ್ಯ ನಡೆಸಿದ್ದಾರೆ. ಪರಿಣಾಮ ಬಾಲಕಿ ಇದೀಗ ಗರ್ಭಿಣಿಯಾಗಿದ್ದಾಳೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಆರೋಪಿಗಳಿಂದ ಮೊಬೈಲ್ ಫೋನ್-ಸಿಮ್‌ಕಾರ್ಡ್‌ಗಳು ಹಾಗೂ ಸ್ಕೂಟರ್ ಮತ್ತು ಬೈಕ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಎಲ್ಲಾ ಆರೋಪಿಗಳೂ ಅಪರಾಧ ಹಿನ್ನೆಲೆಯವರು ಎಂದು ವರದಿಯಾಗಿದೆ.

ರಾಜ್ಯಪಾಲರಿಂದ ಪ್ರತಿಜ್ಞಾವಿಧಿ। 3ನೇ ಬಾರಿಗೆ ಪ್ರಮಾಣ ವಚನ

ಹೇಮಂತ್ ಮತ್ತೆ ಜಾರ್ಖಂಡ್ ಸಿಎಂ

ರಾಂಚಿ: ಜಾರ್ಖಂಡ್ ಮುಖ್ಯಮಂತ್ರಿಯಾಗಿ(3ನೇ ಬಾರಿ) ಜಾರ್ಖಂಡ್ ಮುಕ್ತಿ ಮೋರ್ಚಾ(ಜೆಎಂಎಂ) ಪಕ್ಷದ ನಾಯಕ ಹೇಮಂತ್ ಸೊರೇನ್ ಗುರುವಾರ ಸಂಜೆ 5ಕ್ಕೆ ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಹೊಸ ಸರಕಾರ ರಚಿಸುವಂತೆ ಹೇಮಂತ್ ಸೊರೇನ್ ಅವರಿಗೆ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ಗುರುವಾರ ಬೆಳಗ್ಗೆಯಷ್ಟೇ ಆಹ್ವಾನ ನೀಡಿದ್ದರು. ಮೊದಲಿಗೆ ಜು.7ರಂದು ಪ್ರಮಾಣವಚನ ಸ್ವೀಕಾರಕ್ಕೆ ದಿನ ನಿಗದಿಪಡಿಸಲಾಗಿತ್ತು. ಬಳಿಕ ಗುರುವಾರ ಸಂಜೆಯೇ ಪ್ರತಿಜ್ಞಾವಿಧಿಗೆ ಸೊರೇನ್ ನಿರ್ಧರಿಸಿದರು ಎಂದು ಜೆಎಂಎಂ ಪ್ರಧಾನ ಕಾರ್ಯದರ್ಶಿ ಸುಪ್ರಿಯೋ ಭಟ್ಟಾಚಾರ್ಯ ಮಾಧ್ಯಮಗಳಿಗೆ ಮಾಹಿತಿ ನೀಡಿದರು. ಭೂಹಗರಣ-ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜೆಎಂಎಂ ಮುಖ್ಯಸ್ಥ ಹೇಮಂತ್ ಸೊರೇನ್‌ರನ್ನು ಜಾರಿ ನಿರ್ದೇಶನಾಲಯ ಬಂಧಿಸಿತ್ತು. ಮೂರೂವರೆ ತಿಂಗಳ ಬಳಿಕ ಜಾಮೀನು ಪಡೆದು ಬಿಡುಗಡೆಯಾಗಿರುವ ಹೇಮಂತ್, ಮತ್ತೆ ಸಿಎಂ ಗದ್ದುಗೆ ಏರಿದ್ದಾರೆ.

ಕೆಲ ತಿಂಗಳ ಅವಧಿಗೆ ಮುಖ್ಯಮಂತ್ರಿಯಾಗಿದ್ದ ಚಂಪೈ ಸೊರೇನ್ ಬುಧವಾರ ರಾಜೀನಾಮೆ ಸಲ್ಲಿಸಿದರು. ಜೆಎಂಎಂ, ಕಾಂಗ್ರೆಸ್ ಮತ್ತು ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ)ದ ಮೈತ್ರಿಕೂಟ ಹೇಮಂತ್ ಮತ್ತೆ ಸಿಎಂ ಆಗಲು ಒಪ್ಪಿಗೆ ಸೂಚಿಸಿದೆ ಎಂದು ತಿಳಿದುಬಂದಿದೆ.

6 ತಿಂಗಳಷ್ಟೇ ಅಧಿಕಾರ!

81 ಸದಸ್ಯ ಬಲದ ಜಾರ್ಖಂಡ್ ವಿಧಾನಸಭೆಯ ಅವಧಿ 2025ರ ಜನವರಿ 5ಕ್ಕೆ ಕೊನೆಯಾಗಲಿದ್ದು, ಇದೇ ನವೆಂಬರ್-ಡಿಸೆಂಬರ್‌ನಲ್ಲಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ನೂತನ ಸಿಎಂ ಹೇಮಂತ್ ಸೊರೇನ್ ಅವರಿಗೆ 5 ಅಥವಾ 6 ತಿಂಗಳ ಅಧಿಕಾರವಧಿ ಸಿಗಲಿದೆ.

ಮೈನ್‌ಪುರಿಯಲ್ಲಿ 13 ಎಕರೆ ವಿಸ್ತಾರದಲ್ಲಿ 4 ಕೋಟಿ ರು. ಮೌಲ್ಯದ ಆಶ್ರಮ

ಫೈವ್ ಸ್ಟಾರ್ ಹೊಟೇಲ್‌ನಂತಿದೆ ಬಾಬಾ ಆಶ್ರಮ

ಹತ್ರಾಸ್: ಕಾಲ್ತುಳಿತ ದುರಂತಕ್ಕೆ ಕಾರಣವಾಗಿದ್ದ ಸ್ವಯಂ ಘೋಷಿತ ದೇವಮಾನವ ಭೋಲೆ ಬಾಬಾ ಅಲಿಯಾಸ್ ನಾರಾಯಣ್ ಸಾಕಾರ್ ವಿಶ್ವಾಹರಿಗೆ ಸಂಬಂಧಿಸಿದ ಪ್ರತಿಯೊಂದು ವಿಚಾರದ ಬಗೆಗೂ ಈಗ ಎಲ್ಲರ ಕುತೂಹಲ ಹೆಚ್ಚಿದೆ. ಬಾಬಾ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣಗಳೂ ಇರುವುದು ಈಗ ಬಹಿರಂಗವಾಗಿದೆ.

ಆ ಬಳಿಕ ಉತ್ತರ ಪ್ರದೇಶ ಪೊಲೀಸರು ಬಾಬಾ ಹಿನ್ನೆಲೆ ಕುರಿತು ತನಿಖೆಗಿಳಿದಿದ್ದಾರೆ. ಕಂದಾಯ ಇಲಾಖೆ ಅಧಿಕಾರಿಗಳು ಬಾಬಾ ಒಡೆತನದ ಆಸ್ತಿಗಳ ಮಾಹಿತಿ ಕಲೆ ಹಾಕುತ್ತಿದ್ದಾರೆ. ಉತ್ತರ ಪ್ರದೇಶದ ಮೈನ್‌ಪುರಿಯಲ್ಲಿ 13 ಎಕರೆ ವಿಸ್ತಾರದಲ್ಲಿ ಪಂಚತಾರಾ ಶೈಲಿಯ ಆಶ್ರಮವಿದ್ದು, ಅದರ ಮೌಲ್ಯ 4 ಕೋಟಿ ರು. ಎಂದು ತಿಳಿದುಬಂದಿದೆ. ಈ ಭೂಮಿಯನ್ನು 3-4 ವರ್ಷಗಳ ಹಿಂದೆ ತನಗೆ ಉಡುಗೊರೆಯಾಗಿ ನೀಡಲಾಗಿದೆ ಎಂದು ಬಾಬಾ ಹೇಳಿದ್ದಾರೆ. ಆದರೆ ದಾಖಲೆಗಳು ಅವರು ಕೋಟಿಗಟ್ಟಲೆ ಮೌಲ್ಯದ ಹಲವಾರು ಆಸ್ತಿಗಳನ್ನು ಹೊಂದಿದ್ದಾರೆ ಎಂದು ಬಹಿರಂಗಪಡಿಸುತ್ತವೆ. ಇದೂ ಸೇರಿದಂತೆ ನಾರಾಯಣ್ ಸಾಕಾರ್ ಹೆಸರಲ್ಲಿ ಅಪಾರ ಸಂಪತ್ತಿದೆ. ಅದರ ವಿವರಗಳಿರುವ ದಾಖಲೆಗಳನ್ನು ಉತ್ತರ ಪ್ರದೇಶದ ಕಂದಾಯ ಇಲಾಖೆ ಅಧಿಕಾರಿಗಳು ಗುರುವಾರ ವಶಕ್ಕೆ ಪಡೆದಿದ್ದಾರೆ. ಈ ಆಶ್ರಮದಲ್ಲಿ ಬಾಬಾಗೆಂದೇ ಆರು ಕೊಠಡಿಗಳನ್ನು ಮೀಸಲಿಡಲಾಗಿದೆ. ಉಳಿದಂತೆ ಬೇರೆ ಆರು ಕೊಠಡಿಗಳನ್ನು ಸಮಿತಿ ಸದಸ್ಯರು ಮತ್ತು ಸಂಸ್ಥೆಯ ಸ್ವಯಂಸೇವಕರಿಗೆ ಬಳಸಲು ಬಿಡಲಾಗಿದೆ. ಆಶ್ರಮದೊಳಗೇ ಖಾಸಗಿ ರಸ್ತೆ ನಿರ್ಮಾಣವಾಗಿದೆ. ಅಲ್ಲದೇ ಅತ್ಯಾಧುನಿಕ ಕೆಫೆಟೇರಿಯಾ ಸಹ ಇದೆ.

ಆಭರಣ-ಅಲಂಕಾರ ಪ್ರಿಯ ಬಾಬಾ!

ಭೋಲೆ ಬಾಬಾ ಚಿನ್ನಾಭರಣ, ಅಲಂಕಾರ ಪ್ರಿಯನಾಗಿದ್ದ. ಎಡಗೈ ಮಣಿಕಟ್ಟಿಗೆ ಚಿನ್ನದ ಕೈಗಡಿಯಾರ ಧರಿಸುತ್ತಿದ್ದ. ಎರಡೂ ಕೈಗಳ ಬೆರಳುಗಳಲ್ಲಿ ಚಿನ್ನ-ವಜ್ರ ಖಚಿತ ಉಂಗುರುಗಳನ್ನು ಧರಿಸಿರುತ್ತಿದ್ದ. ಶ್ವೇತ ವರ್ಣದ ಸೂಟ್ ಧರಿಸಿ, ಕೆಲವೊಮ್ಮೆ ಕಡುಗಪ್ಪು ಕೂಲಿಂಗ್ ಗ್ಲಾಸ್ ಹಾಕಿರುತ್ತಿದ್ದ. ಭಕ್ತರಿಗೆ ಬೋಧನೆ ಮಾಡುವಾಗ ಸಿಂಹಾಸನದಂತಹ ಕುರ್ಚಿಯಲ್ಲೇ ಕೂರುತ್ತಿದ್ದ. ಕಾಲ್ತುಳಿತದ ದಿನ ನಡೆದ ಸತ್ಸಂಗದಲ್ಲೂ ಇದೇ ರೀತಿ ವೇಷಭೂಷಣ ಧರಿಸಿದ್ದ ಎಂದು ಪ್ರತ್ಯಕ್ಷದರ್ಶಿಗಳು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಆಂಧ್ರಕ್ಕೆ ಹೆಚ್ಚು ಅನುದಾನ ಬೇಡಿಕೆ

ದೆಹಲಿ: ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಗುರುವಾರ ದೆಹಲಿಯಲ್ಲಿ ಪ್ರಧಾನಿ ಮೋದಿ ಅವರನ್ನು ಭೇಟಿ ಯಾಗಿ, ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡುವ ಬದಲು ಹೆಚ್ಚಿನ ಅನುದಾನ ನೀಡಬೇಕು ಎಂದು ಮನವಿ ಸಲ್ಲಿಸಿದ್ದಾರೆ. ರಾಜ್ಯದ ಅಭಿವೃದ್ಧಿ ವಿಚಾರವಾಗಿ ಹಲವು ಪ್ರಸ್ತಾವನೆಗಳನ್ನು ಚಂದ್ರಬಾಬು ನಾಯ್ಡು ಪ್ರಧಾನಿ ಮುಂದಿಟ್ಟಿದ್ದಾರೆ ಎಂದು ಹೇಳಲಾಗಿದೆ. 2014ರಲ್ಲಿ ರಾಜ್ಯ ವಿಭಜನೆ ಸಮಯದಲ್ಲಿ ಕೊಟ್ಟ ಮಾತಿನಂತೆ ಈ ಬಾರಿಯ ಬಜೆಟ್‌ನಲ್ಲಿ ರಾಜ್ಯಕ್ಕೆ ಹೆಚ್ಚಿನ ಅನುದಾನ ನೀಡುವಂತೆ ಮನವಿ ಮಾಡಿದ್ದಾರೆ. ಬಳಿಕ 'ನರೇಂದ್ರ ಮೋದಿ ಅವರ ನಾಯಕತ್ವ ದಲ್ಲಿ ಆಂಧ್ರಪ್ರದೇಶ ಬಲಿಷ್ಠ ರಾಜ್ಯವಾಗಿ ಬೆಳೆಯ ಲಿದೆ. ಪ್ರಧಾನಿ ಜತೆಗಿನ ಮಾತುಕತೆ ರಚನಾತ್ಮಕ ವಾಗಿತ್ತು ಎಂದು ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿ ದ್ದಾರೆ. ಎರಡು ದಿನಗಳ ಕಾಲ ದೆಹಲಿ ಪ್ರವಾಸ ಕೈಗೊಂಡ ಆಂಧ್ರ ಸಿಎಂ, ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ, ವಾಣಿಜ್ಯ ಸಚಿವ ಪಿಯೂಷ್ ಗೋಯಲ್, ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೇಟಿ ಯಾಗಿ ಮಾತುಕತೆ ನಡೆಸಿದ್ದಾರೆ.

ವಿವೇಕಾನಂದ ಪುಣ್ಯತಿಥಿ ಪ್ರಧಾನಿ ಮೋದಿ ನಮನ

ದೆಹಲಿ: ಸ್ವಾಮಿ ವಿವೇಕಾನಂದರ 122ನೇ ಪುಣ್ಯ ತಿಥಿಯಂದು ಗುರುವಾರ ಪ್ರಧಾನಿ ಮೋದಿ ವಿಶ್ವ ಗುರುವಿಗೆ ನಮನ ಸಲ್ಲಿಸಿ ದ್ದಾರೆ. ಸಮೃದ್ಧ ಹಾಗೂ ಅಭಿವೃದ್ಧಿ ಸಮಾಜ ನಿರ್ಮಾಣದ ವಿವೇಕಾ ನಂದರ ಕನಸನ್ನು ಪೂರ್ಣ ಗೊಳಿಸುವ ನಮ್ಮ ಬದ್ಧತೆಯನ್ನು ಪುನರುಚ್ಚರಿಸು ತ್ತೇವೆ ಎಂದು ಮೋದಿ ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. 'ಸ್ವಾಮಿ ವಿವೇಕಾನಂದರ ಪುಣ್ಯತಿಥಿಯಂದು ಅವರಿಗೆ ನಮನ ಸಲ್ಲಿಸುತ್ತೇನೆ. ಅವರ ನೀತಿಗಳು ಲಕ್ಷಾಂತರ ಜನರಿಗೆ ಶಕ್ತಿ ನೀಡಿದೆ. ಅವರ ಆಳವಾದ ಬುದ್ಧಿಶಕ್ತಿ ಹಾಗೂ ಜ್ಞಾನದ ನಿರಂತರ ಅನ್ವೇಷಣೆ ಬಹಳ ಪ್ರೇರಣಾದಾಯಕ ವಾಗಿದೆ' ಎಂದು ಮೋದಿ ಗೌರವ ಸಲ್ಲಿಸಿದ್ದಾರೆ. 18ನೇ ಲೋಕಸಭಾ ಚುನಾವಣೆಯ ಮತದಾನದ ಬಳಿಕ ಪ್ರಧಾನಿ ಮೋದಿ ಕನ್ಯಾಕುಮಾರಿಯ ವಿವೇಕಾನಂದರ ಸನ್ನಿಧಿಯಲ್ಲಿ ಧ್ಯಾನಕ್ಕೆ ಕುಳಿತಿದ್ದರು. ಸ್ವಾಮಿ ವಿವೇಕಾನಂದರು ನನಗೆ ಸದಾ ಪ್ರೇರಣೀಯ ಎಂದು ಮೋದಿ ಹಲವು ಬಾರಿ ಹೇಳಿದ್ದಾರೆ.

ದಕ್ಷಿಣ ಕೊರಿಯಾ: ರೋಬೊ ಆತ್ಮಹತ್ಯೆ!

ದೆಹಲಿ: ಅತಿ ಹೆಚ್ಚು ರೊಬೋ ಕಾರ್ಮಿಕರನ್ನು ಹೊಂದಿರುವ ದಕ್ಷಿಣ ಕೊರಿಯಾ ದೇಶದಲ್ಲಿ ವಿಚಿತ್ರ ಘಟನೆ ಗುರುವಾರ ವರದಿಯಾಗಿದೆ. ದ.ಕೊರಿಯಾದ ಗುಮಿ ನಗರದಲ್ಲಿ ನಗರಸಭೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ರೋಬೊ ಆತ್ಮಹತ್ಯೆ ಮಾಡಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜೀವ ಇರದ ರೋಬೊ ಜೀವ ಕಳೆದುಕೊಳ್ಳಲು ಹೇಗೆ ಸಾಧ್ಯ? ಎಂಬ ಪ್ರಶ್ನೆ ಈಗ ಎದುರಾಗಿದೆ. 'ಬೇರ್ ರೊಬೊಟಿಕ್ಸ್' ಕಂಪನಿಯ ಈ ರೋಬೊ ಮೆಟ್ಟಿಲುಗಳ ಮೇಲಿಂದ ಬಿದ್ದು ಚೂರುಚೂರಾಗಿದೆ. ರೋಬೊದ ಈ ವರ್ತನೆ ಬಗ್ಗೆ ತನಿಖೆ ನಡೆಸುತ್ತಿರುವ ಅಧಿಕಾರಿಗಳು ಇದೊಂದು ಖಿನ್ನತೆಗೊಳಗಾದ ರೋಬೊ ಸಾವು ಎಂದು ವಿಶ್ಲೇಷಿಸಿದ್ದಾರೆ. 2023ರಿಂದ ನಗರಸಭೆ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಸೈಬೋರ್ಗ್ ರೋಬೊ ನಿತ್ಯ ಬೆಳಿಗ್ಗೆ 9ರಿಂದ ಸಂಜೆ 6ರವರೆಗೆ ಎಲ್ಲರಂತೆ ಕೆಲಸ ನಿರ್ವಹಿಸುತ್ತಿತ್ತು. ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ದಾಖಲೆಗಳನ್ನು ಮತ್ತು ಮಾಹಿತಿಗಳನ್ನು ರವಾನಿಸುವ ಕೆಲಸವನ್ನು ಮಾಡುತ್ತಿತ್ತು. ಜೂನ್ 26ರಂದು ನಿತ್ಯ ಕೆಲಸದಲ್ಲಿದ್ದ ಸೈಬೋರ್ಗ್ ರೋಬೊ ಒಂದೇ ಜಾಗದಲ್ಲಿ ನಿಂತಂತೆ ಸುತ್ತು ಹಾಕಲು ಆರಂಭಿಸಿತು. ಬಳಿಕ ಸೀದಾ ನಡೆದುಕೊಂಡು ಹೋಗಿ 6 ಅಡಿ ಎತ್ತರದ ಮೆಟ್ಟಿಲುಗಳಿಂದ ಕೆಳಗೆ ಜಿಗಿಯಿತು. ರೋಬೊ ನುಚ್ಚುನೂರಾಗಿದೆ ಎಂದು ವರದಿಯಾಗಿದೆ. ತಜ್ಞರು ರೋಬೊ ದೇಹದ ಭಾಗಗಳ ಚೂರುಗಳನ್ನು ಸಂಗ್ರಹಿಸಿ ಪರಿಶೀಲನೆಗೆ ಒಳಪಡಿಸಿದ್ದಾರೆ. ಸೈಬೋರ್ಗ್‌ನ ಈ ನಡವಳಿಕೆ ಊಹೆಗೂ ಮೀರಿದ್ದಾಗಿದೆ ಎಂದು ಅಧಿಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ.

{ಶಿವರಾಜ್ ತಂಗಡಗಿ} ಸಚಿವ

ಜಾತಿ ಜನಗಣತಿ ಶಿಫಾರಸುಗಳ ವರದಿಯನ್ನು ನಮಗೆ ಗಟ್ಟಿತನ ಇರುವುದರಿಂದಲೇ ಸ್ವೀಕಾರ ಮಾಡಿದ್ದೇವೆ. ಈಗಾಗಲೇ ಒಂದು ಸುತ್ತಿನ ಮಾತುಕತೆಯೂ ಆಗಿದೆ. ಯಾವ ಸರಕಾರವೂ ವರದಿಯನ್ನು ಸ್ವೀಕರಿಸುವ ಸಾಹಸಕ್ಕೆ ಮುಂದಾಗಲಿಲ್ಲ. ಸಿಎಂ ಸಿದ್ದರಾಮಯ್ಯ ಈ ನಿಟ್ಟಿನಲ್ಲಿ ಬದ್ಧತೆ ಪ್ರದರ್ಶಿಸಿದರು. ಗಟ್ಟಿತನ ಇರುವುದರಿಂದಲೇ ವರದಿ ಸ್ವೀಕರಿಸಿದ್ದೇವೆ.



ಡೆಂಗ್ಯೂ ವೈರಸ್
ಮುನ್ನೆಚ್ಚರಿಕೆಯೇ ಮದ್ದು!

ಮಳೆಗಾಲ ಬಂತಂದರೆ ಸಾಕು ಡೆಂಗ್ಯೂ ಮಾರಿಯ ಆತಂಕ ಹೆಚ್ಚಾಗುತ್ತದೆ. ಸಿಟಿ, ಗ್ರಾಮೀಣ ಪ್ರದೇಶ ಎನ್ನದೇ ಎಲ್ಲೆಡೆ ಹಬ್ಬುವ ಈ ರೋಗದಿಂದ ರಕ್ಷಿಸಿಕೊಳ್ಳುವುದೇ ದೊಡ್ಡ ಸವಾಲಾಗಿದೆ. ಪ್ರತಿ ವರ್ಷ ಲಕ್ಷಾಂತರ ಪ್ರಕರಣಗಳು ದೇಶದಲ್ಲಿ ದಾಖಲಾಗುತ್ತಿವೆ. ಈ ಡೆಂಗ್ಯೂ ಭಾರತದಲ್ಲಿ ಮಾತ್ರವಲ್ಲ ವಿಶ್ವದ ಹಲವು ರಾಷ್ಟ್ರಗಳಲ್ಲಿ ತಲ್ಲಣ ಸೃಷ್ಟಿಸಿದೆ. ಸೊಳ್ಳೆಯ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುವ ಈ ರೋಗದ ಪಾರಾಗಲು ಮುನ್ನೆಚ್ಚರಿಕೆಯೇ ಮದ್ದಾಗಿದೆ. ಮಾರಣಾಂತಿಕವಲ್ಲದಿದ್ದರೂ ನಿರ್ಲಕ್ಷ್ಯ ತೋರಿದರೆ ಜೀವಕ್ಕೆ ಅಪಾಯ ತರುವ ಮಟ್ಟಿಗೆ ದೇಹವನ್ನು ಹಿಂಡಿ ಹಿಪ್ಪೆ ಮಾಡಿಬಿಡುತ್ತದೆ. ಸೋಂಕು ತಗುಲಿದ ನಾಲ್ವರಲ್ಲಿ ಒಬ್ಬರು ಡೆಂಗ್ಯೂ ಗುಣ ಲಕ್ಷಣಗಳ ಜತೆ ಆರೋಗ್ಯ ಸಮಸ್ಯೆಗೆ ಗುರಿಯಾಗುತ್ತಾರೆ. ಶೇ.80ರಷ್ಟು ಸೋಂಕಿತರಲ್ಲಿ ಯಾವುದೇ ರೋಗ ಲಕ್ಷಣ ಗೋಚರಿಸುವುದಿಲ್ಲ. ಸೌಮ್ಯದಿಂದ ತೀವ್ರ ರೋಗ ಲಕ್ಷಣಗಳು ಸೋಂಕಿತರಲ್ಲಿ ಕಂಡು ಬರುತ್ತದೆ. ತಕ್ಷಣ ಚಿಕಿತ್ಸೆ ಆರಂಭಿಸುವುದರಿಂದ ರೋಗ ವೃದ್ಧಿಯಾಗುವುದನ್ನು ತಡೆಯಬಹುದಾಗಿದೆ. ರೋಗ ತೀವ್ರಗೊಂಡಲ್ಲಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುವುದು ಅನಿವಾರ್ಯ ವಾಗುತ್ತದೆ.

ಪ್ರಕರಣಗಳೆಷ್ಟು?

2023ರಲ್ಲಿ ದೇಶದಲ್ಲಿ 2,89,235 ಡೆಂಗ್ಯೂ ಪ್ರಕರಣಗಳು ದಾಖಲಾಗಿದ್ದು 485 ಜನರು ಸಾವನ್ನಪ್ಪಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಅತಿ ಹೆಚ್ಚು 35,402 ಪ್ರಕರಣಗಳು ದಾಖಲಾಗಿವೆ. ಕೇರಳದಲ್ಲಿ ಅತಿ ಹೆಚ್ಚು 153 ಜನ ಡೆಂಗ್ಯೂ ಕಾರಣಕ್ಕೆ ಮೃತಪಟ್ಟಿದ್ದಾರೆ . ಕರ್ನಾಟಕದಲ್ಲೂ ಕಳೆದ ವರ್ಷ 19300 ಪ್ರಕರಣಗಳು ದಾಖಲಾಗಿದ್ದು 11 ಮಂದಿ ಸಾವನ್ನಪ್ಪಿದ್ದಾರೆ ಎಂದು ವಾಹಕಗಳಿಂದ ಹರಡುವ ರೋಗ ನಿಯಂತ್ರಣ ರಾಷ್ಟ್ರೀಯ ಸಂಸ್ಥೆ ಮಾಹಿತಿ ನೀಡಿದೆ. 2021ರ ಬಳಿಕ ಪ್ರತಿ ವರ್ಷ ಡೆಂಗ್ಯೂ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಗಿದ್ದು ಉತ್ತರಪ್ರದೇಶದಲ್ಲಿ ಈ ಪ್ರಕರಣಗಳ ಸಂಖ್ಯೆ ಅಧಿಕವಾಗಿ ಕಂಡುಬರುತ್ತಿದೆ . ಮಹಾರಾಷ್ಟ್ರ, ಪಶ್ಚಿಮ ಬಂಗಾಳದಲ್ಲೂ ಡೆಂಗ್ಯೂ ಹಾವಳಿ ಹೆಚ್ಚಾಗಿದೆ.

ಡೆಂಗ್ಯೂ ಮೊದಲು ಪತ್ತೆಯಾಗಿದ್ದು ಹೇಗೆ?

ಡೆಂಗ್ಯೂ ಮೊದಲು ಪತ್ತೆಯಾಗಿದ್ದು ಎಲ್ಲಿ ಎಂಬ ಬಗ್ಗೆ ಈವರೆಗೆ ಯಾವುದೇ ಸ್ಪಷ್ಟ ಮಾಹಿತಿ ಇಲ್ಲ. ಆದರೆ ಸಾವಿರ ವರ್ಷಗಳ ಹಿಂದೆ ಆಫ್ರಿಕಾ ಮತ್ತು ಆಗ್ನೇಯ ಏಷ್ಯಾ ಭಾಗದಲ್ಲಿ ಮಾನವೇತರ ಜೀವಿಯಲ್ಲಿ ಉತ್ಪತ್ತಿಯಾಗಿ ಸೊಳ್ಳೆಗಳ ಮೂಲಕ ಹರಡಲು ಆರಂಭಿಸಿದೆ ಎಂದು ಊಹಿಸಲಾಗಿದೆ. ವೆಸ್ಟ್ ಇಂಡೀಸ್‌ನಲ್ಲಿ 1635ರಲ್ಲಿ ಮೊದಲು ಡೆಂಗ್ಯೂ ಗುಣಲಕ್ಷಣಗಳ ರೋಗವನ್ನು ಪತ್ತೆಮಾಡಲಾಯಿತು. 1779ರಲ್ಲಿ ಏಷ್ಯಾ, ಉತ್ತರ ಅಮೆರಿಕಾ ಮತ್ತು ಆಫ್ರಿಕಾ ದೇಶಗಳಲ್ಲಿ ಮೊದಲು ಖಚಿತ ಡೆಂಗ್ಯೂ ಪ್ರಕರಣಗಳು ವ್ಯಾಪಿಸಿದ್ದವು. 1943ರಲ್ಲಿ ರೆನ್ ಕಿಮುರಾ ಮತ್ತು ಸುಸುಮು ಹೊಟ್ಟಾ ಎಂಬ ವಿಜ್ಞಾನಿಗಳು ಜಪಾನ್‌ನಲ್ಲಿ ಡೆಂಗ್ಯೂ ಸೋಂಕಿನ ಬಗ್ಗೆ ಮಾಹಿತಿ ದಾಖಲಿಸಿದ್ದರು ಡಿಇಎನ್ 1 ಟೈಪ್ ಡೆಂಗ್ಯೂ ಸೋಂಕು ಅಧಿಕೃತವಾಗಿ ಮೊದಲ ಬಾರಿಗೆ ದಾಖಲಾಗಿತ್ತು.

ಡೆಂಗ್ಯೂ ಹೇಗೆ ಹರಡುತ್ತದೆ?

ಸೊಳ್ಳೆಗಳು ರೋಗ ವಾಹಕಗಳಾಗಿ ಕೆಲಸ ಮಾಡುತ್ತವೆ. ಈಡಿಎಸ್ ಈಜಿಪ್ಟಿ ಸೊಳ್ಳೆಗಳು ಕಚ್ಚುವುದರಿಂದ ಡೆಂಗ್ಯೂ ವೈರಾಣುಗಳು ಮಾನವನ ದೇಹ ಪ್ರವೇಶಿಸುತ್ತವೆ. ಸೋಂಕಿತ ವ್ಯಕ್ತಿಯಲ್ಲಿನ ವೈರಾಣುಗಳು ಸೊಳ್ಳೆಗಳ ಮೂಲಕ ಇನ್ನೊಂದು ದೇಹವನ್ನು ಸೇರುತ್ತದೆ. ಈ ರೋಗಪ್ರಸಾರಣಾ ಕ್ರಿಯೆಯನ್ನ ಎಕ್ಸ್‌ಟ್ರಿನ್‌ಸಿಕ್ ಇನ್‌ಕ್ಯೂಬೇಶನ್ ಕಾಲಾವಧಿ ಎಂದು ಕರೆಯಲ್ಪಡುತ್ತದೆ. ಈ ಪ್ರಕ್ರಿಯೆಯು ತಾಪಮಾನದ ಆಧಾರದ ಮೇಲೆ ಸುಮಾರು 8-12 ದಿನ ಸಮಯವನ್ನು ತೆಗೆದುಕೊಳ್ಳುತ್ತದೆ. ಸೋಂಕಿತ ಯಾವುದೇ ವ್ಯಕ್ತಿಯನ್ನು ಕಚ್ಚುವ ಮೂಲಕ ಸೊಳ್ಳೆಗಳಲ್ಲಿ ಈ ವೈರಾಣುಗಳು ಸೇರಿಕೊಳ್ಳುತ್ತವೆ. ಎಷ್ಟೋ ಪ್ರಕರಣಗಳಲ್ಲಿ ವ್ಯಕ್ತಿಯಲ್ಲಿ ಗುಣಲಕ್ಷಣಗಳು ಗೋಚರಿಸುವ ಮೊದಲೇ ಆ ವ್ಯಕ್ತಿಯನ್ನು ಕಚ್ಚಿದ ಸೊಳ್ಳೆಯಲ್ಲಿ ವೈರಾಣುಗಳು ಸೇರಿಕೊಂಡಿರುತ್ತವೆ. ಈ ರೋಗದಿಂದ ಬಾಧಿತ ಗರ್ಭಿಣಿ ಮಹಿಳೆಯಿಂದ ಆಕೆಯ ಮಗುವಿನ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇರುತ್ತದೆ. ಅವಧಿಗೂ ಮುನ್ನ ಜನನ, ಶಿಶುವಿನಲ್ಲಿ ತೂಕ ಕಡಿಮೆಯಂತಹ ಸಮಸ್ಯೆ ಕಾಣಿಸಿಕೊಳ್ಳಬಹುದು ಎಂದು ತಜ್ಞರು ವರದಿ ಮಾಡಿದ್ದಾರೆ. ಅಪರೂಪದ ಪ್ರಕರಣಗಳಲ್ಲಿ ರಕ್ತ ವರ್ಗಾವಣೆ ಹಾಗೂ ಅಂಗಾಗ ದಾನದಿಂದಲೂ ಈ ಡೆಂಗ್ಯೂ ಸೋಂಕು ಹರಡಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಮಾಹಿತಿ ಹಂಚಿಕೊಂಡಿದೆ.

ಈಡಿಎಸ್ ಪ್ರಕಾರದ ಸೊಳ್ಳೆಗಳ ಮೂಲಕ ಈ ಡೆಂಗ್ಯೂ ರೋಗ ಮನುಷ್ಯರಲ್ಲಿ ಹರಡುತ್ತದೆ. ಸೆರೋಟೈಪ್ ಎಂಬ ನಾಲ್ಕು ಒಂದೇ ರೀತಿಯ ರೋಗಾಣುಗಳಿಂದ ಹರಡುತ್ತದೆ. ಡಿಇಎನ್ 1, ಡಿಇಎನ್ 2, ಡಿಇಎನ್ 3, ಮತ್ತು ಡಿಇಎನ್ 4 ಎಂದು ಹೆಸರಿಸಲಾಗಿದೆ. ಈ ಸೆರೋಟೈಪ್‌ಗಳು ರೋಗನಿರೋಧಕ ಶಕ್ತಿಯನ್ನು ಕುಗ್ಗಿಸುತ್ತವೆ.

ಜಾಗತಿಕವಾಗಿ ಕಾಡುತ್ತಿದೆ ಮಹಾಮಾರಿ

ಡೆಂಗ್ಯೂ ರೋಗ ಭಾರತದಲ್ಲಿ ಮಾತ್ರವಲ್ಲ ಜಾಗತಿಕ ಮಟ್ಟದಲ್ಲಿ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಅದರಲ್ಲಿ 2023ರಲ್ಲಿ ಅತಿಹೆಚ್ಚು ಪ್ರಕರಣಗಳು ದಾಖಲಾಗಿದ್ದು 80 ರಾಷ್ಟ್ರಗಳ ಜನರು ಡೆಂಗ್ಯೂ ಮಹಾಮಾರಿಯಿಂದ ಬಳಲಿದ್ದಾರೆ. ಕಳೆದ ವರ್ಷ 6.5 ಮಿಲಿಯನ್ ಪ್ರಕರಣಗಳು ದಾಖಲಾಗಿದ್ದು, 7300 ಡೆಂಗ್ಯೂ ಸಂಬಂಧಿತ ಸಾವು ಸಂಭವಿಸಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ವರದಿ ಮಾಡಿದೆ. ಆಫ್ರಿಕಾ, ಅಮೆರಿಕಾ, ಈಶಾನ್ಯ, ಮೆಡಿಟರೇನಿಯನ್, ಸೌತ್ ಈಸ್ಟ್ ಏಷ್ಯಾ, ವೆಸ್ಟರ್ನ್ ಪೆಸಿಫಿಕ್ ನ ಸುಮಾರು 100 ರಾಷ್ಟ್ರಗಳಲ್ಲಿ ಡೆಂಗ್ಯೂ ಹರಡಿದ್ದು ಜಾಗತಿಕವಾಗಿ ಹರಡಿರುವಲ್ಲಿ ಏಷ್ಯಾದ ಪಾಲು ಶೇ.70ರಷ್ಟಿದೆ.

ಡೆಂಗ್ಯೂ ಹರಡುವಿಕೆಗೆ ಮುಖ್ಯ ಕಾರಣ?

ಸರಿಯಾದ ಕೊಳಚೆ ನೀರು ನಿರ್ವಹಣೆ ಇಲ್ಲದೇ ಇರುವುದು, ಮನೆಯ ಸುತ್ತ ಮಳೆ ನೀರು ನಿಲ್ಲುವುದರಿಂದ ಹಾಗೇ ಅಶುದ್ಧ ನೀರು ಸೇವನೆಯಿಂದ ಈ ಡೆಂಗ್ಯೂ ರೋಗ ಹರಡುವ ಸಾಧ್ಯತೆ ಹೆಚ್ಚಾಗಿದೆ. ಅದರಲ್ಲೂ ಮಳೆಗಾಲದ ಸಮಯದಲ್ಲಿ ನೀರು ನಿಂತ ಜಾಗಗಳು ಸೊಳ್ಳೆಗಳ ವಂಶ ವೃದ್ಧಿಯ ನೆಲೆಯಾಗುತ್ತವೆ. ಹೀಗಾಗಿ ಮನೆಯ ಸುತ್ತಲ ವಾತಾವರಣ ಈ ರೋಗ ಹರಡುವ ವಿಷಯದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಮನೆಯಲ್ಲಿನ ನೀರು ಸಂಗ್ರಹಿಸುವ ತೊಟ್ಟಿಗಳು ಕೂಡ ಡೆಂಗ್ಯೂ ಸೊಳ್ಳೆ ಹರಡುವಿಕೆಗೆ ಕಾರಣವಾಗಬಹುದು. ಹೊರಗಡೆ ಓಡಾಡುವಾಗ ಮೈಮುಚ್ಚುವ ಬಟ್ಟೆಗಳನ್ನು ಧರಿಸಿ. ಜತೆಗೆ ಮಲಗುವ ಸಮಯದಲ್ಲಿ ಉತ್ತಮ ಗುಣಮಟ್ಟದ ಸೊಳ್ಳೆ ನಿವಾರಕ ಹಾಗೂ ಸೊಳ್ಳೆ ನೆಟ್‌ಗಳನ್ನು ಬಳಸುವುದು ಉತ್ತಮ

ಡೆಂಗ್ಯೂ ರೋಗ ಲಕ್ಷಣಗಳೇನು?

ಯಾವುದೇ ಗುಣ ಲಕ್ಷಣ ಇಲ್ಲದ ಅಥವಾ ಸೌಮ್ಯ ಲಕ್ಷಣಗಳಿರುವ ಹಲವು ಪ್ರಕರಣಗಳಲ್ಲಿ ಸೋಂಕಿತ ವ್ಯಕ್ತಿ 1-2 ವಾರದೊಳಗೆ ಗುಣಮುಖನಾಗುತ್ತಾನೆ. ಸೋಂಕು ತಗುಲಿದ 4-10ದಿನಗಳೊಳಗೆ ಲಕ್ಷಣಗಳು ಗೋಚರಿಸಲು ಆರಂಭವಾಗುತ್ತದೆ , 2-7 ದಿನಗಳವರೆಗೆ ಸೋಂಕು ದೇಹದಲ್ಲಿ ಇರಬಹುದು.

ಸಾಮಾನ್ಯವಾಗಿ ಕಂಡುಬರುವ ರೋಗ ಲಕ್ಷಣಗಳು

- **ತೀವ್ರ ಜ್ವರ (104 ಡಿಗ್ರಿವರೆಗೆ ಹೋಗಬಹುದು)**
- **ಅತಿಯಾದ ತಲೆ ನೋವು**
- **ಕಣ್ಣಿನ ಹಿಂಬದಿಯಲ್ಲಿ ನೋವು**
- **ಸ್ನಾಯು ಹಾಗೂ ಗಂಟು ನೋವು**
- **ವಾಕರಿಕೆ**
- **ವಾಂತಿ**
- **ಮೈಮೇಲೆ ದದ್ದು**

ಈ ಲಕ್ಷಣಗಳು ಸಾಮಾನ್ಯ ಜ್ವರದ ಸಮಯದಲ್ಲೂ ಕಾಣಿಸಿಕೊಳ್ಳಬಹುದಾಗಿದೆ. ಸಾಕಷ್ಟು ಸೋಂಕಿತರು ವಾರದೊಳಗೆ ಗುಣಮುಖರಾಗುತ್ತಾರೆ. ಎಲ್ಲಾ ಜ್ವರಗಳೂ ಡೆಂಗ್ಯೂ ಅಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಹಾಗಂತ ರೋಗ ಲಕ್ಷಣಗಳನ್ನು ಕಡೆಗಣಿಸುವಂತೆಯೂ ಇಲ್ಲ.

ಯಾವಾಗ ವೈದ್ಯರನ್ನು ಕಾಣಬೇಕು?

ಕೆಲವು ಪ್ರಕರಣಗಳಲ್ಲಿ ರೋಗ ಲಕ್ಷಣ ತೀವ್ರವಾಗಿರುತ್ತದೆ. ಅಂತಹ ಸಮಯದಲ್ಲಿ ವೈದ್ಯರ ಸಲಹೆ ಅತ್ಯಗತ್ಯ. ಸುಮಾರು 20 ಸೋಂಕಿತರಲ್ಲಿ ಒಬ್ಬರಲ್ಲಿ ಡೆಂಗ್ಯೂ ತೀವ್ರವಾಗಿರುತ್ತದೆ, ಸೂಕ್ತ ಚಿಕಿತ್ಸೆ ಸಿಗದ ಸಮಯದಲ್ಲಿ ಇವು ಜೀವಕ್ಕೆ ಅಪಾಯ ಒಡ್ಡಬಹುದಾಗಿದೆ.

- **ಹೊಟ್ಟೆ ನೋವು**
- **ಅತಿಯಾದ ವಾಂತಿ (24 ಗಂಟೆಯಲ್ಲಿ ಕನಿಷ್ಠ 3 ಬಾರಿ)**
- **ರಕ್ತ ವಾಂತಿ ಅಥವಾ ಮಲದಲ್ಲಿ ರಕ್ತ ಕಾಣಿಸಿಕೊಳ್ಳುವಿಕೆ**
- **ಅತಿಯಾದ ಸುಸ್ತು, ಒತ್ತಡ**

ಚಿಕಿತ್ಸೆ ಏನು? ಹೇಗೆ?

ಡೆಂಗ್ಯೂ ರೋಗಕ್ಕೆ ಇಲ್ಲಿಯವರೆಗೆ ಯಾವುದೇ ನಿರ್ದಿಷ್ಟ ಚಿಕಿತ್ಸೆಗಳಿಲ್ಲ. ಆದರೆ ಆರೋಗ್ಯ ಸಮಸ್ಯೆ ಆಧಾರದ ಮೇಲೆ ವೈದ್ಯರು ಜ್ವರ ಹಾಗೂ ನೋವಿಗೆ ಸೂಕ್ತ ಚಿಕಿತ್ಸೆಯನ್ನು , ಔಷಧಗಳನ್ನು ನೀಡುತ್ತಾರೆ. ಹಲವು ಪ್ರಕರಣಗಳಲ್ಲಿ ಮನೆಯಲ್ಲಿಯೇ ಗುಣಪಡಿಸಿಕೊಳ್ಳಬಹುದಾಗಿದೆ. ಆದರೆ ರೋಗ ಉಲ್ಬಣವಾದರೆ ಅಥವಾ ತೀವ್ರ ಲಕ್ಷಣಗಳನ್ನು ಹೊಂದಿದ್ದರೆ ತಕ್ಷಣ ವೈದ್ಯರ ನೆರವು ಬೇಕೆ ಬೇಕು.

ಡೆಂಗ್ಯೂ ರೋಗವನ್ನು ಖಚಿತಪಡಿಸಿಕೊಳ್ಳಲು ರಕ್ತ ಪರೀಕ್ಷೆಯೊಂದೇ ದಾರಿಯಾಗಿದೆ. ಅದರ ಆರೋಗ್ಯ ಲಕ್ಷಣಗಳ ಆಧಾರದ ಮೇಲೆ ವೈದ್ಯರು ಸಮಸ್ಯೆಗೆ ಚಿಕಿತ್ಸೆ ನೀಡಬಹುದಾಗಿದೆ. ಇದೇ ರೀತಿಯ ಲಕ್ಷಣಗಳು ಝಿಕಾ ಹಾಗೂ ಚಿಕೂನ್‌ಗುನ್ಯಾ ರೋಗದಲ್ಲೂ ಕಾಣಿಸುವ ಹಿನ್ನೆಲೆ ರಕ್ತ ಪರೀಕ್ಷೆಯ ಮೂಲಕ ರೋಗ ಪತ್ತೆಹಚ್ಚಬಹುದಾಗಿದೆ.

ಪೌಷ್ಠಿಕ ಆಹಾರ ಸೇವನೆ, ನೀರಿನಾಂಶ ಇರುವ ಹಣ್ಣು, ಜ್ಯೂಸ್‌ಗಳ ಸೇವನೆಯಿಂದ ಸುಸ್ತು, ಅಶಕ್ತತೆಯನ್ನು ಕಡಿಮೆ ಮಾಡಬಹುದು. ಜ್ವರ ಕಡಿಮೆಯಾದ ಬಳಿಕವೂ ವ್ಯಕ್ತಿ ಮೊದಲಿನ ಸ್ಥಿತಿಗೆ ಮರಳಲು ವಾರಗಳ ಸಮಯವೇ ಬೇಕಾಗುತ್ತದೆ. ಡೆಂಗ್ಯೂ ರೋಗಕ್ಕೆ ಹೆದರುವ ಅವಶ್ಯಕತೆ ಇಲ್ಲ, ಆದರೆ ಮುನ್ನೆಚ್ಚರಿಕೆಗಳು ಅಗತ್ಯ. ಮಳೆಗಾಲದಲ್ಲಿ ಸ್ವಚ್ಛತೆಯನ್ನು ಕಾಪಾಡುವ ಮೂಲಕ ಸೊಳ್ಳೆ ಉತ್ಪತ್ತಿಯನ್ನು ತಡೆಯುವ ಮೂಲಕ ಸೋಂಕು ಹರಡುವಿಕೆಯನ್ನು ತಡೆಯಬಹುದಾಗಿದೆ.

ಖಾಸಗಿ ಸಾರಿಗೆ ಸಂಘಟನೆಗಳ ಪ್ರತಿಭಟನೆ ಹಿನ್ನೆಲೆ
ಇಂದಿನಿಂದ ಎಲೆಕ್ಟ್ರಿಕ್ ಬೈಕ್, ಟ್ಯಾಕ್ಸಿ ವಿರುದ್ಧ ಕ್ರಮ

ಬೆಂಗಳೂರು: ಬೈಕ್ ಟ್ಯಾಕ್ಸಿ ವಿರುದ್ಧ ಕಠಿಣ ಮತ್ತು ನಿರ್ದಾಕ್ಷಣ್ಯ ಕ್ರಮ ಕೈಗೊಳ್ಳುವಂತೆ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟದ 32 ಸಂಘಟನೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ನಡೆಸಿದ ತೀವ್ರ ಪ್ರತಿಭಟನೆಗೆ ಮಣಿದಿರುವ ಸಾರಿಗೆ ಇಲಾಖೆ ಶುಕ್ರವಾರದಿಂದ ಕಾನೂನು ಕ್ರಮ ಕೈಗೊಳ್ಳುವುದಾಗಿ ಘೋಷಿಸಿದೆ.

ಈ ಕುರಿತು ಅಧಿಸೂಚನೆ ಜಾರಿಯಾಗಿದ್ದು, ಬೆಂಗಳೂರು ನಗರ ವ್ಯಾಪ್ತಿಯ 11 ಆರ್.ಟಿ.ಒ ಕಚೇರಿಗಳ ವ್ಯಾಪ್ತಿಯಲ್ಲಿ ಎಲೆಕ್ಟ್ರಿಕ್ ಬೈಕ್ ಟ್ಯಾಕ್ಸಿಗಳು ಒಳಗೊಂಡಂತೆ ಅನಧಿಕೃತ ಬೈಕ್ ಟ್ಯಾಕ್ಸಿಗಳ ವಿರುದ್ಧ ಕ್ರಮ ಜರುಗಿಸುವುದಾಗಿ ಆದೇಶ ಹೊರಡಿಸಿದೆ. ರಾಜ್ಯ ಸರಕಾರ ಫೆಬ್ರವರಿಯಲ್ಲಿ ಒನ್ ಸಿಟಿ ಒನ್ ರೇಟ್ ಆದೇಶವನ್ನು ಹೊರಡಿಸಿದ್ದು, ಆದೇಶ ಹೊರಡಿಸಿ ಆರು ತಿಂಗಳುಗಳಾದರೂ ಯಾವುದೇ ಅಗ್ರಿಗೇಟರ್ ಕಂಪನಿಗಳು ಆದೇಶ ಪಾಲಿಸುತ್ತಿಲ್ಲ. ಇವರ ವಿರುದ್ಧ ಅಧಿಕಾರಗಳು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆಟೋ ಹಾಗೂ ಕ್ಯಾಬ್ ಚಾಲಕರು ಶಾಂತಿನಗರದ ಸಾರಿಗೆ ಇಲಾಖೆ ಮುಖ್ಯ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಈ ವೇಳೆ ಖಾಸಗಿ ಸಾರಿಗೆ ಸಂಘಟನೆಗಳ ಅಧ್ಯಕ್ಷ ನಟರಾಜ್ ಶರ್ಮ ಮಾತನಾಡಿ, ಸೆ.11, 2023ರಂದು ಖಾಸಗಿ ಸಾರಿಗೆ ಸಂಘಟನೆಗಳು ಬಂದ್‌ಗೆ ಕರೆಕೊಟ್ಟಿದ್ದೆವು. ಬಸ್, ಆಟೋ, ಟ್ಯಾಕ್ಸಿ, ಗೂಡ್ಸ್, ಶಾಲಾ ವಾಹನಗಳು ಎಲ್ಲರೂ ಸೇರಿ ಸರಕಾರದ ಮುಂದೆ 30 ಬೇಡಿಕೆಗಳನ್ನಿಟ್ಟು ಪ್ರತಿಭಟಿಸಿದೆವು. ಸಾರಿಗೆ ಸಚಿವರು 30 ಬೇಡಿಕೆಗಳಲ್ಲಿ 28 ಬೇಡಿಕೆ ಈಡೇರಿಕೆ ಆಗುತ್ತದೆ ಎಂದಿದ್ದರು. ಅದರಲ್ಲಿ 26 ಬೇಡಿಕೆ ಈಡೇರಿಕೆ ಮಾಡಿದ್ದಾರೆ. ಪೋರ್ಟಲ್, ಬೈಕ್ ಟ್ಯಾಕ್ಸಿ ನಿಲ್ಲಿಸಿದ್ದಾರೆ. ಒಂದು ಸಿಟಿ ಒಂದು ದರ ಎಲ್ಲದಕ್ಕೂ ಸರಕಾರದಿಂದ ನೋಟಿಫಿಕೇಶನ್ ಬಂದಿದೆ. ಆದರೆ ಸಾರಿಗೆ ಅಧಿಕಾರಿಗಳು ಅವುಗಳನ್ನು ಮಾರ್ಪಾಡು ಮಾಡದೇ ಹಾಗೇ ಉಳಿಸಿಕೊಂಡಿದ್ದಾರೆ.

ಪ್ರತಿಭಟನೆಯಲ್ಲಿ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟದ ಅಧ್ಯಕ್ಷರಾದ ಎಸ್. ನಟರಾಜ್ ಶರ್ಮಾ, ನಾರಾಯಣ ಸ್ವಾಮಿ, ಗಂಡಸಿ ಸದಾನಂದ ಸ್ವಾಮಿ, ರಘು ನಾರಾಯಣ ಗೌಡ, ಸ್ನೇಹಜೀವಿ ಸಂತೋಷ್, ಜಯಣ್ಣ, ರಾಜು ಉಪಸ್ಥಿತರಿದ್ದರು.

ಬೈಕ್ ಟ್ಯಾಕ್ಸಿ ವಿರುದ್ಧ ಕಠಿಣ ಮತ್ತು ನಿರ್ದಾಕ್ಷಣ್ಯ ಕ್ರಮ ಕೈಗೊಳ್ಳುವಂತೆ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟದ 32 ಸಂಘಟನೆಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.



ಸಾರಿಗೆ ಆಯುಕ್ತರಿಗೆ ಮನವಿ ಸಲ್ಲಿಸಿದ ಖಾಸಗಿ ಸಾರಿಗೆ ಸಂಘಟನೆ ಪದಾಧಿಕಾರಿಗಳು.

ತಪ್ಪಿತಸ್ಥರ ಮೇಲೆ ಕ್ರಮ

ಪ್ರತಿಭಟನೆಯ ಬೆನ್ನಲ್ಲೇ ಸಭೆ ಕರೆದ ಸಾರಿಗೆ ಆಯುಕ್ತ ಯೋಗೇಶ್, ಪ್ರತಿಭಟನಾಕಾರರಿಗೆ ಮಣಿದು ಕ್ರಮ ಕೈಗೊಳ್ಳುವ ಕುರಿತಂತೆ ಆದೇಶ ಹೊರಡಿಸಿದ್ದು, ತಕ್ಷಣವೇ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಮತ್ತು ಗೃಹ ರಕ್ಷಕ ಸಿಬ್ಬಂದಿಯೊಂದಿಗೆ ಕಾರ್ಯಾಚರಣೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ.

ಎಲ್ಲಾ ಕಡೆ ಒಂದೇ ಮೈತ್ರಿಸೂತ್ರ ಇಲ್ಲ: ಕಾಂಗ್ರೆಸ್

ದೆಹಲಿ: ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಮೈತ್ರಿ ಬಗ್ಗೆ ಜೈ ರಾಮ್ ರಮೇಶ್ ಮಾತನಾಡಿದ್ದಾರೆ. ದೆಹಲಿ, ಹರಿಯಾಣದಲ್ಲಿ ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷದ ಮೈತ್ರಿಗೆ ಅವಕಾಶವಿ ಇಲ್ಲ ಎಂದಿದ್ದಾರೆ. ಮಹಾರಾಷ್ಟ್ರ ಹಾಗೂ ಜಾರ್ಖಂಡ್ ರಾಜ್ಯಗಳಲ್ಲಿ 'ಇಂಡಿ' ಒಕ್ಕೂಟದ ಪಕ್ಷಗಳು ಒಟ್ಟಾಗಿ ಸ್ಪರ್ಧಿಸಲಿವೆ ಎಂದು ಹೇಳಿದ್ದಾರೆ. ದೆಹಲಿಯಲ್ಲಿ ಸ್ವತಂತ್ರ ಸ್ಪರ್ಧೆ ಬಗ್ಗೆ ಎಎಪಿ ಕೂಡ ಈ ಮೊದಲೇ ಹೇಳಿಕೆ ನೀಡಿತ್ತು. ಮಹಾರಾಷ್ಟ್ರದಲ್ಲಿ ಶಿವಸೇನೆ (ಉದ್ಧವ್ ಬಣ), ಎನ್‌ಸಿಪಿ (ಶರದ್ ಬಣ) ಜತೆ ಮೈತ್ರಿ ಮುಂದುವರೆಯಲಿದೆ. ಜಾರ್ಖಂಡ್‌ನಲ್ಲಿ ಮುಕ್ತಿ ಮೋರ್ಚಾ ಜತೆಗೂಡಿಯೇ ಚುನಾವಣೆ ಎದುರಿಸುತ್ತೇವೆ ಎಂದು ಜೈರಾಮ್ ರಮೇಶ್ ಹೇಳಿದ್ದಾರೆ. ಎಲ್ಲಾ ಕಡೆ ಸಾಮಾನ್ಯ ಮೈತ್ರಿ ಸೂತ್ರ ಅನುಸರಿಸಲಾಗದು. ಯಾವ ರಾಜ್ಯದಲ್ಲಿ ಕಾಂಗ್ರೆಸ್ ಹಾಗೂ ಇತರೆ ಪಕ್ಷದ ನಾಯಕರು ಒಮ್ಮತದ ನಿರ್ಧಾರಕ್ಕೆ ಬರುತ್ತಾರೋ ಅಲ್ಲಿ ಮೈತ್ರಿ ಮಾಡಿಕೊಂಡು ಸ್ಪರ್ಧಿಸುತ್ತೇವೆ ಎಂದು ರಮೇಶ್ ತಿಳಿಸಿದ್ದಾರೆ. ಲೋಕಸಭಾ ಚುನಾವಣೆ ಬಳಿಕ ವಿಧಾನಸಭಾ ಚುನಾವಣೆಗೆ ಚರ್ಚೆ ಆರಂಭವಾಗಿದೆ. ಎನ್‌ಡಿಎ ಮೈತ್ರಿಕೂಟ-ಇಂಡಿ ಒಕ್ಕೂಟ ರಚಿಸಿಕೊಂಡು ಲೋಕಸಭೆ ಚುನಾವಣೆ ಎದುರಿಸಿದ್ದ ರಾಜಕೀಯ ಪಕ್ಷಗಳು ವಿಧಾನಸಭಾ ಚುನಾವಣೆಯಲ್ಲೂ ಮೈತ್ರಿ ತತ್ವ ಅನುಸರಿಸುತ್ತವೆಯೇ? ಎಂಬ ಕುತೂಹಲವಿದೆ.

ಅಸ್ಸಾಂ ಪ್ರವಾಹ | ತುಂಬಿ ಹರಿದ ಬ್ರಹ್ಮಪುತ್ರ ನದಿ

56 ಸಾವು, 16 ಲಕ್ಷಕ್ಕೂ ಹೆಚ್ಚು ಜನರು ಸಂತ್ರಸ್ತ

ಅಸ್ಸಾಂ: ಪ್ರತಿವರ್ಷದಂತೆ ಈ ವರ್ಷವೂ ಅಸ್ಸಾಂ ಭಾರಿ ಮಳೆ ಪ್ರವಾಹಕ್ಕೆ ತತ್ತರಿಸಿದೆ. ರಾಜ್ಯದ ಜೀವನಾಡಿ ಎಂದೇ ಕರೆಯಲ್ಪಡುವ ಬ್ರಹ್ಮಪುತ್ರ ನದಿ ತುಂಬಿ ಹರಿಯುತ್ತಿದ್ದು ಇದರ ಉಪನದಿಗಳೂ ಕೂಡ ಪ್ರವಾಹ ಸೃಷ್ಟಿಸಿವೆ. ರಾಜ್ಯದಲ್ಲಿ ಪ್ರವಾಹದ ಹೊಡೆತಕ್ಕೆ ಸಾವನ್ನಪ್ಪಿದವರ ಸಂಖ್ಯೆ 56ಕ್ಕೆ ಏರಿಕೆಯಾಗಿದ್ದು 16 ಲಕ್ಷ ಜನ ಪ್ರಕೃತಿ ವಿಕೋಪಕ್ಕೆ ಬಾಧಿತರಾಗಿದ್ದಾರೆ ಎಂದು ಅಧಿಕಾರಿಗಳು ಗುರುವಾರ ಮಾಹಿತಿ ಹಂಚಿಕೊಂಡಿದ್ದಾರೆ. ಬ್ರಹ್ಮಪುತ್ರ ಜತೆ ದಿಗಾರು ಮತ್ತು ಕೊಲ್ಲೊಂಗ್ ನದಿಗಳು ಅಪಾಯಮಟ್ಟ ಮೀರಿ ಹರಿಯುತ್ತಿದ್ದು ಕ್ಯಾಮರೂಪ್ ಜಿಲ್ಲೆಯಲ್ಲಿ ಹೈಅಲರ್ಟ್ ಘೋಷಿಸಲಾಗಿದೆ. ಬಾರ್ಪೇಟಾ, ಬಿಸ್ವನಾಥ, ಕಾಚರ್, ಚರೈಡಿಯೋ, ಚಿರಂಗ್, ದಾರಂಗ್, ಧೆಮಾಜಿ, ದುಬ್ರಿ, ದಿಬ್ರುಘರ್, ಗೋಲ್ಪಾರಾ ಸೇರಿ 29 ಜಿಲ್ಲೆಗಳಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ. ಸಿಎಂ ಹಿಮಂತ ಬಿಸ್ವಾ ಶರ್ಮಾ ಅನೇಕ ಪ್ರದೇಶಗಳಿಗೆ ಭೇಟಿ ನೀಡಿ ಪರಿಸ್ಥಿತಿ ಪರಿಶೀಲನೆ ನಡೆಸುತ್ತಿದ್ದಾರೆ. ಪ್ರವಾಹದಲ್ಲಿ ಸಿಲುಕಿರುವವರ ರಕ್ಷಣಾ ಕಾರ್ಯ ದೋಣಿ, ಹೆಲಿಕಾಪ್ಟರ್ ಮೂಲಕ ನಡೆಯುತ್ತಿದೆ.

ಕಾಜಿರಂಗ: 17 ಪ್ರಾಣಿ ಸಾವು: ಪ್ರಸಿದ್ಧ ಕಾಜಿರಂಗ ವನ್ಯಧಾಮದಲ್ಲಿ ಪ್ರವಾಹದ ನೀರು ತುಂಬಿದ್ದು ಇಲ್ಲಿಯವರೆಗೆ 17 ಪ್ರಾಣಿಗಳು ಮುಳುಗಿ ಸಾವನ್ನಪ್ಪಿವೆ. ಸುಮಾರು 72 ಪ್ರಾಣಿಗಳನ್ನು ಅರಣ್ಯ ಸಿಬ್ಬಂದಿಗಳು ರಕ್ಷಣೆ ಮಾಡಿದ್ದಾರೆ. ಭಾರಿ ಮಳೆ ಹಿನ್ನೆಲೆ ನೂರಕ್ಕೂ ಅಧಿಕ ಅರಣ್ಯ ಕ್ಯಾಂಪ್‌ಗಳು ಮುಳುಗಡೆಯಾಗಿವೆ. ಅರುಣಾಚಲ ಪ್ರದೇಶ, ಮೇಘಾಲಯ ಭಾಗದಲ್ಲಿ ಭಾರಿ ಮಳೆಯೇ ತಗ್ಗಿನಲ್ಲಿರುವ ಅಸ್ಸಾಂನಲ್ಲಿ ಪ್ರವಾಹ ಸ್ಥಿತಿ ನಿರ್ಮಾಣಕ್ಕೆ ಕಾರಣ ಎಂದು ಹೇಳಲಾಗಿದೆ.

ಟೆಂಡರ್ ಕರೆಯಲು ಕೇಂದ್ರ ಹೆದ್ದಾರಿ ಸಚಿವಾಲಯ ಅನುಮತಿ

ಎನ್‌ಎಚ್ 69ಕಾಮಗಾರಿಗೆ ಶೀಘ್ರ ಚಾಲನೆ: ಜಯಚಂದ್ರ

ಬೆಂಗಳೂರು: ರಾಷ್ಟ್ರೀಯ ಹೆದ್ದಾರಿ 69ರಲ್ಲಿ ಸಿರಾದಿಂದ ಬೈರೇನಾಹಳ್ಳಿವರೆಗೆ ಸಾವಿರ ಕೋಟಿ ರು. ವೆಚ್ಚದಲ್ಲಿ ಒಟ್ಟು 52 ಕಿಲೋಮೀಟರ್‌ಗಳ ನಾಲ್ಕು ಪಥಗಳ ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಮೋದನೆ ನೀಡಿದೆ ಎಂದು ಕರ್ನಾಟಕದ ವಿಶೇಷ ಪ್ರತಿನಿಧಿ ಟಿ.ಬಿ ಜಯಚಂದ್ರ ತಿಳಿಸಿದ್ದಾರೆ. ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಕಾಮಗಾರಿಯನ್ನು 2024-25ನೇ ಸಾಲಿನ ವಾರ್ಷಿಕ ಮಂಜೂರಾತಿ ಮಿತಿಯಲ್ಲಿ ಸೇರಿಸಿ ಅನುಮೋದನೆ ನೀಡಿದ್ದು, ಯೋಜನೆಯ ಅಂದಾಜು ವೆಚ್ಚದ ವಿವರವನ್ನು ಶೀಘ್ರವೇ ಸಚಿವಾಲಯದ ಪ್ರಧಾನ ಕಚೇರಿಗೆ ಸಲ್ಲಿಸಬೇಕು ಎಂದು ಕಾರ್ಯನಿರ್ವಾಹಕ ಎಂಜಿನಿಯರ್ ಎ.ಮೌಲಿಕ್ ಸೂಚಿಸಿದ್ದಾರೆ. ಹೆದ್ದಾರಿ ನಿರ್ಮಾಣಕ್ಕೆ ಅತಿ ಶೀಘ್ರದಲ್ಲಿ ಟೆಂಡರ್ ಕರೆದು ಮುಂದಿನ ಮೂರು ತಿಂಗಳಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು, ನಿಗದಿತ ಸಮಯದಲ್ಲಿ ನಾಲ್ಕು ಪಥದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನ ಪೂರ್ಣಗೊಳಿಸಲು ಅಗತ್ಯ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆ ಹಾಗೂ ಯೋಜನೆಗೆ ಅಗತ್ಯ ಹಣಕಾಸಿನ ನೆರವು ಸಹ ದೊರೆತಿದೆ ಎಂದರು.

ಗಡ್ಕರಿ ನೆರವು ಸ್ಮರಿಸಿದ ಟಿ.ಬಿ

ಈ ರಾಷ್ಟ್ರೀಯ ಹೆದ್ದಾರಿ ಪೂರ್ಣಗೊಂಡ ನಂತರ ಸಿರಾದಿಂದ ರಾಜಧಾನಿ ಬೆಂಗಳೂರು ಹಾಗೂ ಅಂತಾರಾಷ್ಟ್ರೀಯ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಅತ್ಯಂತ ಕಡಿಮೆ ಸಮಯದಲ್ಲಿ ಪ್ರಯಾಣಿಕರು ಸಂಚರಿಸಬಹುದು ಹಾಗೂ ಸರಕು ಸಾಗಾಣೆ ಮಾಡಬಹುದು ಎಂದು ತಿಳಿಸಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರದಲ್ಲಿ ಕೇಂದ್ರ ರಸ್ತೆ ಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಈ ಯೋಜನೆಗೆ ತುಂಬಾ ಸಹಕಾರ ಕೊಟ್ಟಿದ್ದು, ನಾಲ್ಕೈದು ಬಾರಿ ಭೇಟಿ ಮಾಡಿ ಈ ಯೋಜನೆ ಬಗ್ಗೆ ಚರ್ಚಿಸಿ ಈ ಪ್ರತಿಷ್ಠಿತ ರಸ್ತೆಗೆ ಅಗತ್ಯ ಹಣಕಾಸು ನೆರವು ಹಾಗೂ ಅನುಮತಿಯನ್ನು ತ್ವರಿತವಾಗಿ ಪಡೆದಿರುವುದಾಗಿ ಟಿ.ಬಿ ಜಯಚಂದ್ರ ಅವರು ತಿಳಿಸಿದ್ದಾರೆ.

ವಿವೇಕಾನಂದರನ್ನು ಬಿಜೆಪಿ ಬಳಸಿ ಬಿಸಾಡಿದೆ: ಆಪ್ ಟೀಕೆ

ಬೆಂಗಳೂರು: ಸ್ವಾಮಿ ವಿವೇಕಾನಂದರ ಪುಣ್ಯಸ್ಮರಣೆಯ ಅಂಗವಾಗಿ ಇರಿಸಲಾಗಿದ್ದ ಫೋಟೊವನ್ನು ಯಾಕೆ ಇಟ್ಟಿದ್ದೀರಿ ಎಂದು ಪ್ರಶ್ನಿಸಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾ ಮೋಹನ್ ದಾಸ್ ಅಗ್ರವಾಲ್, ಬಿಜೆಪಿ ಪಾಲಿಗೆ ವಿವೇಕಾನಂದರು ಬಳಸಿ ಬಿಸಾಡಲ್ಪಟ್ಟವರು ಎಂಬುದನ್ನು ಸಾಬೀತುಪಡಿಸಿದ್ದಾರೆ ಎಂದು ಆಮ್ ಆದ್ಮಿ ಪಾರ್ಟಿ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತದ ಸಂಸ್ಕೃತಿಯನ್ನು ವಿಶ್ವಮಟ್ಟದಲ್ಲಿ ಪಸರಿಸಿದ ವೀರ ಸನ್ಯಾಸಿ, ನೈಜ ಹಿಂದೂ, ಅಪ್ರತಿಮ ವಾಗ್ಮಿ, ಅನುಪಮ ಮಾನವತಾವಾದಿ, ಯುವಪ್ರೇರಕ, ಸಿಡಿಲ ಸಂತ ಸ್ವಾಮಿ ವಿವೇಕಾನಂದರು ಹಾಕಿಕೊಟ್ಟಿರುವ ಧರ್ಮ ಮಾರ್ಗದಲ್ಲಿ ಎಂದೂ ಹೆಜ್ಜೆ ಇರಿಸದ ಬಿಜೆಪಿ, ಆರೆಸ್ಸೆಸ್ ನವರು ಅವರ ಹೆಸರನ್ನು ದುರ್ಬಳಕೆ ಮಾಡಿಕೊಂಡರು.

ಬಿಜೆಪಿ ಬೆಂಬಲಿಸುತ್ತಿರುವ ಹೆಚ್ಚಿನ ಯುವಕರು ಸ್ವಾಮಿ ವಿವೇಕಾನಂದರ ಕಾರಣಕ್ಕಾಗಿ ಬೆಂಬಲಿಸುತ್ತಿರುವವರಾಗಿದ್ದಾರೆ. ಆದರೆ ವಿವೇಕಾನಂದರ ಹೆಸರಲ್ಲಿ ಅಷ್ಟೂ ಯುವಕರನ್ನು ವಂಚಿಸಿದ್ದಾರೆ. ಹಿಂಸೆ, ದ್ವೇಷ, ವೈರತ್ವವನ್ನೇ ತುಂಬಿಕೊಂಡಿರುವ ಬಿಜೆಪಿ, ಆರೆಸ್ಸೆಸ್ ನವರು ಎಂದೂ ವಿವೇಕಾನಂದರ ಪಥದಲ್ಲಿ ಹೆಜ್ಜೆ ಇರಿಸಿಲ್ಲ ಎಂದು ಜಗದೀಶ್ ಸದಂ ವಾಗ್ದಾಳಿ ನಡೆಸಿದರು.

ವಿಶ್ವವಾಣಿ ಆರಾಮ

@vishwavaninews

ಬೆಂಗಳೂರು
ಶುಕ್ರವಾರ
05 | 07 | 2024

ಅನುದಿನವೂ ವಿರಾಮಕ್ಕೆ ಒಂದು ನೆಪ

ಬಿ ಪಾಸಿಟಿವ್

ಶ್ರಮವಿಲ್ಲದೆ ಫಲ ಸಿಗದು

ಚಿಕ್ಕ ವಯಸ್ಸಿನಿಂದ ದೊಡ್ಡವರಾಗುವ ತನಕ ಅಪ್ಪ ಅಮ್ಮನ ಹೊಣೆ ಮಕ್ಕಳು. ಆದರೆ, ಸ್ವಾತಂತ್ರ್ಯರಾಗಿ ಬದುಕುವ ಹಂತಕ್ಕೆ ಬಂದ ಮೇಲೆ ಮಕ್ಕಳೇ ಸ್ವತಃ ಬದುಕು ಕಟ್ಟಿಕೊಳ್ಳುವುದು ಸ್ವಾವಲಂಬನೆ. ಕೆಲಸ ಹುಡುಕಬೇಕು, ತಮಗೆ ಒಪ್ಪುವ ಕೆಲಸ ಸಿಗುವುದೇ ದೊಡ್ಡ ಸಾಧನೆ. ಸಮಾಜದ ಮುಂದೆ ಗೌರವಯುತವಾಗಿ ಮತ್ತು ಸ್ವಾವಲಂಬಿಯಾಗಿ ಬದುಕಲು ಕೆಲಸಬೇಕು. ಆ ಕೆಲಸಕ್ಕಾಗಿ ಪಡುವ ಪಾಡು ಅವರು ಎದುರಿಸುವ ಸಮಸ್ಯೆಗಳು ಸವಾಲುಗಳು ಸಾಕಷ್ಟು. ಶಿಫಾರಸ್ಸಿನ ಹಾವಳಿ ಮತ್ತು ಅನುಭವದ ಕೊರತೆ.



ಸ್ವಾವಲಂಬನೆಯಾಗಿ ಬದುಕಲು ಹಪಹಪಿಸುವ ನಿರುದ್ಯೋಗಿಗಳ ದೊಡ್ಡ ಸಮಸ್ಯೆಯೇ ಕೆಲಸ. ಬದುಕಿನ ಪರಿಸ್ಥಿತಿಗೆ ರಾಜಿಮಾಡಿಕೊಂಡು ಸಿಕ್ಕಿದ ಕೆಲಸದಲ್ಲೂ ಭಾವ ಪ್ರಾಪ್ತಿಯಾಗದೇ, ಅಂದುಕೊಂಡಂತೆ ಕೆಲಸ ಸಿಕ್ಕಿಲ್ಲ ಎನ್ನುವ ಭಾವ. ಸಿಕ್ಕಿದ ಕೆಲಸದಲ್ಲಿ ಬದುಕು ಸಾಗಿದರೆ ಸಾಕು, ಅದೇ ಬಾಳಿಗೆ ಪಂಚಾಮೃತ ಎಂದು ಸ್ವೀಕರಿಸುವ ಅದೆಷ್ಟೋ ನೊಂದ ಮನಸುಗಳು. ಅಪೂರ್ಣ ಶಿಕ್ಷಣದ ಕೊರತೆ ಸರಿಯಾಗಿ ಬದುಕು ಕಟ್ಟಿಕೊಳ್ಳಲು ಆಗದೆ ಪರದಾಟ ಪಡುವ ಒಂದಷ್ಟು ಮಂದಿ. ನಮಗೆ ಹೀಗೆ ಬೇಕು ಹಾಗೆ ಬೇಕು ಎಂದು ಕುಳಿತರೆ ಏನನ್ನು ಸಾಧಿಸಲು ಸಾಧ್ಯವಾಗದು. ಸತತವಾಗಿ ಪಡುವ ಪ್ರಯತ್ನವು ನಾವು ಅಂದುಕೊಂಡ ದಾರಿಗೆ ಕರೆದೊಯ್ಯುತ್ತದೆ.. ಕಷ್ಟವೇ ಆಗಲಿ ಸ್ವೀಕರಿಸಿ ಸವಾಲಾಗಿ ತೆಗೆದುಕೊಂಡಾಗಲೇ ಯಶಸ್ಸಿನ ಗುರಿ ತಲುಪಲು ಸಾಧ್ಯ.

ಅವಕಾಶಗಳು ನಮ್ಮನ್ನು ಹುಡುಕಿಕೊಂಡು ಬರುವಂತದಲ್ಲ. ನಾವೇ ಅವಕಾಶಗಳ ಬೆನ್ನತ್ತಬೇಕು. ಶ್ರಮವಿಲ್ಲದೆ ಫಲ ಸಿಗದು. ಯಶಸ್ಸು ಶ್ರಮದ ಜತೆಗೆ ಇರುವ ಬೆಟ್ಟ. ಆ ಬೆಟ್ಟವನ್ನು ಹಠ ಛಲ ಪರಿಶ್ರಮದಿಂದ ಹತ್ತಿದಾಗಲೇ ಉನ್ನತಿ ಸಿಗುವುದು. ಪರಿಶ್ರಮದ ತ್ಯಾಗವೇ ಯಶಸ್ಸಿನ ಸುಂದರ ಹೂಗಳಾಗಿ ಅರಳುವುದು ಮತ್ತು ಬದುಕಿಗೆ ಬಣ್ಣ ತುಂಬುವುದು.

• ವಾಣಿ ಮೈಸೂರು

ಲವ್‌ಎವೆರಿ ಬಾಡಿ

ಅದೇನೋ ಗೊತ್ತಿಲ್ಲ, ಇದ್ದಕ್ಕಿದ್ದಂತೆ ಕೋಪ ಆರಂಭವಾಗುತ್ತದೆ. ಯಾಕೋ ಸಮಾಧಾನವೇ ಇಲ್ಲ. ಎಲ್ಲ ಕೆಲಸದ ಮೇಲೂ ನಿರಾಸಕ್ತಿ. ಕಾಡುವ ಒಂಟಿತನ, ಯಾರದ್ದಾದರೂ ಮಡಿಲಲ್ಲಿ ತಲೆಯಿಟ್ಟು ಮಲಗುವ ಉತ್ಕಟ ಬಯಕೆ. ನಿಜ, ಅದೊಂಥರಾ ಕಿರಿಕಿರಿಯ ಕಾಲ. ಮಹಿಳೆಯರು ತಿಂಗಳಿಗೊಮ್ಮೆ ಅನುಭವಿಸಲೇಬೇಕಾದ ಆ ಮೂರರಿಂದ ಐದು ದಿನಗಳು ಒಂದರ್ಥದಲ್ಲಿ ಅವರ ಪಾಲಿಗೆ ಅಗ್ನಿಪರೀಕ್ಷೆ. ಋತುಮತಿಯಾಗುವುದು ತಾಯ್ತನದ ಅರ್ಹತೆ ಪಡೆದಂತೆ. ಆದರೆ ಆ ದಿನಗಳಲ್ಲಿ ಮಹಿಳೆಯರು ಅನುಭವಿಸುವ ಮಾನಸಿಕ ಯಾತನೆ ಮಾತ್ರ ವರ್ಣಿಸಲಸಾಧ್ಯವಾದುದು. ಋತುಸ್ರಾವದ ಸಮಯದಲ್ಲಿ ದೇಹದಲ್ಲಿ ಹಾರ್ಮೋನುಗಳು ವ್ಯತ್ಯಯವಾಗುವುದರಿಂದ ಈ ಸಮಸ್ಯೆಯಾಗುತ್ತದೆ ಎಂಬುದು ವೈದ್ಯಕೀಯವಾಗಿಯೂ ಸಾಬೀತಾಗಿದೆ. ಆದರೆ ಮೂರ್ನಾಲ್ಕು ದಿನಗಳ ಈ ಖಿನ್ನತೆ ಕೆಲವೊಮ್ಮೆ ಮಹಿಳೆಯ ಬದುಕಿನ ಮೇಲೆಯೇ ಪರಿಣಾಮ ಬೀರಬಹುದು.

• ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ದೂರವಿರುವುದು ಒಳ್ಳೆಯದು!

ತೀರಾ ಮನುಷ್ಯರ ಒಡನಾಟವನ್ನೇ ವ್ಯವಹಾರವನ್ನಾಗಿಸಿಕೊಂಡ ಕೆಲಸ ಮಾಡುವ ಜನರು ಯಾರನ್ನೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಆದರೆ ಮೊದಲೇ ಸೂಕ್ಷ್ಮ ಮನಸ್ಥಿತಿ ಇದ್ದು, ಕೆಲವೇ ಕೆಲವು ಜನರ ಗೆಳೆಯರ ಬಳಗ ಹೊಂದಿರುವವರಾದರೆ ಅವರ ಮಾನಸಿಕ ಸ್ಥಿತಿ ಮೇಲೆ ಖಂಡಿತವಾಗಿಯೂ ಪ್ರಭಾವ ಬೀರುತ್ತದೆ.



ನಾವು ಒಬ್ಬರೇ ಇರಲು ಸಾಧ್ಯವೇ? ಹೀಗೊಂದು ಯೋಚನೆಯೇ ಹುಚ್ಚುತನ ಎನಿಸುತ್ತದೆ. ಹುಟ್ಟಿದಾರಭ್ಯ ನಾವು ವಿಭಿನ್ನ ಸ್ತರದ, ವಯೋಮಾನದ, ಮನಸ್ಥಿತಿಯ ಜನರನ್ನು ಸಂಧಿಸುತ್ತಲೇ ಇರುತ್ತೇವೆ, ಮತ್ತದು ಅಗತ್ಯವೂ ಹೌದು. ಆದರೆ ಎಲ್ಲರನ್ನೂ ನಮ್ಮ ಹತ್ತಿರ ಸೇರಿಸಿಕೊಳ್ಳಲು ಸಾಧ್ಯವಿಲ್ಲ. ಅದಕ್ಕೂ ಕೆಲವು ಮಿತಿಗಳಿರುತ್ತವೆ, ಪರಿಧಿ ಇರುತ್ತದೆ. ಅಳೆದು-ತೂಗಿ ಆಯ್ಕೆ ಮಾಡಿಕೊಂಡು ನಮ್ಮದೇ ಜನರ ಜೊತೆ ಬದುಕುತ್ತೇವೆ ಎಂದುಕೊಂಡಮೇಲೂ ನಾವೇನೋ ಸರಿಯಾಗಿಲ್ಲ, ನಮ್ಮ ಮನಸ್ಥಿತಿ ಸರಿಯಿಲ್ಲ ಎನ್ನುವ ಗುಮಾನಿ ಕಾಡಿದರೆ ನೀವು ವಿಷವರ್ತುಲದಲ್ಲಿ ಸಿಕ್ಕಿಕೊಂಡಿರಬಹುದು!

ನಮಗೇ ಗೊತ್ತಿಲ್ಲದಂತೆ ಕೆಲವು ನಕಾರಾತ್ಮಕ ವಿಷಯಗಳನ್ನೇ ಹರಡುವ ಜನರು ನಮ್ಮ ಸುತ್ತ ಮುತ್ತ ಇರುತ್ತಾರೆ. ಇವರ ಮಾತುಗಳನ್ನು ಕೇಳುತ್ತಿದ್ದರೆ ಏನೂ ಸರಿಯಿಲ್ಲ ಎನಿಸುತ್ತಿರುತ್ತದೆ. ಜಗತ್ತಿನ ಕಷ್ಟವೆಲ್ಲಾ ಇವರೊಬ್ಬರೇ ಅನುಭವಿಸುತ್ತಿದ್ದಾರೆ ಎನ್ನುವ ಗುಮಾನಿ ಕಾಡುತ್ತದೆ. ಎಷ್ಟೇ ಒಳ್ಳೆಯದು ಹುಡುಕಿದರೂ ಇವರ ಕೊಂಕು ಮುಗಿಯುವುದಿಲ್ಲ. ಇವರ ಬಾಯಲ್ಲಿ ಒಳ್ಳೆಯದೇ ಬರಲ್ವಾ? ಅವರ್ಯಾಕೆ ಯಾವಾಗ್ಲೂ ಅಪಶಕುನದ ಮಾತೇ ಆಡೋದು ಅಂತೆಲ್ಲಾ ನೀವು ಯಾರ ಬಗ್ಗೆಯಾದರೂ ಯೋಚಿಸಿದ್ದೀರಾ? ಹಾಗಾದರೆ ಈ ಪಟ್ಟಿಯೆಯಲ್ಲಿರುವವರು ನಿಮ್ಮ ಜತೆಯೂ ಇದ್ದಾರಾ? ಗಮನಿಸಿ:

ಶ್ವೇತ ವರ್ಣ
• ಶ್ವೇತಾ ಭಿಡೆ

ಗೆಳೆಯರು: ನಿಮ್ಮದೇ ಬಾಲ್ಯದ ಗೆಳೆಯರು, ಮೊದಲಿನಿಂದ ಗೊತ್ತಿರುವವರು ಹೀಗೆ ಇದ್ದಾಗ ನಿಮಗೆ ಅವರನ್ನು ಸುಲಭವಾಗಿ ನಿರ್ವಹಿಸಲು ಸಾಧ್ಯವಾಗದೇ ಹೋಗಬಹುದು. ಆದರೆ ನೆನಪಿರಲಿ, ಇಂಥವರ ಪ್ರಭಾವ ಸುಲಭವಾಗಿ ನಿಮ್ಮ ನಿದ್ರೆ ಕಸಿದುಕೊಳ್ಳುತ್ತದೆ.

ಹತ್ತಿರದ ಸಂಬಂಧಿಗಳು: ತೀರಾ ಹತ್ತಿರದ ಸಂಬಂಧ, ಅಥವಾ ರಕ್ತ ಸಂಬಂಧಗಳಲ್ಲಿ ಸಹಾ ಈ ರೀತಿಯ ಜನರಿರುತ್ತಾರೆ. ಅವರಿಗೆ ಒಳ್ಳೆಯದು ಕಾಣದು. ಬರೀ ಕೊಂಕು, ಕೆಟ್ಟದ್ದು ಎತ್ತಿ ಆಡಿ ಖುಷಿ ಪಡುತ್ತಾರೆ.

ನಿಮ್ಮ ಸಂಗಾತಿ ಅಥವಾ ಅವರ ಗೆಳೆಯರು: ಕೆಲವೊಮ್ಮೆ ನಿಮ್ಮ ಸ್ವಂತ ಆಯ್ಕೆ ತಪ್ಪಾಗುವ ಸಾಧ್ಯತೆ ಇರುತ್ತದೆ. ಮೊದಲೆಲ್ಲಾ ಸರಿ ಎನಿಸಿದ ಸಂಗಾತಿ ಕ್ರಮೇಣ ಮಾತು ಮಾತಿಗೂ ನಕಾರಾತ್ಮಕತೆಯನ್ನೇ ಹರಡುತ್ತಿರಬಹುದು ಅಥವಾ ಅವರ ಹತ್ತಿರದ ಗೆಳೆಯರು ಅಥವಾ ಸಂಬಂಧಿಗಳು ನಿಮ್ಮ ಬದುಕನ್ನು ವ್ಯತ್ಯಯಗೊಳಿಸುತ್ತಿರಬಹುದು.

ಈ ರೀತಿ ನೆಗಟಿವ್ ಮಾತಾಡುತ್ತಲೇ ಇರುವವರು ಹೇಗಿರ್ತಾರೆ ಗೊತ್ತಾ?

ಸ್ವಪ್ರಶಂಸೆ ಮಾಡಿಕೊಳ್ಳುವವರು: ಮಾತೆತ್ತಿದರೆ ಸಾಕು, ಇವರ ಮಾತುಗಳು ಇವರ ಸುತ್ತಲೇ ಸುತ್ತುತ್ತಿರುತ್ತದೆ. ಬೇರೆಯವರಿಗೆ ಮಾತನಾಡಲೂ ಬಿಡದೆ ಮಾತಾಡುತ್ತಲೇ ಉಳಿಯುತ್ತಾರೆ. ಇದರ ಜೊತೆಗೆ ನಿಮ್ಮನ್ನು ಹೀಗಳೆದು, ನೀವಿನ್ನೂ ಅವರ ಮಟ್ಟಕ್ಕೆ ಇಲ್ಲ ಎನ್ನುತ್ತಲೇ ನಿಮ್ಮನ್ನು ಖಿನ್ನತೆಗೆ ದೂಡುತ್ತಾರೆ.

ಸುಳ್ಳೇ ನಮ್ಮನೆ ದೇವರು: ಕೆಲವರ ಸುಳ್ಳು ಹೇಗಿರುತ್ತದೆ



ಎಂದರೆ ನೀವದನ್ನು ನಂಬದೆ ಇರಲಾರಿರಿ. ಇರಲಾರದ ವಿಷಯಗಳನ್ನು ಸೃಷ್ಟಿಸಿ, ಇರುವ ನೆಮ್ಮದಿ ಹಾಳುಮಾಡಲು ಇವರ ಬಳಿ ಬೇಕಷ್ಟು ಸರಕು ಇರುತ್ತವೆ.

ನನ್ನ ಬಿಟ್ಟರೆ ಬೇರೇನೂ ಇಲ್ಲ: ನನ್ನ ಬಿಟ್ಟರೆ ಬೇರೇನೂ ಇಲ್ಲ ಹೀಗೊಂದು ಭ್ರಮೆಯ ಬದುಕನ್ನು ಬದುಕುತ್ತಲೇ ತಮ್ಮ ಸುತ್ತ ಅದನ್ನೇ ಹೇರಿಕೆ ಮಾಡುತ್ತಲೇ ಇರುತ್ತಾರೆ. ಅದಲ್ಲದೇ ಅದಕ್ಕಾಗಿ ಬೇರೆಯವರ ಸಂತೋಷವನ್ನು ಸುಲಭವಾಗಿ ಹಾಳುಮಾಡುತ್ತಾರೆ.

ಭಾವನಾತ್ಮಕವಾಗಿ ಸೆಳೆಯುವವರು: ಇವರಂತೂ ನೀವು ದಿನನಿತ್ಯ ನೋಡುತ್ತಲೇ ಇರುತ್ತೀರಿ. ಕೆಲವರ ನಾಟಕೀಯತೆ, ನಕಾರಾತ್ಮಕತೆ ಎಷ್ಟು ಇರುತ್ತದೆ ಎಂದರೆ, ಅವರ ಪ್ರತೀ ಮಾತಿನಲ್ಲೂ, ವರ್ತನೆಗಳಲ್ಲೂ ನೀವು ಅದನ್ನೇ ನೋಡುತ್ತೀರಿ. ಒಂದು ರೀತಿಯ ಖಿನ್ನತೆ, ಅಸಮಾಧಾನ, ಶುಷ್ಕತೆ ಬಿಟ್ಟು ಬೇರೇನೂ ಇಲ್ಲವೇನೋ, ಪ್ರಪಂಚದ ತುಂಬಾ ಬರೀ ಕೆಟ್ಟದ್ದು, ಬೇಸರ, ದುಃಖ ತುಂಬಿದೆಯೇನೋ ಎನ್ನುವಂತೆ ಮಾಡುವುದು ಇವರ ಅಭ್ಯಾಸ.

ಇಂಥವರಿಂದ ನಮಗೇನು ಸಮಸ್ಯೆ?

ತೀರಾ ಮನುಷ್ಯರ ಒಡನಾಟವನ್ನೇ ವ್ಯವಹಾರವನ್ನಾಗಿಸಿಕೊಂಡ ಕೆಲಸ ಮಾಡುವ ಜನರು ಯಾರನ್ನೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಆದರೆ ಮೊದಲೇ ಸೂಕ್ಷ್ಮ ಮನಸ್ಥಿತಿ ಇದ್ದು, ಕೆಲವೇ ಕೆಲವು ಜನರ ಗೆಳೆಯರ ಬಳಗ ಹೊಂದಿರುವವರಾದರೆ ಅವರ ಮಾನಸಿಕ ಸ್ಥಿತಿ ಮೇಲೆ ಖಂಡಿತವಾಗಿಯೂ ಪ್ರಭಾವ ಬೀರುತ್ತದೆ. ಉದಾಹರಣೆಗೆ ನೆರೆಮನೆಯಾಕೆ ಯಾವಾಗಲೂ ತನ್ನ ಕಷ್ಟಗಳನ್ನೇ ಹೇಳಿಕೊಂಡು ಎಲ್ಲವನ್ನೂ ಸಮಸ್ಯೆ ಎಂದೇ ಬಿಂಬಿಸುತ್ತಿದ್ದಾರೆ ಎಂದರೆ ಮೊದಲು ನಿಮಗೇನೂ ಅನ್ನಿಸದೆ ಇರಬಹುದು, ಆದರೆ ಕ್ರಮೇಣ ಅವರ ಮಾತುಗಳು ನಿಮ್ಮ ಮೇಲೂ ಪ್ರಭಾವ ಬೀರಿ, ನಿಮ್ಮ ವರ್ತನೆಗಳಲ್ಲಿ, ಆಲೋಚನಾ ಸರಣಿಯಲ್ಲಿ ಗೊತ್ತಿಲ್ಲದೇ ಅವರ ಯೋಚನಾ ಸರಣಿ ಇಣುಕಲು

ಆರಂಭಿಸುತ್ತದೆ. ಇದರಿಂದ ನಿಮ್ಮ ಮಾನಸಿಕ ನೆಮ್ಮದಿಯಷ್ಟೇ ಅಲ್ಲದೆ, ನಿಮ್ಮ ಸಂಗಾತಿ, ಕುಟುಂಬ ಹೀಗೆ ಎಲ್ಲರ ಮೇಲೂ ಪ್ರಭಾವವಾಗುವುದು ನಿಶ್ಚಿತ.

ದೂರವೇ ಇರಿ, ಒಳ್ಳೆಯದು!

ಎಲ್ಲವೂ ಪ್ರಾರಂಭದಲ್ಲೇ ಅರಿವಿಗೆ ಬರದೇ ಹೋಗಬಹುದು. ಕ್ರಮೇಣ ನಿಮಗೆ ಇಂಥವರ ಬಗ್ಗೆ ತಿಳಿಯುತ್ತಾ ಹೋದಂತೆ ಹೊರಬರಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳಿ.

ತಿದ್ದಲು ಪ್ರಯತ್ನಿಸುವುದು ಒಳ್ಳೆಯದೇ, ಆದರೆ ಕೆಲವರು ಸುಲಭಕ್ಕೆ ಸುಧಾರಿಸುವುದಿಲ್ಲ. ಮೊದಲು ನಿಧಾನವಾಗಿ ಅರ್ಥ ಮಾಡಿಸಲು ನೋಡಿ, ಕ್ರಮೇಣ ಕಟುವಾಗಿ ಹೇಳಿ ನೋಡಿ. ಅದಾಗದೇ ಹೋದಾಗ ಹೊರಗೆ ಬರಲೇ ಬೇಕಾಗುತ್ತದೆ.

ಕಳೆದುಕೊಳ್ಳುವ ಭಯ ನಿಮಗೆ ಮಾತ್ರವಲ್ಲ, ಅವರಿಗೂ ಇರಲಿ. ಕಳೆದುಕೊಳ್ಳಲೇಬಾರದು ಎನ್ನುವ ಒಂದೇ ಕಾರಣಕ್ಕೆ ಹೊಂದಾಣಿಕೆಯ ಸೂತ್ರಕ್ಕೆ ಕಟ್ಟುಬೀಳಬೇಡಿ. ನಿಮ್ಮ ನೆಮ್ಮದಿ ನಿಮಗೆ ಮುಖ್ಯವಾಗಿರಲಿ.

ನಿಮ್ಮ ಮಾನಸಿಕ ಸ್ಥಿತಿಯನ್ನು ಯಾರದ್ದೂ ಕೈಗೆ ಕೊಟ್ಟು ಕೀಲು ಕೊಟ್ಟ ಗೊಂಬೆಗಳಂತೆ ಬದುಕುವ ಅಗತ್ಯವಿಲ್ಲ ಎನ್ನುವುದನ್ನು ಮೊದಲು ನಿಮಗೆ ನೀವು ಮನವರಿಕೆ ಮಾಡಿಕೊಳ್ಳಿ. ಮತ್ತೆಲ್ಲವೂ ಸುಲಭ!

ಬೆಂಗಳೂರಿನ ಕತೆಗಳು

• ನಿಂಗಮ್ಮ ಭಾವಿಕಟ್ಟಿ ಹುನಗುಂದ

ಅರಿವು

ಅವನಿಗೆ ಸದಾ ದುಡಿಯುವ ಅಪ್ಪನೆಂದರೆ ಅಷ್ಟಕಷ್ಟೇ. ತಿಳಿ ಹೇಳುವ, ಊಟಕ್ಕೆ ಒತ್ತಾಯಿಸುವ ಅವನೆಂದರೂ ಅಷ್ಟೇ. ಈಗ ದೊಡ್ಡ ಊರು, ದೊಡ್ಡ ಶಾಲೆ, ಹಾಸ್ಟೆಲ್ ಊಟ- ಪರದಾಟದ ಮಧ್ಯೆ ಅವ್ವ ಅಪ್ಪನ ನೆನಪು ಕಾಡತೊಡಗಿದವು. ಅಪ್ಪನ ಬೈಗುಳದ ಹಿಂದಿನ ಕಾಳಜಿ, ಅವ್ವನ ಒತ್ತಾಯದ ಹಿಂದಿನ ಪ್ರೀತಿಯ ಸ್ಮರಿಸಿಕೊಂಡೇ ಓದಿದ, ಬರೆದ, ಕಾಲೇಜಿಗೆ ಮೊದಲಿಗನಾದ. ಸನ್ಮಾನದ ಆ ದಿನ ನನ್ನ ಓದಿನ ಹಿಂದಿನ ಶ್ರಮ- ಸ್ಫೂರ್ತಿ, ಅಪ್ಪ ಅವ್ವ ಎಂದು ಬಿಟ್ಟ. ಅತ್ತು ಬಿಟ್ಟ. ಅದೇ ಕಣ್ಣೀರ ಹೊಳೆಯಲ್ಲಿ ತೇಲಿ ಬಂದು ಮಗನ ಅಪ್ಪಿದರು ಅಪ್ಪ, ಅವ್ವ. ಸಭೆಯೆಲ್ಲಾ ಕಣ್ತುಂಬಿ ಕರತಾಡನ.

★★★

ಸ್ವಾರ್ಥಿಗಳು

ಅವನಿಗೆ ಇಬ್ಬರು ಗಂಡು ಮಕ್ಕಳು ಅಮ್ಮ ಹೋಗಿ ಪುಣ್ಯವಾದಳು. ಅಪ್ಪನಿಗೆ ಪಾರ್ಶ್ವವಾಯು. ವೀಲ್ ಚೇರ್ ಗತಿ ಆಯ್ತು . ಸೊಸೆಯಂದಿರ ಪ್ರೀತಿ ಕಾಳಜಿಗೆ ಆತ ಒಳಗೇ ಹರ್ಷಿಸುತ್ತಿದ್ದ, ಅಭಿನಂದಿಸುತ್ತಿದ್ದ. ಮಕ್ಕಳು ಮುಖ ನೋಡಿ ನಕ್ಕರವರು. ಕಾರಣ ತಿಳಿಯದೇ ಕಳವಳಗೊಂಡ.

'ನಿಮ್ಮಂತಹ ಮಕ್ಕಳು ನನ್ನ ಪುಣ್ಯ' ಎದೆ ತುಂಬಿ ಹೇಳಿದ. 'ಹಾಗೆ ಯಾಕೆ ಹೇಳ್ತಿಯ ಬಿಡು, ಅಪ್ಪಾ ಚೆಕ್‌ಗೆ ನಿನ್ನದೇ ಸಹಿ ಬೇಕಲ್ಲವೇ? ಪುಣ್ಯ ನಮ್ಮದು' ನಾ ಪೆದ್ದ ಎಂದು ವೃದ್ಧ ತಟಸ್ಥನಾದ, ಮರುಗಿದ. ಬಣ್ಣ ಬಯಲಾದಾಗ ಮರಣಿಸಿದ. ಸ್ವಾರ್ಥಿಗಳಿಗೀಗ ಪರದಾಟ.

★★★

ಯಾರು ಬಡವರು?

ನಾಡಿದ್ದು ಆ ಬಂಗಲೆಯ ರಾಜಕುಮಾರನ ಹುಟ್ಟುಹಬ್ಬ. ಒಂದು ಅದ್ದೂರಿ ಸಮಾರಂಭ. ಕೆಲಸದವರಿಗೆ ಎಂದು ಸಾದಾ ಬಟ್ಟೆಯ ಗಂಟು ಬಂತು. ಆ ದಿನ ಹೊಸ ಬಗೆಯ ಉಡುಗೊರೆಗಳ ವಿನಿಮಯ ಹೊಸ ರಂಗು ಹೊಸ ನಗು, ಸಡಗರ ಹೊಸ ಬೆಳಕು. ಮೈಮುರಿದು ಕಣ್ತೆರೆದಾಗ ಹಾಸಿಗೆಯ ಪಕ್ಕ ಪುಟ್ಟ ಸುಂದರ ಎರಡು ಉಡುಗೊರೆಗಳು. ಆತುರದಿಂದ ಪ್ಯಾಕ್ ಬಿಚ್ಚಿ ನೋಡಿದರೆ ಒಂದು ಗಡಿಯಾರ ಮತ್ತು ಕನ್ನಡಿ. ಹಿಂದಿನ ದಿನದ ಕಾರ್ಯಕ್ರಮಕ್ಕೆ ಅಡುಗೆಯವರ ಉಡುಗೊರೆ.

ಓಡುವ ಕಾಲದ ಅರಿವು ಮಾಡುವ ಸನ್ನೆ. ದಿನವೂ ತನ್ನ ತಾನು ಕಾಣುತ್ತಲೇ ಕಾಣದಂತಾಗುವ ಬದಲಾವಣೆ ಕಾಣಿಸುವ ಕನ್ನಡಿ. ಇಂಥ ಅರಿವಿರುವ ಅವರು ಸಿರಿವಂತರು ನಾವು ಕೊಟ್ಟಿದ್ದು ಸಾದಾ ಬಟ್ಟೆ ಬಡವರು ನಾವಾ? ಅವರಾ? ಆತ ಜಿಜ್ಞಾಸೆಗೊಳಗಾದ.

ಪದಬಂಧ



ಎಡದಿಂದ ಬಲಕ್ಕೆ:

1. ಬಿಡಿಸಲಾಗದಷ್ಟು ಜಟಿಲವಾದ ಸಮಸ್ಯೆ (3)
3. ಅತಿಯಾದ ಕಷ್ಟ ಅಥವಾ ನೋವು (3)
5. ಕಣ್ಣಿಗೆ ಹಚ್ಚುವ ಕಾಡಿಗೆ (3)
7. ಕೆನ್ನೆಗೆ ಬಾರಿಸಿದ ಏಟು (4)
9. ಮೋಡಿ ಮಾಡಿದ ಯಕ್ಷಿಣಿಗಾರ (4)
11. ಸರಿಯಾಗಿ ಮಾಡಿದ ಸಿದ್ಧತೆ (3)
13. ಆಹಾರ ಪದಾರ್ಥ ಹುರಿಯುವ ಅಥವಾ ಬೇಯಿಸುವ ಓಡು (3)
14. ನಡುಕದ ಪರ್ಯಾಯ ಪದ (3)
16. ಅಸ್ತವ್ಯಸ್ತವಾದ ನೀರು (3)
18. ನುಂಗು ಅಥವಾ ಲಪಟಾಯಿಸು ಎಂದರ್ಥ (4)
20. ನಮ್ಮ ನಾಡಿನವನು, ನಮ್ಮ ಭಾಷೆ ಮಾತನಾಡುವವನು (4)
22. ಅಂದಗೇಡಿತನ (3)
24. ಕಪ್ಪನೆಯ ಮೋಡ (3)
25. ವಿಷಯವೊಂದರ ಸಾರ (3)

ಎಡದಿಂದ ಬಲಕ್ಕೆ:

1. ಚರ್ಮದಲ್ಲಿ ಉಂಟಾದ ನವೆ (3)
2. ಮತ್ತೊಂದು ಆಡು (2)
4. ಮುಖ ನೋಡಿಕೊಳ್ಳಲು ಬೇಕಾದ ದರ್ಪಣ (3)
5. ಮೂರಕ್ಷರದ ಸಹಿ (3)
6. ನರಿಗೂ ಕೇಳಿಸಿತೇ ಈ ಚರ್ಮದ ವಾದ್ಯ (3)
8. ಪಣತೊಟ್ಟು ಹೋದದ್ದು ನಗರ (3)
10. ಮನವಿದ್ದರಷ್ಟೇ ಲಕ್ಷ್ಯ (3)
12. ಸಹಾಯ ಬೇಡುವವನು (3)
13. ಕಷ್ಟ ಅಥವಾ ತೊಂದರೆ (3)
15. ಗಡಿಯಲ್ಲಿ ಕಟ್ಟಿಕೊಂಡ ರುಮಾಲು (3)
16. ಉಸಿರು ಕಟ್ಟಿಸಿದ ಹೊಯಿಗೆ (3)
17. ಗೆದ್ದವರಿಗೆ ಸಿಗುವ ಬಿಲ್ಲೆ ಅಸ್ತವ್ಯಸ್ತವಾಗಿದೆ (3)
19. ಮರದ ಕೆಲಸ ಮಾಡುವವನು (3)
21. ಗಣದ ಮಧ್ಯೆ ಸಿಕ್ಕಿದ್ದು ಸಮೂಹ (3)
23. ಅಭ್ಯಾಸ ಅಥವಾ ಬಳಕೆ (2)

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಕೊಪ್ಪರಿಗೆ 4. ಸುಗ್ಗಿ 5. ತಳಹದಿ 6. ಅಂತಃಪುರ 7. ನಗ 9. ತಳಕು 11. ಕತ್ತರಿ 13. ಶಮನ 14. ಪುರಲೆ 16. ಹಲ 18. ವಿನೂತನ 20. ಲಾಗಹಾಕು 21. ಬಂಟ 22. ವರಮಾನ

ಮೇಲಿನಿಂದ ಕೆಳಕ್ಕೆ: 2. ರಿಕಾಪು 3. ಕಳವಳ 4. ಸುದಿನ 6. ಅಂತಃಕಲಹ 8. ಗಗನಯಾನ 9. ತರಲೆ 10. ಕುಶ 12. ರಿಪು 15. ರತ್ನಹಾರ 17. ಲಲಾಟ 19. ನೂಪುರ

ಮೊಬೈಲ್ ಬಿಡಿ ಪುಸ್ತಕ ಹಿಡಿ

ಅಂದು ನಾವೆಲ್ಲ ಆಡುತಿದ್ದ ಲಗೋರಿ, ಕುಂಟಾ-ಬಿಲ್ಲೇ, ಮರಕೋತಿ, ಚಿನ್ನಿ ದಾಂಡು, ಚೌಕಾಮಣಿ, ಹಾವು-ಏಣಿ ಹೀಗೆ ಬಿಡುವಿಲ್ಲದ ಆಟ, ಓದು ಬರಹ, ತಮಾಷೆ ಚರ್ಚಾಕೂಟ, ಅಜ್ಜನ ಜತೆ ಹೊಲ ಗದ್ದೆಗಳಲ್ಲಿ ತಿರುಗಾಟ, ಜೋಳದ ರೊಟ್ಟಿ ಊಟ, ಕೆರೆ ಹಳ್ಳ ಕೊಳ್ಳಗಳಲ್ಲಿ ಈಜಾಟ, ಸೈಕಲ್ ಸವಾರಿ ಹೇಳುತ್ತ ಹೋದರೆ ಮುಗಿಯದು. ನಾವು ಕಂಡ ಬಾಲ್ಯದಷ್ಟು ಹುರುಪು, ಹುಮಸ್ಸು ಈಗಿನ ಮಕ್ಕಳಲ್ಲಿ ಕಾಣದಾಗಿರುವುದು ವಿಪರ್ಯಾಸ.

ಪ್ರಸ್ತುತ ಅಂತರ್ಜಾಲದ ಯುಗದಲ್ಲಿ ಈ ಮೇಲೆ ಕಾಣಿಸುವ ಆಟ-ಪಾಠದ ರೀತಿ ರಿವಾಜು ಬದಲಾಗಿ ಅವುಗಳ ಸ್ಥಾನದಲ್ಲಿ ಮೊಬೈಲ್ ಗೇಮ್‌ಗಳು ಮನೆಮಾಡಿಕೊಂಡು ಮಕ್ಕಳ ಬಾಲ್ಯದ ಸೊಗಸಿನಲ್ಲಿ ವಿಷಾದದ ಛಾಯೆ ಮೂಡಿಸಿವೆ. ಮನೆ ಮನ ಸಂಬಂಧಗಳಲ್ಲಿ ಕಲಹ, ಗಲಭೆ, ಕೋಲಾಹಲ ಎಬ್ಬಿಸಿವೆ. ಮಗುವನ್ನು ಸಮಾಜದಿಂದ ವಿಮುಖವಾಗಿಸಿ ನಿಷ್ಕ್ರಿಯಗೊಳಿಸುತ್ತಿವೆ. ಈಗ ಕಾಲಮಾನದಲ್ಲಿ ಬದಲಾವಣೆಗೆ ಮಣೆ ಹಾಕುವುದು ಅನಿವಾರ್ಯ. ಹಾಗಂತ ಹಗಲು ರಾತ್ರಿ ಡಿಜಿಟಲ್ ಪ್ಲಾಟ್‌ಫಾಮ್‌ನಲ್ಲಿ ಕುಳಿತು ಅನಾರೋಗ್ಯಕ್ಕೆ ತುತ್ತಾಗುವುದು ಎಷ್ಟರ ಮಟ್ಟಿಗೆ ಸರಿ.

ದಾರಿ ತಪ್ಪಿಸುತ್ತಿರುವ ಮಾರಿ

ಸಾಮಾಜಿಕ ಜಾಲತಾಣ ಎಂಬ ಆತಂಕಕಾರಿ ಸಾಫ್ಟ್‌ವೇರ್‌ಗಳು ಹಾಗೂ ಇನ್ನಿತರ ಅಶ್ಲೀಲ ಸಂಗತಿಗಳು ಮಕ್ಕಳ ಕೋಮಲವಾದ ಮನಸ್ಸನ್ನು ಕೆರಳಿಸಿ, ಪ್ರಚೋದಿಸುತ್ತಿವೆ. ಕೊನೆಗೆ ಆತ್ಮಹತ್ಯೆ, ಜೀವಹಾನಿಯಂತಹ ಘಟನೆಗಳಲ್ಲಿ ಇದು ಅಂತ್ಯವಾಗುತ್ತಿದೆ. ಮುಗ್ಧ ಕಂದಮ್ಮಗಳು, ಹದಿಹರೆಯದವರನ್ನು ತನ್ನತ್ತ ಆಕರ್ಷಿಸುತ್ತಿರುವ ಈ ಮೊಬೈಲ್ ಸೌಲಭ್ಯಗಳಿಗಿಂತಲೂ ತೀವ್ರತರವಾದ ದುಷ್ಪರಿಣಾಮಗಳನ್ನೇ ಬೀರುತ್ತಿದೆ. ಮೊಬೈಲ್ ಎಂಬ ಮಾಯಾಜಾಲ ಮಕ್ಕಳ ಭವಿಷ್ಯದ ದಾರಿಯನ್ನು ತಪ್ಪಿಸುತ್ತಿರುವ ಮಾರಿಯಾಗಿ ಪರಿಣಮಿಸುತ್ತಿದೆ. ಮಕ್ಕಳ ದೈಹಿಕ, ಮಾನಸಿಕ, ಭಾವನಾತ್ಮಕ, ಪ್ರಾಯೋಗಿಕ ಮತ್ತು ಅರಿವಿನ ಬೆಳವಣಿಗೆಯ ಮೇಲೆ ಮೊಬೈಲ್, ಕಂಪ್ಯೂಟರ್ ಭಾರಿ ಕೆಟ್ಟ ಪರಿಣಾಮ ಬೀರುತ್ತಿದೆ.

ಜಗಹೃದಯ
• ಸರಸ್ವತಿ ವಿಶ್ವನಾಥ್ ಪಾಟೀಲ್
ಕಾರಟಗಿ

ಮಕ್ಕಳು ಮೊಬೈಲ್ ಮುಟ್ಟಿದರೆ ಸಾಕು ಬೈಯಲು ಶುರು ಮಾಡುವ ಅಪ್ಪ ಅಮ್ಮಂದಿರು ಕೋವಿಡ್ ಕಾಲದಲ್ಲಿ ತಾವೇ ಮಕ್ಕಳ ಕೈಗೆ ಮೊಬೈಲ್ ಕೊಡುವ ಹಾಗಾಯಿತು. ಆದರೀಗ ಕೊರೋನಾ ಕಾಟ ತಪ್ಪಿದರೂ, ಫೋನ್ ಕಾಟ ತಪ್ಪಿಲ್ಲ ಎಂಬಂತಾಗಿದೆ. ಈಗಾಗಲೇ ಯಥಾರೀತಿಯಲ್ಲಿ ಶಾಲೆಗಳು ಪ್ರಾರಂಭವಾದರೂ ಮಕ್ಕಳು ಮಾತ್ರ ಮೊಬೈಲ್‌ನಿಂದ ಹೊರ ಬರುವ ಲಕ್ಷಣ ಕಾಣಿಸುತ್ತಿಲ್ಲ. ಮಕ್ಕಳ ಮೊಬೈಲ್ ಚಟ ಬಿಡಿಸಲು ನಮ್ಮಿಂದ ಮಾತ್ರವಲ್ಲ, ವೈದ್ಯರಿಂದಲೂ ಸಾಧ್ಯವಾಗುತ್ತಿಲ್ಲ.

ಕಾರಣಕರ್ತರು ನಾವೇ!

ಆರಂಭದಲ್ಲಿ ಮಕ್ಕಳಿಗೆ ಮೊಬೈಲ್ ಅಭ್ಯಾಸ ಮಾಡಿಸುವುದೇ ತಂದೆ ತಾಯಂದಿರು. ಮಕ್ಕಳು ಊಟ ಬೇಡ ಎಂದು ಹಟ ಹಿಡಿದಾಗಲೆಲ್ಲಾ, ಮೊಬೈಲ್‌ನಲ್ಲಿ ಗೇಮ್, ಹಾಡು ಹಾಕಿ ಊಟ ಮಾಡಿಸಲು ಶುರು ಮಾಡುತ್ತೇವೆ. ನಂತರ ಬೇರೆ ಕೆಲಸ ಮಾಡುವಾಗ ಮಗು ತೊಂದರೆ ಕೊಡಬಾರದು ಎಂದು ಅವರನ್ನು ಬ್ಯುಸಿ ಆಗಿಡಲು, ಅದಕ್ಕೂ ಒಂದು ಮೊಬೈಲ್ ಕೊಟ್ಟುಬಿಡುತ್ತೇವೆ. ಮಕ್ಕಳು ಆಟ ಆಡೋಣ ಬಾ ಅಂದಾಗ, ಅವರಿಗೆ ಸಮಯ ಕೊಡದೆ ಮೊಬೈಲ್ ಅಲ್ಲೇ ಆಡುವಂತೆ ಹೇಳಿ ದಾರಿ ತಪ್ಪಿಸುತ್ತಿದ್ದೇವೆ. ಹೀಗೆ ಮಕ್ಕಳು ಮೊಬೈಲ್ ಮೇಲೆ ಅವಲಂಬಿತರಾಗಲು ನಾವು ಕೂಡ ದೊಡ್ಡ ಕಾರಣ. ಮಕ್ಕಳಿಗೆ ಸ್ಮಾರ್ಟ್‌ಫೋನ್ ಎನ್ನುವುದು ಇಂದು ಆಟಿಕೆಗಳಾಗಿ ಹೋಗಿವೆ. ಮಕ್ಕಳ ಬಗ್ಗೆ ಬೇರೆಲ್ಲಾ ವಿಷಯಗಳಿಗೆ ಕಾಳಜಿ ವಹಿಸುವ ನಾವು ಈಗ ಅವರ ಕೈಗೆ ಫೋನ್ ಕೊಟ್ಟು ಅಪಾಯವನ್ನು ಮೈಮೇಲೆ ಎಳೆದುಕೊಳ್ಳುತ್ತಿರುವುದು ದುರಂತ.

ಮಕ್ಕಳಿಗೆ ಮಾತ್ರವಲ್ಲ ದೊಡ್ಡವರಿಗೂ ಕೂಡ ಮೊಬೈಲ್ ಮತ್ತು ಟಿವಿ ಇಂದಿನ ಜೀವನಶೈಲಿಯ ಒಂದು ಅವಿಭಾಜ್ಯ ಅಂಗವಾಗಿ ಹೋಗಿದೆ. ಪ್ರತಿಯೊಬ್ಬರ ಕೈಯಲ್ಲೂ ಸ್ಮಾರ್ಟ್‌ಫೋನ್. ಜೀವನದ ಪ್ರತಿ ಆಗುಹೋಗುಗಳು, ಬ್ಯಾಂಕಿಂಗ್, ಕೆಲಸ, ಸಿನಿಮಾ, ಸೋಷಿಯಲ್ ಮೀಡಿಯಾಗಳು, ಗೆಳೆಯರೊಂದಿಗಿನ ಸಂಬಂಧ ಪ್ರತಿಯೊಂದೂ ಕೂಡ ಮೊಬೈಲ್ ಫೋನಿನೊಳಗೆ ನಡೆಯುತ್ತದೆ. ಮೊಬೈಲ್‌ನಿಂದ ಅದೆಷ್ಟು ದುಷ್ಪರಿಣಾಮ ಇದೆ ಎಂದು ಗೊತ್ತಿದ್ದರೂ ಅದನ್ನು ಬಿಡಲು ಸಾಧ್ಯವಾಗುತಿಲ್ಲ.

ಬಿಡುವಿನ ಸುಮಯದಲ್ಲಿ ನೀವು ಮೊಬೈಲ್ ನೋಡದೆ ಪುಸ್ತಕವನ್ನು ಓದಿ, ಆಗ ಮಗು ನಿಮ್ಮಂತೆ ಇನ್ನೊಂದು ಪುಸ್ತಕ ಹಿಡಿದು ಕೂರುತ್ತದೆ. ನೀವು ಮೊಬೈಲ್ ನೋಡಿದರೆ ಆಗ ಅದು ಮೊಬೈಲ್ ನೋಡುತ್ತದೆ. ಬದಲಾವಣೆ ನಮ್ಮಿಂದಲೇ ಆಗಲಿ.

ಹುಟ್ಟುಗುಣ, ಸುಟ್ಟರೂ ಹೋಗದು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದು ಚೇಳು, ನದಿಯ ದಡದಲ್ಲಿ ಕುಳಿತು, ದಡದಾಚೆ ಹೋಗಲು ಕಾಯುತ್ತಿತ್ತು. ನದಿಯ ದಂಡೆಯ ಮೇಲೆ ಕುಳಿತ ಆಮೆಯನ್ನು 'ನಾನು ಆಚೆ ದಡಕ್ಕೆ ಹೋಗಬೇಕಾಗಿದೆ, ನಾನು ನಿನ್ನ ಬೆನ್ನ ಮೇಲೆ ಕುಳಿತುಕೊಳ್ಳುತ್ತೇನೆ ,ನನ್ನನ್ನು ಸ್ವಲ್ಪ ಆಚೆಯ ದಡಕ್ಕೆ ತಲುಪಿಸುವೆಯಾ?' ಕೇಳಿತು.

'ದಡವನ್ನೇನೊ ತಲುಪಿಸಬಹುದು, ಆದರೆ, ನಿನ್ನನ್ನು ನಾನು ಹೇಗೆ ನಂಬಲಿ? ನೀನು ನನ್ನ ಬೆನ್ನ ಮೇಲೆ ಕುಳಿತು, ನಾನು ನದಿ ಮಧ್ಯಕ್ಕೆ ಬಂದಾಗ ಕುಟುಕಿ ಬಿಟ್ಟರೆ? ನಿನ್ನನ್ನು ನಂಬುವುದು ಕಷ್ಟ ,ಕುಟುಕುವುದೇ ನಿನ್ನ ಮೂಲ ಗುಣವಲ್ಲವೇ?' ಎಂದು ಆಮೆ ಹೇಳಿತು.

ಆಗ ಚೇಳು, 'ಅಲ್ಲಪ್ಪಾ! ನದಿಯ ಮಧ್ಯದಲ್ಲಿದ್ದಾಗ, ನಾನು ನಿನ್ನನ್ನು ಕುಟುಕಿದರೆ, ನಿನ್ನ ಜತೆಗೆ ಈಜು ಬಾರದ ನಾನು ಕೂಡ ನದಿಯಲ್ಲಿ ಬಿದ್ದು ಸಾಯುತ್ತೇನಲ್ಲವೇ, ನಾನೇಕೆ ಹಾಗೆ ಮಾಡಲಿ? ದಯಮಾಡಿ ನನ್ನನ್ನು ನಿನ್ನೊಂದಿಗೆ ಕರೆದುಕೊಂಡು ಹೋಗು' ಎಂದಿತು ಚೇಳು.

ಆಗ ಆಮೆಯ ಜತೆಗಾರರು, 'ಈ ಕೆಲಸಕ್ಕೆ ಮಾತ್ರ ಕೈ ಹಾಕಬೇಡ, ಕುಟುಕುವುದು ಅದರ ಹುಟ್ಟುಗುಣ' ಎಂದು ಬುದ್ಧಿ ಹೇಳಿದವು.

ಅವುಗಳು ಎಷ್ಟೇ ಬುದ್ಧಿ ಹೇಳಿದರೂ, ಈ ಆಮೆ ಅವುಗಳ ಮಾತನ್ನು ಕೇಳದೇ ಚೇಳಿನ ಮಾತನ್ನು ನಂಬಿ, 'ನನ್ನನ್ನು ಅದು ಹೇಗೆ ಕುಟುಕೀತು? ನಾನು ಅದಕ್ಕೆ ಸಹಾಯ ಮಾಡುತ್ತಿಲ್ಲವೇ?' ಎಂದು ಮರು ಪ್ರಶ್ನೆ ಹಾಕಿತು. 'ನಾವೆಲ್ಲಾ ಹೇಳುವಷ್ಟು ಹೇಳಿದ್ದೇವೆ, ಇಷ್ಟರ ಮೇಲೆ ನಿನ್ನಿಷ್ಟ' ಎಂದು ಅವು ಬೇಸರಗೊಂಡು ಸುಮ್ಮನಾಗಿ ಅಲ್ಲಿಂದ ಹೊರಟು ಹೋದವು.

ಆಗ ಈ ಆಮೆ, 'ನಾನಿಲ್ಲೇ ಅದನ್ನು ಬಿಟ್ಟು ಹೋದರೆ ಪಾಪ ಅದು ಈ ಪ್ರವಾಹದಲ್ಲಿ ಬಿದ್ದು ಸತ್ತೇ ಹೋಗುತ್ತದೆ' ಎಂದುಕೊಂಡು ತನ್ನ ಸ್ನೇಹಿತರು ಬೇಡವೆಂದರೂ ಕೂಡ ಕೇಳದೆ, ಆಚೆ ದಡಕ್ಕೆ ಅದನ್ನು ದಾಟಿಸಲು ನಿರ್ಧರಿಸಿತು.

ಆಮೆಯ ಬೆನ್ನೇರಿ ಕುಳಿತ ಚೇಳು, ನೀರಿನ ಪ್ರವಾಹ ನೋಡಿ ಬಹಳವಾಗಿ ಹೆದರಿಕೊಂಡಿತು. ಸ್ವಲ್ಪ ದೂರ ಹೋಗುವಾಗಲೇ, ಭಯದಿಂದ ಆಮೆಯನ್ನು ಕುಟುಕಿ ಬಿಟ್ಟಿತು. ವಿಷವೇರಿ ಆಮೆ, ನದಿಯಲ್ಲಿ ಸಾವು ಬದುಕಿನ ಕ್ಷಣಗಳನ್ನು ಎಣಿಸುತ್ತಾ, 'ಈ ಮೊದಲು ನೀನು ನನ್ನನ್ನು ಕುಟುಕುವುದಿಲ್ಲ ಎಂದು ಹೇಳಿದ್ದೆ ತಾನೇ? ನಿನ್ನ ಮಾತನ್ನು ನಂಬಿ ನನ್ನ ಗೆಳೆಯರ ವಿರೋಧ ಕಟ್ಟಿಕೊಂಡು ನಿನಗೆ ಸಹಾಯ ಮಾಡಲು ಬಂದೆ. ಆದರೆ ನೀನು ಮಾಡಿದ್ದೇನು? ನಿನ್ನ ಬುದ್ಧಿಯನ್ನು ನೀನು ತೋರಿಸಿಯೇ ಬಿಟ್ಟೆಯಲ್ಲಾ! ನಿನ್ನ ಮಾತನ್ನು ನಂಬಿದ್ದಕ್ಕೆ ಈಗ ನನಗೆ ತಕ್ಕ ಶಾಸ್ತಿಯಾಯಿತು. ಈಗ ನನ್ನ ಜತೆ ನೀನೂ ಸಾಯುವೆ. ನೀನು ಹೀಗೆ ಮಾಡಿದ್ದು ನಿನಗೆ ನ್ಯಾಯ ಎನಿಸುತ್ತಿದೆಯೇ?' ಎಂದಿತು.

ಆಗ ಚೇಳು, 'ಹೌದು ನಾನು ನಿನಗೆ ಮಾತು ಕೊಟ್ಟಿದ್ದೆ. ಯಾವುದೇ ಕಾರಣಕ್ಕೂ ಕುಟುಕಬಾರದು ಎಂದು ಮನಸ್ಸಿನಲ್ಲಿ ಅಂದುಕೊಂಡಿದ್ದೆ. ಆದರೆ ಏನು ಮಾಡಲಿ? ಕೆಲವು ಸಂದರ್ಭದಲ್ಲಿ ನನ್ನ ಸ್ವಭಾವವೇ ಹಾಗೆ ಬದಲಾಗಿ ಬಿಡುತ್ತದೆ. ಏನು ಮಾಡಲಿ ಗೆಳೆಯ, ಅದು ನನ್ನ ದೌರ್ಬಲ್ಯ, ಹುಟ್ಟುಗುಣ, ಸುಟ್ಟರೂ ಹೋಗುವುದಿಲ್ಲ. ನನ್ನನ್ನು ಕ್ಷಮಿಸಿ ಬಿಡು' ಎಂದಿತು ಚೇಳು.

'ನಿನ್ನ ಬದಲಾಗದ ಸ್ವಭಾವದಿಂದ ಈಗ ನಾವಿಬ್ಬರೂ ಸಾಯುತ್ತಿದ್ದೇವೆ. ಕೊನೆಗೂ, ನನ್ನ ಜತೆಗಾರರು ಹೇಳಿದ ಮಾತು ಸತ್ಯವಾಯಿತು. ನಿನ್ನನ್ನು ನಂಬಿ ನಾನು ಕೆಟ್ಟೆ' ಎಂದು ಹೇಳುತ್ತಿರುವಾಗ ಆಮೆಯ ಉಸಿರು ನಿಂತು ಹೋಯಿತು. ಪ್ರವಾಹದಲ್ಲಿ ಆಮೆ ಮತ್ತು ಚೇಳು ಎರಡೂ ಜೀವ ಬಿಟ್ಟವು.

ಗೆಳೆತನ ಮಾಡುವಾಗ ಸ್ನೇಹ ಹಸ್ತ ಚಾಚುವಾಗ ಯಾರ ಜತೆ ಮಾಡುತ್ತಿದ್ದೇವೆ ಎಂದು ಮೊದಲು ಗಮನಿಸಬೇಕು. ಕಷ್ಟದಲ್ಲಿ ಬದಲಾದ ಗುಣಗಳು ಎಂದಿಗೂ ಹಾಗೆಯೇ ಉಳಿಯುವುದಿಲ್ಲ. ಪರಿಸ್ಥಿತಿ ಬದಲಾದಂತೆ ಅವರ ಮೊದಲ ಗುಣ ಮತ್ತೆ ಕಾಣಿಸಿಕೊಳ್ಳುತ್ತದೆ. ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ ಎನ್ನುವುದು ಇದೇ ಕಾರಣಕ್ಕೆ.

ತವರಿಗೆ ವಿಶ್ವಕಪ್ ವಿಜೇತ ಭಾರತ | ಪ್ರಧಾನಿ ಮೋದಿ ಭೇಟಿ | ಮುಂಬೈನಲ್ಲಿ ಅದ್ದೂರಿ ವಿಜಯೋತ್ಸವ

ಅಭಿಮಾನದ ಹೊಳೆಯಲ್ಲಿ ಮಿಂದೆದ್ದ ರೋಹಿತ್ ಪಡೆ

ವಿಜಯೋತ್ಸವವನ್ನು ಸೆಳೆಯಲು ಬಂದ ಲಕ್ಷಾಂತರ ಅಭಿಮಾನಿಗಳು.

ಮಳೆಯಲ್ಲೂ ನಿಂತ ಆಟಗಾರರು

ವಿಜಯೋತ್ಸವ ನಡೆಯುತ್ತಿದ್ದ ಸಂದರ್ಭದಲ್ಲಿ ಮುಂಬೈನಲ್ಲಿ ಧಾರಾಕಾರ ಮಳೆ ಬಂದಿತ್ತು. ಪ್ರಮುಖವಾಗಿ ವಿಜಯೋತ್ಸವದ ನಂತರ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಸಂಜೆಯ ಹೊತ್ತನಲ್ಲೇ ಮಳೆ ಪ್ರಾರಂಭವಾಗಿತ್ತು. ಆದರೆ ಅದಕ್ಕೆ ಬಗ್ಗದ ಭಾರತದ ಅಭಿಮಾನಿಗಳು ಮಳೆಯಲ್ಲೇ ನಿಂತು ಕಾಯ್ದರು. ಮುಂಬೈನ ಹಲವು ರಸ್ತೆಗಳಿಂದ ಬಂದ ಮೆರವಣಿಗೆಯ ಸಂದರ್ಭದಲ್ಲೂ ಮಳೆ ಬಂದಿತ್ತು. ಆದರೆ ವಿಜಯದ ಹುಮ್ಮಸ್ಸಿನಲ್ಲಿ ಆಟಗಾರರೂ ಸಹ ಮಳೆಯನ್ನು ಮರೆತರು. ಅಲ್ಲದೆ, ವಿಜಯೋತ್ಸವ ದಲ್ಲಿ ಇದ್ದ ಪ್ರತಿಯೊಬ್ಬ ಅಭಿಮಾನಿಯೂ ಸಹ ಭಾರತ ಮಾತೆಯನ್ನು ಪೂಜಿಸುತ್ತಿದ್ದರು.

ಬಿಸಿಸಿಐನಿಂದ ವಿಶೇಷ ಸ್ವಾಗತ

ವಿಜಯೋತ್ಸವ ರ್‍ಯಾಲಿಗೆ ಬಂದ ಭಾರತ ತಂಡಕ್ಕೆ ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ ವಿಮಾನ ನಿಲ್ದಾಣದ ಪ್ರತಿಯೊಂದು ಮೂಲೆಯಲ್ಲೂ ಅಭಿಮಾನಿಗಳ ದಂಡು ಕಾಣುತ್ತಿತ್ತು. ಅಲ್ಲದೆ, ಗೆದ್ದು ಬಂದ ಭಾರತಕ್ಕೆ ಬಿಸಿಸಿಐನ ಸ್ಥಳಕ್ಕೆ ಬಂದು ವಿಶೇಷ ಸ್ವಾಗತ ಮಾಡಿದರು. ಈ ವೇಳೆ ಭಾರತದ ಆಟಗಾರರಿಗೆ ಪ್ರತಿಯೊಬ್ಬರೂ ಬಹುಪರಾಕ್ ಹಾಕಿದರು.

ಚಿತ್ರಣ ಬದಲಿಸಿದ ಪಾಂಡ್ಯ

ಮಾರ್ಚ್, ಏಪ್ರಿಲ್‌ನಲ್ಲಿ ನಡೆದಿದ್ದ ಐಪಿಎಲ್ ಸಂದರ್ಭ ದಲ್ಲಿ ಮುಂಬೈ ನಾಯಕತ್ವ ವಹಿಸಿಕೊಂಡಿದ್ದ ಹಾರ್ದಿಕ್ ಪಾಂಡ್ಯ ಅವರಿಗೆ ಮುಂಬೈನಲ್ಲಿ ಅವಮಾನ ಮಾಡಲಾಗಿತ್ತು. ಪಂದ್ಯವಂದನ್ನು ಆಡಲು ಬಂದಿದ್ದ ಅವರಿಗೆ ಗೋ ಬ್ಯಾಕ್ ಪಾಂಡ್ಯ ಎಂಬ ಘೋಷಣೆ ಕೂಗಿದ್ದರು. ಅಲ್ಲದೇ ಇದೇ ಮುಂಬೈ ಏರ್‌ಪೋರ್ಟ್‌ನಲ್ಲಿ ಛಪ್ರಿ ಪಾಂಡ್ಯ ಎಂಬ ಘೋಷಣೆ ಕೂಗಿದ್ದರು. ಆದರೆ ಇದೀಗ ಹಾರ್ದಿಕ್ ಪಾಂಡ್ಯ ಅವರು ಭಾರತ ವಿಶ್ವಕಪ್ ಗೆಲ್ಲಲು ಪ್ರಮುಖ ಕಾರಣವಾಗಿದ್ದಾರೆ. ಈ ನಿಟ್ಟಿನಲ್ಲಿ ಮುಂಬೈ ಬಂದ ನಂತರದಲ್ಲಿ ಕಪ್ ಹಿಡಿದುಕೊಂಡು ಬಂದ ಪಾಂಡ್ಯಗೆ ಎಲ್ಲರೂ ಚಪ್ಪಾಳೆ ಬಾರಿಸಿದರು. ಅಲ್ಲದೆ 'ವಿ ಆಸ್ಕ್ ಯೂ ಸಾರಿ' ನಾವು ಕ್ಷಮೆ ಕೇಳುತ್ತೇವೆ ಎಂದು ಕೂಗುವ ಮೂಲಕ ಸ್ವಾಗತ ಕೋರಿದರು.

ಮಣ್ಣು ಹೇಗಿತ್ತು?: ಮೋದಿ

ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮ ಅವರು ಮೋದಿ ಅವರನ್ನು ಭೇಟಿಯಾದ ಸಂದರ್ಭ ದಲ್ಲಿ ಬಾರ್ಬಡೋಸ್‌ನಲ್ಲಿ ಮಣ್ಣು ತಿಂದ ವಿಷಯ ವನ್ನು ಮೋದಿ ಸ್ಮರಿಸಿದ್ದಾರೆ. ವಿಶ್ವಕಪ್ ಗೆದ್ದ ನಂತರ ನಾಯಕ ರೋಹಿತ್ ಶರ್ಮ ಅವರು ಮೈದಾನದ ಮಣ್ಣು ತಿನ್ನುವ ಮೂಲಕ ಗೌರವ ಸಲ್ಲಿಸಿದ್ದರು. ಅದನ್ನು ನೆನಪಿಸಿಕೊಂಡ ಮೋದಿ, ಮಣ್ಣಿನ ರುಚಿ ಹೇಗಿತ್ತು ಎಂದು ಕೇಳಿ ನಗೆ ಉಕ್ಕಿಸಿದರು.

ಮುಂಬಯಿ: 17 ವರ್ಷಗಳ ಬಳಿಕ ಭಾರತ ವಿಶ್ವಕಪ್ ಗೆದ್ದು ಬೀಗಿದೆ. ಟೂರ್ನಿಯುದ್ದಕ್ಕೂ ತೋರಿದ ಸಾಂಘಿಕ ಪ್ರದರ್ಶನದಿಂದ ಭಾರತಕ್ಕೆ ವಿಶ್ವ ಕಿರೀಟ ಸಂದಿದ್ದು, ಭಾರತದಲ್ಲಿ ಇನ್ನೂ ಸಂಭ್ರಮಾಚರಣೆ ನಡೆಯುತ್ತಿದೆ. ಕಳೆದ ಶನಿವಾರ ಬಾರ್ಬಡೋಸ್‌ನಲ್ಲಿ ನಡೆದಿದ್ದ ಭಾರತ ಹಾಗೂ ದ.ಆಫ್ರಿಕ ವಿರುದ್ಧದ ಪಂದ್ಯದಲ್ಲಿ ಭಾರತ ಭರ್ಜರಿ ಗೆಲುವು ಸಾಧಿಸಿತ್ತು. ವಿಶ್ವಕಪ್ ಗೆದ್ದ ನಂತರ ರೋಹಿತ್ ಪಡೆ ತವರಿಗೆ ಮರಳಿದೆ. ಹಾಗಾಗಿ ಭಾರತದಲ್ಲಿ ವಿಶ್ವಕಪ್ ಗೆಲುವಿನ ಸಂಭ್ರಮಾಚರಣೆ ಮತ್ತೆ ಮುಗಿಲು ಮುಟ್ಟಿದೆ. ವಿಶ್ವಕಪ್ ಗೆದ್ದ ನಂತರ ಬಾರ್ಬಡಾಸ್‌ನಲ್ಲಿ ಉಳಿದಿದ್ದ ಭಾರತ ತಂಡ ಗುರುವಾರ ಭಾರತಕ್ಕೆ ಮರಳಿದ್ದು, ಭರ್ಜರಿ ವಿಜಯೋತ್ಸವ ಹಮ್ಮಿಕೊಳ್ಳಲಾಗಿತ್ತು. ಗೆದ್ದು ಬಂದ ರೋಹಿತ್ ಪಡೆಗೆ ಇಡೀ ಭಾರತ ಅಭಿನಂದನೆಯ ಮಹಾಪೂರ ಹರಿಸಿದೆ. ಬರಿಲ್ ಚಂಡಮಾರುತದಿಂದ ಬಾರ್ಬಡೋಸ್‌ನಲ್ಲಿ ಸಿಲುಕಿ ಕೊಂಡಿದ್ದ ಭಾರತ ಗುರುವಾರ ಬೆಳಗ್ಗೆ 10 ಗಂಟೆಗೆ ದೆಹಲಿ ವಿಮಾನ ನಿಲ್ದಾಣದಲ್ಲಿ ಬಂದು ಇಳಿದಿದೆ.

ಪ್ರಧಾನಿ ಮೋದಿ ಭೇಟಿ ಮಾಡಿದ ಭಾರತ ತಂಡ

ಗುರುವಾರ ಭಾರತಕ್ಕೆ ಬಂದಿಳಿದ ಭಾರತ ತಂಡ ಬೆಳಗ್ಗೆ 11 ಗಂಟೆಗೆ ಭಾರತ ತಂಡ ಪ್ರಧಾನಿ ಮೋದಿ ಭೇಟಿಗೆ ಹೊರಟಿತು. ದೆಹಲಿಯ ಪ್ರಧಾನಿ ಕಚೇರಿ ಯಲ್ಲಿ ಭಾರತ ತಂಡ ಮೋದಿ ಅವರನ್ನು ಭೇಟಿ ಮಾಡಿತು. ಈ ವೇಳೆ ವಿಶ್ವಕಿರೀಟ ಧರಿಸಿಕೊಂಡು ಬಂದ ಭಾರತಕ್ಕೆ ಮೋದಿ ಎಲ್ಲರನ್ನು ಬೆನ್ನು ತಟ್ಟಿ ಅಭಿನಂದಿಸಿದರು. ಈ ವೇಳೆ ಭಾರತ ತಂಡವು ಮೋದಿ ಅವರಿಗೆ ಟ್ರೋಫಿಯನ್ನು ಸಮರ್ಪಿಸಿದರು. ಅಲ್ಲದೆ ಮೋದಿ ಅವರೊಂದಿಗೆ ಸಂದರ್ಶನ ನಡೆಸಿ ದರು. ಸಂದರ್ಶನದಲ್ಲಿ ಮೋದಿ ಎಲ್ಲರೊಂದಿಗೆ ಮಾತನಾಡಿದರು. ನಾಯಕ ರೋಹಿತ್ ಶರ್ಮ, ಕೊಹ್ಲಿ ಹಾಗೂ ಜಡೇಜಾ ಅವರನ್ನು ವಿಶೇಷ ಅಭಿನಂದನೆ ತಿಳಿಸಿದ ಮೋದಿ, ಅವರ ನಿವೃತ್ತಿ ಜೀವನಕ್ಕೆ ಅಭಿನಂದಿಸಿದರು. ಈ ವೇಳೆ ಭಾರತ ತಂಡ ನಮೋ ಹೆಸರಿನ ಭರತ ಜೆರ್ಸಿಯನ್ನು ನೀಡಿದರು. ಸಂದರ್ಶನ ವೇಳೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ, ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಅವರೂ ಭಾಗಿಯಾಗಿದ್ದರು.

ಅದ್ದೂರಿ ವಿಜಯೋತ್ಸವ

ವಿಶ್ವಕಪ್ ಗೆದ್ದ ಭಾರತ ತಂಡ ತವರಿಗೆ ಮರಳಿದ ನಂತರ ಭರ್ಜರಿ ವಿಜಯೋತ್ಸವ ಜರುಗಿತ್ತು. ವಿಮಾನ ನಿಲ್ದಾಣಕ್ಕೆ ಬಂದಿಳಿದ ಸಂದರ್ಭದಿಂದಲೂ ವಿಜಯ ಪತಾಕೆಗೆ ಭರ್ಜರಿ ಸಂಭ್ರಮಾಚರಣೆ ಮಾಡ ಲಾಗಿತ್ತು. ವಿಮಾನ ನಿಲ್ದಾಣದ ಹತ್ತಿರ ಬಂದಿದ್ದ ಅಭಿಮಾನಿಗಳು ಭಾರತ ತಂಡವನ್ನು ನೋಡಿ ಕುಣಿದು ಕುಪ್ಪಳಿಸಿದರು. ಈ ವೇಳೆ ಹಲವಾರು ಘೋಷವಾಕ್ಯ ದೊಂದಿಗೆ ಭಾರತ ತಂಡವನ್ನು ಸ್ವಾಗತಿಸಿದರು.

ಕುಣಿದು ಕುಪ್ಪಳಿಸಿದ ಆಟಗಾರರು

ವಿಶ್ವಕಪ್ ಗೆದ್ದಾಗ ಬಾರ್ಬಡೋಸ್‌ನಲ್ಲಿ ಕುಣಿದು ಕುಪ್ಪಳಿಸಿದ್ದ ಭಾರತ ತಂಡ ದೆಹಲಿಗೆ ಬಂದ ನಂತರ ಅಭಿಮಾನಿಗಳ ಮುಂದೆ ಕುಣಿದು ಸಂಭ್ರಮಿಸಿದರು.

ಟಿ20 ವಿಶ್ವಕಪ್ ವಿಜೇತ ಭಾರತ ತಂಡ ದೆಹಲಿಯಲ್ಲಿ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿತು. ಈ ವೇಳೆ ನಾಯಕ ರೋಹಿತ್ ಶರ್ಮ, ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಕಾರ್ಯದರ್ಶಿ ಜಯ್ ಶಾ, ಕೋಚ್ ರಾಹುಲ್ ದ್ರಾವಿಡ್ ಹಾಗೂ ಆಟಗಾರರು ಇದ್ದರು.

ವಿಜಯ ಯಾತ್ರೆಯಲ್ಲಿ ಟ್ರೋಫಿಯೊಂದಿಗೆ ಮೆರೆದ ಭಾರತದ ಆಟಗಾರರು.

ದೆಹಲಿ ಏರ್‌ಪೋರ್ಟ್‌ಗೆ ಬಂದಿಳಿದ ನಂತರ ಭಾರತ ತಂಡಕ್ಕೆ ಭರ್ಜರಿ ಸ್ವಾಗತ ಕೋರಲಾಯಿತು. ತಂಡದ ಆಟಗಾರರು ಬಸ್‌ನಿಂದ ಇಳಿಯುತ್ತಿದ್ದಂತೆ ಅವರನ್ನು ಸ್ವಾಗತಿಸಲು ತಮಟೆ ಬಾರಿಸುತ್ತಾ ಬಾರಸಿಗರು ಬಂದರು. ಅವರ ಜತೆಗೆ ಭಾರತದ ನಾಯಕ ರೋಹಿತ್ ಶರ್ಮ ಹಾಗೂ ಸೂರ್ಯಕುಮಾರ್ ಯಾದವ್ ಸ್ಟೆಪ್ ಹಾಕಿದರು.

ಭವ್ಯ ಮೆರವಣಿಗೆ

ಭಾರತ ವಿಶ್ವಕಪ್ ಗೆದ್ದ ಬೆನ್ನಲ್ಲೇ 1983, 2007, 2011ರಂತೆ ಮುಂಬೈನಲ್ಲಿ ವಿಜಯೋತ್ಸವ ರ್‍ಯಾಲಿ ಅನ್ನು ಹಮ್ಮಿಕೊಳ್ಳಲಾಗಿತ್ತು. ಮುಂಬೈ ನಗರದ ಮರೈನ್ ಡ್ರೈವ್‌ನಿಂದ ಪ್ರಾರಂಭವಾದ ರ್‍ಯಾಲಿಯು ವಾಂಖೆಡೆ ಕ್ರೀಡಾಂಗಣದವರೆಗೂ ವಿಜಯ ರ್‍ಯಾಲಿ ನಡೆಯಿತು. ದೇಶದ ಮೂಲೆಮೂಲೆಯಿಂದಲೂ ಅಭಿಮಾನಿಗಳು ಬಂದಿದ್ದರು. ಈ ವೇಳೆ ಭಾರತದ ಆಟಗಾರರು ಅಭಿಮಾನಿಗಳೊಂದಿಗೆ ಸಂಭ್ರಮಾಚರಣೆ ಆಚರಿಸಿದರು. ಲಕ್ಷಾಂತರ ಅಭಿಮಾನಿಗಳ ಮುಂದೆ ಭಾರತದ ಆಟಗಾರರು ಕಪ್ ಹಿಡಿದು ಮೆರದರು. ಅದನ್ನು ನೋಡಿದ ಅಭಿಮಾನಿಗಳು ಕುಣಿದು ಕುಪ್ಪಳಿಸಿದರು. ಈ ವೇಳೆ ಮುಂಬೈನ ಪ್ರಮುಖ ರಸ್ತೆಗಳಲ್ಲಿ ಭಾರತದ ಧ್ವಜ ಎಲ್ಲೆಡೆ ಹಾರಾಡುತ್ತಿತ್ತು. ಆಟಗಾರರು ಅಭಿಮಾನಿಗಳನ್ನು ಅಭಿನಂದಿಸಿದರೆ, ಅಭಿಮಾನಿಗಳು ಆಟಗಾರರಿಗೆ ಧನ್ಯವಾದ ತಿಳಿಸಿದ್ದರು. ತಂಡದಲ್ಲಿ ಇದ್ದ 15 ಆಟಗಾರು ಈ ವೇಳೆ ಟ್ರೋಫಿ ಹಿಡಿದು ಸಂಭ್ರಮ ಪಟ್ಟರು. ವಿಜಯೋತ್ಸವದ ಕಹಳೆ ಎಲ್ಲೆಲ್ಲೂ ಮೂಡಿತ್ತು. ಅಲ್ಲಿದ್ದ ಲಕ್ಷಾಂತರ ಅಭಿಮಾನಿಗಳ ಅಂಕುಶಕ್ಕೆ ಪೋಲಿಸರು ಹರಸಾಃಸ ಪಟ್ಟರು.

1983, 2007, 2001ರಲ್ಲಿ ವಿಜಯೋತ್ಸವ

2024ರಲ್ಲಿ ವಿಶ್ವಕಪ್ ಗೆದ್ದಿದ್ದು, ಭಾರತಕ್ಕೆ ಮರಳಿದ ನಂತರದ ವಿಜಯೋತ್ಸವದ ಸಂದರ್ಭದಲ್ಲಿ ಎಲ್ಲರೂ 83, 2007, 2011ರಲ್ಲಿ ಗೆದ್ದಿದ್ದನ್ನು ನೆನದು ಕೊಂಡರು. ಪ್ರಮುಖವಾಗಿ 2007ರ ಟಿ20 ವಿಶ್ವಕಪ್ ಗೆದ್ದ ಮೇಲೆ ಇದೇ ಮುಂಬಯಿನಲ್ಲಿ ರೋಡ್‌ಶೋ ಹಮ್ಮಿಕೊಂಡಿದ್ದು ನೆನಪಿಗೆ ಬಂದಿತ್ತು. ಆಗಿನ ನಾಯಕ ಧೋನಿ ಅವರು ವಿಶ್ವಕಪ್ ಹಿಡಿದು ಬೀಗಿದ್ದು ಎಲ್ಲ ಮಾಧ್ಯಮದವರೂ ತೋರಿಸಿ ನೆನೆದರು.

ವಾಹನ ನಿಲುಗಡೆ ನಿಷೇಧ

ಭಾರತ ವಿಶ್ವಕಪ್ ಗೆದ್ದಿರುವ ಬೆನ್ನಲ್ಲೇ ಹಮ್ಮಿಕೊಳ್ಳಲಾಗಿದ್ದ ವಿಕ್ಟರಿ ಪರೇಡ್ ಬೆನ್ನಲ್ಲೇ ಮುಂಬೈನಲ್ಲಿ ಭರ್ಜರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ವಿಜಯೋತ್ಸವ ರ್‍ಯಾಲಿಗೆ ಲಕ್ಷಾಂತರ ಜನರು ಬಂದಿದ್ದರು. ಹೀಗಾಗಿ ಮರೈನ್ ಡ್ರೈವ್‌ನ ಆಸುಪಾಸಿನ ಬೀದಿಗಳಲ್ಲಿ ಜನರು ಜಾಮಾ ಆಗಿದ್ದನ್ನು ನೋಡಿ ಮುಂಬೈ ಪೋಲಿಸರು, ಹತ್ತು ವಿವಿಧ ರಸ್ತೆಗಳಲ್ಲಿ ವಾಹನ ನಿಲುಗಡೆ ನಿಷೇಧ ಮಾಡಿದ್ದರು.

ಹರಿದು ಬಂದ ಅಭಿಮಾನಿಗಳ ಸಾಗರ

ಭಾರತದ ಈ ವಿಜಯೋತ್ಸವ ರ್‍ಯಾಲಿಗೆ ದೇಶಾದ್ಯಂತ ಲಕ್ಷಾಂತರ ಜನರು ಭಾಗಿಯಾಗಿದ್ದರು. ಗುರುವಾರ ಬೆಳಗ್ಗೆಯಿಂದಲೇ ಜಮಾಯಿಸಿದ್ದ ಜನರು, ಭಾರತ ತಂಡಕ್ಕಾಗಿ ಕಾಯುತ್ತಾ ನಿಂತಿದ್ದರು.

ಮುಂಬೈನ ಪ್ರಮುಖ ರಸ್ತೆಗಳಲ್ಲಿ 4ರಿಂದಲೇ ಜನ ಜಂಗುಳಿ ಬಂದು ನಿಂತಿತ್ತು. ಯಾತ್ರೆ ಜಾಗದಲ್ಲಿ ಅಷ್ಟೇ ಅಲ್ಲದೆ, ಅಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ಜನರು ಮಧ್ಯಾನದಿಂದಲೇ ಜಮಾಯಿಸಿ ನಿಂತಿದ್ದರು.

ಭಾರತ ತಂಡಕ್ಕೆ ಸನ್ಮಾನ

ವಿಶ್ವಕಪ್ ವಿಜೇತ ಭಾರತ ತಂಡಕ್ಕೆ ಬಿಸಿಸಿಐ ಹಾಗೂ ಹಲವು ಸಂಸ್ಥೆಗಳಿಂದ ಭರ್ಜರಿ ಸನ್ಮಾನ ಹಮ್ಮಿ ಕೊಳ್ಳಲಾಗಿತ್ತು. ಪ್ರಮುಖವಾಗಿ ಕೇಂದ್ರ ಸರಕಾರ ದಿಂದ ಎಲ್ಲ ಆಟಗಾರರಿಗೂ ವಿಶೇಷ ಸನ್ಮಾನ ಮಾಡ ಲಾಯಿತು.

ಅದಲ್ಲದೆ, ರಾತ್ರಿ ನಡೆದ ಕಾರ್ಯಕ್ರಮದಲ್ಲಿ ಭಾರತಕ್ಕೆ ಬಿಸಿಸಿಐ ಘೋಷಿಸಿದ್ದ 125 ಕೋಟಿ ಬಹುಮಾನವನ್ನು ನೀಡಲಾಯಿತು. ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಲ್ಲರೂ ಭಾವುಕರಾಗಿದ್ದರು. ಅಲ್ಲಿನ ವಾತಾವರಣ ವನ್ನು ಪ್ರತಿಯಯೊಬ್ಬರು ಆನಂದಿಸಿದರು.

ತಂಡ ಭಾರತಕ್ಕೆ ಬರುತ್ತಿದ್ದಂತೆ ಕೊಹ್ಲಿ ಹಾಗೂ ರೋಹಿತ್ ನಿವೃತ್ತರಾಗಿದ್ದಕ್ಕೆ ಮೂಡಿಬಂದ ಚಿತ್ರ.



ಗೆದ್ದ ಟ್ರೋಫಿಯನ್ನು ಎತ್ತಿ ತೋರಿಸಿದ ರೋಹಿತ್.

ವಿಶ್ವ ವಿಜೇತ ಭಾರತ ತಂಡದ ವಿಜಯೋತ್ಸವಕ್ಕೆ ಹರಿದು ಬಂದ ಜನಸಾಗರ.

ವಿಶ್ವಕಪ್ ಸನ್ನಿವೇಶಗಳನ್ನು ಪ್ರಧಾನಿ ಮೋದಿ ಜತೆ ಹಂಚಿಕೊಂಡ ಟೀಂ ಇಂಡಿಯಾ.

ಮೋದಿಗೆ ನಮೋ ಹೆಸರಿನ ಜೆರ್ಸಿ ನೀಡಿದ ಬಿಸಿಸಿಐ ಅಧ್ಯಕ್ಷ ಬಿನ್ನಿ, ಶಾ.

ಅಡವಿಕಟ್ಟೆಯಲ್ಲಿ ಅಡಗಿದ ನಿಗೂಢತೆ

ಹಿರಿಯ ನಟ ಅಭಿಜಿತ್ ಮತ್ತೆ ನಟನೆಗೆ ಮರಳಿದ್ದು ಅಡವಿಕಟ್ಟೆ ಚಿತ್ರ ಮೂಲಕ ಬೆಳ್ಳಿತೆರೆಯಲ್ಲಿ ಮಿಂಚಲಿದ್ದಾರೆ. ಸಂಜೀವ್ ಗಾವಂಡಿ ನಿರ್ದೇಶನದ ಅಡವಿ ಕಟ್ಟೆ ಟ್ರೇಲರ್ ರಿಲೀಸ್ ಆಗಿದ್ದು ಸದ್ದು ಮಾಡುತ್ತಿದೆ. ಮಾಜಿ ಸಂಸದ ಡಿ.ಕೆ.ಸುರೇಶ್ ಟ್ರೇಲರ್ ರಿಲೀಸ್ ಮಾಡಿ ಶುಭಕೋರಿದರು. ಕನ್ನಡದಲ್ಲಿ ಸಾಕಷ್ಟು ಉತ್ತಮ ಕಂಟೆಂಟ್ ವುಳ್ಳ ಚಿತ್ರಗಳು ಬರುತ್ತಿದೆ. ಆ ಸಾಲಿಗೆ ಈ ಚಿತ್ರ ಕೂಡ ಸೇರಲಿದೆ ಎಂದು ಸುರೇಶ್ ಆಶಿಸಿದರು.

ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಜತೆಗೆ ಹಾರಾರ್ ಜಾನಾರ್ ನ ಚಿತ್ರ. ಕನ್ನಡದಲ್ಲಿ ಸಾಕಷ್ಟು ಈ ಜಾನರ್ ನ ಚಿತ್ರ ಬಂದಿದೆಯಾದರೂ ಹಿಂದಿನ ಸಿನಿಮಾಗಳಿಗಿಂತ ಇದು ವಿಭಿನ್ನವಾಗಿದೆ. ಚಿತ್ರದ ಹೆಸರೆ ಹೇಳುವಂತೆ ಇದು ಅಡವಿ ಅಂದರೆ ಕಾಡಿನಲ್ಲಿ ನಡೆಯುವ ಕಥೆ. ಗೋಕಾಕ್ ನಗರದ ಸುತ್ತಮುತ್ತ ಹೆಚ್ಚಿನ ಚಿತ್ರೀಕರಣ ನಡೆದಿಸಲಾಗಿದೆ. ಸದ್ಯದಲ್ಲೇ ಚಿತ್ರ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಸಂಜೀವ್ ಗಾವಂಡಿ ಹೇಳಿದರು. ಅಭಿಜತ್ ಅವರ ಜತೆಗೆ ನಾಗರಾಜು ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಶಾಂತಿ, ಮಂಜುಳಾ ಮತ್ತಿತರರು ತಾರಾಬಳಗದಲ್ಲಿದ್ದಾರೆ. ಎಸ್.ಉಮಾ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಈ ತಿಂಗಳಾಂತ್ಯಕ್ಕೆ ಅಡವಿಕಟ್ಟೆ ತೆರೆಗೆ ಬರುವ ನಿರೀಕ್ಷೆ ಇದೆ.

> ಈ ಚಿತ್ರದಲ್ಲಿ ನನ್ನದು ವಿಶೇಷ ಪಾತ್ರ. ಈ ಹಿಂದೆ ಮಾಡಿರದ ಪಾತ್ರವನ್ನು ಇಲ್ಲಿ ನಿರ್ವಹಿಸಿದ್ದೇನೆ. ಎಲ್ಲರನ್ನೂ ಕಾಡುವ ಪಾತ್ರ ಇದಾಗಿದೆ. ಚಿತ್ರದ ಬಗ್ಗೆ ನನಗೆ ಅಪಾರ ನಿರೀಕ್ಷೆ ಇದೆ.
> -**ಅಭಿಜಿತ್**, ಹಿರಿಯ ನಟ

ಹೊಸ ಚಿತ್ರಕ್ಕೆ ಅಣಿಯಾದ ಸುನಿ

ಸ್ಯಾಂಡಲ್ ವುಡ್ ನ ಸಿಂಪಲ್ ನಿರ್ದೇಶಕ ಸುನಿ ಹೊಸ ಸಿನಿಮಾ ಘೋಷಿಸಿದ್ದಾರೆ. ಸಾಮಾನ್ಯವಾಗಿ ಡಿಫರೆಂಟ್ ಆಗಿ ಟೈಟಲ್ ಇಡುವ ಸುನಿ ಈ ಬಾರಿ ಕಾವ್ಯಾತ್ಮಕ ಶೀರ್ಷಿಕೆ ಆಯ್ದುಕೊಂಡಿದ್ದಾರೆ. ಹೌದು, ತಾವು ಹೊಸ ನಿರ್ದೇಶಿಸಲಿರುವ ಹೊಸ ಚಿತ್ರಕ್ಕೆ ದೇವರು ರುಜು ಮಾಡಿದನು ಎಂಬ ಶೀರ್ಷಿಕೆ ಇಟ್ಟಿದ್ದಾರೆ. ಇದು ಕುವೆಂಪು ಅವರ ಕವಿತೆಯ ಸಾಲಾಗಿದ್ದು ಅದನ್ನೇ ಚಿತ್ರದ ಟೈಟಲ್ ಆಗಿ ಇಟ್ಟಿದ್ದಾರೆ. ರಂಗ ಭೂಮಿಯಲ್ಲಿ ಗುರುತಿಸಿಕೊಂಡಿರುವ ವಿರಾಜ್ ಈ ಚಿತ್ರದ ನಾಯಕನಾಗಿ ನಟಿಸಲಿದ್ದಾರೆ. ವಿರಾಜ್ ತಂದೆ ಗೋವಿಂದ್ ರಾಜು ಗ್ರೀನ್ ಹೌಸ್ ಮೂವೀಸ್ ಬ್ಯಾನರ್ ನಲ್ಲಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಚಿತ್ರದಲ್ಲಿ ಹೊಸ ಪ್ರತಿಭೆಗಳ ಜತೆಗೆ ಪ್ರಸಿದ್ಧ ಕಲಾವಿದರೂ ನಟಿಸಲಿದ್ದಾರೆ. ಆಗಸ್ಟ್ ನಲ್ಲಿ ಚಿತ್ರದ ಮುಹೂರ್ತ ನೆರವೇರಲಿದ್ದು ಸೆಪ್ಟೆಂಬರ್ ನಲ್ಲಿ ಚಿತ್ರೀಕರಣ ಆರಂಭವಾಗಲಿದೆ.

ರೂಪಾಂತರಕ್ಕೆ ಚೈತ್ರಾಗಾನ

ಒಂದು ಮೊಟ್ಟೆಯ ಕಥೆಯ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟ ರಾಜ್ ಬಿ ಶೆಟ್ಟಿ ಮತ್ತು ಮಿಥುನ್ ಮುಕುಂದನ್ ಯಶಸ್ವಿ ಜೋಡಿಯಾಗಿ ಅನೇಕ ಹಿಟ್ ಹಾಡುಗಳನ್ನು ನೀಡಿದ್ದಾರೆ. ಈಗ ಒಂದು ಮೊಟ್ಟೆಯ ಕಥೆ ತಂಡವೇ ಸೇರಿ ನಿರ್ಮಿಸಿರುವ ರೂಪಾಂತರ ಚಿತ್ರದ ಕಿತ್ತಾಳೆ... ಹಾಡು ಬಿಡುಗಡೆ ಯಾಗಿದ್ದು ಸಂಗೀತ ಪ್ರಿಯೆ ಮನಗೆದ್ದಿದೆ. ರಾಜ್ ಶೆಟ್ಟಿ ಸಾಹಿತ್ಯದ ಈ ಹಾಡಿಗೆ ಮಿಥುನ್ ಮುಕುಂದನ್ ಸಂಗೀತ ಸಂಯೋಜಿಸಿದ್ದಾರೆ. ಚೈತ್ರಾ ಜೆ ಆಚಾರ್ ಹಾಡಿಗೆ ದನಿಯಾಗಿದ್ದಾರೆ. ಫಸ್ಟ್ ಲುಕ್ ಪೋಸ್ಟರ್ ಮೂಲಕ ಗಮನ ಸೆಳೆದ ರೂಪಾಂತರ ಚಿತ್ರವನ್ನು ಮಿಥಿಲೇಶ್ ಎಡವಲತ್ ನಿರ್ದೇಶಿಸಿದ್ದಾರೆ. ರಾಜ್ ಬಿ ಶೆಟ್ಟಿ ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಉಳಿದಂತೆ ಸೋಮ ಶೇಖರ್ ಬೋಲೇಗಾಂವ್, ಲೇಖಾ ನಾಯ್ಡು, ಹನುಮ್ಮಕ್ಕ, ಭರತ್ ಜಿ.ಬಿ, ಅಂಜನ್ ಭಾರಧ್ವಾಜ್ ಮತ್ತಿತರರು ತಾರಗಣದಲ್ಲಿದ್ದಾರೆ.

ಕಿರುತೆರೆಯಲ್ಲಿ ತೋರಣ ಕಟ್ಟಿದ ಮಧು ಸಾಗರ

ದಶಕಗಳ ಹಿಂದೆ ಕಿರುತೆರೆಯಲ್ಲಿ ತೋರಣ ಎಂಬ ಧಾರಾವಾಹಿ ಪ್ರಸಾರವಾಗುತ್ತಿತ್ತು. ಆ ಧಾರಾವಾಹಿ ಎಷ್ಟರ ಮಟ್ಟಿಗೆ ಪ್ರಸಿದ್ಧಿ ಪಡೆದಿತ್ತು ಎಂದರೆ, ಪ್ರೇಕ್ಷಕರು ಆ ಸಮಯದಲ್ಲಿ ಏನೇ ಕೆಲಸವಿದ್ದರೂ ಬದಿಗೊತ್ತಿ ಟಿವಿ ಮುಂದೆ ಆಸೀನರಾಗುತ್ತಿದ್ದರು. ಧಾರಾವಾಹಿಯ ಅವತ್ತಿನ ಕಂತು ಮುಗಿಯುವವರೆಗೂ ಎವೆ ಇಕ್ಕದೆ ನೋಡುತ್ತಿದ್ದರು. ಧಾರಾವಾಹಿಯಲ್ಲಿನ ಪ್ರತಿ ಕಲಾವಿದರ ನಟನೆ ನೋಡಿ ಶ್ಲಾಘಿಸುತ್ತಿದ್ದರು. ಅದರಲ್ಲಿಯೂ ಗಿರಿಧರನ ಪಾತ್ರ ಎಲ್ಲರಿಗೂ ಅಚ್ಚುಮೆಚ್ಚು. ಈ ಪಾತ್ರ ಮೊದ ಮೊದಲು ಸೆಂಟಿಮೆಂಟ್ ನಲ್ಲಿ ಸಾಗಿದರೂ ಬಳಿಕ ನೆಗೆಟಿವ್ ಶೇಡ್ ಗೆ ಹೊರಳಿತು. ಹೀಗೆ ಬದಲಾಗುತ್ತಿದ್ದ ಗಿರಿಧರನ ಪಾತ್ರದ ವೈಖರಿಗೆ ಪ್ರೇಕ್ಷಕರು ಮಾರು ಹೋದರು. ಕೆಲವೇ ಎಪಿಸೋಡ್ ನಲ್ಲಿ ಮುಗಿಯಬೇಕಿದ್ದ ತೋರಣ ಗಿರಿಧರನ ಪಾತ್ರಕ್ಕಾಗಿಯೇ ಇನ್ನೊಂದಷ್ಟು ಕಂತುಗಳು ಮುಂದುವರಿದವು. ತೋರಣ ಮೂಲಕ ಗಿರಿಧರನ ಪಾತ್ರಧಾರಿ ಮಧು ಸಾಗರ್ ಕಿರುತೆರೆಯಲ್ಲಿ ತನ್ನದೇ ಆದ ಛಾಪು ಮೂಡಿಸಿದರು.

ಈ ಧಾರಾವಾಹಿಯ ಬಳಿಕ ಮಧು ಅದೃಷ್ಟವೇ ಬದಲಾಯಿತು. ಸಾಲು ಸಾಲು ಅವಕಾಶಗಳು ಅರಸಿ ಬಂದವು. ಹೀಗೆ ಬಂದ ಅವಕಾಶಗಳನ್ನು ಕೈ ಚೆಲ್ಲದ ಮಧು ಸಾಗರ್ ದಿನಕ್ಕೆ ನಾಲ್ಕು ಧಾರಾವಾಹಿಗಳಲ್ಲಿ ಅಭಿನಯಿಸುವ ಮೂಲಕ ಬ್ಯುಸಿ ನಟನಾದರು. ಮಳೆ.. ಸೇರಿದಂತೆ ಸುಮಾರು ಮೂವತ್ತೈದಕ್ಕೂ ಹೆಚ್ಚಿನ ಧಾರಾವಾಹಿಗಳಲ್ಲಿ ಮುಖ್ಯ ಪಾತ್ರಗಳಲ್ಲಿ ಬಣ್ಣಹಚ್ಚಿದ್ದರು.

ಬಾಂಧವ್ಯ ಬೆಸೆದ ಸೋದರ

ಸದ್ಯ ಮಧು ಸಾಗರ್ ಅಣ್ಣ ತಂಗಿ ಧಾರಾವಾಹಿಯಲ್ಲಿ ನಟಿಸುತ್ತಿದ್ದಾರೆ. ಇದರಲ್ಲಿ ಅಣ್ಣನ ಪಾತ್ರ ಪ್ರಮುಖವಾಗಿದ್ದು ಮಧು ಆ ಪಾತ್ರಕ್ಕೆ ತಕ್ಕಂತೆ ಹೊಂದಿಕೊಂಡಿದ್ದಾರೆ. ಬಿಳಿ ಪಂಚೆ ಶರ್ಟ್ ಧರಿಸಿ ಗಂಭೀರ ವದನರಾಗಿ ಬರುವ ಮಧು ಅವರನ್ನು ನೋಡುವುದೇ ಆನಂದ. ಹಾಗಾಗಿಯೇ ಈ ಧಾರಾವಾಹಿ ನೋಡುವ ಪ್ರೇಕ್ಷಕರೂ ಕೂಡ ಅಣ್ಣ ಇದ್ದರೆ ಹೀಗಿರಬೇಕು ಎಂದು ಉದ್ಗಾರಿಸುತ್ತಾರೆ. ಅಷ್ಟರ ಮಟ್ಟಿಗೆ ಮಧು ಪಾತ್ರ ಮನಸೆಳೆದಿದೆ. ಎಂಟು ನೂರ ಐವತ್ತು ಕಂತುಗಳನ್ನು ಪೂರೈಸಿರುವ ಅಣ್ಣ ತಂಗಿ ಸಾವಿರ ಸಂಚಿಕೆಗಳನ್ನು ಪೂರ್ಣಗೊಳಿಸುವುದು ಖಚಿತವಾಗಿದೆ.

> ನಾನು ಕೂಡ ನನ್ನ ಮಾವ ಸಿರಿಗಂಧ ಶ್ರೀನಿವಾಸ್ ಅವರ ಜತೆ ಸೇರಿ ಹಲವು ಡಾಕ್ಯುಮೆಂಟರಿಗಳನ್ನು ನಿರ್ದೇಶಿಸಿದ್ದೇನೆ. ಮುಂದೆ ಧಾರಾವಾಹಿಗಳನ್ನು, ಸಿನಿಮಾಗಳನ್ನು ನಿರ್ದೇಶಿಸುವ ಯೋಚನೆಯೂ ಇದೆ.

ಮಾವನ ಉಡುಗೊರೆ

ಹಾಗಂತ ಮಧು ನಟನೆಗೆ ಬಯಸಿ ಬಂದವರಲ್ಲ, ದೂರದ ಸಾಗರದಲ್ಲಿ ಡ್ಯಾನ್ಸ್ ಕ್ಲಾಸ್ ನಡೆಸುತ್ತಿದ್ದ ಮಧು ಅವರನ್ನು ನಟನೆಗೆ ಕರೆತಂದವರು ಅವರ ಮಾವ ಡಾ.ಸಿರಿಗಂಧ ಶ್ರೀನಿವಾಸ್. ಅದಾಗಲೇ ಸಾಕಷ್ಟು ಡಾಕ್ಯುಮೆಂಟರಿ ನಿರ್ದೇಶಿಸಿದ್ದ ಸಿರಿಗಂಧ ಶ್ರೀನಿವಾಸ್ ನಮ್ಮ ನಾಡಿನ ಜಾನಪದ ಡಾಕ್ಯುಮೆಂಟರಿಯ ತಯಾರಿಯಲ್ಲಿದ್ದರು. ಇದಕ್ಕಾಗಿ ನೃತ್ಯ ಹೇಳಿಕೊಡಲು ಮಧು ಅವರನ್ನು ಕರೆಸಿದರು. ಹೀಗೆ ಸಾಗರದಿಂದ ಮಹಾನಗರಿಗೆ ಬಂದ ಮಧು ಮೊದಲು ನೃತ್ಯ ನಿರ್ದೇಶಕರಾಗಿ, ಬಳಿಕ ಸಹ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದರು. ಕ್ಯಾಮೆರಾ ಹಿಂದೆ ನಟನೆಯನ್ನು ಗಮನಸಿಸುತ್ತಿದ್ದ ಮಧು ಅಭಿನಯದತ್ತಲೂ ವಾಲಿದರು. ಅಲ್ಲಿಂದ ಕಿರುತೆರೆ ಅವರನ್ನು ಕೈ ಬೀಸಿ ಕರೆಯಿತು. ಧಾರಾವಾಹಿಗಳ ಮೂಲಕ ನಟನಾಗಿ ಹೊರಹೊಮ್ಮಿದರು.

ರಿಯಾಲಿಟಿ ಶೋನತ್ತ

ಧಾರಾವಾಹಿಗಳಲ್ಲಿ ಅಭಿನಯಿಸಿ ಮನೆಮಾತಾಗಿದ್ದ ಮಧು ಸಾಗರ್ ಗೆ ರಿಯಾಲಿಟಿ ಶೋನಲ್ಲಿ ಪಾಲ್ಗೊಳ್ಳಲು ಅವಕಾಶ ಅರಸಿಬಂತು. ಅಂತೆಯೇ ರಾಜಾರಾಣಿಯಲ್ಲಿ ಮಧು ದಂಪತಿ ವೀಕ್ಷಕರ ಫೆವರಿಟ್ ಕಪಲ್ ಆಗಿದ್ದಾರೆ. ರಿಯಾಲಿಟಿ ಶೋನಲ್ಲಿ ನೀಡುವ ಟಾಸ್ಕ್ ನಲ್ಲಿ ಗೆದ್ದು ಬೀಗುತ್ತಾರೆ.